## GNANADHARE EDUCATIONAL TRUST ®

# GNANADHARE ACADEMY

#2 Sharada Arcade, Nagarbhavi Main Road Prashanth Nagar, Vijaynagar North Bangalore-560079, Mob:9513804777/9513809777

# ಪ್ರಬಂಧ ಬರವಣಿಗೆ



downloaded from: www.kpscvaani.com

# ಭಯೋತ್ಪಾದನೆ (Terrorism)

## ಅರ್ಥ (Meaning) :

ಭಯೋತ್ಪಾದನೆ ಎಂಬ ಪದವನ್ನು ದಂಗೆ, ಆಂತರಿಕ ಕಲಹ, ಗೆರಿಲ್ಲಾ ಯುದ್ಧ, ಬೆದರಿಕೆ ಒಡ್ಡುವುದು, ಉಗ್ರವಾದ ಮುಂತಾದ ಪದಗಳಿಗೆ ಸಮನಾದ ಅರ್ಥದಲ್ಲಿ ಬಳಸಲಾಗುತ್ತದೆ. ರಾಜಕೀಯ ಉದ್ದೇಶ ಸಾಧನೆಗಾಗಿ ಒಂದು ಸಮುದಾಯದಲ್ಲಿ ಅಥವಾ ಸಮುದಾಯದ ಯಾವುದೇ ಭಾಗದಲ್ಲಿ ಭಯವನ್ನು ಉಂಟು ಮಾಡಲು ಅಳವಡಿಸಿಕೊಳ್ಳುವ ಹಿಂಸಾತ್ಮಕ ವರ್ತನೆಯನ್ನು ಭಯೋತ್ಪಾದನೆ ಎಂದು ಕರೆಯಬಹುದು. ಭಯೋತ್ಪಾದನೆಯು ಒಂದು ರೀತಿ ವ್ಯವಸ್ಥಿತವಾಗಿ ಬೆದರಿಕೆಯೊಡ್ಡುವ ತಂತ್ರವಾಗಿದೆ.

## ವ್ಯಾಖ್ಯೆಗಳು (Definitions) :

**ಎನ್‌ಸೈಕ್ಲೋಪಿಡಿಯಾ ಆಫ್ ಸೋಷಿಯಲ್ ಸೈನ್ಸಸ್:** ಒಂದು ಸಂಘಟಿತವಾದ ಸಮೂಹ ಅಥವಾ ಪಕ್ಷ ತನ್ನ ಪ್ರತಿಜ್ಞಾಬದ್ಧ ಉದ್ದೇಶ ಅಥವಾ ಗುರಿಗಳನ್ನು ಸಾಧಿಸಲು ಹಿಂಸೆಯನ್ನು ವ್ಯವಸ್ಥಿತವಾಗಿ ಬಳಸುವ ವಿಧಾನಕ್ಕೆ ಭಯೋತ್ಪಾದನೆ ಎಂದು ಕರೆಯಲಾಗುತ್ತದೆ.
**ರಾಮ್ ಅಹುಜಾ** : "ಬೆದರಿಕೆಯೊಡ್ಡುವ ಸಂಘಟಿತವಾದ ವ್ಯವಸ್ಥೆಯೇ ಭಯೋತ್ಪಾದನೆ.

ಈ ಮೇಲಿನ ವ್ಯಾಖ್ಯೆಗಳ ಹಿನ್ನೆಲೆಯಲ್ಲಿ ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹಿಂಸೆಯ ಮೂಲಕ ಸಮಾಜದಲ್ಲಿ ಭಯವನ್ನು ಉಂಟುಮಾಡುವ ಪ್ರಕ್ರಿಯೆಗೆ ಭಯೋತ್ಪಾದನೆ ಎನ್ನಬಹುದು.

## ಭಾರತದ ಪ್ರಜಾಪ್ರಭುತ್ವಕ್ಕೆ ಬೆದರಿಕೆಯಾಗಿ ಭಯೋತ್ಪಾದನೆ (Terrorism as a threat to Democracy) :

ಭಯೋತ್ಪಾದನೆಯು ಭಾರತದ ಪ್ರಜಾಪ್ರಭುತ್ವಕ್ಕೆ ಬಹುದೊಡ್ಡ ಬೆದರಿಕೆಯೊಡ್ಡಿದೆ. ಇದು ಭಾರತದಲ್ಲಿ ರಾಜಕೀಯ ಅಸ್ಥಿರತೆ, ಅಭದ್ರತೆಯನ್ನುಂಟು ಮಾಡಿದೆಯಲ್ಲದೆ, ರಾಷ್ಟ್ರದ ಪ್ರಗತಿಗೆ ಮಾರಕವಾಗಿದೆ. ಭಯೋತ್ಪಾದನೆಯು ಲಕ್ಷೋಪಲಕ್ಷ ಮುಗ್ಧ ಜೀವಗಳನ್ನು ಹಾಗೂ ಲೆಕ್ಕವಿಲ್ಲದಷ್ಟು ಸಾರ್ವಜನಿಕ ಆಸ್ತಿಯನ್ನು ಬಲಿ ತೆಗೆದುಕೊಂಡಿದೆ. ಇದು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕದಡುವುದರ ಮೂಲಕ ರಾಷ್ಟ್ರದಲ್ಲಿ ಅರಾಜಕತೆಯನ್ನು ಉಂಟು



downloaded from: www.kpscvaani.com

ಮಾಡುತ್ತದೆ. ಭಯೋತ್ಪಾದನೆಯು ನಮ್ಮ ರಾಷ್ಟ್ರದ ಏಕತೆ, ಸಮಗ್ರತೆ ಹಾಗೂ ಸಾರ್ವಭೌಮತ್ವಕ್ಕೆ ಗಂಡಾಂತರಕಾರಿಯಾಗಿದೆ. ಭಯೋತ್ಪಾದನೆಯು ಭಾರತದ ಪ್ರಜಾಪ್ರಭುತ್ವಕ್ಕೆ ಹೇಗೆ ಬೆದರಿಕೆಯೊಡ್ಡಿದೆ ಎಂಬುದನ್ನು ಕೆಳಗೆ ಚರ್ಚಿಸಲಾಗಿದೆ.

1. **ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತದೆ (Subversion of Democracy):**

ಭಯೋತ್ಪಾದನೆಯು ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ. ಪ್ರಜೆಗಳು ಭಯದ ನೆರಳಿನಲ್ಲಿ ಮತ ಚಲಾಯಿಸಬೇಕಾಗುತ್ತದೆ. ಚುನಾವಣಾ ಸಂದರ್ಭದಲ್ಲಿ ಭಯೋತ್ಪಾದಕ ಸಂಘಟನೆಗಳು ಚುನಾವಣಾ ಅಭ್ಯರ್ಥಿಯ ಅಪಹರಣ, ಕೊಲೆ, ಮತಪೆಟ್ಟಿಗೆಯ ವಶ ಮುಂತಾದ ದುಷ್ಕೃತ್ಯಗಳಲ್ಲಿ ತೊಡಗುತ್ತವೆ. ಹೀಗೆ ಭಯೋತ್ಪಾದನೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಬಲ್ಲ ವಿಧ್ವಂಸಕಾರಿ ದುಷ್ಕೃತ್ಯವಾಗಿದೆ. ಉದಾಹರಣೆಗೆ 2005ರಲ್ಲಿ ಬಿಹಾರದಲ್ಲಿ ನಡೆದ ಚುನಾವಣೆಯ ಸಂದರ್ಭದಲ್ಲಿ ಮಾಜಿ ಕೇಂದ್ರ ಸಚಿವರಾದ ರವಿಶಂಕರ್‌ರವರ ಮೇಲೆ ಭಯೋತ್ಪಾದಕರು ಗಂಭೀರ ಹಲ್ಲೆ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

2. **ದುರ್ಬಲ ನಿರ್ಧಾರಗಳಿಗೆ ಎಡೆಮಾಡಿಕೊಡುತ್ತದೆ (Weak decisions) :**

ಭಯೋತ್ಪಾದನೆ ಅಸ್ತಿತ್ವದಲ್ಲಿರುವಾಗ ಸರ್ಕಾರಕ್ಕೆ ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದಿಲ್ಲ. ಕೆಲವೊಮ್ಮೆ ಭಯೋತ್ಪಾದಕರ ಒತ್ತಡಕ್ಕೆ ಮಣಿದು ಸರ್ಕಾರ ಕೆಲವು ದುರ್ಬಲ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುವುದು. ಉದಾಹರಣೆಗೆ 1990ರಲ್ಲಿ ಕೆಲವು ಉಗ್ರಗಾಮಿಗಳನ್ನು ಸೆರೆಯಿಂದ ಬಿಡುಗಡೆ ಮಾಡಿದರೆ ಮಾತ್ರ ತಾವು ಅಪಹರಿಸಿ ಒತ್ತೆಯಿಟ್ಟುಕೊಂಡಿದ್ದ ಗೃಹಮಂತ್ರಿ **ಮುಫ್ತಿ ಮಹಮ್ಮದ್ ಸಯ್ಯಿದ್**ರವರ ಪುತ್ರಿ ಡಾ. ರುಬಿಯಾ ಅವರನ್ನು ಬಿಡುಗಡೆ ಮಾಡುವುದಾಗಿ ಕಾಶ್ಮೀರದ ಭಯೋತ್ಪಾದಕ ಸಂಘಟನೆಯೊಂದು ಸರ್ಕಾರಕ್ಕೆ ಷರತ್ತು ವಿಧಿಸಿತು. ಸರ್ಕಾರವು ಷರತ್ತನ್ನು ಒಪ್ಪಿ ಭಯೋತ್ಪಾದಕರನ್ನು ಬಿಡುಗಡೆಗೊಳಿಸುವ ನಿರ್ಧಾರ ತೆಗೆದುಕೊಂಡಿತು. ಉಗ್ರಗಾಮಿಗಳು ಒಮ್ಮೆ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಕಂದಹಾರ್‌ಗೆ ಹೈಜಾಕ್ ಮಾಡಿದರು. ಭಯೋತ್ಪಾದಕರು ವಿಧಿಸಿದ ಷರತ್ತಿನಂತೆ ಮೂವರು ಉಗ್ರವಾದಿಗಳ ಬಿಡುಗಡೆಯ ನಂತರವೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ನಾಗರೀಕರನ್ನು ಬಿಡುಗಡೆಗೊಳಿಸಲಾಯಿತು. ಸರ್ಕಾರದ ದುರ್ಬಲ ನಿರ್ಧಾರಕ್ಕೆ ಇದಕ್ಕಿಂತ ಅತ್ಯುತ್ತಮ ಉದಾಹರಣೆ ಬೇಕಿಲ್ಲ.



downloaded from: www.kpscvaani.com

### 3. ಸಂವಿಧಾನದ ಮೇಲೆ ಹಲ್ಲೆ (Assault on the constitution):

ಪ್ರಜಾಪ್ರಭುತ್ವ ಸರ್ಕಾರಗಳು ಸಂವಿಧಾನಾತ್ಮಕ ಸರ್ಕಾರಗಳಾಗಿರುತ್ತವೆ. ಸಂವಿಧಾನವು ಪ್ರಜಾಪ್ರಭುತ್ವದ ಮಾರ್ಗದರ್ಶಿ ಇದ್ದಂತೆ. ಭಯೋತ್ಪಾದಕರು ಚುನಾವಣೆಯನ್ನು ಬಹಿಷ್ಕರಿಸುವುದು, ಚುನಾವಣೆಯ ಸಂದರ್ಭದಲ್ಲಿ ಅಭ್ಯರ್ಥಿಗಳನ್ನು ಹತ್ಯೆಗೈಯ್ಯುವುದು, ಮತ ಪೆಟ್ಟಿಗೆಗಳನ್ನು ಧ್ವಂಸಗೊಳಿಸುವುದು ಮುಂತಾದ ಸಂವಿಧಾನ ವಿರೋಧಿ ಕೃತ್ಯಗಳನ್ನು ಎಸಗುತ್ತಾರೆ. ಈ ರೀತಿಯಾಗಿ ಸಂವಿಧಾನದ ಮೇಲೆ ಹಲ್ಲೆ ನಡೆಸುವ ಮೂಲಕ ಭಯೋತ್ಪಾದನೆಯು ಪ್ರಜಾಪ್ರಭುತ್ವದ ಗುಣಮಟ್ಟವನ್ನು ಅಧೋಗತಿಗೆ ಇಳಿಸುತ್ತದೆ.

### 4. ಕಾನೂನಿಗೆ ಸವಾಲು (Challenged law) :

ಭಯೋತ್ಪಾದಕ ಸಂಘಟನೆಗಳು ಕಾನೂನುಬದ್ಧ ಸಂಸ್ಥೆಗಳನ್ನು ಧಿಕ್ಕರಿಸಿ ತಮ್ಮದೇ ಆದ ಪರ್ಯಾಯ ಆಡಳಿತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸಿಕೊಳ್ಳುವುದರ ಮೂಲಕ ಕಾನೂನಿಗೆ ಸವಾಲೊಡ್ಡಿವೆ. ಇದು ಪ್ರಜಾಪ್ರಭುತ್ವಕ್ಕೆ ಅತ್ಯಂತ ದೊಡ್ಡ ಬೆದರಿಕೆಯಾಗಿದೆ. ಉದಾಹರಣೆಗೆ ಆಂಧ್ರಪ್ರದೇಶ ಮತ್ತು ಬಿಹಾರ್ ಪ್ರದೇಶಗಳಲಿ ನಕ್ಸಲ್ ಸಂಘಟನೆಗಳು ತಮ್ಮದೇ ಆದ ನ್ಯಾಯಾಲಯಗಳನ್ನು ಸ್ಥಾಪಿಸಿಕೊಂಡಿವೆ. ಇದೇ ಪರಿಸ್ಥಿತಿಯನ್ನು ಮಧ್ಯಪ್ರದೇಶದ ದಂಡಕಾರಣ್ಯದಲ್ಲಿಯೂ ಕಾಣಬಹುದಾಗಿದೆ.

### 5. ರಾಜಕೀಯ ಅಸ್ಥಿರತೆ (Political instability) :

ರಾಜಕೀಯ ಸ್ಥಿರತೆಯು ಪ್ರಜಾಪ್ರಭುತ್ವದ ಯಶಸ್ಸಿಗೆ ಅತ್ಯಗತ್ಯ. ಆದರೆ ಭಯೋತ್ಪಾದನೆಯು ಪ್ರಧಾನಮಂತ್ರಿ ಹಾಗೂ ಇತರ ರಾಜಕೀಯ ನಾಯಕರನ್ನು ಹತ್ಯೆಗೈಯುವುದರ ಮೂಲಕ ರಾಜಕೀಯ ಅಸ್ಥಿರತೆಯನ್ನು ಮೂಡಿಸಿ ಪ್ರಜಾಪ್ರಭುತ್ವಕ್ಕೆ ತೀವ್ರ ಬೆದರಿಕೆ ಒಡ್ಡಿದೆ. 1991ರಲ್ಲಿ ಪ್ರಧಾನಿ ರಾಜೀವ್‌ಗಾಂಧಿಯವರು ಭಯೋತ್ಪಾದಕರ ಗುಂಡಿಗೆ ಬಲಿಯಾದರು. ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶಿಕ್ಷಣ ಮಂತ್ರಿಯನ್ನು ಭಯೋತ್ಪಾದಕರು ಹತ್ಯೆಗೈದರು.

### 6. ರಾಷ್ಟ್ರದ ಅಭಿವೃದ್ಧಿಗೆ ಮಾರಕ (Hinders Economic Development) :

ಶಾಂತಿಯುತ ವಾತಾವರಣದಲ್ಲಿ ಮಾತ್ರ ಆರ್ಥಿಕ ಅಭಿವೃದ್ಧಿ ಸಾಧ್ಯ. ಭಯೋತ್ಪಾದನೆಯು ಹಿಂಸಾತ್ಮಕ ವಾತಾವರಣವನ್ನು ನಿರ್ಮಾಣ ಮಾಡುವುದರ ಮೂಲಕ



downloaded from: www.kpscvaani.com

ಕೃಷಿ ಕೈಗಾರಿಕೆ, ಪ್ರವಾಸೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿಗೆ ಧಕ್ಕೆಯುಂಟು ಮಾಡುತ್ತದೆ. ಭಯೋತ್ಪಾದನೆಯನ್ನು ನಿಯಂತ್ರಿಸಲು ಸರ್ಕಾರ ಪೋಲಿಸ್, ಸೇನೆ ಹಾಗೂ ಶಸ್ತ್ರಾಸ್ತ್ರಗಳ ಮೇಲೆ ಅಪಾರ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಪರಿಣಾಮವಾಗಿ ಅಭಿವೃದ್ಧಿ ಕ್ಷೇತ್ರಗಳ ಮೇಲೆ ಅಗತ್ಯವಿರುವಷ್ಟು ಹಣವನ್ನು ಹೂಡಲು ಸಾಧ್ಯವಾಗುವುದಿಲ್ಲ. ಇದರಿಂದ ರಾಷ್ಟ್ರೀಯ ಅಭಿವೃದ್ಧಿ ಕುಂಠಿತವಾಗುತ್ತದೆ.

7. **ಅರಾಜಕತೆ (Anarchy) :**

ಭಯೋತ್ಪಾದನೆ ಸಂಘಟನೆಗಳು ಬಾಂಬ್ ದಾಳಿ, ಹಲ್ಲೆ, ಅಪಹರಣ ಮುಂತಾದ ದುಷ್ಕೃತ್ಯಗಳ ಮೂಲಕ ಶಾಂತಿಯನ್ನು ಕದಡಿ ಅರಾಜಕತೆಯುಂಟು ಮಾಡುತ್ತವೆ. ಇಂತಹ ಅರಾಜಕತೆಯ ಸ್ಥಿತಿಯಲ್ಲಿ ಲೆಕ್ಕವಿಲ್ಲದಷ್ಟು ಮುಗ್ಧ ಜನರ ಪ್ರಾಣ ಹಾಗೂ ಆಸ್ತಿಗಳು ನಾಶವಾಗುತ್ತವೆ.

8. **ಸಾರ್ವಭೌಮತೆ ಮತ್ತು ಸಮಗ್ರತೆಗೆ ಧಕ್ಕೆ (Affects sovereignty and integrity):**

ಭಯೋತ್ಪಾದಕ ಸಂಘಟನೆಗಳು ಕಾನೂನುಬದ್ಧ ಪರಮಾಧಿಕಾರದ ನೆಲೆಯಾದ ಶಾಸಕಾಂಗದ ಮೇಲೆ ದಾಳಿ ನಡೆಸುವುದರ ಮೂಲಕ ಭಾರತದ ಸಾರ್ವಭೌಮತೆಗೆ ಧಕ್ಕೆ ಉಂಟು ಮಾಡಲು ಪ್ರಯತ್ನಿಸುತ್ತವೆ. 2001ರಲ್ಲಿ ಭಯೋತ್ಪಾದಕರು ಜಮ್ಮು ಮತ್ತು ಕಾಶ್ಮೀರದ ವಿಧಾನಸೌಧದ ಮುಂದೆ ಕಾರ್‌ಬಾಂಬ್ ಸ್ಫೋಟಿಸಿದರು. ಅದೇ ವರ್ಷದಲ್ಲಿ ಭಯೋತ್ಪಾದಕರು ಸಂಸದ್ ಭವನದ ಮೇಲೂ ದಾಳಿ ನಡೆಸಿದರು. ಭಯೋತ್ಪಾದಕರು ಅಸ್ಸಾಂ ಮತ್ತು ಜಮ್ಮು-ಕಾಶ್ಮೀರಗಳನ್ನು ಭಾರತದಿಂದ ಪ್ರತ್ಯೇಕಗೊಳಿಸಲು ಹೋರಾಟ ನಡೆಸುತ್ತಿದ್ದಾರೆ. ಇದು ನಮ್ಮ ರಾಷ್ಟ್ರದ ಸಮಗ್ರತೆಗೆ ಧಕ್ಕೆ ತರುವಂತಹ ವಿಷಯವಾಗಿದೆ.

## ಶಾಸನೀಯ ಕ್ರಮಗಳಾದ ಪೋಟಾ ಮತ್ತು ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಪರಿಹಾರಗಳಾಗಿ ಪೋಟಾ (Prevention of Terrorism Act) :

'ಪೋಟಾ' ಒಂದು ಮುನ್ನೆಚ್ಚರಿಕೆ ಬಂಧನ ಕಾಯ್ದೆ (Preventive Detention Act)ಯಾಗಿದೆ. ಅಪರಾಧ ಮಾಡುವುದಕ್ಕಿಂತ ಮುಂಚೆ ಮುನ್ನೆಚ್ಚರಿಕೆಯ ಕ್ರಮವಾಗಿ ಒಬ್ಬ ವ್ಯಕ್ತಿಯನ್ನು ಬಂಧಿಸಲು ಅವಕಾಶ ನೀಡುವ ಕಾಯ್ದೆಯನ್ನು ಮುನ್ನೆಚ್ಚರಿಕೆ ಬಂಧನ ಕಾಯ್ದೆ



downloaded from: www.kpscvaani.com

ಎಂದು ಕರೆಯುತ್ತಾರೆ. 'ಪೋಟಾ'ವನ್ನು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್.ಡಿ.ಎ.) ಸರ್ಕಾರವು 2003ರಲ್ಲಿ ಜಾರಿಗೆ ತಂದಿತು. 'ಪೋಟಾ'ಕ್ಕಿಂತ ಮುಂಚಿತವಾಗಿ ಆಂತರಿಕ ಭದ್ರತಾ ಕಾಯ್ದೆ (MISA), ರಾಷ್ಟ್ರೀಯ ಭದ್ರತಾ ಕಾಯ್ದೆ (NSA), ಭಯೋತ್ಪಾದನೆ ಮತ್ತು ವಿಛಿದ್ರಕಾರಕ ಚಟುವಟಿಕೆಗಳ ನಿಷೇಧ ಕಾಯ್ದೆ (TADA), ಮುಂತಾದ ಮುನ್ನೆಚ್ಚರಿಕೆ ಬಂಧನ ಕಾಯ್ದೆಗಳು ಅಸ್ತಿತ್ವದಲ್ಲಿದ್ದವು. ಭಯೋತ್ಪಾದನೆ ನಿಗ್ರಹ ಕಾಯ್ದೆ (POTA) ಯು ಭಯೋತ್ಪಾದನೆ ಮತ್ತು ವಿಧ್ವಂಸಕ ಕೃತ್ಯಗಳನ್ನು ನಿಗ್ರಹಿಸುವ ಉದ್ದೇಶವನ್ನು ಹೊಂದಿತ್ತು.

## ಕಾಯ್ದೆಯ ಮುಖ್ಯಾಂಶಗಳು (Main provisions of the Act) :

ಭಯೋತ್ಪಾದನೆ ನಿಗ್ರಹ ಕಾಯ್ದೆ (ಪೋಟಾ)ಯ ಮುಖ್ಯಾಂಶಗಳು ಈ ಕೆಳಗಿನಂತಿವೆ.

- ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದು ಮತ್ತು ವಿಛಿದ್ರಕಾರಿ ಚಟುವಟಿಕೆಗಳಲ್ಲಿ ತೊಡಗುವುದನ್ನು ಭಯೋತ್ಪಾದಕ ಕೃತ್ಯವೆಂದು ಪರಿಗಣಿಸಬಹುದು.
- ಭಯೋತ್ಪಾದಕ ಸಂಘಟನೆಗಳಿಗೆ ನೆರವು ನೀಡುವುದು, ಭಯೋತ್ಪಾದಕರಿಗೆ ಸಹಾನುಭೂತಿ ತೋರುವ ರೀತಿಯಲ್ಲಿ ಮಾತನಾಡುವುದು, ಭಯೋತ್ಪಾದಕ ಸಂಘಟನೆಗೆ, ಅದರ ಸಮಾವೇಶಕ್ಕೆ ಸಹಾಯ ಮಾಡಲು ಮುಂದಾಗುವುದು ಅಪರಾಧವಾಗುತ್ತದೆ.
- ಭಯೋತ್ಪಾದಕ ಸಂಘಟನೆಗಳು, ಅವುಗಳ ಸಹಾಯಕರು ಮತ್ತು ಅವುಗಳ ಬಗ್ಗೆ ಸಹಾನುಭೂತಿ ತೋರುವವರ ಆಸ್ತಿ ಪಾಸ್ತಿಯನ್ನು ಜಪ್ತಿ ಮಾಡಬಹುದು.
- ಅನುಮಾನಾಸ್ಪದವಾಗಿ ಬಂಧಿಸಲ್ಪಟ್ಟ ಭಯೋತ್ಪಾದಕರನ್ನು ದೋಷಾರೋಪ ಪಟ್ಟಿಯಿಲ್ಲದೆ ಮೂರು ತಿಂಗಳಕಾಲ ಬಂಧನದಲ್ಲಿಡಬಹುದು. ವಿಶೇಷ ನ್ಯಾಯಾಧೀಶರ ಒಪ್ಪಿಗೆ ಮೇರೆಗೆ ಮೂರು ತಿಂಗಳ ಅವಧಿಗೆ ಬಂಧನವನ್ನು ವಿಸ್ತರಿಸಬಹುದು.
- ಬಂಧಿಸಲ್ಪಟ್ಟ ವ್ಯಕ್ತಿಗಳ ಹಸ್ತಾಕ್ಷರ, ಬೆರಳು ಮುದ್ರೆ, ರಕ್ತ, ವೀರ್ಯ ಅಥವಾ ಕೂದಲು ಮುಂತಾದವುಗಳ ಸ್ಯಾಂಪಲ್‌ಗಳನ್ನು ಪಡೆದುಕೊಳ್ಳಲು ಪೋಲೀಸ್ ಅಧಿಕಾರಿಯು ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳಬಹುದು.



downloaded from: www.kpscvaani.com

- ಪೊಲೀಸ್ ಅಧಿಕಾರಿಯ ಮುಂದೆ ಮಾಡಲಾದ ತಪ್ಪೊಪ್ಪಿಗೆಯನ್ನು ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯವು ಒಪ್ಪಿಕೊಳ್ಳಬಹುದು.

## ಭಯೋತ್ಪಾದಕ ಸಂಘಟನೆ (Terrorist Organisations)

ಭಯೋತ್ಪಾದಕ ನಿಗ್ರಹ ಕಾಯ್ದೆ (ಪೋಟಾ)ಯು ಈ ಕೆಳಗಿನ ಸಂದರ್ಭಗಳಲ್ಲಿ ಒಂದು ಸಂಘಟನೆಯನ್ನು ಭಯೋತ್ಪಾದಕ ಸಂಘಟನೆಯೆಂದು ಪರಿಗಣಿಸುತ್ತದೆ.

- ರಾಷ್ಟ್ರದ ಏಕತೆ, ಭದ್ರತೆ ಮತ್ತು ಸಾರ್ವಭೌಮತೆಗೆ ಧಕ್ಕೆಯಾಗುವ ಚಟುವಟಿಕೆಗಳಲ್ಲಿ ತೊಡಗಿದರೆ
- ಬಾಂಬುಗಳು, ಡೈನಾಮೈಟ್‌ಗಳು ಹಾಗೂ ಇತರ ಸ್ಫೋಟಕ ವಸ್ತುಗಳ ಮೂಲಕ ಜನರಲ್ಲಿ ಭೀತಿಯನ್ನು ಹುಟ್ಟಿಸಿದರೆ
- ಸಮುದಾಯದ ಬದುಕಿಗೆ ಅವಶ್ಯಕವಾದ ಸೇವೆಗಳನ್ನು ಅಥವಾ ಆಸ್ತಿಯನ್ನು ನಾಶಪಡಿಸುವ ಚಟುವಟಿಕೆಗಳಲ್ಲಿ ತೊಡಗಿದರೆ
- ಪರವಾನಿಗೆ (License) ಇಲ್ಲದೆ ಸ್ಫೋಟಕಗಳನ್ನು ಹಾಗೂ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆ

## ಈ ಕಾಯ್ದೆಯು ಕೆಳಗಿನ ಸಂಘಟನೆಗಳನ್ನು ಭಯೋತ್ಪಾದಕ ಸಂಘಟನೆಗಳೆಂದು ಪಟ್ಟಿ ಮಾಡಿದೆ.

- ಲಷ್ಕರಿ–ಎ–ತೊಯಿಬಾ (LeT)
- ಜೈಷ್ ಎ ಮೊಹಮದ್ (JeM)
- ಹರ್ಕತ್–ಉಲ್–ಮುಜಾಹಿದ್ದೀನ್ (HuM)
- ಹರ್ಕತ್–ಉಲ್–ಅನ್ಸರ್ (HuA)
- ಯುನೈಟೆಡ್ ಲಿಬರೇಷನ್ ಫ್ರಂಟ್ ಆಫ್ ಅಸ್ಸಾಂ (ULFA)
- ಎಲ್.ಟಿ.ಟಿ.ಇ. (LTTE)
- ಪೀಪಲ್ಸ್ ವಾರ್ ಗ್ರೂಪ್ (PWG)



downloaded from: www.kpscvaani.com

- ಮಾವೋಯಿಸ್ಟ್ ಕಮ್ಯುನಿಸ್ಟ್ ಸೆಂಟರ್ (MCC)
- ಅಲ್–ಖೈದಾ

## ಪೋಟಾದ ದುರ್ಬಳಕೆ ಮತ್ತು ರದ್ಧತಿ (Abuse and abolition of POTA)

ಪೋಟಾ ಕಾಯ್ದೆಯನ್ನು ಆಡಳಿತ ಪಕ್ಷವು ತನ್ನ ದ್ವೇಷ ಸಾಧನೆ ಹಾಗೂ ವಿರೋಧಿಗಳನ್ನು ಹತ್ತಿಕ್ಕಲು ದುರ್ಬಳಕೆ ಮಾಡಿಕೊಂಡಿದೆ ಎಂದು ಕಾಂಗ್ರೆಸ್ ಆರೋಪಿಸಿತು. 2004ರಲ್ಲಿ ಅಧಿಕಾರಕ್ಕೆ ಬಂದ ಸಂಯುಕ್ತ ಪ್ರಗತಿ ಪರ ಮೈತ್ರಿಕೂಟ (ಯುಪಿಎ) ಸರ್ಕಾರವು ಪೋಟಾವನ್ನು ರದ್ದುಪಡಿಸಿತು. ಪೋಟಾವನ್ನು ಈ ಕೆಳಗಿನ ಸಂದರ್ಭಗಳಲ್ಲಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬ ಆರೋಪ ಇದೆ.

- ತಮಿಳುನಾಡಿನ ಸಂಸದ ವೈಕೋರವರನ್ನು ಭಯೋತ್ಪಾದಕ ಸಂಘಟನೆಯೊಂದಕ್ಕೆ ಸಹಾನುಭೂತಿ ತೋರುವ ಭಾಷಣ ಮಾಡಿದರೆಂಬ ಆರೋಪದ ಮೇಲೆ ಬಂಧಿಸಲಾಯಿತು.
- ಗುಜರಾತಿನ ಬಿಜೆಪಿ ನೇತೃತ್ವದ ಸರ್ಕಾರವು ಗೋದ್ರಾ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ 123 ಮುಸ್ಲಿಂರನ್ನು ಈ ಕಾಯ್ದೆಯಡಿ ಬಂಧಿಸಿತು. ಆಶ್ಚರ್ಯವೆಂದರೆ ಒಬ್ಬ ಹಿಂದೂವನ್ನು ಬಂಧಿಸಲಿಲ್ಲ.
- ಜಾರ್ಖಂಡ್ ರಾಜ್ಯದಲ್ಲಿ ಹೆಣ್ಣು ಮಕ್ಕಳೂ ಸೇರಿದಂತೆ ಏಳು ನೂರು ಜನರನ್ನು ಈ ಕಾಯ್ದೆಯ ಅಡಿಯಲ್ಲಿ ಬಂಧಿಸಲಾಯಿತು.
- ಅನೇಕ ಸಂದರ್ಭಗಳಲ್ಲಿ ಅಧಿಕಾರ ರೂಢ ಪಕ್ಷಗಳು ರಾಜಕೀಯ ದ್ವೇಷಕ್ಕಾಗಿ, ಧಾರ್ಮಿಕ ವೈಷಮ್ಯಕ್ಕಾಗಿ, ತಮ್ಮ ವಿರೋಧಿಗಳ ಮೇಲೆ ಪೋಟಾವನ್ನು ದುರ್ಬಳಕೆ ಮಾಡಿವೆ ಎಂದು ಶಂಕಿಸಲಾಗಿದೆ. ಸಾರ್ವಜನಿಕರಿಂದಲೂ ಇದು ಮಾನವ ಹಕ್ಕುಗಳನ್ನು ದಮನಗೊಳಿಸುವ ಕರಾಳ ಶಾಸನ ಎಂಬ ಟೀಕೆಗಳು ವ್ಯಕ್ತವಾದವು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಸರ್ಕಾರವು (ಯು.ಪಿ.ಎ.) 2004 ಸೆಪ್ಟೆಂಬರ್ 21ರಂದು ಪೋಟಾ ಕಾಯ್ದೆಯನ್ನು ರದ್ದುಪಡಿಸಿತು. ಪೋಟಾ ಬದಲಾಗಿ "ಕಾನೂನು ಬಾಹಿರ ಚಟುವಟಿಕೆಗಳ ನಿಗ್ರಹ ಕಾಯ್ದೆ" (Prevention of Unlawful Activities Act) ಯನ್ನು ಜಾರಿಗೆ ತರಲಾಗಿದೆ.



downloaded from: www.kpscvaani.com

## ಭ್ರಷ್ಟಾಚಾರ (Corruption)

ಭ್ರಷ್ಟಾಚಾರವು ಭಾರತದ ಪ್ರಜಾಪ್ರಭುತ್ವಕ್ಕೆ ಅತ್ಯಂತ ದೊಡ್ಡ ಪ್ರಮಾಣದ ಬೆದರಿಕೆಯನ್ನೊಡ್ಡಿದೆ. ನಮ್ಮ ರಾಷ್ಟ್ರದಲ್ಲಿ ರಾಜಕೀಯ ಹಾಗೂ ಆಡಳಿತಾತ್ಮಕ ಭ್ರಷ್ಟಾಚಾರಗಳೆರಡನ್ನು ಕಾಣಬಹುದು. ಇಂದಿನ ದಿನಗಳಲ್ಲಿ ಭ್ರಷ್ಟಾಚಾರದ ಆರೋಪದಿಂದ ಮುಕ್ತರಾದ ರಾಜಕಾರಣಿಗಳನ್ನು ಹಾಗೂ ಅಧಿಕಾರಿಗಳನ್ನು ಕಾಣುವುದು ಅಪರೂಪವಾಗಿದೆ. ಭ್ರಷ್ಟಾಚಾರವು ಇಂದು ಆಡಳಿತದ ಎಲ್ಲಾ ಕ್ಷೇತ್ರಗಳನ್ನು ಕ್ಯಾನ್ಸರಿನೋಪಾದಿಯಲ್ಲಿ ವ್ಯಾಪಿಸಿಕೊಂಡಿದೆ. **ಬೋಫೋರ್ಸ್ ಹಗರಣ, ಮೇವು ಹಗರಣ, ಛಾಪಾ ಕಾಗದದ ಹಗರಣ, ಬಹುಕೋಟಿ ಅಕ್ಕಿ ಹಗರಣಗಳೇ** ಇದಕ್ಕೆ ಸಾಕ್ಷಿ. ಇತ್ತೀಚೆಗೆ ಸಂಸತ್ತಿನಲ್ಲಿ ಪ್ರಶ್ನೆ ಕೇಳಲು 11 ಮಂದಿ ಸಂಸದರು ಲಂಚ ಪಡೆದುಕೊಂಡ ಪ್ರಕರಣ, ಸಂಸತ್ ಸದಸ್ಯರ ನಿಧಿಯ ದುರುಪಯೋಗಕ್ಕೆ ಸಂಬಂಧಿಸಿದ ಹಗರಣಗಳು ಬೆಳಕಿಗೆ ಬಂದಿವೆ. ಸದ್ಯಕ್ಕೆ **ಕಾಮನ್‌ವೆಲ್ತ್ ಹಗರಣ, 2ಜಿ ತರಂಗಾಂತರ (ಸ್ಪೆಕ್ಟ್ರಮ್) ಹಗರಣ ಹಾಗೂ ಆದರ್ಶ ಹೌಸಿಂಗ್ ಸೊಸೈಟಿ ಹಗರಣಗಳು** ಸುದ್ದಿಯಲ್ಲಿವೆ. **ದಿವಂಗತ ಪ್ರಧಾನಿ ಇಂದಿರಾಗಾಂಧಿಯವರು ಭ್ರಷ್ಟಾಚಾರವನ್ನು ಸಾರ್ವತ್ರಿಕ ಲಕ್ಷಣ (Universal phenomenon)** ಎಂದಿರುವುದು ಒಂದು ದುರಂತವಾಗಿದೆ.

## ಅರ್ಥ (Meaning) :

ಪರಿಮಿತ ಅರ್ಥದಲ್ಲಿ ಸಾರ್ವಜನಿಕ ಸ್ಥಾನದಲ್ಲಿರುವ ವ್ಯಕ್ತಿಗಳು ಹಣದ ರೂಪದಲ್ಲಿ ಲಂಚ ಸ್ವೀಕರಿಸುವುದಕ್ಕೆ ಭ್ರಷ್ಟಾಚಾರ ಎಂದು ಕರೆಯಲಾಗುತ್ತದೆ. ಆದರೆ ಭ್ರಷ್ಟಾಚಾರ ಎಂಬ ಪದವು ಅತ್ಯಂತ ವಿಶಾಲ ಅರ್ಥವನ್ನು ಹೊಂದಿದೆ. ಖಾಸಗಿ ಉದ್ದೇಶಗಳಿಗಾಗಿ ಸಾರ್ವಜನಿಕ ಸ್ಥಾನಗಳನ್ನು ಅಥವಾ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಎಲ್ಲಾ ವಿಧಾನಗಳನ್ನು ಒಟ್ಟಾರೆಯಾಗಿ ಭ್ರಷ್ಟಾಚಾರ ಎಂದು ಕರೆಯಲಾಗುತ್ತದೆ. ಲಂಚ, ಕಾಣಿಕೆ, ಬಹುಮಾನ, ಸ್ವಜನ ಪಕ್ಷಪಾತ, ಸಾರ್ವಜನಿಕ ಹಣ ಅಥವಾ ಆಸ್ತಿಯ ದುರುಪಯೋಗ, ಅಧಿಕಾರ ದುರುಪಯೋಗ, ಶಿಫಾರಸ್ಸು ಮಾಡುವುದು, ಸಾರ್ವಜನಿಕ ಸೇವಾ ಸಿಬ್ಬಂದಿಯನ್ನು ಖಾಸಗಿ ಕಾರ್ಯಕ್ಕೆ ಬಳಸಿಕೊಳ್ಳುವುದು–ಇವುಗಳೆಲ್ಲವೂ ಭ್ರಷ್ಟಾಚಾರವೆನಿಸಿಕೊಳ್ಳುತ್ತವೆ.



downloaded from: www.kpscvaani.com

## ವ್ಯಾಖ್ಯೆಗಳು (Definitions) :

1. **ಭಾರತೀಯ ದಂಡ ಸಂಹಿತೆಯ 161ನೇ ಸೆಕ್ಷನ್:**

ಒಬ್ಬ ಸರ್ಕಾರಿ ನೌಕರನು ತನ್ನ ಅಧಿಕೃತ ಕರ್ತವ್ಯ ನಿರ್ವಹಿಸಲು ಕಾನೂನು ಬದ್ಧ ಪ್ರತಿಫಲವನ್ನು ಹೊರತುಪಡಿಸಿ, ಇತರೆ ಲಾಭ ಪಡೆಯುವುದಕ್ಕೆ ಅಥವಾ ಪಡೆಯಲು ಪ್ರಯತ್ನಿಸುವುದಕ್ಕೆ ಭ್ರಷ್ಟಾಚಾರ ಎಂದು ಕರೆಯುತ್ತಾರೆ.

2. **ಜೆ.ಎಸ್.ನೈ. :**

ವೈಯಕ್ತಿಕ ಲಾಭಕ್ಕಾಗಿ ಅಧಿಕೃತ ಸಾರ್ವಜನಿಕ ಕರ್ತವ್ಯದಿಂದ ವಿಮುಖವಾಗುವುದೇ ಭ್ರಷ್ಟಾಚಾರ.

3. **ಆಂಡ್ರಿಸ್ಕಿ :**

ಔಪಚಾರಿಕ ನಿಯಮ ಅಥವಾ ಕಾನೂನನ್ನು ಉಲ್ಲಂಘಿಸಿ ವೈಯಕ್ತಿಕ ಅನುಕೂಲಕ್ಕಾಗಿ ಸಾರ್ವಜನಿಕ ಅಧಿಕಾರವನ್ನು ಬಳಸಿಕೊಳ್ಳುವುದೇ ಭ್ರಷ್ಟಾಚಾರ.

## ಪ್ರಜಾಪ್ರಭುತ್ವಕ್ಕೆ ಬೆದರಿಕೆಯಾಗಿ ಭ್ರಷ್ಟಾಚಾರ (Corruption as a threat to Democracy) :

ಭ್ರಷ್ಟಾಚಾರವು ಭಾರತದ ಪ್ರಜಾಪ್ರಭುತ್ವವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲಾಗಿದೆ. ಭ್ರಷ್ಟಾಚಾರವು ಆಡಳಿತದಲ್ಲಿ ಅದಕ್ಷತೆಯನ್ನು ಮೂಡಿಸುತ್ತದೆ. ಭ್ರಷ್ಟಾಚಾರದ ಪರಿಣಾಮವಾಗಿ ಸಾರ್ವಜನಿಕರು ಆಡಳಿತದಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ಇದರಿಂದ ಆಡಳಿತ ಯಂತ್ರ ನಿಷ್ಕ್ರಿಯವಾಗುವ ಸಾಧ್ಯತೆಗಳು ಇರುತ್ತವೆ. ಭ್ರಷ್ಟಾಚಾರದಲ್ಲಿ ನಿರತವಾಗಿರುವ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಹಣದತ್ತ ಆಕರ್ಷಿತರಾಗಿ ಸಾರ್ವಜನಿಕ ಸೇವೆಯಿಂದ ವಿಮುಖರಾಗಿದ್ದಾರೆ. ಭ್ರಷ್ಟಾಚಾರವು ಸಾರ್ವಜನಿಕರ ಹಣದ ಅಪವ್ಯಯಕ್ಕೆ ಎಡೆ ಮಾಡಿಕೊಡುತ್ತದೆ. ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳು ಸಾರ್ವಜನಿಕ ಹಣವನ್ನು ಎಚ್ಚರಿಕೆಯಿಂದ ಖರ್ಚು ಮಾಡದೆ ಪೋಲು ಮಾಡುತ್ತಾರೆ. ಭ್ರಷ್ಟಾಚಾರವು ಪ್ರಜಾಪ್ರಭುತ್ವಕ್ಕೆ ಹೇಗೆ ಬೆದರಿಕೆ ಒಡ್ಡಿದೆ ಎಂಬ ವಿಷಯವನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

1. **ಸಾರ್ವಜನಿಕ ಹಣದ ಅಪವ್ಯಯ (Wastage of public money):**

ಸಾರ್ವಜನಿಕ ಹಣವನ್ನು ಅನಾವಶ್ಯಕವಾಗಿ ಖರ್ಚು ಮಾಡುವುದು ಕೂಡ ಭ್ರಷ್ಟಾಚಾರದ ಒಂದು ರೂಪವಾಗಿದೆ. ಸಾರ್ವಜನಿಕ ಹಣವನ್ನು ಅವಶ್ಯಕತೆಗಿಂತ ಹೆಚ್ಚಾಗಿ ಖರ್ಚು ಮಾಡಿದರೆ ರಾಜ್ಯದ ಖಜಾನೆ ಬರಿದಾಗುತ್ತದೆ. ಖಜಾನೆಯನ್ನು ತುಂಬಿಸಲು



downloaded from: www.kpscvaani.com

ಸಾರ್ವಜನಿಕರ ಮೇಲೆ ಪದೇ ಪದೇ ತೆರಿಗೆ ವಿಧಿಸಲಾಗುತ್ತದೆ. ತೆರಿಗೆಯ ಭಾರದಿಂದ ಬೇಸತ್ತ ಜನ ಸರ್ಕಾರದ ವಿರುದ್ಧ ತಿರುಗಿ ಬೀಳಬಹುದು.

**2. ಅನ್ಯಾಯಕ್ಕೆಡೆ ಮಾಡಿಕೊಡುತ್ತದೆ (Leads to injustice) :**

ಸ್ವಜನ ಪಕ್ಷಪಾತವು ಭ್ರಷ್ಟಾಚಾರದ ಒಂದು ರೂಪವಾಗಿದೆ. ಅಧಿಕಾರಸ್ಥರು ಅರ್ಹತೆ ಹಾಗೂ ಸಾಮರ್ಥ್ಯವಿಲ್ಲದ, ತಮ್ಮ ಸ್ನೇಹಿತರು ಹಾಗೂ ಬಂಧು–ಬಳಗದವರಿಗೆ ಸರ್ಕಾರ ಉದ್ಯೋಗವನ್ನು ನೀಡಬಹುದು. ಇದರಿಂದ ಅರ್ಹ, ಸಮರ್ಥ ಹಾಗೂ ಯೋಗ್ಯ ಅಭ್ಯರ್ಥಿಗಳಿಗೆ ಉದ್ಯೋಗ ದೊರೆಯದೆ ಅನ್ಯಾಯವಾಗುತ್ತದೆ. ಇಂತಹ ಪರಿಣಾಮವಾಗಿ ಸಮರ್ಥ ಅಭ್ಯರ್ಥಿಗಳ ಸೇವೆಯಿಂದ ಸರ್ಕಾರ ವಂಚಿತವಾಗುತ್ತದೆ.

**3. ಆರ್ಥಿಕ ಅಭಿವೃದ್ಧಿಗೆ ಹಿನ್ನಡೆ (Economic hindrance):**

ಭ್ರಷ್ಟ ಅಧಿಕಾರಿಗಳು ಮತ್ತು ರಾಜಕಾರಣಿಗಳು ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಲೆಂದು ಸರ್ಕಾರವು ನೀಡುವ ಹಣವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ರಸ್ತೆ ರಿಪೇರಿ, ನೀರಾವರಿ ಅಭಿವೃದ್ಧಿ, ಆಣೆಕಟ್ಟುಗಳ ನಿರ್ಮಾಣ, ಕೃಷಿ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆ ಮುಂತಾದ ಕಾರ್ಯಗಳಿಗೆ ಸರ್ಕಾರ ಬಿಡುಗಡೆ ಮಾಡುವ ಹಣದ ಬಹುಭಾಗವನ್ನು ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳು ಕೊಳ್ಳೆ ಹೊಡೆಯುತ್ತಾರೆ. ಇದರ ಪರಿಣಾಮವಾಗಿ ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಹಿನ್ನಡೆ ಉಂಟಾಗುತ್ತದೆ.

**4. ರಾಜಕೀಯ ಅಸ್ಥಿರತೆ (Political instability) :**

ಒಂದು ಪಕ್ಷದ ರಾಜಕಾರಣಿಗಳು ಅಧಿಕಾರವನ್ನು ಪಡೆಯಲು ಶಾಸಕಾಂಗದಲ್ಲಿ ವಿಶ್ವಾಸಮತಯಾಚನೆಯ ಸಂದರ್ಭದಲ್ಲಿ ಎಂಎಲ್ಎ ಅಥವಾ ಎಂಪಿಗಳಿಗೆ ಹಣ ನೀಡಿ ತಮ್ಮ ಪಕ್ಷದ ಪರವಾಗಿ ಮತ ನೀಡುವಂತೆ ಕೇಳಿಕೊಳ್ಳುತ್ತಾರೆ ಎಂಬ ಆರೋಪವಿದೆ. ಇದನ್ನು ರಾಜ್ಯಶಾಸ್ತ್ರದ ಪರಿಭಾಷೆಯಲ್ಲಿ ಕುದುರೆ ವ್ಯಾಪಾರ (Horse Trading) ಎಂದು ಕರೆಯಲಾಗುತ್ತದೆ. ಇದರ ಪರಿಣಾಮವಾಗಿ ಸರ್ಕಾರ ಉರುಳುವ ಸಾಧ್ಯತೆ ಇರುತ್ತದೆ. ಉದಾ: 1993ರಲ್ಲಿ ತಮ್ಮ ಸರ್ಕಾರದ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಸೋಲಿಸಲು ಪ್ರಧಾನಿ ಪಿ.ವಿ. ನರಸಿಂಹರಾವ್‌ರವರು ಜಾರ್ಖಂಡ್ ಮುಕ್ತಿ ಮೋರ್ಚಾದ 4 ಮಂದಿ ಎಂಪಿಗಳಿಗೆ ಲಂಚ ನೀಡಿದ್ದರು ಎಂಬ ಆರೋಪಕ್ಕೆ ಒಳಗಾಗಿದ್ದರು.



downloaded from: www.kpscvaani.com

### 5. ಸಂಸದೀಯ ಮೌಲ್ಯಗಳ ಕುಸಿತ (Erosion of Parliamentary values):

ರಾಮ್‌ಸೇವಕ್, ಮನೋಜ್ ನರೇಂದ್ರ, ರಾಮ್‌ಪಾಲ್, ಅಣ್ಣಾಸಾಹೇಬ್ ಮುಂತಾದ ವಿವಿಧ ಪಕ್ಷಗಳಿಂದ ಆಯ್ಕೆಯಾದ 11 ಮಂದಿ ಸಂಸದರನ್ನು ಸದನದಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದುಕೊಂಡಿದ್ದಾರೆ ಎಂಬ ಆರೋಪದ ಮೇಲೆ ಸಂಸತ್ತಿನಿಂದ ಉಚ್ಚಾಟಿಸಲಾಯಿತು. ಅಲ್ಲದೆ ಸ್ಥಳೀಯ ಸಂಸದರ ಪ್ರದೇಶಾಭಿವೃದ್ಧಿ ನಿಧಿಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂಬ ಪ್ರಕರಣ ಡಿಸೆಂಬರ್ 2005ರಲ್ಲಿ ಬೆಳಕಿಗೆ ಬಂದಿದೆ. ಸಂಸತ್ ಸದಸ್ಯರ ಇಂತಹ ಭ್ರಷ್ಟಾಚಾರದ ಆರೋಪಗಳು ಸಂಸದೀಯ ಮೌಲ್ಯದ ಕುಸಿತಕ್ಕೆ ಕಾರಣವಾಗಿದೆ.

### 6. ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆ (Affects public confidence):

ಪಿ.ವಿ. ನರಸಿಂಹರಾವ್, ರಾಜೀವ್‌ಗಾಂಧಿ, ಜಯಲಲಿತ, ಲಾಲುಪ್ರಸಾದ್ ಯಾದವ್, ಸುಖರಾಮ್ ಮುಂತಾದ ರಾಜಕೀಯ ನಾಯಕರು ಅನುಕ್ರಮವಾಗಿ ಜೆ.ಎಂ.ಎಂ. ಹಗರಣ, ಬೋಫೋರ್ಸ್ ಹಗರಣ, ತಾನ್ಸಿ ಹಗರಣ, ಮೇವು ಹಗರಣ, ಟೆಲಿಕಾಂ ಹಗರಣಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಇದರೊಂದಿಗೆ ಛಾಪಾ ಕಾಗದದ ಹಗರಣ, ಬಹುಕೋಟಿ ಅಕ್ಕಿ ಹಗರಣ, ಅರ್ಕಾವತಿ ಲೇಔಟ್ ಹಗರಣ ಮುಂತಾದವುಗಳಲ್ಲಿ ಅಧಿಕಾರಿಗಳು ಶಾಮಿಲಾಗಿದ್ದಾರೆ ಎಂಬ ಆರೋಪಗಳು ಕೇಳಿಬಂದವು. ಪರಿಣಾಮವಾಗಿ ಸಾರ್ವಜನಿಕರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಳ್ಳುವಂತಾಗಿದೆ.

### 7. ಆಡಳಿತದಲ್ಲಿ ಅದಕ್ಷತೆ (Inefficiency in administration) :

ರಾಜಕಾರಣಿಗಳು ಅಧಿಕಾರಿಗಳೊಂದಿಗೆ ಕೆಲವು ಭ್ರಷ್ಟಾಚಾರದ ಪ್ರಕರಣಗಳಲ್ಲಿ ಶಾಮಿಲಾಗಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ. ಒಂದು ವೇಳೆ ಇದು ನಿಜವಾದರೆ ರಾಜಕಾರಣಿಗಳು ಅಧಿಕಾರಶಾಹಿಯನ್ನು ನಿಯಂತ್ರಿಸುವ ಹಾಗೂ ನಿರ್ದೇಶಿಸುವ ನೈತಿಕ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಪರಿಣಾಮವಾಗಿ ಆಡಳಿತದಲ್ಲಿ ಅದಕ್ಷತೆ ಹಾಗೂ ಅರಾಜಕತೆ ಉಂಟಾಗಬಹುದು.



downloaded from: www.kpscvaani.com

## 8. ಜನಸಾಮಾನ್ಯರ ಶೋಚನೀಯ ಪರಿಸ್ಥಿತಿ (Miserable condition of the people) :

ಇಂದು ಭ್ರಷ್ಟಾಚಾರವು ಆಡಳಿತದ ಉನ್ನತಮಟ್ಟದಲ್ಲಷ್ಟೇ ಅಲ್ಲದೆ ಕೆಳಮಟ್ಟದಲ್ಲಿಯೂ ತನ್ನ ಕಬಂಧ ಬಾಹುವನ್ನು ಚಾಚುವ ಮೂಲಕ ಸಾಮಾನ್ಯ ಮನುಷ್ಯನ ದೈನಂದಿನ ಜೀವನವನ್ನು ಶೋಚನೀಯ ಸ್ಥಿತಿಗೆ ತಳ್ಳಿದೆ. ಇಂದು ಗ್ಯಾಸ್ ಸಿಲಿಂಡರ್ ಪಡೆಯಲು, ಪಿಂಚಣಿ ಪಡೆಯಲು, ಜನನ ಹಾಗೂ ಮರಣ ಪತ್ರ ಪಡೆಯಲು, ತಾಲ್ಲೂಕು ಕಛೇರಿಯಲ್ಲಿ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಪಡೆಯಲು ಅಷ್ಟೇ ಏಕೆ ಆಸ್ಪತ್ರೆಯಲ್ಲಿ ಶವವನ್ನು ಪಡೆಯಲು ಲಂಚ ನೀಡಬೇಕಾದ ಪರಿಸ್ಥಿತಿ ಬಂದೊದಗಿದೆ. ಇದರ ಪರಿಣಾಮವಾಗಿ ಜನಸಾಮಾನ್ಯರ ದೈನಂದಿನ ಬದುಕು ಅತ್ಯಂತ ಶೋಚನೀಯವಾಗಿದೆ.

## ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ (Prevention of Corruption Act)

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯನ್ನು 1988ರಲ್ಲಿ ಸಂಸತ್ತು ಪಾಸು ಮಾಡಿತು. ಈ ಕಾಯ್ದೆಯು 1989ರಲ್ಲಿ ಜಾರಿಗೆ ಬಂದಿತು. ಆಡಳಿತಾತ್ಮಕ ಭ್ರಷ್ಟಾಚಾರವನ್ನು ನಿಯಂತ್ರಿಸುವುದೇ ಈ ಕಾಯ್ದೆಯ ಉದ್ದೇಶವಾಗಿತ್ತು.

### ಈ ಕಾಯ್ದೆಯು ಕೆಳಗಿನ ಚಟುವಟಿಕೆಗಳನ್ನು ಭ್ರಷ್ಟಾಚಾರ ಎಂದು ಪರಿಗಣಿಸುತ್ತದೆ.

- ಸಾರ್ವಜನಿಕ ಅಧಿಕಾರಿಗಳು ಇತರರಿಂದ ಕಾಣಿಕೆ ಸ್ವೀಕರಿಸುವುದು.
- ಸಾರ್ವಜನಿಕ ಅಧಿಕಾರಿಗಳು, ಒಡವೆ, ಆಸ್ತಿ ಮುಂತಾದವುಗಳನ್ನು ಸ್ವೀಕರಿಸುವುದು.
- ಸ್ವಾರ್ಥಕ್ಕಾಗಿ ಅಧಿಕಾರ ದುರುಪಯೋಗ ಮಾಡಿಕೊಳ್ಳುವುದು.
- ಸ್ವಜನಪಕ್ಷಪಾತದಲ್ಲಿ ತೊಡಗುವುದು.
- ಕಛೇರಿಯ ಸಂಪನ್ಮೂಲಗಳನ್ನು ದುರುಪಯೋಗಪಡಿಸಿಕೊಳ್ಳುವುದು.



downloaded from: www.kpscvaani.com

## ಲೋಕಪಾಲ್ ಮತ್ತು ಲೋಕಾಯುಕ್ತ – ಪರಿಹಾರಗಳಾಗಿ (Lokpal and Lokayukta as Remedies):

### ಲೋಕಪಾಲ್ (Lokpal):

ಆಡಳಿತದ ಎಲ್ಲ ಹಂತಗಳಲ್ಲಿಯೂ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅದಕ್ಷತೆ, ವಿಳಂಬತೆ, ಬೇಜವಾಬ್ದಾರಿತನ, ಅಧಿಕಾರ ದುರುಪಯೋಗ ತಾಂಡವವಾಡುತ್ತಿವೆ. ಇವುಗಳಿಂದ ಉಂಟಾಗುವ ತೊಂದರೆ ಮತ್ತು ಕಿರುಕುಳಗಳಿಂದ ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ಭಾರತದಲ್ಲಿಯೂ ಸ್ವೀಡನ್ನಿನ ಓಂಬಡ್ಸ್‌ಮನ್ ಮಾದರಿಯ ಸಂಸ್ಥೆಯನ್ನು ಸ್ಥಾಪಿಸುವ ಅವಶ್ಯಕತೆ ಇದೆ. 1966ರಲ್ಲಿ ಮೊರಾರ್ಜಿ ದೇಸಾಯಿ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ನಾಗರೀಕರ ಕುಂದು ಕೊರತೆಗಳ ನಿವಾರಣೆಗಾಗಿ ಲೋಕಪಾಲ್ ಮತ್ತು ಲೋಕಾಯುಕ್ತ ಎಂಬ ಸಂಸ್ಥೆಗಳನ್ನು ರಚಿಸಲು ಸಲಹೆ ನೀಡಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಂತ್ರಿಗಳು ಹಾಗೂ ಕಾರ್ಯದರ್ಶಿಗಳ ವಿರುದ್ಧ ದಾಖಲಾಗುವ ದೂರುಗಳನ್ನು ಪರಿಶೀಲಿಸುವ ಅಧಿಕಾರ ಲೋಕಪಾಲ್‌ನ ವ್ಯಾಪ್ತಿಯೊಳಗೆ ಬರುತ್ತದೆ. ಪ್ರತಿ ರಾಜ್ಯದಲ್ಲಿ ಉನ್ನತ ಅಧಿಕಾರಿಗಳ ವಿರುದ್ಧ ಬರುವ ದೂರುಗಳ ಪರಿಶೀಲನೆ ಲೋಕಾಯುಕ್ತರ ವ್ಯಾಪ್ತಿಯೊಳಗೆ ಬರುತ್ತದೆ.

## ಕೋಮುವಾದ (Communalism)

### ಅರ್ಥ (Meaning) :

ಕೋಮುವಾದಕ್ಕೆ ಒಂದು ನಿರ್ದಿಷ್ಟವಾದ ಅರ್ಥ ನೀಡುವುದು ಕಠಿಣ. ಕೋಮುವಾದ ಎಂಬ ಪದವು ಕಮ್ಯುನಿಟಿ (Community) ಎಂಬ ಪದದಿಂದ ಬಂದಿದೆ. ಇದು, ವ್ಯಕ್ತಿ ತನ್ನ ಸಮುದಾಯಕ್ಕೆ ನಿಷ್ಠೆಯನ್ನು ತೋರುವುದು ಎಂಬ ಸರಳ ಅರ್ಥವನ್ನು ನೀಡುತ್ತದೆ. ಈ ದೃಷ್ಟಿಯಿಂದ ವಿವೇಚಿಸಿದರೆ ಕೋಮುವಾದದ ಪರಿಕಲ್ಪನೆಯು ಸಕಾರಾತ್ಮಕವಾದುದು. ಆದರೆ ಸಮಕಾಲೀನ ಭಾರತದಲ್ಲಿ 'ಕೋಮುವಾದ'ವು ವಿಭಿನ್ನ ರೀತಿಯ ಅರ್ಥವನ್ನು ಪಡೆದುಕೊಂಡಿದೆ. **ಒಂದು ನಿರ್ದಿಷ್ಟ ಸಮುದಾಯ ಅಥವಾ ಧರ್ಮದೆಡೆಗೆ ಒಬ್ಬ ವ್ಯಕ್ತಿಗೆ ಇರುವ ಅತಿಯಾದ ವ್ಯಾಮೋಹ ಮತ್ತು ಅಂಧಶ್ರದ್ಧೆಯನ್ನು ಕೋಮುವಾದ ಎಂದು ಕರೆಯಬಹುದು.** ವಿವಿಧ ಧರ್ಮೀಯರ ನಡುವೆ ಇರುವ ಸಂಶಯ, ದ್ವೇಷ ಹಾಗೂ ಅಪನಂಬಿಕೆಗಳು



downloaded from: www.kpscvaani.com

ಕೋಮುವಾದ ಎನಿಸಿಕೊಳ್ಳುತ್ತವೆ. ಒಂದು ಧರ್ಮವನ್ನು ಇನ್ನೊಂದು ಧರ್ಮದ ವಿರುದ್ಧ ಎತ್ತುಕಟ್ಟುವ ಪ್ರವೃತ್ತಿಯನ್ನು ಕೋಮುವಾದ ಎಂದು ಅರ್ಥೈಸಲಾಗುತ್ತದೆ. ಒಂದು ಸಮೂಹ ತನ್ನ ರಾಜಕೀಯ, ಆರ್ಥಿಕ, ಸಾಮಾಜಿಕ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲು ಧರ್ಮವನ್ನು ಬಳಸಿಕೊಳ್ಳುವುದು ಕೂಡ ಕೋಮುವಾದವಾಗುತ್ತದೆ. ಹಿಂದು, ಮುಸ್ಲಿಂ, ಸಿಖ್, ಕ್ರೈಸ್ತ ಧರ್ಮೀಯರ ನಡುವಣ ದ್ವೇಷ, ಘರ್ಷಣೆ, ಅಸಹನೆಗಳನ್ನು ಕೋಮುವಾದ ಎಂದು ಗುರುತಿಸಲಾಗುತ್ತದೆ.

## ವ್ಯಾಖ್ಯೆಗಳು (Definitions) :

ವಿವಿಧ ವಿದ್ವಾಂಸರು ಕೋಮುವಾದವನ್ನು ತಮ್ಮದೇ ಆದ ಶೈಲಿಯಲ್ಲಿ ವ್ಯಾಖ್ಯಾನಿಸಿದ್ದಾರೆ.

**ಡಬ್ಲ್ಯು.ಸಿ.ವೇಲ್‌ಸ್ಮಿತ್** : ಪ್ರತಿಯೊಂದು ಧರ್ಮವು ಒಂದು ಪ್ರತ್ಯೇಕ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಘಟಕ ಎಂಬ ವಿಷಯಕ್ಕೆ ಒತ್ತು ನೀಡುವ ಮತ್ತು ವಿವಿಧ ಸಮೂಹಗಳ ನಡುವೆ ಅಸ್ತಿತ್ವದಲ್ಲಿರುವ ಭಿನ್ನತೆ ಹಾಗೂ ವೈರುಧ್ಯಗಳಿಗೆ ಒತ್ತು ನೀಡುವ ಸಿದ್ಧಾಂತವೇ ಕೋಮುವಾದ.

**ರಷೀದ್ ಉದ್ ದಿನ್ ಖಾನ್** : ಧಾರ್ಮಿಕ ಶೋಷಣೆಯೇ ಕೋಮುವಾದ. ಒಂದು ಧಾರ್ಮಿಕ ಸಮುದಾಯವನ್ನು ಇತರ ಧಾರ್ಮಿಕ ಸಮುದಾಯಗಳ ವಿರುದ್ಧ ಎತ್ತಿ ಕಟ್ಟುವುದೇ ಕೋಮುವಾದ.

**ಪ್ರಭಾ ದೀಕ್ಷಿತ್** : ರಾಜಕೀಯ ಉದ್ದೇಶ ಮತ್ತು ಗುರಿಗಳನ್ನು ಈಡೇರಿಸಿಕೊಳ್ಳಲು ಧಾರ್ಮಿಕ, ಸಾಂಸ್ಕೃತಿಕ ಭಿನ್ನತೆಗಳನ್ನು ಬಳಸಿಕೊಳ್ಳುವ ರಾಜಕೀಯ ತತ್ವವೇ ಕೋಮುವಾದ.

**ರಿಚರ್ಡ್ ಡಿ ಲ್ಯಾಂಬರ್ಟ್** : ಪ್ರತಿಗಾಮಿ ಸಾಮಾಜಿಕ ಧೋರಣೆಯೇ ಕೋಮುವಾದ.



downloaded from: www.kpscvaani.com

## ಪ್ರಜಾಪ್ರಭುತ್ವಕ್ಕೆ ಬೆದರಿಕೆಯಾಗಿ ಕೋಮುವಾದ (A Threat to Democracy) :

ಕೋಮುವಾದವು ಭಾರತದ ಪ್ರಭುತ್ವವು ಇಂದು ಎದುರಿಸುತ್ತಿರುವ ದೊಡ್ಡ ಸವಾಲಾಗಿದೆ. ಕೋಮುವಾದವು ಜವಾಹರಲಾಲ್ ನೆಹರೂರವರು ಅಭಿಪ್ರಾಯ ಪಡುವಂತೆ "ವಿದೇಶಿ ಆಕ್ರಮಣ" ಕ್ಕಿಂತ ಅಪಾಯಕಾರಿಯಾದುದು. ಏಕೆಂದರೆ ಆಕ್ರಮಣದ ಸಂದರ್ಭದಲ್ಲಿ ರಾಷ್ಟ್ರದ ಜನತೆ ಜಾತಿ, ಮತ, ಲಿಂಗ, ಧರ್ಮಗಳನ್ನು ಮರೆತು ಒಂದಾಗುತ್ತಾರೆ. ಇದರಿಂದ ರಾಷ್ಟ್ರೀಯ ಐಕ್ಯತೆ ಸಾಧ್ಯವಾಗುತ್ತದೆ. ಆದರೆ ಕೋಮುವಾದವು ಜನರನ್ನು ಜಾತಿ ಹಾಗೂ ಧರ್ಮಗಳ ಆಧಾರದ ಮೇಲೆ ವಿಭಜಿಸುತ್ತದೆ. ಹೀಗೆ ಕೋಮುವಾದವು ರಾಷ್ಟ್ರೀಯ ಏಕತೆ ಮತ್ತು ಭದ್ರತೆಗೆ ಗಂಡಾಂತರಕಾರಿಯಾಗಿದೆ. ಆದ್ದರಿಂದ ಕೋಮುವಾದವು ಭಾರತದ ಅತ್ಯಂತ ಅಪಾಯಕಾರಿ ಶತೃವಾಗಿದೆ. ಭಾರತವನ್ನು ಪ್ರೀತಿಸುವವರು ಕೋಮುವಾದವನ್ನು ದ್ವೇಷಿಸುತ್ತಾರೆ ಹಾಗೂ ಭಾರತವನ್ನು ದ್ವೇಷಿಸುವವರು ಕೋಮುವಾದವನ್ನು ಪ್ರೀತಿಸುತ್ತಾರೆ.

ಕೋಮುವಾದವು ಜನರನ್ನು ಧರ್ಮದ ಹೆಸರಿನಲ್ಲಿ ಬೇರ್ಪಡಿಸಿ ಧಾರ್ಮಿಕ ಸಂಘರ್ಷವನ್ನುಂಟು ಮಾಡುತ್ತದೆ. ಇದು ಧರ್ಮದ ಹೆಸರಿನಲ್ಲಿ ಒಂದು ರಾಷ್ಟ್ರವನ್ನು ಶತ್ರು ಪಾಳಯಗಳಾಗಿ ವಿಭಜಿಸುವ ಮೂಲಕ ಭಾರತದ ಜಾತ್ಯಾತೀತ ವ್ಯವಸ್ಥೆಗೆ ಕೊಡಲಿ ಪೆಟ್ಟನ್ನು ನೀಡಬಲ್ಲದು.

ಕೋಮುವಾದವು ವಿವಿಧ ಧರ್ಮಗಳ ನಡುವೆ ಘರ್ಷಣೆಯನ್ನುಂಟು ಮಾಡಿ ಶಾಂತಿಯುತ ಸಹಬಾಳ್ವೆಯನ್ನು ಧ್ವಂಸಗೊಳಿಸುತ್ತದೆ. ಇದು ವಿವಿಧ ಧರ್ಮಗಳ ನಡುವಣ ಸಾಮರಸ್ಯವನ್ನು ನಾಶಗೊಳಿಸಿ ದ್ವೇಷದ ಜ್ವಾಲೆಯನ್ನು ಹಬ್ಬಿಸುತ್ತದೆ. ಕೋಮುವಾದವು ಅಮಾಯಕ ಹಾಗೂ ಮುಗ್ಧ ಜನರನ್ನು ಬಲಿ ತೆಗೆದುಕೊಳ್ಳುವುದಲ್ಲದೆ ಲೆಕ್ಕವಿಲ್ಲದಷ್ಟು ಆಸ್ತಿ ಪಾಸ್ತಿಗೆ ಹಾನಿ ಉಂಟುಮಾಡುತ್ತದೆ. ಮುಂಬೈ ಸರಣಿ ಬಾಂಬ್‌ಸ್ಫೋಟ, ಗುಜರಾತಿನ ಗೋದ್ರಾ ನರಹತ್ಯೆ, ಬಾಬ್ರಿ ಮಸೀದಿ ಪ್ರಕರಣ, ಸಿಖ್ಖರ ಹತ್ಯಾಕಾಂಡ, ಹುಬ್ಬಳ್ಳಿಯ ಈದ್ಗಾ ಪ್ರಕರಣಗಳೇ ಇದಕ್ಕೆ ಸಾಕ್ಷಿ. ಕೋಮುವಾದವು ಪ್ರಜಾಪ್ರಭುತ್ವದ ಅಡಿಗಲ್ಲಾದ ಚುನಾವಣೆಯ ಮೇಲೆ ಅನೇಕ ದುಷ್ಪರಿಣಾಮಗಳನ್ನುಂಟು ಮಾಡುತ್ತದೆ. ಇಂದಿನ ಚುನಾವಣೆಗಳಲ್ಲಿ ಪ್ರಚಾರಕ್ಕಾಗಿ ಧರ್ಮವನ್ನು ಬಳಸಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ. ಜಾತಿ ಹಾಗೂ ಕೋಮು ಸಂಘಟನೆಗಳು ರಾಜಕೀಯ ಪಕ್ಷಗಳನ್ನು ಬೆಂಬಲಿಸಿ ತಮ್ಮ ಹಿತಾಸಕ್ತಿಯನ್ನು ಪೂರೈಸಿಕೊಳ್ಳುತ್ತವೆ. ಭಾರತದ ಅನೇಕ ರಾಜ್ಯಗಳಲ್ಲಿ ಧರ್ಮವನ್ನು **ಓಟು ಬ್ಯಾಂಕ್ (Vote**



downloaded from: www.kpscvaani.com

**Bank**) ಆಗಿ ಪರಿವರ್ತಿಸಿಕೊಂಡು ಅಧಿಕಾರದ ಗದ್ದುಗೆ ಹಿಡಿದ ಉದಾಹರಣೆಗಳುಂಟು. ಕೋಮುವಾದವನ್ನು ಆಧರಿಸಿ ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳು ಎಲ್ಲಾ ಪ್ರಜೆಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸುವುದಿಲ್ಲ. ಅದರ ಬದಲಾಗಿ ಕೋಮುವಾದದ ತೀವ್ರತೆಯನ್ನು ಹೆಚ್ಚಿಸುತ್ತಾರೆ. ಇದು ಧರ್ಮದ ಹೆಸರಿನಲ್ಲಿ ರಾಜಕಾರಣಿಗಳು ಮಾಡುವ ಶೋಷಣೆಯಾಗಿದೆ. ಕೋಮುವಾದವು ಭಾರತದ ಪ್ರಜಾಪ್ರಭುತ್ವಕ್ಕೆ ಅತ್ಯಂತ ಅಪಾಯಕಾರಿಯಾಗಿದೆ.

## ವಿಜ್ಞಾನ–ತಂತ್ರಜ್ಞಾನದ ಬೆಳವಣಿಗೆ

ವಿಜ್ಞಾನ–ತಂತ್ರಜ್ಞಾನಗಳ ನೆರವಿಲ್ಲದೆ, ಯಾವ ಕ್ಷೇತ್ರದಲ್ಲಿಯೂ ಇಂದು ಪ್ರಗತಿಯನ್ನು ಸಾಧಿಸುವುದು ಸಾಧ್ಯವಿಲ್ಲದ ಮಾತು. ವಿಶ್ವದ ಅತಿ ಪ್ರಾಚೀನ ನಾಗರಿಕತೆಗಳಲ್ಲೊಂದಾಗಿದ್ದ ಭಾರತೀಯ ಪರಂಪರೆ ಸುದೀರ್ಘ, ಸಾಂಸ್ಕೃತಿಕ ವೈಶಿಷ್ಟ್ಯತೆಗಳಿಂದ ಕೂಡಿತ್ತು. ಗಣಿತ, ಖಗೋಳ ವಿಜ್ಞಾನಗಳಂತಹ ವೈಜ್ಞಾನಿಕ ವಿಷಯಗಳಲ್ಲೂ ಸಾಕಷ್ಟು ಪ್ರಾವೀಣ್ಯತೆಯನ್ನು ಹೊಂದಿತ್ತು. ಆರ್ಯಭಟ್ಟ, ಭಾಸ್ಕರಾಚಾರ್ಯ, ವರಾಹಮಿಹಿರ, ಲೀಲಾವತಿ ಮುಂತಾದವರು ಮಾಡಿದ ಸಾಧನೆ ಜಾಗತಿಕ ದಾಖಲೆ ಎನಿಸಿತ್ತು.

## ಸುಧಾರಣೆಗೆ ಚಾಲನೆ

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಪರಿಸ್ಥಿತಿ ಬದಲಾಯಿತು. ಪ್ರಜಾಪ್ರಭುತ್ವ, ಜನಜೀವನದಲ್ಲಿ ಮಹತ್ತರ ಬದಲಾವಣೆಗೆ ಭಾಷ್ಯ ಬರೆಯಿತು. ದೇಶದ ಮೊದಲ ಪ್ರಧಾನಿ ಜವಾಹರ್‌ಲಾಲ್ ನೆಹರೂ, ಸುಧಾರಣೆಯ ಹರಿಕಾರರೆನಿಸಿದರು. ದೇಶದಲ್ಲಿ ಕೈಗಾರಿಕೋದ್ಯಮ ಮತ್ತು ಕೃಷಿ ಸೇರಿದಂತೆ ಅಗತ್ಯ ವಲಯಗಳಲ್ಲಿ ನಿರೀಕ್ಷಿತ ಪ್ರಗತಿಯ ಗುರಿ ಸಾಧಿಸಲು ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸಲಾಯಿತು. ಇದಕ್ಕೆ ವಿಜ್ಞಾನ–ತಂತ್ರಜ್ಞಾನ ಬೆಂಬಲ ಪಡೆಯಲಾಯಿತು. ಹಸಿರುಕ್ರಾಂತಿ, ಶ್ವೇತ(ಕ್ಷೀರ) ಕ್ರಾಂತಿ ಮತ್ತು ನೀಲಿ ಕ್ರಾಂತಿಯಂತಹ ಸಾಧನೆಗಳು ಕೃಷಿ, ಹೈನುಗಾರಿಕೆ ಮತ್ತು ಮೀನುಗಾರಿಕೆಯಂತಹ ಕ್ಷೇತ್ರಗಳಲ್ಲಿ ಐತಿಹಾಸಿಕ ದಾಖಲೆಯೆನಿಸಿದವು. ಯುವ ಪ್ರಧಾನಿಯಾಗಿದ್ದ ರಾಜೀವ್‌ಗಾಂಧಿಯವರು ಮಾಹಿತಿ ತಂತ್ರಜ್ಞಾನಕ್ಕೆ ನೀಡಿದ ಒತ್ತು ದೇಶದ ಚಿತ್ರಣವನ್ನೇ ಬದಲಿಸಿತು.



downloaded from: www.kpscvaani.com

## ವಿಜ್ಞಾನ–ತಂತ್ರಜ್ಞಾನ ಬೆಳವಣಿಗೆ ನಿರ್ದಿಷ್ಟ ಸ್ವರೂಪ

ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಗೆ ನಿರ್ದಿಷ್ಟ ಸ್ವರೂಪ ನೀಡಲಾಯಿತು. ಇಂತಹ ಚಟುವಟಿಕೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳ ಮೂಲಕ, ಉನ್ನತ ಶಿಕ್ಷಣ ಸಂಸ್ಥೆಗಳು, ಖಾಸಗಿ ಮತ್ತು ಸಾರ್ವಜನಿಕ ವಲಯ ಉದ್ಯಮಗಳು ಮತ್ತು ಇತರ ಸೇವಾ ವಲಯದ ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ವೈಜ್ಞಾನಿಕ ಚಟುವಟಿಕೆಗಳಿಗೆ ಅಗತ್ಯವಾದ ಮೂಲಸೌಕರ್ಯಗಳ ಅಭಿವೃದ್ಧಿಗೆ ವಿಶೇಷ ಮಹತ್ವ ನೀಡಲಾಗಿದೆ. ರಾಷ್ಟ್ರಮಟ್ಟದಲ್ಲಿ ಕಾರ್ಯನಿರ್ವಹಿಸುವ ಪ್ರಯೋಗಾಲಯಗಳು ಮತ್ತು ತಾಂತ್ರಿಕ ಸಂಶೋಧನಾ ಕೇಂದ್ರಗಳು ವಿವಿಧ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ. ಇಸ್ರೋ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿ.ಎಸ್.ಐ.ಆರ್.) ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐ.ಸಿ.ಎ.ಆರ್.) ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐ.ಸಿ.ಎ.ಆರ್.) ಇವುಗಳಲ್ಲಿ ಪ್ರಮುಖವಾದವು.

1971ರಲ್ಲಿ ಕೇಂದ್ರದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯನ್ನು ಪ್ರಾರಂಭಿಸಲಾಯಿತು. ವಿಜ್ಞಾನ–ತಂತ್ರಜ್ಞಾನಗಳ ಯೋಜಿತ ಬೆಳವಣಿಗೆಗೆ ಸೂಕ್ತ ನೀತಿ ನಿರೂಪಿಸುವುದು, ಕಾರ್ಯತಂತ್ರ ರೂಪಿಸುವುದು, ವಿವಿಧ ಸಂಘಟನೆಗಳು ಮತ್ತು ಪ್ರಯೋಗಾಲಯಗಳ ನಡುವೆ ಸಂಪರ್ಕ ಕಲ್ಪಿಸುವುದು, ವೈಜ್ಞಾನಿಕ ಚಟುವಟಿಕೆಗಳಿಗೆ ಎದುರಾಗುವ ಆತಂಕಗಳ ನಿವಾರಣೆ ಮತ್ತು ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ನಡುವೆ ಇದಕ್ಕೆ ಪೂರಕವಾಗುವಂತೆ ಪರಸ್ಪರ ಸಹಕಾರ ವರ್ಧನೆಗೆ ನೆರವಾಗುವುದು ಈ ಇಲಾಖೆಯ ಪ್ರಮುಖ ಕಾರ್ಯಗಳೆನಿಸಿದವು.

ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ನೆರವಾಗಲು ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ (ಎಸ್.ಇ.ಆರ್.ಸಿ.) ಸ್ಥಾಪಿಸಲಾಯಿತು. ವಿವಿಧ ಸಂಘಟನೆಗಳಿಗೆ ಅನೇಕ ಅಭಿವೃದ್ಧಿ ಚಟುವಟಿಕೆಗಳಿಗೆ ಅಗತ್ಯವಾದ ಸಲಹೆ–ಸೂಚನೆಗಳ ವ್ಯವಸ್ಥೆಯನ್ನೂ ಇದು ಕಲ್ಪಿಸುತ್ತದೆ. ವಿವಿಧ ಹಂತಗಳಲ್ಲಿ ಸಲಹಾ ಮಂಡಳಿಗಳನ್ನೂ ಇದು ರೂಪಿಸುತ್ತದೆ. ಪ್ರತಿವರ್ಷವೂ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಅಭಿವೃದ್ಧಿ ಯೋಜನೆಗಳು ಇದರ ಮುಂದೆ ಪ್ರಸ್ತಾಪಕ್ಕೆ ಬರುತ್ತವೆ. ಇವುಗಳ ಸಾಧ್ಯಾಸಾಧ್ಯತೆಯ ಬಗ್ಗೆ ಮಂಡಳಿ ಪರಿಶೀಲನೆ ನಡೆಸುತ್ತದೆ. ಈ



downloaded from: www.kpscvaani.com

ಚಟುವಟಿಕೆಗಳಿಗೆ ಹೆಚ್ಚು ಬಲ ನೀಡಲು 2003ರಲ್ಲಿ ಹೊಸ ವಿಜ್ಞಾನ ಮತ್ತು ತಂತ್ರಜ್ಞಾನ ನೀತಿಯನ್ನು ಅಂಗೀಕರಿಸಲಾಯಿತು.

1996ರಲ್ಲಿ ತಂತ್ರಜ್ಞಾನ ಅಭಿವೃದ್ಧಿ ಮಂಡಳಿ ಸ್ಥಾಪನೆಯಾದ ನಂತರ ಅನೇಕ ಮಹತ್ವದ ಸಂಶೋಧನಾ ಕಾರ್ಯಗಳು ಇದರ ವ್ಯಾಪ್ತಿಯಲ್ಲಿ ಬಂದವು. ದೇಶೀಯ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಅದನ್ನು ವಾಣಿಜ್ಯಕ ಉದ್ದೇಶಗಳಿಗೆ ಬಳಸಲು ಪ್ರೋತ್ಸಾಹಿಸುವುದು, ಆಮದು ಮಾಡಿಕೊಂಡ ತಂತ್ರಜ್ಞಾನದಲ್ಲಿ ಅಗತ್ಯಕ್ಕೆ ತಕ್ಕಂತೆ ಮಾರ್ಪಾಟಿಗೆ ಅನುವು ಕಲ್ಪಿಸುವುದು ಇವುಗಳಲ್ಲಿ ಮುಖ್ಯವಾದುವು. ಇದನ್ನು ಪ್ರೋತ್ಸಾಹಿಸಲು ಪ್ರತಿವರ್ಷ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ತಾಂತ್ರಿಕ ದಿನಾಚರಣೆ (ಮೇ 11) ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ವಿತರಿಸಲಾಗುತ್ತದೆ. ಸೂಕ್ತ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ ಸಂಸ್ಥೆ ಮತ್ತು ಅದನ್ನು ಬಳಸುವ ಕೈಗಾರಿಕೆಗಳಿಗೆ ತಲಾ 2 ಲಕ್ಷ ರೂ.ಗಳ ನಗದು ಬಹುಮಾನವನ್ನು ಈ ಸಂದರ್ಭದಲ್ಲಿ ವಿತರಿಸಲಾಗುವುದು.

## ಉದ್ಯಮಗಳಲ್ಲಿ ತಂತ್ರಜ್ಞಾನ

ಉದ್ಯಮಗಳಲ್ಲಿ ತಂತ್ರಜ್ಞಾನದ ಬಳಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 1953ರಲ್ಲಿ ರಾಷ್ಟ್ರೀಯ ಸಂಶೋಧನೆ ಮತ್ತು ಮಂಡಳಿ (ಎನ್.ಆರ್.ಡಿ.ಸಿ.) ಅಸ್ತಿತ್ವದಲ್ಲಿ ಬಂದಿತು. ಉದ್ಯಮಶೀಲತೆಯ ಅಭಿವೃದ್ಧಿಗೆ ಮತ್ತು ಉದ್ಯೋಗಾವಕಾಶ ವಿಸ್ತರಣೆಗೆ ಇದರಿಂದ ಹೆಚ್ಚಿನ ಅನುಕೂಲವಾಯಿತು. ಉದ್ಯಮಶೀಲತಾ ತರಬೇತಿಗೆ ವಿಶೇಷ ಪ್ರಾಶಸ್ತ್ಯ ನೀಡಲಾಗಿದ್ದು ಇದಕ್ಕಾಗಿ ಅಲ್ಲಲ್ಲಿ ಪ್ರತ್ಯೇಕ ಸಮುಚ್ಚಯಗಳನ್ನೂ ನಿರ್ಮಿಸಲಾಗಿದೆ.

ದೇಶಾದ್ಯಂತ 200ಕ್ಕೂ ಹೆಚ್ಚು ಸಂಶೋಧನಾ ಸಂಘಟನೆಗಳೊಂದಿಗೆ ಎನ್.ಆರ್.ಡಿ.ಸಿ. ಸತತ ಸಂಪರ್ಕ ಹೊಂದಿದೆ. 2000ಕ್ಕೂ ಹೆಚ್ಚು ದೇಶೀಯ ತಂತ್ರಜ್ಞಾನಗಳಿಗೆ ಲೈಸೆನ್ಸ್ (ಅನುಮೋದನೆ) ನೀಡಲಾಗಿದ್ದು ಈ ಪೈಕಿ 1000ಕ್ಕೂ ಹೆಚ್ಚು ತಂತ್ರಜ್ಞಾನಗಳನ್ನು ವಿವಿಧ ಕೈಗಾರಿಕೆಗಳು ವಾಣಿಜ್ಯಕ ಉದ್ದೇಶಕ್ಕಾಗಿ ಈಗಾಗಲೇ ಬಳಸಲಾಗಿದೆ. ಮೂಲ ವಿಜ್ಞಾನ ಕ್ಷೇತ್ರದಲ್ಲಿ ಅಧ್ಯಯನ ನಿರತವಾಗಿರುವ ಸ್ವಾಯತ್ತ ಸಂಶೋಧನಾ ಪ್ರಯೋಗಾಲಯಗಳು ಒಂದು ವರ್ಗಕ್ಕೆ ಸೇರಿವೆ. ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ 18 ವೈಜ್ಞಾನಿಕ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ನೆರವು ನೀಡುತ್ತಿದೆ. ಬೆಂಗಳೂರಿನ ಭಾರತೀಯ ಭೌತಶಾಸ್ತ್ರ ಸಂಸ್ಥೆ, ರಾಮನ್ ಸಂಶೋಧನಾ ಸಂಸ್ಥೆ, ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರಗಳು, ಕೊಲ್ಕತ್ತಾದ ಬೋಸ್ ಸಂಸ್ಥೆಗಳು ಇವುಗಳಲ್ಲಿ ಸೇರಿವೆ. ಇವೆಲ್ಲ



downloaded from: www.kpscvaani.com

ಮೂಲ ವಿಜ್ಞಾನ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಮೀಸಲಾದವು. ಭೌತಶಾಸ್ತ್ರ ರಸಾಯನಶಾಸ್ತ್ರ ಜೀವಶಾಸ್ತ್ರ ಭೂವಿಜ್ಞಾನ, ಆಂತರಿಕ್ಷ ವಿಜ್ಞಾನ, ವೈಮಾಂತರಿಕ್ಷ ವಿಜ್ಞಾನ,

## ಪರಮಾಣು ವಿಜ್ಞಾನ – ತಂತ್ರಜ್ಞಾನ

ಪರಮಾಣು ವಿಜ್ಞಾನ ಕ್ಷೇತ್ರ ಇತ್ತೀಚೆಗೆ ಹೆಚ್ಚಿನ ಮಹತ್ವ ಪಡೆಯುತ್ತಿದೆ, ಭಾರತ ಈ ನಿಟ್ಟಿನಲ್ಲೂ ಹಿಂದುಳಿದಿಲ್ಲ. ಪರಮಾಣು ತಂತ್ರಜ್ಞಾನ ಬಳಕೆಯಲ್ಲಿ ವಿಶ್ವದಲ್ಲಿ ಪರಿಣತಿ ಪಡೆದಿರುವ ಬೆರಳೆಣಿಕೆ ರಾಷ್ಟ್ರಗಳ ಪೈಕಿ ಭಾರತವೂ ಒಂದು. ದೇಶದಲ್ಲಿ ಇಂತಹ ಕಾರ್ಯಕ್ರಮಗಳ ನಿರ್ವಹಣೆಗೆಂದೇ 1954ರಲ್ಲಿ ಅಣುಶಕ್ತಿ ಇಲಾಖೆಯನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿತು. ಯುರೇನಿಯಂ ಇಂಧನ ಮೂಲವಾಗಿ, ಭಾರ ಜಲವನ್ನು ಮಧ್ಯವರ್ತಿಯಾಗಿ ಬಳಸುವ ರಿಯಾಕ್ಟರ್‌ಗಳ ಸ್ಥಾಪನೆ, ಅಣುವಿದ್ಯುತ್ ಉತ್ಪಾದನಾ ಚಟುವಟಿಕೆಯ ಮೊದಲ ಹಂತವಾಗಿ ಕೈಗೊಳ್ಳಲಾಯಿತು. ಪ್ಲುಟೋನಿಯಂ ಉತ್ಪಾದನೆ ಮತ್ತು ಬಳಕೆ ಕುರಿತ ಫಾಸ್ಟ್ ಬ್ರೀಡರ್ ರಿಯಾಕ್ಟರ್‌ಗಳ ಸ್ಥಾಪನೆಯನ್ನು ನಂತರ ಕೈಗೆತ್ತಿಕೊಳ್ಳಲಾಯಿತು. ಥೋರಿಯಂ ಅನ್ನು ಬಳಸಿಕೊಳ್ಳುವ ಮೂರನೆಯ ಹಂತದ ತಂತ್ರಜ್ಞಾನ ಇನ್ನೂ ಅಭಿವೃದ್ಧಿ ಹಂತದಲ್ಲಿದೆ. ಪರಮಾಣು ವಿದ್ಯುತ್ ನಿಗಮ ಈ ನಿಟ್ಟಿನಲ್ಲಿ ಕಾರ್ಯನಿರತವಾಗಿದ್ದು, ಒಟ್ಟು 17 ರಿಯಾಕ್ಟರ್‌ಗಳನ್ನು ಹೊಂದಿದೆ. ಅಣು ವಿದ್ಯುತ್ ಉತ್ಪಾದನೆಯಿಂದ ಪರಿಸರ ಮಾಲಿನ್ಯದ ಅಪಾಯವಿಲ್ಲ ಅಥವಾ ಜಲವಿದ್ಯುತ್ ಯೋಜನೆಯಂತೆ ಆಣೆಕಟ್ಟು ನಿರ್ಮಾಣ, ಮುಳುಗಡೆ, ಸಂತ್ರಸ್ತರ ಪರಿಹಾರ ಕಾರ್ಯಗಳಂತಹ ಜಂಜಾಟವಿಲ್ಲ ಮತ್ತು ಮಳೆ ಅಥವಾ ನೀರಿನ ಲಭ್ಯತೆಯನ್ನು ಅವಲಂಬಿಸಿಲ್ಲ. ಅಗತ್ಯ ಬಿದ್ದಲ್ಲಿ ಈ ತಂತ್ರಜ್ಞಾನವನ್ನು 'ರಕ್ಷಣಾ ಚಟುವಟಿಕೆಗಳಲ್ಲೂ ಬಳಸಬಹುದಾಗಿದೆ. ಇದರಿಂದಾಗಿಯೇ ಈ ತಂತ್ರಜ್ಞಾನಕ್ಕೆ ಎಲ್ಲಿಲ್ಲದ ಮಹತ್ವ ಬಂದೊದಗಿದ್ದು, ಭಾರತವನ್ನು ಸಮರ್ಥ ರೀತಿಯಲ್ಲಿ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಮುಂದಾಗಿದೆ.

ಪರಮಾಣು ತಂತ್ರಜ್ಞಾನದ ಬಳಕೆ ಕೃಷಿ, ಕೈಗಾರಿಕೆಗಳಿಗೂ ಅನ್ವಯವಾಗಬಲ್ಲದು. ಅಧಿಕ ಉತ್ಪಾದನಾ ಸಾಮರ್ಥ್ಯದ ಬೀಜಗಳ ಉತ್ಪಾದನೆಗೆ ಈ ವಿಕಿರಣ ತಂತ್ರಜ್ಞಾನ ಸಹಾಯಕ. ನೆಲಗಡಲೆ, ಸಾಸುವೆ, ಬೇಳೆಕಾಳು, ಸೋಯಾಬೀನ್, ಭತ್ತ ಸೇರಿದಂತೆ 29 ಹೊಸ ಬಗೆಯ ಬೀಜಗಳನ್ನು ಕೃಷಿ ಸಚಿವಾಲಯ ಈ ತಂತ್ರಜ್ಞಾನ ಬಳಸಿ ಉತ್ಪಾದಿಸಿದೆ. ಇದಲ್ಲದೆ ಕಬ್ಬು, ಅನಾನಸ್, ಬಾಳೆ ಮುಂತಾದ ಬೆಳೆಗಳಿಗೂ ಈ ತಂತ್ರಜ್ಞಾನವನ್ನು ವಿಸ್ತರಿಸಲಾಗಿದೆ. ವಿಕಿರಣ ತಂತ್ರಜ್ಞಾನವನ್ನು ಗೊಬ್ಬರ ಕೀಟನಾಶಕಗಳ ಸಾಮರ್ಥ್ಯ ಹೆಚ್ಚಿಸಲೂ ಬಳಸಬಹುದಾಗಿದೆ. ಆಹಾರ ಕೆಡದಂತೆ ಕಾದಿಡುವ ಸಂಸ್ಕರಣ ಕಾರ್ಯಕ್ಕೂ ಇದನ್ನು



downloaded from: www.kpscvaani.com

ಬಳಸಿಕೊಳ್ಳಲಾಗುತ್ತದೆ. ವನಸ್ಪತಿ, ಸಾಂಬಾರು ಜಿನಸುಗಳ ಸಂಸ್ಕರಣೆಗೆ ಕೋಬಾಲ್ಟ್ ತಂತ್ರಜ್ಞಾನ ಬಳಕೆ ಒಂದು ಉದಾಹರಣೆ. ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲೂ ಇಂತಹ ತಂತ್ರಜ್ಞಾನದ ಬಳಕೆ ವ್ಯಾಪಕವಾಗತೊಡಗಿದೆ. ಕೆಲ ಬಗೆಯ ರೋಗಗಳ ಪರೀಕ್ಷೆಗೆ ಇದು ಸಹಾಯಕ. ಔಷಧಗಳ ತಯಾರಿಕೆಯಲ್ಲಂತೂ ಇದು ಸಾಕಷ್ಟು ಪರಿಣಾಮಕಾರಿಯೆನಿಸಿದ್ದು ಬಿ.ಎ.ಆರ್.ಸಿ. (ಭಾಭಾ ಪರಮಾಣು ಸಂಶೋಧನಾ ಕೇಂದ್ರ)ದಲ್ಲಿ ಇದಕ್ಕಾಗಿಯೇ ರೇಡಿಯೇಶನ್ ಮೆಡಿಸಿನ್ ಸೆಂಟರ್ ಎಂಬ ಪ್ರತ್ಯೇಕ ವಿಭಾಗವನ್ನೇ ಸ್ಥಾಪಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಮಾನ್ಯತೆ ಇದಕ್ಕೆ ಲಭಿಸಿದೆ. ರೇಡಿಯೋ ಸಮಸ್ಥಾನಿ (ಐಸೋಟೋಪ್)ಗಳನ್ನು ಭೂ ಅಂತರ್ಜಲ ಸಮೀಕ್ಷೆಗೆ, ಆಣೆಕಟ್ಟುಗಳಲ್ಲಿನ ಸೋರಿಕೆಯನ್ನು ಕಂಡುಹಿಡಿಯುವ ಕಾರ್ಯಗಳಿಗೆ ಬಳಸಲಾಗುತ್ತಿದೆ. ತೈಲ ಸಂಸ್ಕರಣಾ ಸ್ಥಾವರಗಳಲ್ಲಿ, ತೈಲ ನಿಕ್ಷೇಪಗಳ ನಿರ್ವಹಣೆಯಲ್ಲಿ ಈ ತಂತ್ರಜ್ಞಾನ ಈಗಾಗಲೇ ಬಳಕೆಯಲ್ಲಿದೆ.

## ಅಂತರಿಕ್ಷ ವಿಜ್ಞಾನ

ವೈಜ್ಞಾನಿಕ ಉದ್ದೇಶಗಳಿಗಾಗಿ ಅಂತರಿಕ್ಷವನ್ನು ಬಳಸಿಕೊಳ್ಳುವ ಕಾರ್ಯ ಇತ್ತೀಚಿನ ದಿನಗಳಲ್ಲಿ ತ್ವರಿತಗತಿಯಲ್ಲಿ ಮುಂದುವರಿದಿದೆ. ಭಾರತವು ಈ ವಿಷಯವನ್ನು ಅರಿತು 60ರ ದಶಕದಲ್ಲೇ ಈ ನಿಟ್ಟಿನಲ್ಲಿ ವ್ಯವಸ್ಥಿತ ರೀತಿಯಲ್ಲಿ ಕೆಲಸ ಪ್ರಾರಂಭಿಸಿತು. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) 1969ರಲ್ಲಿ ರೂಪುಗೊಂಡಿತು. 1972ರಲ್ಲಿ ಕೇಂದ್ರದಲ್ಲಿ ಬಾಹ್ಯಾಕಾಶ ಇಲಾಖೆಯನ್ನು ಪ್ರಾರಂಭಿಸಲಾಯಿತು. ಬಾಹ್ಯಾಕಾಶ ಆಯೋಗವನ್ನು ರಚಿಸಲಾಯಿತು. 70ರ ದಶಕದಲ್ಲಿ ಆರ್ಯಭಟ, ಭಾಸ್ಕರ, ರೋಹಿಣಿ, ಆ್ಯಪಲ್ ಮುಂತಾದ ಉಪಗ್ರಹಗಳ ಉಡಾವಣೆಯನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಯಿತು. 80ರ ದಶಕದಲ್ಲಿ ಅಗತ್ಯದ ಕಾರ್ಯನಿರ್ವಹಿಸಬಲ್ಲ ಐ.ಆರ್.ಎಸ್. (ದೂರ ಸಂಪರ್ಕ ಉಪಗ್ರಹ)ಗಳಂತಹ ಕಾರ್ಯಗಳು ಮುಂದುವರಿದವು. ನಂತರದ ಅವಧಿಯಲ್ಲಿ ವಿವಿಧ ಕಾರ್ಯಗಳನ್ನು ನಿರ್ವಹಿಸಬಲ್ಲ ಅತ್ಯಾಧುನಿಕ ಉಪಗ್ರಹಗಳ ನಿರ್ಮಾಣ ಮತ್ತು ಬಳಕೆಯ ಕೆಲಸ ಮುಂದುವರಿಯಿತು. ಈ ನಿಟ್ಟಿನಲ್ಲಿ 2008ರಲ್ಲಿ ನಿರ್ವಹಿಸಲಾದ ಚಂದ್ರಯಾನ–1 ಕಾರ್ಯಕ್ರಮ ಜಾಗತಿಕ ಮಟ್ಟದಲ್ಲಿ ಭಾರತದ ಸಾಧನೆಯನ್ನು ಅಗ್ರಗಣ್ಯ ಸ್ಥಾನಕ್ಕೆ ಎತ್ತರಿಸಿತು. ಮೊಟ್ಟಮೊದಲ ಬಾರಿಗೆ ಬೃಹತ್ ಪ್ರಮಾಣದಲ್ಲಿ ಚಂದ್ರನಲ್ಲಿ ನೀರು ಬಂಡೆಗಳ ರೂಪದಲ್ಲಿದೆಯೆನ್ನುವುದನ್ನು ಖಚಿತಪಡಿಸಿತು. ಇಡೀ ವಿಶ್ವವೇ ಭಾರತದೆಡೆ ಬೆರಗುಗಣ್ಣಿನಿಂದ ನೋಡುವಂತಾಯಿತು. ಚಂದ್ರಯಾನ–2 ಯೋಜನೆಯನ್ನು ಸಹ ಕೈಗೆತ್ತಿಕೊಳ್ಳಲು ಇಸ್ರೊ ನಿರ್ಧರಿಸಿದೆ. ಇನ್ನು ಮಂಗಳ ಗ್ರಹದ ಕಕ್ಷೆಗೆ ಭಾರತದ ಉಪಗ್ರಹ



downloaded from: www.kpscvaani.com

ಸೇರಿದ್ದು ಐತಿಹಾಸಿಕ ಸಾಧನೆಯೇ ಸರಿ. ಮಾನವ ರಹಿತ ಉಪಗ್ರಹಗಳ ನಿರ್ಮಾಣ ಮತ್ತು ಅಂತರಿಕ್ಷ ಪ್ರವಾಸೋದ್ಯಮ ಸಾಧ್ಯತೆಯಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಇಸ್ರೊ ಕೈಗೊಳ್ಳಲಿದೆ. ಇದಕ್ಕೆ ಪೂರಕವಾಗಿ ದೇಶೀಯ ತಂತ್ರಜ್ಞಾನದ ಅಭಿವೃದ್ಧಿ, ಕ್ರಯೋಜೆನಿಕ್ ಇಂಧನ ಕುರಿತ ತಾಂತ್ರಿಕ ಪರಿಣತಿ, ಪಿಎಸ್‌ಎಲ್‌ವಿ, ಜಿಎಸ್‌ಎಲ್‌ವಿಯಂತಹ ವಿವಿಧ ಬಗೆಯ ಉಡಾವಣಾ ವಾಹಕಗಳ ಅಭಿವೃದ್ಧಿ ವ್ಯೋಮ ನಿಲ್ದಾಣ ಮುಂತಾದ ಇತರ ಕಾರ್ಯಗಳಿಗೂ ಇಸ್ರೊ ಪರಿಣತಿಗಳನ್ನು ಪರಿಗಣಿಸಿ, ವಿಶ್ವದ ಅನೇಕ ದೇಶಗಳು ತಮ್ಮ ಉಪಗ್ರಹ ಉಡಾವಣಾ ಕಾರ್ಯವನ್ನು ಇಸ್ರೊ ಮೂಲಕ ನಿರ್ವಹಿಸುತ್ತಿವೆ. ಶ್ರೀಹರಿ ಕೋಟಾದಲ್ಲಿರುವ ಸತೀಸ್ ಧವನ್ ಉಡಾವಣಾ ಕೇಂದ್ರ ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಕಾರ್ಯನಿರ್ವಹಣಾ ಕೇಂದ್ರಗಳಲ್ಲೊಂದಾಗಿದೆ.

## ದೂರ ಸಂಪರ್ಕ

ದೂರ ಸಂಪರ್ಕ ಕಾರ್ಯದಲ್ಲಿ ಅಂತರಿಕ್ಷ ವಿಜ್ಞಾನವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಅಭೂತಪೂರ್ವ ಎನಿಸಿವೆ. ಈ ಕಾರ್ಯಕ್ಕಾಗಿಯೇ ಸ್ಪೇಸ್ ಅಪ್ಲಿಕೇಶನ್ ಸೆಂಟರ್ ಎಂಬ ಸಂಸ್ಥೆಯನ್ನು ಹೈದರಾಬಾದ್‌ನಲ್ಲಿ ಇಸ್ರೊದ ಅಂಗಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಭೂಸ್ಥಿರ ಕಕ್ಷೆಗಳಲ್ಲಿ ನೆಲೆಗೊಳಿಸಲಾಗಿರುವ ದೂರ ಸಂಪರ್ಕ ಉಪಗ್ರಹಗಳಿಂದ ಅತ್ಯುತ್ತಮ ಸಂಪರ್ಕ ಸಾಧನಗಳ ನಿರ್ವಹಣೆ ಪ್ರಗತಿಯಲ್ಲಿದೆ. ದೂರವಾಣಿ, ರೇಡಿಯೋ, ಟೆಲಿವಿಶನ್‌ನಂತಹ ಸಮೂಹ ಸಂಪರ್ಕ ಸಾಧನಗಳು ದೇಶಗಳಲ್ಲಿ ಹೊಸ ಕ್ರಾಂತಿಯನ್ನೇ ಉಂಟುಮಾಡಿವೆ. ಭಾರತ್ ಸಂಚಾರ್ ನಿಗಂ ಲಿಮಿಟೆಡ್, ಮಹಾನಗರ ಟೆಲಿಫೋನ್ ನಿಗಂ ಲಿಮಿಟೆಡ್, ಜಾಗತಿಕ ಮಟ್ಟದಲ್ಲೇ ಬೃಹತ್ ಸಂಸ್ಥೆಗಳಾಗಿ ಬೆಳೆದು, ಇತರ ದೇಶಗಳಿಗೆ ಮಾದರಿಯೆನಿಸಿದೆ. ಅಂಚೆ ಕಚೇರಿಗಳಲ್ಲೂ ಇ–ಮೇಲ್, ವಾಯ್ಸ್‌ಮೇಲ್, ಎಲೆಕ್ಟ್ರಾನಿಕ್ ಮನಿಯಾರ್ಡರ್‌ನಂತಹ ಸುಧಾರಿತ ವಿಧಾನಗಳನ್ನು ಅಳವಡಿಸಲಾಗುತ್ತಿದೆ. ರೇಡಿಯೊ ದೂರದರ್ಶನ ಪ್ರಸಾರ (ಪ್ರಸಾರ ಭಾರತಿ) ಕಾರ್ಯ ದಿನದಿನಕ್ಕೂ ವಿಸ್ತರಣೆ ಹೊಂದುತ್ತಿದೆ. ಅತ್ಯಾಧುನಿಕ ಸಂಪರ್ಕ ತಂತ್ರಗಳನ್ನು ಇವು ಅಳವಡಿಸಿಕೊಳ್ಳುತ್ತಿವೆ.

ದೂರಸಂಪರ್ಕ ತಂತ್ರಜ್ಞಾನದ ಬಳಕೆ ಇಂದು ಸರ್ವವ್ಯಾಪಿಯೆನಿಸಿದೆ. ಭೂವೀಕ್ಷಣೆ, ಹವಾಮಾನ ವೀಕ್ಷಣೆಗೆ, ಬೆಳೆಗಳ ಅಂದಾಜು ನಿರ್ವಹಣೆಗೆ, ಅಂತರ್ಜಲ, ಅದಿರು ನಿಕ್ಷೇಪಗಳ ಪತ್ತೆ ಕಾರ್ಯಕ್ಕೆ ಇದು ಅತ್ಯುಪಯುಕ್ತ. ನಗರಗಳಲ್ಲಿ ಸಂಚಾರ ನಿರ್ವಹಣೆಗೆ ಜಿಪಿಎಸ್ ವ್ಯವಸ್ಥೆ, ಆರೋಗ್ಯ ರಕ್ಷಣೆಗಾಗಿ ಟೆಲಿ ಮೆಡಿಸಿನ್ ಪದ್ಧತಿ ಜನಪ್ರಿಯವಾಗತೊಡಗಿದೆ. ಬೇಹುಗಾರಿಕೆ ಕಾರ್ಯದಲ್ಲಿ ಉಪಗ್ರಹಗಳ ಬಳಕೆ ಈಗ ತೀರ ಸಮಾನ್ಯವೆನಿಸಿದೆ. ಆಡಳಿತದಲ್ಲಿ



downloaded from: www.kpscvaani.com

ವಿದ್ಯುನ್ಮಾನ ಪದ್ಧತಿಯ ಅಳವಡಿಕೆಯಿಂದ ಕೆಲಸವೂ ತ್ವರಿತವಾಗಿ ಪೂರೈಸಬಹುದಾಗಿದೆಯಲ್ಲದೆ ಹೆಚ್ಚಿನ ಪಾರದರ್ಶಕತೆಗೂ ಒಳಪಡಿಸಬಹುದಾಗಿದೆ. ಗುಣಮಟ್ಟ ನಿರ್ವಹಣೆಗೂ ಇದು ಉಪಯುಕ್ತ. ಹಳ್ಳಿ ಹಳ್ಳಿಗೂ ದೂರ ಸಂಪರ್ಕ ಮತ್ತು ವಿದ್ಯುನ್ಮಾನ ಆಡಳಿತ ವ್ಯವಸ್ಥೆ ವಿಸ್ತರಿಸಲು ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ. ವಿಡಿಯೊ ಸಮ್ಮೇಳನದಂತಹ ಕಾರ್ಯಕ್ರಮಗಳು ಹೆಚ್ಚು ವಿಸ್ತೃತವಾಗುತ್ತಿವೆ. ಅನೇಕ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಪ್ರಸಾರಕ್ಕಾಗಿ ವಿದ್ಯುನ್ಮಾನ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಿವೆ. ಈ ವ್ಯವಸ್ಥೆಯನ್ನೇ ಆಧರಿಸಿದ ಮುಕ್ತ ವಿಶ್ವವಿದ್ಯಾನಿಲಯಗಳೂ ಇವೆ. ಅಂತರಿಕ್ಷ ತಂತ್ರಜ್ಞಾನದ ಪ್ರಯೋಜನವನ್ನು ಆಸ್ಪತ್ರೆಗಳಲ್ಲಿ, ಕೈಗಾರಿಕೆ, ಕ್ರೀಡೆ ಮತ್ತಿತರ ಕ್ಷೇತ್ರಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

## ನ್ಯಾನೊ ತಂತ್ರಜ್ಞಾನ

ನ್ಯಾನೊ ತಂತ್ರಜ್ಞಾನ ತೀರ ಇತ್ತೀಚಿನದಾಗಿದ್ದು ದೇಶದಲ್ಲಿ 2004ರಲ್ಲೇ ಇದರ ಅಭಿವೃದ್ಧಿಗೆ ವ್ಯವಸ್ಥಿತ ಕಾರ್ಯ ಪ್ರಾರಂಭಿಸಲಾಗಿದೆ. ಮಾಹಿತಿ ತಂತ್ರಜ್ಞಾನ ಇಲಾಖೆಯಡಿ ನ್ಯಾನೊ ಟೆಕ್ನಾಲಜಿ ಡೆವಲಪ್‌ಮೆಂಟ್ ಪ್ರೋಗ್ರಾಂ (ನ್ಯಾನೊ ತಂತ್ರಜ್ಞಾನ ಅಭಿವೃದ್ಧಿ ಕಾರ್ಯಕ್ರಮ) ಪ್ರಾರಂಭಿಸಲಾಯಿತು. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಇದಕ್ಕಾಗಿಯೇ ಪ್ರತ್ಯೇಕ ಕೇಂದ್ರವನ್ನು ಹೊಂದಿದ್ದು, ಕೇಂದ್ರದ ನೆರವಿನ ಅನೇಕ ಸಂಶೋಧನಾ ಯೋಜನೆಗಳನ್ನು ನಿರ್ವಹಿಸುತ್ತಿದೆ. ಮುಂಬೈನ ಐಐಟಿಯಲ್ಲೂ ಇಂತಹ ಕೇಂದ್ರವನ್ನು ಸ್ಥಾಪಿಸಲಾಗಿದೆ. ನ್ಯಾನೊ ಎಲೆಕ್ಟ್ರಾನಿಕ್ಸ್ ನ್ಯಾನೊ ಮೆಟ್ರಾಲಜಿ (ತೀರ ಸೂಕ್ಷ್ಮ ಮಾಪನ ಶಾಸ್ತ್ರ)ಯಂತಹ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ತೀವ್ರ ಚುರುಕಿನಿಂದ ಪ್ರಗತಿಯಲ್ಲಿದೆ.

## ಸಾಗರಿಕ ವಿಜ್ಞಾನ

ಸಾಗರ ತಂತ್ರಜ್ಞಾನ ಅಭಿವೃದ್ಧಿಗಾಗಿ 1981ರಲ್ಲಿ ಪ್ರತ್ಯೇಕ ಇಲಾಖೆಯನ್ನೇ ಪ್ರಾರಂಭಿಸಲಾಗಿದೆ. ಸಾಗರ ಸಂಪನ್ಮೂಲ ಅಭಿವೃದ್ಧಿ ಮತ್ತು ಬಳಕೆ ಇದರ ಪ್ರಮುಖ ಉದ್ದೇಶ. ಅಂಟಾರ್ಕ್ಟಿಕಾ ಯಾತ್ರೆಯಂತಹ ಸಂಶೋಧನಾ ಕಾರ್ಯಗಳನ್ನೂ ಕೈಗೊಳ್ಳಲಾಗಿದೆ. ಹವಾಮಾನ ಮುನ್ಸೂಚನೆಯನ್ನು ಇನ್ನಷ್ಟು ವೈಜ್ಞಾನಿಕ ವಿಧಾನಗಳಿಗೆ ಒಳಪಡಿಸಲಾಗುತ್ತಿದೆ. ಬಿರುಗಾಳಿ, ಚಂಡ ಮಾರುತ, ಸುನಾಮಿ ಮುನ್ಸೂಚನೆಯಂತಹ ಕಾರ್ಯಗಳು ಹೆಚ್ಚು ನಿಖರಗೊಳ್ಳುತ್ತಿವೆ.



downloaded from: www.kpscvaani.com

## ಜೈವಿಕ ತಂತ್ರಜ್ಞಾನ

ಜೈವಿಕ ತಂತ್ರಜ್ಞಾನ (ಬಯೊಟೆಕ್ನಾಲಜಿ) ದೇಶದಲ್ಲಿಂದು ಮುಂಚೂಣಿಯಲ್ಲಿರುವ ಕ್ಷೇತ್ರಗಳಲ್ಲೊಂದಾಗಿದೆ. ಕಳೆದ ಒಂದು ದಶಕದ ಅವಧಿಯಲಿ ದೇಶದಲ್ಲಿ ಇದರ ಬೆಳವಣಿಗೆ ಶೇಕಡಾ 40ರಷ್ಟಾಗಿದ್ದು 2005–06ರ ಸಾಲಿನಲ್ಲೇ ಈ ವಲಯದಲ್ಲಿನ ವಹಿವಾಟು 1.5 ಶತಕೋಟಿ ಡಾಲರ್ ಮೀರಿತ್ತು. ದೇಶದಲ್ಲಿ 2010ರಲ್ಲಿ ಈ ಪ್ರಮಾಣ 10 ಶತಕೋಟಿ ಡಾಲರ್ ಮೀರುವ ನಿರೀಕ್ಷೆಯಿದೆ. ದೇಶಾದ್ಯಂತ 200ಕ್ಕೂ ಹೆಚ್ಚು ಜೈವಿಕ ತಂತ್ರಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

## ಮಾಹಿತಿ ತಂತ್ರಜ್ಞಾನ

ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದಲ್ಲಿ ಭಾರತದ ಸಾಧನೆ ಜಾಗತಿಕ ಮಟ್ಟದಲ್ಲಿ ಒಂದು ದಾಖಲೆಯೆನಿಸಿದೆ. ಹೊರಗುತ್ತಿಗೆ (ಬಿ.ಪಿ.ಓ.) ಪ್ರಮಾಣ ತ್ವರಿತಗತಿಯಲ್ಲಿ ಏರುತ್ತಿದೆ. ದೇಶದ ಒಟ್ಟು ರಫ್ತಿನಲ್ಲಿ ಈ ವಲಯದ ಪ್ರಮಾಣ, 2007ರಲ್ಲೇ ಶೇಕಡಾ 32.6ರಷ್ಟಿತ್ತು. ರಫ್ತು ಮೌಲ್ಯ 31.3 ಶತಕೋಟಿ ಡಾಲರ್‌ಗೆ ತಲುಪಿತ್ತು. ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಹೂಡುತ್ತಿರುವ ಬಂಡವಾಳದ ಮೊತ್ತ ಸತತವಾಗಿ ಏರುತ್ತಲೇ ಇದೆ. 2007ರಲ್ಲೇ 45 ಸಾವಿರ ಕೋಟಿ ರೂ.ನಷ್ಟು ನೇರ ವಿದೇಶಿ ಬಂಡವಾಳ ಹೂಡಿಕೆ (ಎಫ್.ಡಿ.ಐ.) ಈ ವಲಯದಲ್ಲಿ ದಾಖಲಾಗಿದೆ. 2008–09ರಲ್ಲಿ ಸಾಫ್ಟವೇರ್ ಸೇವೆಯ ರಫ್ತಿನ ಪ್ರಮಾಣ 47 ಶತಕೋಟಿ ಡಾಲರ್ ಮಿಕ್ಕಿತ್ತು. ಫೋರ್ಚ್ಯೂನ್– 500 ಮತ್ತು ಗ್ಲೋಬಲ್–2000 ಶ್ರೇಣಿಯ ಕಂಪನಿಗಳು ಭಾರತದ ಉದ್ಯಮಗಳೊಂದಿಗೆ ಸಹಯೋಗ ಹೊಂದಿವೆ. ವಿಶ್ವದ 27 ಬೃಹತ್ ಸೆಮಿ ಕಂಡಕ್ಟರ್ ಕಂಪನಿಗಳ ಪೈಕಿ 17 ಕಂಪನಿಗಳು ಭಾರತದಲ್ಲಿ ಭದ್ರವಾದ ನೆಲೆ ಹೊಂದಿವೆ. ಸಂಶೋಧನೆ ಮತ್ತು ಅಭಿವೃದ್ಧಿ ವಲಯದಲ್ಲೂ ಭಾರತದ ನೆಲೆ ವಿಸ್ತರಿಸುತ್ತಿದೆ.

ಈ ವಲಯದಲ್ಲಿನ ಉದ್ಯೋಗಾವಕಾಶದಲ್ಲೂ ಇಂತಹುದೇ ಏರಿಕೆ ಕಂಡುಬಂದಿದೆ. 2006–07ರಲ್ಲೇ 16.21ಲಕ್ಷ ಜನ ನೇರವಾಗಿ ಈ ಉದ್ಯೋಗದಲ್ಲಿ ತೊಡಗಿದ್ದರೆ 60 ಲಕ್ಷಕ್ಕೂ ಹೆಚ್ಚು ಜನ ಪರ್ಯಾಯ ಉದ್ಯೋಗಗಳಲ್ಲಿದ್ದರೆಂಬುದು ಸಮೀಕ್ಷೆಯಿಂದ ತಿಳಿದುಬಂದಿದೆ.

ವಿಶಿಷ್ಟ ಗುರುತಿನ ಚೀಟಿ ಯೋಜನೆ ಮಾಹಿತಿ ತಂತ್ರಜ್ಞಾನದ ಒಂದು ವಿಶಿಷ್ಟ ಕೊಡುಗೆ ಎನ್ನಬಹುದು. ಇದು ವಿಶ್ವದಲ್ಲಿಯೇ ಅತಿ ಬೃಹತ್ ಯೋಜನೆಗಳಲ್ಲೊಂದಾಗಿದ್ದು 2009ರ ಫೆಬ್ರವರಿ ತಿಂಗಳಲ್ಲೇ ಖ್ಯಾತ ಉದ್ಯಮಿ, ಕರ್ನಾಟಕದ ಶ್ರೀ ನಂದನ್ ನಿಲೇಕಣಿಯವರ



downloaded from: www.kpscvaani.com

ನೇತೃತ್ವದಲ್ಲಿ ಪ್ರಾಧಿಕಾರವನ್ನು ರಚಿಸಿ ದೇಶದ ಪ್ರತಿಯೊಬ್ಬ ಪ್ರಜೆಗೂ ವಿಶಿಷ್ಟ ಗುರುತಿನ ಚೀಟಿ ದೊರೆಯುವ ನಿರೀಕ್ಷೆಯಿದೆ.

## ಕರ್ನಾಟಕದಲ್ಲಿ

ದೇಶದ ವೈಜ್ಞಾನಿಕ ಪ್ರಗತಿ ಕಾರ್ಯದಲ್ಲಿ ಕರ್ನಾಟಕದ ಕೊಡುಗೆಗೆ ಸಿಂಹಪಾಲು. ಅದರಲ್ಲೂ ಭಾರತದ ವಿಜ್ಞಾನ ನಗರ ಎನಿಸಿರುವ ಬೆಂಗಳೂರು ಮುಂಚೂಣಿಯಲ್ಲಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಚಾರ. ನೊಬೆಲ್ ಪ್ರಶಸ್ತಿ ಪುರಸ್ಕೃತ ಭಾರತೀಯ ವಿಜ್ಞಾನಿ ಡಾ. ಸಿ.ವಿ. ರಾಮನ್ ಅವರ ಕಾರ್ಯಕ್ಷೇತ್ರ ಬೆಂಗಳೂರು. ಅವರ ಹೆಸರಿನ ರಾಮನ್ ಸಂಶೋಧನಾ ಸಂಸ್ಥೆ ಭೌತ ವಿಜ್ಞಾನದಲ್ಲಿ ಸಂಶೋಧನಾ ಕಾರ್ಯದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿದೆ. ಕರ್ನಾಟಕದಲ್ಲಿ ವಿಜ್ಞಾನ–ತಂತ್ರಜ್ಞಾನ ಚಟುವಟಿಕೆ ಸಾಕಷ್ಟು ವಿಸ್ತೃತ ಮತ್ತು ವೈವಿಧ್ಯಮಯ. ಇವುಗಳನ್ನು ಈ ಕೆಳಗಿನಂತೆ ಸ್ಥೂಲವಾಗಿ ವರ್ಗೀಕರಿಸಬಹುದು.

## ಮೂಲವಿಜ್ಞಾನ ಕ್ಷೇತ್ರ :

ಮೂಲ ವಿಜ್ಞಾನ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಮತ್ತು ಸಂಶೋಧನಾಲಯಗಳ ದೊಡ್ಡ ಪಟ್ಟಿಯೇ ಕರ್ನಾಟಕದಲ್ಲಿದೆ. ಭಾರತ ಖ್ಯಾತ ಉದ್ಯಮಿ ಜೇಮ್‌ಶೇಟ್‌ಜೀ ಟಾಟಾ ಅವರು ಸ್ಥಾಪಿಸಿದ ಭಾರತೀಯ ವಿಜ್ಞಾನ ಸಂಸ್ಥೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್. ಅತ್ಯಂತ ಪ್ರಮುಖವಾದದ್ದು. 1912ರಲ್ಲೇ ಸ್ಥಾಪಿತಗೊಂಡಿರುವ ಈ ಸಂಸ್ಥೆ ಒಂದು ಪರಿಗಣಿತ ವಿಶ್ವವಿದ್ಯಾಲಯವಾಗಿದ್ದು ಜಾಗತಿಕ ಮಟ್ಟದಲ್ಲಿ ಪ್ರಖ್ಯಾತಿಯನ್ನು ಹೊಂದಿದೆ. 40ಕ್ಕೂ ಹೆಚ್ಚು ವಿಭಾಗಗಳಲ್ಲಿ 150ಕ್ಕೂ ಹೆಚ್ಚು ಪರಿಣತರು ಇಲ್ಲಿ ಕಾರ್ಯನಿರತರಾಗಿದ್ದು ಭೌತಶಾಸ್ತ್ರ, ರಸಾಯನ ಶಾಸ್ತ್ರಗಳಂತಹ ಮೂಲ ವಿಜ್ಞಾನ ಕ್ಷೇತ್ರದಿಂದ ಹಿಡಿದು ನ್ಯಾನೊ ತಂತ್ರಜ್ಞಾನ, ಪರಿಸರ ವಿಜ್ಞಾನ, ಜೈವಿಕ ತಂತ್ರಜ್ಞಾನಗಳಂತಹ ಆಧುನಿಕ ಅನ್ವಯಿಕ ತಂತ್ರಜ್ಞಾನ ಕ್ಷೇತ್ರದವರೆಗೂ ಇದರ ಕಾರ್ಯಕ್ಷೇತ್ರ ವಿಸ್ತರಿಸಿದೆ. ವಿದೇಶೀಯರೂ ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳಿಗೆ ಮತ್ತು ಅಧ್ಯಯನಶೀಲರಿಗೆ ಇದು ಹೆಮ್ಮರದಂತೆ ವಿಶಾಲವಾದ ಆಶ್ರಯತಾಣವಾಗಿ ಬೆಳೆದಿದೆ.

ಖಗೋಳ ವಿಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಭೌತಶಾಸ್ತ್ರ ವಲಯದ ಅಧ್ಯಯನಕ್ಕಾಗಿರುವ ಭಾರತೀಯ ಭೌತವಿಜ್ಞಾನ–ಸಂಸ್ಥೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಜಿಕ್ಸ್ ದೇಶದಲ್ಲಿಯೇ ಇಂತಹ ಕಾರ್ಯದಲ್ಲಿ ತೊಡಗಿರುವ ಏಕೈಕ ಕೇಂದ್ರ. ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲೇ ಪ್ರಾರಂಭವಾದ ಜವಾಹರಲಾಲ್ ನೆಹರು



downloaded from: www.kpscvaani.com

ಉನ್ನತ ವಿಜ್ಞಾನ ಸಂಶೋಧನಾ ಸಂಸ್ಥೆ ಬೆಂಗಳೂರಿನಲ್ಲಿರುವ ಇನ್ನೊಂದು ಪ್ರಮುಖ ಅಧ್ಯಯನ ಕೇಂದ್ರವಾಗಿದ್ದು ಪ್ರಮುಖವಾಗಿ ರಸಾಯನ ಶಾಸ್ತ್ರ ಮತ್ತಿತರ ವಿಷಯಗಳನ್ನು ಕುರಿತದ್ದಾಗಿದೆ.

ಕೃಷಿ, ತೋಟಗಾರಿಕೆ, ಹೈನುಗಾರಿಕೆಗಳಂತಹ ಕ್ಷೇತ್ರಗಳಲ್ಲೂ ರಾಷ್ಟ್ರಮಟ್ಟದ ಸಂಶೋಧನಾ ಸಂಸ್ಥೆಗಳು ಕರ್ನಾಟಕದಲ್ಲಿವೆ. ಪ್ರಮುಖವಾದವುಗಳೆಂದರೆ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಇಂಡಿಯನ್ ಕೌನ್ಸಿಲ್ ಫಾರ್ ಅಗ್ರಿಕಲ್ಚರಲ್ ರಿಸರ್ಚ್), ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಇಂಡಿಯನ್ ಕೌನ್ಸಿಲ್ ಫಾರ್ ಹಾರ್ಟಿಕಲ್ಚರಲ್ ರಿಸರ್ಚ್), ಕೃಷಿ ತಂತ್ರಜ್ಞರ ಮಂಡಳಿ (ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ಸೈಂಟಿಸ್ಟ್), ರಾಷ್ಟ್ರೀಯ ಹೈನುಗಾರಿಕಾ ಸಂಶೋಧನಾ ಸಂಸ್ಥೆ (ನ್ಯಾಷನಲ್ ಡೇರಿ ರಿಸರ್ಚ್ ಇನ್ಸ್‌ಟಿಟ್ಯೂಟ್), ಅಂತಾರಾಷ್ಟ್ರೀಯ ಜೈವಿಕ ನಿಯಂತ್ರಣ ಸಂಸ್ಥೆ (ಇಂಟರ್ ನ್ಯಾಶನಲ್ ಇನ್ಸ್‌ಟಿಟ್ಯೂಟ್ ಫಾರ್ ಬಯಾಲಾಜಿಕಲ್ ಕಂಟ್ರೋಲ್), ಭಾರತೀಯ ರೇಷ್ಮೆ ಸಂಶೋಧನಾ ಮಂಡಳಿ (ಇಂಡಿಯನ್ ಸಿಲ್ಕ್ ರಿಸರ್ಚ್ ಇನ್ಸ್‌ಟಿಟ್ಯೂಟ್), ಬೆಂಗಳೂರಿನಲ್ಲಿರುವ ಮರ ಸಂಶೋಧನಾ ಸಂಸ್ಥೆ (ವುಡ್ ರಿಸರ್ಚ್ ಇನ್ಸ್‌ಟಿಟ್ಯೂಟ್).

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ (ಸಿ.ಎಫ್.ಟಿ.ಆರ್.ಐ) ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿರುವ ದೇಶದ ಏಕೈಕ ಸಂಸ್ಥೆ. ವಿವಿಧ ಆಹಾರ ವಸ್ತುಗಳ ತಯಾರಿಕೆ ಮತ್ತು ಅವುಗಳನ್ನು ಕಾದಿರಿಸಲು ಬಳಸುವ ಸಂಸ್ಕರಣಾ ವಿಧಾನಗಳ ಕುರಿತಂತೆ ಅದು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಇಂದು ಅನೇಕ ಕೈಗಾರಿಕೆಗಳಲ್ಲಿ ಬಳಕೆಯಾಗುತ್ತಿದೆ. ಎಳನೀರಿನ ಪ್ಯಾಕೆಟ್ ಇದಕ್ಕೆ ಒಂದು ಉದಾಹರಣೆ. ಮೈಸೂರಿನಲ್ಲೇ ಇರುವ ರಕ್ಷಣಾ ಆಹಾರ ಸಂಶೋಧನಾ ಸಂಸ್ಥೆ ಸೈನಿಕರು ಮತ್ತು ಭದ್ರತಾ ಪಡೆಯ ಯೋಧರಿಗೆ ಉನ್ನತ ಪರ್ವತ ಪ್ರದೇಶ, ಹಿಮಾಲಯ ಪರ್ವತ ಪಂಕ್ತಿಯಂತಹ ಚಳಿ ಅಥವಾ ರಾಜಸ್ತಾನಿನಂತಹ ಮರಳು ಗಾಡಿನ ಸೆಕೆ ಅಥವಾ ಕಡಲಾಣದಂತಹ ಸಾಗರ ಪ್ರದೇಶಗಳಲ್ಲಿ ಬಳಸಲು ಅನುವಾಗುವ ಆಹಾರ ವಸ್ತುಗಳನ್ನು ಸಿದ್ಧಪಡಿಸುತ್ತದೆ. ಇವು ಹೆಚ್ಚಾಗಿ ತಕ್ಷಣ ಬಳಸಬಹುದಾದ ದಿಢೀರ್ ಆಹಾರದ ಪೊಟ್ಟಣಗಳಾಗಿರುತ್ತವೆ.

ಇದಲ್ಲದೆ ಬೆಳೆಹೊನ್ನೂರಿನಲ್ಲಿರುವ ಕಾಫಿ ಸಂಶೋಧನಾ ಕೇಂದ್ರ, ಕೊಡಗಿನ ಕಿತ್ತಳೆ ಹಣ್ಣಿನ ಸಂಶೋಧನಾ ಕೇಂದ್ರಗಳಂತಹ ವಿವಿಧ ಬೆಳವಣಿಗೆ ಸಂಬಂಧಿಸಿದ ಸಂಶೋಧನಾ ಕೇಂದ್ರಗಳು ರಾಜ್ಯದಲ್ಲಿವೆ.



downloaded from: www.kpscvaani.com

**ಅನ್ವಯಿಕ ವಿಜ್ಞಾನ :**

ಈ ಪೈಕಿ ಗೌರಿಬಿದನೂರು ಸಮೀಪ ಹೊಸೂರಿನಲ್ಲಿರುವ ಭೂಕಂಪ ಮಾಪನ ಕೇಂದ್ರ ಪ್ರಮುಖವಾದದ್ದು. ಭೂಕಂಪನ ಅಲೆಗಳ ಮಾಹವಕ್ಕಷ್ಟೇ ಅಲ್ಲದೆ ಅವುಗಳ ಮುನ್ಸೂಚನೆಗೂ ಇದು ನೆರವಾಗಬಲ್ಲದಾಗಿದೆ. 'ಸುನಾಮಿ' ಅಲೆಗಳ ಕುರಿತಂತೆಯೂ ಇದು ಮಹತ್ವದ ಮಾಹಿತಿ ನೀಡಬಲ್ಲದಾಗಿದೆ.

ರಕ್ಷಣಾ ವಲಯದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಫೆನ್ಸ್ ರಿಸರ್ಚ್ ಡೆವಲಪ್‌ಮೆಂಟ್ ಆರ್ಗನೈಸೇಷನ್) ಬೆಂಗಳೂರಿನಲ್ಲಿ ಅನೇಕ ಮಹತ್ವದ ಕಾರ್ಯಗಳಲ್ಲಿ ನಿರತವಾಗಿದೆ. ಯುದ್ಧ ವಿಮಾನ, ಹಗುರ ಯುದ್ಧ ವಿಮಾನ, ಹೆಲಿಕಾಪ್ಟರ್, ರಾಡಾರ್‌ನಂತಹ ಯುದ್ಧೋಪಕರಣಗಳನ್ನು ಇಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯ (ನ್ಯಾಶನಲ್ ಏರೋನ್ಯಾಟಿಕ್ಸ್ ಲಿಮಿಟೆಡ್, ಏರೋನಾಟಿಕಲ್ ನ್ಯಾಟಿಕಲ್ ಎಸ್ಟಾಬ್ಲಿಶ್‌ಮೆಂಟ್ (ಎ.ಡಿ.ಇ.), ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎ.ಡಿ.ಇ.), ಕೃತಕ ಬುದ್ಧಿಶಕ್ತಿ ಮತ್ತು ಯಂತ್ರಮಾನವ ಅಭಿವೃದ್ಧಿ ಕೇಂದ್ರ (ಸೆಂಟರ್ ಫಾರ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅಂಡ್ ರೊಬಾಟಿಕ್ಸ್) ಸಂಸ್ಥೆಗಳು ಈ ಕಾರ್ಯದಲ್ಲಿ ತೊಡಗಿವೆ.

**ವಿಜ್ಞಾನ ಶಿಕ್ಷಣ ಮತ್ತು ಸಂವಹನ :**

ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಚಿಂತನೆಗಳನ್ನು ಬೆಳೆಸುವ ಕಾರ್ಯದಲ್ಲಿ ಅನೇಕ ಪ್ರಮುಖ ಸಂಸ್ಥೆಗಳು ಕರ್ನಾಟಕದಲ್ಲಿ ನೆಲೆಸಿವೆ. ವಿಶ್ವೇಶ್ವರಯ್ಯ ಇಂಡಸ್ಟ್ರಿಯಲ್ ಆ್ಯಂಡ್ ಟೆಕ್ನಾಲಾಜಿಕಲ್ ಮ್ಯೂಸಿಯಂ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಂತ್ರಜ್ಞಾನ ವಸ್ತುಸಂಗ್ರಹಾಲಯ ರಾಷ್ಟ್ರಮಟ್ಟದಲ್ಲಿ ಈ ನಿಟ್ಟಿನಲ್ಲಿ ಪ್ರಖ್ಯಾತವಾಗಿರುವ ಒಂದು ಕೇಂದ್ರವಾಗಿದೆ. ಇದೊಂದು ಪ್ರವಾಸಿ ಕೇಂದ್ರವೂ ಆಗಿದ್ದು, ಪ್ರತಿದಿನ ಸಾವಿರಾರು ವೀಕ್ಷಕರು ಇಲ್ಲಿಗೆ ಭೇಟಿ ನೀಡುತ್ತಾರೆ. ಶಾಲಾಮಟ್ಟದಿಂದ ರಾಜ್ಯಮಟ್ಟದವರೆಗೂ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರದರ್ಶನಗಳನ್ನು ಇದು ಏರ್ಪಡಿಸುತ್ತದೆ. ವಿಜ್ಞಾನ ವಿಷಯ ಕುರಿತಂತೆ ಪ್ರಾತ್ಯಕ್ಷಿಕೆ, ಚರ್ಚೆ, ಉಪನ್ಯಾಸ, ವೀಕ್ಷಣೆಗಳಂತಹ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ.

ಬೆಂಗಳೂರಿನಲ್ಲಿರುವ ನೆಹರೂ ತಾರಾಲಯ ಇನ್ನೊಂದು ಇಂತಹ ಸಂಸ್ಥೆ, ಖಗೋಳಕಾಯಗಳ ಅದ್ಭುತ ಜಗತ್ತನ್ನು ಪರಿಚಯಿಸುವುದರೊಂದಿಗೆ, ವಿದ್ಯಾರ್ಥಿಗಳಿಗೆ



downloaded from: www.kpscvaani.com

ವಿಜ್ಞಾನದ ಇತರ ವಿಷಯಗಳ ಬಗೆಗೂ ಇದು ತಿಳುವಳಿಕೆ ಮೂಡಿಸುವ ಕಾರ್ಯಗಳನ್ನು ಆಯೋಜಿಸುತ್ತದೆ.

ಇದಲ್ಲದೆ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರಾಜ್ಯಾದ್ಯಂತ ವಿಜ್ಞಾನ ಶಿಕ್ಷಣ ಕುರಿತಂತೆ ವಿವಿಧ ಬಗೆಯ ಕಾರ್ಯಕ್ರಮಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿಯೋಜಿಸುತ್ತ ಬಂದಿದೆ. ವಿಜ್ಞಾನ ಪುಸ್ತಕಗಳ ಪ್ರಕಟಣೆ, ಪತ್ರಿಕೆಗಳ ಪ್ರಕಾಶನ, ತರಬೇತಿ ಶಿಬಿರ, ಕಮ್ಮಟ, ವಿಶೇಷ ಉಪನ್ಯಾಸಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಡಾ. ಎಚ್.ನರಸಿಂಹಯ್ಯ ಅವರು ಪ್ರಾರಂಭಿಸಿದ ಬೆಂಗಳೂರು ವಿಜ್ಞಾನ ಕೇಂದ್ರ, ವಿಜ್ಞಾನ ವಿಷಯ ಕುರಿತಂತೆ ತಜ್ಞರ ಉಪನ್ಯಾಸಗಳನ್ನು ಏರ್ಪಡಿಸುತ್ತದೆ. ಪ್ರತಿವರ್ಷ ಜುಲೈ ತಿಂಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುತ್ತದೆ.

ಈ ಮೊದಲು ದೇಶದ ವೈಜ್ಞಾನಿಕ ಚಟುವಟಿಕೆಗಳ ಕೇಂದ್ರವಾಗಿದ್ದ ಬೆಂಗಳೂರು ಈಗ ಮಾಹಿತಿ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳ ದಿಢೀರ್ ಬೆಳವಣಿಗೆಯಿಂದಾಗಿ, ಭಾರತ ಸಿಲಿಕಾನ್ ಕಣಿವೆ ಎಂಬ ಪ್ರಖ್ಯಾತಿಯನ್ನೂ ಗಳಿಸಿದೆ. ಬಹು ರಾಷ್ಟ್ರೀಯ ಕಂಪನಿಗಳು ಬೆಂಗಳೂರಿನಲ್ಲೀಗ ಭದ್ರವಾಗಿ ನೆಲೆಯೂರಿವೆ. ಜೈವಿಕ ತಂತ್ರಜ್ಞಾನ ಆಧರಿತ ಅನೇಕ ಕಂಪನಿಗಳು ಇಲ್ಲಿ ನೆಲೆಸಿವೆ. ಇಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣದ ಬಹು ದೊಡ್ಡ ಕೇಂದ್ರವಾಗಿ ಬೆಂಗಳೂರು ಬೆಳೆದಿದೆ. ಮುಂಬೈ, ಭಾರತದ ವಾಣಿಜ್ಯ ನಗರ ಎನಿಸಿದಂತೆ ಬೆಂಗಳೂರು ಭಾರತದ ವಿಜ್ಞಾನ–ತಂತ್ರಜ್ಞಾನ ನಗರಿ ಎನಿಸಿದೆ.

**ಭವಿಷ್ಯದ ಚಿಂತನೆ:**

ಜನಜೀವನದ ಪ್ರತಿಯೊಂದು ಕ್ಷೇತ್ರದ ಮೇಲೂ ಪರಿಣಾಮ ಉಂಟು ಮಾಡುತ್ತಿರುವ ವೈಜ್ಞಾನಿಕ ಬೆಳವಣಿಗೆಯ ಗುರಿ, ಸದೃಢ ಸಮಾಜ ರಚನೆಯೇ ಆಗಿದೆ ಎನ್ನುವುದು ನಿರ್ವಿವಾದ. ಇದಕ್ಕೆ ಮೂಲ ಅಗತ್ಯವಾದ ಆರ್ಥಿಕಾಭಿವೃದ್ಧಿಗೆ, ವಿಜ್ಞಾನ–ತಂತ್ರಜ್ಞಾನದ ಕೊಡುಗೆ ಪ್ರಶಂಸನೀಯ. 1951–56 ಕಾಲ ಮೊದಲ ಪಂಚವಾರ್ಷಿಕ ಯೋಜನೆಯ ದರ ಕೇವಲ ಶೇ. 2.1ರಷ್ಟಿತ್ತು. ಹತ್ತನೇ ಯೋಜನೆಯ ಅವಧಿಯಲ್ಲಿ ಇದು (2002–2007) ಶೇ. 8ರಷ್ಟಿತ್ತು. ಈ ಪ್ರಮಾಣವನ್ನು ಶೇ. 8.5 ರಿಂದ ಶೇ. 9.5ಕ್ಕೆ ಏರಿಸಲು ಉದ್ದೇಶಿಸಲಾಗಿದೆ. ಜಾಗತಿಕ ಆರ್ಥಿಕ ಹಿಂಜರಿಕೆಯ ನಡುವೆಯೂ ಭಾರತದ ಈ ಸಾಧನೆ, ಎಲ್ಲರ ಗಮನ ಸೆಳೆದಿದೆ. ಅಮೆರಿಕೆಯಂತಹ ಅಗ್ರಗಣ್ಯ ದೇಶಗಳೂ ಭಾರತದ ಈ ಸಾಧನೆಯನ್ನು ಬೆರಗುಗಣ್ಣಿನಿಂದ ನೋಡುತ್ತಿವೆ. ಎಲ್ಲ ವಲಯಗಳಲ್ಲೂ ವೈಜ್ಞಾನಿಕ ವಿಧಾನಗಳನ್ನು



downloaded from: www.kpscvaani.com

ಪರಿಣಾಮಕಾರಿಯಾಗಿ ಅಳವಡಿಸಿಕೊಂಡರೆ, ಈ ಸಾಧನೆ ಉತ್ತುಂಗಕ್ಕೇರುವುದರಲ್ಲಿ ಅನುಮಾನವಿಲ್ಲ.

## ಯುನೆಸ್ಕೊ ಮತ್ತು ವಿಶ್ವ ಪರಂಪರೆ

ಯುನೆಸ್ಕೊ ವಿಶ್ವಸಂಸ್ಥೆಯ ಸಾಂಸ್ಕೃತಿಕ ಅಂಗ. ಯುನೆಸ್ಕೊದ ವಿಸ್ತೃತ ರೂಪ. ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಘಟನೆ (UNESCO-United Nations Educational, Scientific and Cultural Organization) ಜಗತ್ತಿನಲ್ಲಿ ಅತಿ ಹೆಚ್ಚು ಸಾಂಸ್ಕೃತಿಕ, ಪ್ರಾಕೃತಿಕ ಮಹತ್ವ ಹೊಂದಿರುವ ತಾಣಗಳನ್ನು ಗುರುತಿಸಿ, ಪಟ್ಟಿ ಮಾಡಿ ಉಳಿಸಿಕೊಳ್ಳುವ ಉದ್ದೇಶದಿಂದ ಯುನೆಸ್ಕೊ ಅಸ್ತಿತ್ವಕ್ಕೆ ಬಂದಿದೆ. ವಿಶ್ವ ಪರಂಪರೆ ತಾಣ ಸಮಿತಿ ಅಲ್ಲಿನ ಮಹತ್ವದ ಬಗ್ಗೆ ಅಧ್ಯಯನ ನಡೆಸಿ, ಅರ್ಹತೆ ಅಳೆದು ಸೂಕ್ತವೆನಿಸಿದರೆ ವಿಶ್ವಪರಂಪರೆಯ ತಾಣಗಳ ಪಟ್ಟಿಗೆ ಸೇರಿಸುತ್ತದೆ. 1972 ನವೆಂಬರ್ 16ರಂದು ಅಧಿಕೃತವಾಗಿ ಇದು ಜಾರಿಗೆ ಬಂದಿತು. ಇದಕ್ಕೆ 184 ದೇಶಗಳು ಅನುಮೋದನೆ ನೀಡಿದ್ದವು.

## ಯುನೆಸ್ಕೊ ಪಟ್ಟಿಗೆ ಸೇರಿಸಲು ಉದ್ದೇಶಿಸಲಾಗಿರುವ ಪಶ್ಚಿಮ ಘಟ್ಟದ ಹತ್ತು ಪ್ರದೇಶಗಳು

- ಪುಷ್ಪಗಿರಿ ವನ್ಯಜೀವಿ ಸಂರಕ್ಷಣಾ ಪ್ರದೇಶ – 102.59 ಚ.ಕಿ.ಮೀ.
- ಬ್ರಹ್ಮಗಿರಿ ವನ್ಯಜೀವಿ ಸಂರಕ್ಷಣಾ ಪ್ರದೇಶ – 181.29 ಚ.ಕಿ.ಮೀ.
- ತಲಕಾವೇರಿ ವನ್ಯ ಜೀವಿ ಸಂರಕ್ಷಣಾ ಪ್ರದೇಶ – 105 ಚ.ಕಿ.ಮೀ.
- ಸೋಮೇಶ್ವರ ವನ್ಯ ಜೀವಿ ಸಂರಕ್ಷಣಾ ಪ್ರದೇಶ – 88.40 ಚ.ಕಿ.ಮೀ.
- ಪದಿನಾಲ್ಕಾಡು ಮೀಸಲು ಅರಣ್ಯ – 112.92 ಚ.ಕಿ.ಮೀ.
- ಸೋಮೇಶ್ವರ ಮೀಸಲು ಅರಣ್ಯ – 57.09 ಚ.ಕಿ.ಮೀ.
- ಆಗುಂಬೆ ಮೀಸಲು ಅರಣ್ಯ – 57.09 ಚ.ಕಿ.ಮೀ.
- ಕೀರ್ತಿ ಮೀಸಲು ಅರಣ್ಯ – 79.04 ಚ.ಕಿ.ಮೀ.
- ಬಲಹಳ್ಳಿ ಮೀಸಲು ಅರಣ್ಯ – 220.63 ಚ.ಕಿ.ಮೀ.
- ಕುದುರೆಮುಖ ರಾಷ್ಟ್ರೀಯ ಉದ್ಯಾನವನ – 600.32 ಚ.ಕಿ.ಮೀ.



downloaded from: www.kpscvaani.com

ಈಜಿಪ್ಟ್‌ನ ವರಪ್ರಸಾದ ನೈಲ್‌ನದಿಗೆ ಅಡ್ಡಲಾಗಿ 1954ರಲ್ಲಿ ಅಸ್ವಾನ್ ಆಣೆಕಟ್ಟು ನಿರ್ಮಿಸಲು ಮುಂದಾದಾಗ ಅಬುಸಿಂಬೆಲ್‌ನ ದೇವಾಲಯಗಳು ಹಿನ್ನೀರಿನಲ್ಲಿ ಮುಳುಗುವ ಅಪಾಯವಿತ್ತು. ದೇಗುಲ ಉಳಿಸಿಕೊಳ್ಳಲು ಯುನೆಸ್ಕೊ ಯೋಜನೆ ಹುಟ್ಟು ಹಾಕಿತು. 80 ಮಿಲಿಯನ್ ಡಾಲರ್ ವೆಚ್ಚದ ಯೋಜನೆ ಯಶಸ್ವಿಯಾದ ಬೆನ್ನಲ್ಲೇ ವಿಶ್ವದ ಅಮೂಲ್ಯ ತಾಣಗಳನ್ನು ಉಳಿಸಿಕೊಳ್ಳಲು ಯುನೆಸ್ಕೊಗೆ ಪ್ರೇರಣೆ ದೊರೆಯಿತು. ಇದು ಮಾನವ ಹಾಗೂ ಪ್ರಕೃತಿಯ ನಡುವಿನ ಸೂಕ್ಷ್ಮ ಸಮತೋಲನವನ್ನು ಗುರುತಿಸುವ ಮೂಲಭೂತ ಅಗತ್ಯವನ್ನು ಒತ್ತಿ ಹೇಳುತ್ತದೆ.

## ಯುನೆಸ್ಕೊ ಅನುಸರಿಸುವ ನಿಯಮಗಳು

ಪಾರಂಪರಿಕ ತಾಣ ಆಯ್ಕೆಗೆ ಪ್ರಮುಖವಾಗಿ ಎರಡು ಮಾನದಂಡಗಳಿವೆ. ಸಾಂಸ್ಕೃತಿಕ ಪರಂಪರೆಯ ಅಥವಾ ಜೀವಂತವಾಗಿರುವ, ನಶಿಸಿ ಹೋಗಿರುವ ನಾಗರಿಕತೆಯ ದ್ಯೋತಕವೆನಿಸುವ, ಅತಿ ವಿಶಿಷ್ಟ ನೈಸರ್ಗಿಕ ಕ್ರಿಯೆ ಇಲ್ಲವೇ ಅದ್ಭುತ ಪ್ರಕೃತಿ ಸೌಂದರ್ಯ ಹೊಂದಿದ ಪ್ರದೇಶ, ಭೂ ರಚನೆಯಲ್ಲಿ ಆಗುತ್ತಿರುವ ಪ್ರಗತಿ ಸೂಚಿ, ವಿಶಿಷ್ಟ ಭೂಮೇಲ್ಮೈ ಲಕ್ಷಣ, ಜೀವಿಗಳ ಇತಿಹಾಸ, ಅಳಿವಿನಂಚಿನಲ್ಲಿರುವ ಜೀವಸಂಕುಲ ಒಳಗೊಂಡಂತೆ ಜೀವವೈವಿಧ್ಯತೆ ರಕ್ಷಣೆಗಾಗಿ ಇರುವ ಅತಿ ಪ್ರಮುಖ, ಮಹತ್ವದ ಪ್ರಾಕೃತಿಕ ನೆಲೆ ಒಳಗೊಂಡಿದ್ದರೆ ಅಂಥವುಗಳನ್ನು ಪ್ರಾಕೃತಿಕ ತಾಣಗಳನ್ನಾಗಿ ಗುರುತಿಸಲಾಗುವುದು. ವಿಶ್ವಪರಂಪರೆಯ ಮಹಾಸಭೆ ಭಾರತವೂ ಸಹಿ ಹಾಕಿರುವ ಅಂತಾರಾಷ್ಟ್ರೀಯ ಒಪ್ಪಂದವಾಗಿದೆ.

## ಘೋಷಣೆ

ವಿಶ್ವಪರಂಪರೆ ತಾಣವಾಗಿ ಘೋಷಿಸುವುದು ಒಂದು ಸುದೀರ್ಘ ಪ್ರಕ್ರಿಯೆ. ಯಾವುದೇ ದೇಶ ತನ್ನೆಲ್ಲ ಸಾಂಸ್ಕೃತಿಕ, ಪ್ರಾಕೃತಿಕ ಆಸ್ತಿಗಳ ಪಟ್ಟಿಯನ್ನು ತಯಾರಿಸಬೇಕು. ಇದು ತಾತ್ಕಾಲಿಕ ಪಟ್ಟಿ, ಈ ಪಟ್ಟಿಯ ತಾಣವನ್ನು, ನಾಮಕರಣ ಕಡತವನ್ನು ಅಂತರರಾಷ್ಟ್ರೀಯ ಸ್ಮಾರಕ ಮತ್ತು ತಾಣಗಳ ಸಮಿತಿ, ವಿಶ್ವಸಂರಕ್ಷಣಾ ಸಂಘ ಅಧ್ಯಯನ ನಡೆಸಿ ಶಿಫಾರಸ್ಸುಗಳೊಂದಿಗೆ ವಿಶ್ವಪರಂಪರಾ ಸಮಿತಿಗೆ ಸಲ್ಲಿಸುತ್ತದೆ. ವರ್ಷಕ್ಕೊಮ್ಮೆ ಸಭೆ ಸೇರುವ ಸಮಿತಿ ವಿಶ್ವಪರಂಪರಾ ಪಟ್ಟಿಗೆ ಸೇರಿಸುವ, ತಿರಸ್ಕರಿಸುವ ನಿರ್ಣಯ ತೆಗೆದುಕೊಳ್ಳುತ್ತದೆ.



downloaded from: www.kpscvaani.com

ಕರ್ನಾಟಕ ವ್ಯಾಪ್ತಿಯಲ್ಲಿರುವ ಪಶ್ಚಿಮ ಘಟ್ಟಗಳ ಹತ್ತು ತಾಣಗಳನ್ನು ಅಧಿಕೃತವಾಗಿ ಘೋಷಿಸುವ ತೀರ್ಮಾನ ತೆಗೆದುಕೊಳ್ಳಲು ಯುನೆಸ್ಕೊಗೆ ಒಂದು ವರ್ಷ ಬೇಕಾಗುತ್ತದೆ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಯುನೆಸ್ಕೊ ಕೇಳಿರುವ ಮಾಹಿತಿ ಪೂರೈಸಿದರೆ 2012ರ ಜೂನ್–ಜುಲೈನಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ 36ನೇ ಯುನೆಸ್ಕೊ ವಿಶ್ವ ಪರಂಪರೆ ಸಮಿತಿ ಸಭೆಯಲ್ಲಿ ಈ 10 ತಾಣಗಳನ್ನು ವಿಶ್ವಪರಂಪರೆ ಪಟ್ಟಿಗೆ ಸೇರಿಸುವ ಕುರಿತು ತೀರ್ಮಾನಿಸಿತು.

## ಪ್ರಪಂಚದಲ್ಲಿರುವ ಪಾರಂಪರಿಕ ತಾಣಗಳು

ಪ್ರಪಂಚದ 150 ನಗರಗಳಲ್ಲಿ 911 ವಿಶ್ವಪಾರಂಪರಿಕ ತಾಣಗಳಿವೆ. ಇದರಲ್ಲಿ 704 ಸಾಂಸ್ಕೃತಿಕ ಹಾಗೂ 180 ನೈಸರ್ಗಿಕ, 27 ಮಿಶ್ರ ತಾಣಗಳಾಗಿವೆ. ಆಫ್ರಿಕಾ–ಅರಬ್ ದೇಶಗಳು, ಏಷ್ಯಾ–ಫೆಸಿಫಿಕ್, ಯುರೋಪ್–ಉತ್ತರ ಅಮೇರಿಕ, ಲ್ಯಾಟಿನ್ ಅಮೇರಿಕ ಮತ್ತು ಕೆರಿಬಿಯನ್ ಹೀಗೆ 5 ಭೌಗೋಳಿಕ ವಲಯಗಳ ಆಧಾರದ ಮೇಲೆ ಇವುಗಳನ್ನು ವಿಂಗಡಿಸಲಾಗಿದೆ. ಇಟಲಿ–45, ಸ್ಪೇನ್–40, ಚೀನಾ–35, ಜರ್ಮನಿ–31, ಫ್ರಾನ್ಸ್–31 ಅತಿ ಹೆಚ್ಚು ವಿಶ್ವಪರಂಪರೆ ತಾಣ ಹೊಂದಿರುವ ದೇಶಗಳಾಗಿವೆ.

## ಭಾರತದಲ್ಲಿರುವ ಪಾರಂಪರಿಕ ತಾಣಗಳು

ಭಾರತದಲ್ಲಿ ಒಟ್ಟು 28 ಪಾರಂಪರಿಕ ತಾಣಗಳಿವೆ. ಇದರಲ್ಲಿ ಪ್ರಮುಖವಾಗಿರುವುದು ತಾಜ್‌ಮಹಲ್ ಮತ್ತು ಆಗ್ರಾ ಕೋಟೆ, ಫತೇಪುರ್ ಸಿಕ್ರಿ, ಅಸ್ಸಾಂ ಕಾಜಿರಂಗ ವನ್ಯಧಾಮ. ದಿಲ್ಲಿಯ ಕುತುಬ್‌ಮಿನಾರ್, ಹುಮಾಯೂನ್ ಸಮಾಧಿ, ಕೆಂಪುಕೋಟೆ, ಖಜುರಾಹೊ, ಅಜಂತಾ, ಎಲ್ಲೋರ ಗುಹೆ, ಕೊನಾರ್ಕ್‌ನ ಸೂರ್ಯ ದೇವಾಲಯ, ಎಲಿಫೆಂಟಾ ಗುಹೆಗಳು, ತಮಿಳುನಾಡಿನ ಚೋಳರ ದೇಗುಲಗಳು. ಭಾರತದ ಪರ್ವತ ಪ್ರದೇಶದಲ್ಲಿ (ಡಾರ್ಜಿಲಿಂಗ್, ಊಟಿ, ಶಿಮ್ಲಾ) ಸಂಚರಿಸುತ್ತಿರುವ ರೈಲುಗಳು ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಕರ್ನಾಟಕದಲ್ಲಿ ಹಂಪಿ ಮತ್ತು ಪಟ್ಟದಕಲ್ಲು ದೇಗುಲಗಳು ಯುನೆಸ್ಕೊದ ವಿಶ್ವಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.



downloaded from: www.kpscvaani.com

## ಅಲಿಪ್ತ ಚಳವಳಿಗೆ ಅರವತ್ತು ವರ್ಷ

ಅಲಿಪ್ತ ಚಳವಳಿ (Non-Aligned Movement). ಇದನ್ನು ಸಂಕ್ಷಿಪ್ತವಾಗಿ NAM ಎಂದು ಉಲ್ಲೇಖಿಸಲಾಗುತ್ತದೆ. ಇದು 1961ರಲ್ಲಿ ಯುಗೋಸ್ಲವಿಯಾದ ಬೆಲ್‌ಗ್ರೇಡದಲ್ಲಿ ನಡೆದ ಇದರ ಪ್ರಥಮ ಶೃಂಗಸಭೆಯಿಂದ ಬಹುದೂರ ಸಾಗಿ ಬಂದಿದೆ. ಇದರ ಪಿತಾಮಹರಲ್ಲಿ ಒಬ್ಬರಾಗಿದ್ದ ಭಾರತದ ಪ್ರಥಮ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರು ಇದನ್ನು 'ರಾಷ್ಟ್ರಗಳ ಮಧ್ಯೆ ಮೈತ್ರಿ ನೀತಿ' ಎಂದು ಬಣ್ಣಿಸಿದ್ದರು. ಚಳವಳಿ ಆರಂಭದಿಂದ ಸದಸ್ಯ ರಾಷ್ಟ್ರಗಳ ನಡುವೆ ಮೈತ್ರಿ ಮತ್ತು ಸಹಕಾರ ವರ್ಧಿಸಲು ಹಾಗೂ ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರದ ಪ್ರಭಾವವನ್ನು ಕೊನೆಗಾಣಿಸಿ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಯಶಸ್ವಿಯಾಗಿ ಶ್ರಮಿಸುತ್ತಾ ಬಂದಿದೆ. ಚಳುವಳಿ ಹುಟ್ಟಿಕೊಂಡ ಕಾಲದಲ್ಲಿ ಜಗತ್ತು ಎರಡು ಶಕ್ತಿ ಬಣಗಳಾಗಿ ಇಬ್ಭಾಗವಾಗಿತ್ತು. ಒಂದು ಅಮೆರಿಕ ಬಣ, ಇನ್ನೊಂದು ರಷ್ಯಾ ಬಣ. ಆ ಎರಡು ಶಕ್ತಿ ಬಣಗಳನ್ನು ಪರಸ್ಪರ ದ್ವೇಷದಿಂದ ಮುಕ್ತಗೊಳಿಸಿ ಪರಸ್ಪರ ಮೈತ್ರಿಯಲ್ಲಿ ಬೆಸೆಯುವುದು ಚಳುವಳಿಯ ಉದ್ದೇಶವಾಗಿತ್ತು. ಚಳುವಳಿ ಮುಖ್ಯವಾಗಿ, ಮೂಲಭೂತವಾಗಿ ಏಶಿಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕದ ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿದ್ದ ರಾಷ್ಟ್ರಗಳ ಮತ್ತು ಅಭಿವೃದ್ಧಿ ಹೊಂದಿದ ಪಶ್ಚಿಮ ರಾಷ್ಟ್ರಗಳ ನಡುವಿನ ದ್ವೇಷ, ಭಿನ್ನಾಭಿಪ್ರಾಯ ಹೋಗಲಾಡಿಸುವ ಚಳವಳಿಯಾಗಿದೆ. 2012 ಮೇ ವರೆಗೆ 120 ಸದಸ್ಯ ರಾಷ್ಟ್ರಗಳಿದ್ದವು. 17 ಪರಿಶೀಲನಾ ರಾಷ್ಟ್ರಗಳು. 10 ಅಂತಾರಾಷ್ಟ್ರೀಯ ಪ್ರಾದೇಶಿಕ ಸಂಘಟನೆಗಳು ಪರಿಶೀಲನೆಗಾಗಿ ಇವೆ.

ಅಲಿಪ್ತ ಚಳವಳಿ ಹೆಸರಿಗೆ ಅನ್ವರ್ಥಕವಾಗಿ ಅಲಿಪ್ತ ನೀತಿಯ ಆಧಾರದ ಮೇಲೆ ಹುಟ್ಟಿಕೊಂಡಿದೆ. ಸಹಜವಾಗಿಯೇ ಇದು ಜಗತ್ತಿನ ದೇಶಗಳ ಹಿತಾಸಕ್ತಿ, ಆಕಾಂಕ್ಷೆ, ಕಾರ್ಯನೀತಿಗಳ ಮುಖವಾಣಿಯಂತೆ ತೋರುತ್ತದೆ. ಇದರ ಸದಸ್ಯ ರಾಷ್ಟ್ರಗಳಲ್ಲಿ ಹೆಚ್ಚಿನವು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದ ರಾಷ್ಟ್ರಗಳಾಗಿವೆ. ವಸಾಹತುಶಾಹಿಯ ನಿಯಂತ್ರಣದಲ್ಲಿರುವ, ವರ್ಣಭೇದ ನೀತಿಯಿಂದ ಶೋಷಣೆಗೊಳಗಾದ ರಾಷ್ಟ್ರಗಳಿವೆ. ಹೀಗಾಗಿ ಚಳುವಳಿ ವಸಹಾತುಶಾಹಿಯನ್ನು ಮತ್ತು ವರ್ಣಭೇದ ನೀತಿಯನ್ನು ವಿರೋಧಿಸುವ ಚಳವಳಿಯಾಗಿದೆ. ಇದರ ನಿಲುವು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನ್ಯಾಯ. ಇದು ಯಾವುದೇ ರೀತಿಯ ಶೋಷಣೆಯ ವಿರುದ್ಧ ದನಿಯೆತ್ತುತ್ತದೆ. ಅಭಿವೃದ್ಧಿ ಹೊಂದಿದ, ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ಮತ್ತು ಬಡ ರಾಷ್ಟ್ರಗಳಿಗೆ ಸಹಾಯ ಮಾಡಬೇಕೆಂಬುವುದು ಚಳವಳಿಯ ವಿಚಾರ ಧಾರೆಯಾಗಿದೆ. ಬಡತನ



downloaded from: www.kpscvaani.com

ಮತ್ತು ಶೋಷಣೆ ನಿರ್ಮೂಲನೆ ಆಗುವವರೆಗೆ ಜಗತ್ತಿನಲ್ಲಿ ಶಾಂತಿ ಇರುವುದಿಲ್ಲ ಎಂಬ ಧೋರಣೆ ಇದರದ್ದಾಗಿದೆ.

ಅಲಿಪ್ತ ಚಳವಳಿಯು ತನ್ನದೇ ಆದ ವಿಶಿಷ್ಟ ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಇದರ ಆಡಳಿತ ವಂಶಪಾರಂಪರೆಯದಾಗಿಲ್ಲ. ಸದಸ್ಯ ದೇಶಗಳು ಆವರ್ತವಾಗಿ (Rotationally) ಚಳವಳಿಯ ನೇತೃತ್ವ ವಹಿಸಿಕೊಳ್ಳುತ್ತವೆ. ಅದರಿಂದ ಜಾಗತಿಕ ನಿರ್ಣಯ ಕೈಗೊಳ್ಳುವಲ್ಲಿ ವಿಶ್ವ ರಾಜಕೀಯದಲ್ಲಿ ಎಲ್ಲ ದೇಶಗಳಿಗೆ ಸಮಾನ ಅವಕಾಶಗಳು ಸಿಗುತ್ತವೆ. ದೊಡ್ಡ ದೇಶ, ಸಣ್ಣ ದೇಶ ಎಂಬ ಭೇದಭಾವ ಇಲ್ಲವೇ ಇಲ್ಲ. ಬೇರೊಂದು ದೇಶ ಚಳವಳಿಯ ನೇತೃತ್ವ ವಹಿಸಿಕೊಳ್ಳುವ ಸಂದರ್ಭದಲ್ಲಿ ಅತಿಥೇಯ ರಾಷ್ಟ್ರದಲ್ಲಿ ಶೃಂಗಸಭೆ ನಡೆಯುತ್ತದೆ. ಮುಂದಿನ ಶೃಂಗಸಭೆಯವರೆಗೆ ಅದೇ ದೇಶ ಚಳವಳಿಯ ನೇತೃತ್ವ ವಹಿಸುತ್ತದೆ.

## ಚಳವಳಿಯ ಲಕ್ಷಣಗಳು

1. **ಮಿಲಿಟರಿಯೊಂದಿಗೆ ಮೈತ್ರಿ ನಿಷಿದ್ಧ :**

ಅಲಿಪ್ತ ಚಳವಳಿ ಮಿಲಿಟರಿ ಆಡಳಿತವನ್ನು ವಿರೋಧಿಸುತ್ತದೆ. ಮಿಲಿಟರಿಯೊಂದಿಗೆ ಮೈತ್ರಿಯನ್ನು ನಿಷೇಧಿಸುವುದು ಇದರ ನಿಲುವಾಗಿದೆ. ಈ ನಿಲುವು ಎರಡು ಶಕ್ತಿಬಣಗಳ ನಡುವಿನ ದ್ವೇಷದ ಫಲವಾಗಿ ಚಳವಳಿಯಲ್ಲಿ ಅಂತರ್ಗತವಾಗಿದೆ. ಮಿಲಿಟರಿ ಆಡಳಿತದಿಂದಾಗಿ ಅನೇಕ ರಾಷ್ಟ್ರಗಳು ಶೋಷಣೆಗೊಳಗಾಗಿವೆ. ಮಿಲಿಟರಿ ಪಡೆಗಳು ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದರಿಂದ ಜಾಗತಿಕ ಶಾಂತಿಗೆ ಧಕ್ಕೆಯುಂಟಾಗಿದೆ ಮತ್ತು ಅಂಥ ಸಂಘಟನೆಗಳಲ್ಲಿ ಮಿಲಿಟರಿ ಪ್ರಭಾವದ ದೇಶಗಳನ್ನು ಸೇರಿಸಿಕೊಳ್ಳುವುದನ್ನು ಭಾರತ ವಿರೋಧಿಸಿದೆ. ಪಾಕಿಸ್ತಾನದ ಪ್ರವೇಶವನ್ನು ಭಾರತ 1976ರ ಕೊಲಂಬೊ ಶೃಂಗಸಭೆಯಲ್ಲಿ ವಿರೋಧಿಸಿತ್ತು. ಶಕ್ತಿ ರಾಜಕಾರಣಕ್ಕೆ ವಿರೋಧ ಇಲ್ಲ. ಶಕ್ತಿ ಎಂದರೆ ರಾಜಕೀಯ ಅಧಿಕಾರ. ಅಧಿಕಾರವು ವ್ಯಕ್ತಿಯನ್ನು ಅರಾಜಕತೆಗೆ ಎಳೆಸುತ್ತದೆ. ಅಲಿಪ್ತ ಚಳವಳಿಯು ಅಧಿಕಾರ ರಾಜಕಾರಣವನ್ನು ತಾತ್ವಿಕವಾಗಿ ವಿರೋಧಿಸುತ್ತದೆ. ಅದರ ಬದಲಿಗೆ ಪ್ರಭಾವ ರಾಜಕೀಯದಲ್ಲಿ, ನಂಬಿಕೆ ಹೊಂದಿದೆ. ಪ್ರಭಾವ ರಾಜಕಾರಣ ಅಧಿಕಾರ ರಾಜಕಾರಣಕ್ಕಿಂತ ಭಿನ್ನ.



downloaded from: www.kpscvaani.com

2. **ಆರ್ಥಿಕ ಸಹಕಾರ :**

ಆಲಿಪ್ತ ಚಳವಳಿಗೆ ಸೇರಿದ ಹೊಸ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಾಗಿವೆ. ಅವುಗಳ ಮುಖ್ಯ ಉದ್ದೇಶ ಆರ್ಥಿಕವಾಗಿ ಸಬಲವಾಗುವುದು. ಆರ್ಥಿಕ ಮತ್ತು ತಾಂತ್ರಿಕ ಸಹಾಯದಿಂದ ಮಾತ್ರ ಅಭಿವೃದ್ಧಿಯಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಆರ್ಥಿಕ ಸಹಾಯ ನೀಡುವುದು ಚಳುವಳಿಯ ಧ್ಯೇಯೋದ್ದೇಶಗಳಲ್ಲಿ ಒಂದಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಆರ್ಥಿಕ ಸಹಾಯ ನೀಡಲು ಎರಡೂ ಶಕ್ತಿ ಬಣಗಳ ರಾಷ್ಟ್ರಗಳನ್ನು ಕೇಳಿಕೊಳ್ಳಲಾಗುತ್ತದೆ.

3. **ತೀರ್ಪುಗಳ ಸ್ವಾತಂತ್ರ್ಯ :**

ಅಂತರರಾಷ್ಟ್ರೀಯ ವಿವಾದ, ವಿಷಯಾಂಶಗಳ ಮೇಲೆ ನೀಡಲಾಗುವ ತೀರ್ಪುಗಳು ಸ್ವತಂತ್ರವಾಗಿದ್ದು ನ್ಯಾಯಸಮ್ಮತ ಆಗಿರಬೇಕೆಂಬುದು ಆಲಿಪ್ತ ಚಳವಳಿಯ ಧ್ಯೇಯವೂ, ಆಶಯವೂ ಆಗಿದೆ. ಯಾವುದೇ ವಿವಾದದ ಮೇಲೆ ಬೇರೆ ದೇಶದ ಪ್ರಭಾವವಿಲ್ಲದಂತೆ ತೀರ್ಪು ನೀಡುವ ವ್ಯವಸ್ಥೆ ಈ ಚಳವಳಿಯಲ್ಲಿದೆ. “ಆಲಿಪ್ತ ಚಳವಳಿಯು ನಮ್ಮ ಉತ್ತಮ ತೀರ್ಪುಗಳಿಂದ ಗುರುತಿಸಲ್ಪಡಬೇಕು” ಎಂದು ನೆಹರು ಹೇಳುತ್ತಿದ್ದರು.

4. **ಅಂತರರಾಷ್ಟ್ರೀಯ ಸಂಬಂಧಗಳಿಗೆ ಪ್ರಜಾಸತ್ತಾತ್ಮಕ ದೃಷ್ಟಿಕೋನ:**

ಜಗತ್ತಿನ ಎಲ್ಲ ದೇಶಗಳು ಹೊಂದಿರುವ ಸಂಬಂಧಗಳಿಗೆ ಪ್ರಜಾಸತ್ತಾತ್ಮಕ ದೃಷ್ಟಿಕೋನ, ಧೋರಣೆ ಇರಬೇಕೆಂಬ ನಂಬಿಕೆ ಆಲಿಪ್ತ ಚಳವಳಿಯದಾಗಿದೆ. 1956ರಲ್ಲಿ ಅಮೆರಿಕದ ಆಗಿನ ಉಪಾಧ್ಯಕ್ಷ ನಿಕ್ಸನ್ ಮತ್ತು ವಿದೇಶಾಂಗ ಸಚಿವ ಡಲ್ಲಸ್ ಅವರು ಆಲಿಪ್ತ ಚಳವಳಿಯನ್ನು ಟೀಕಿಸಿದ್ದರು. ಆಲಿಪ್ತ ಚಳವಳಿಯನ್ನು ಟೀಕಿಸುವುದು ನಿಲ್ಲಬೇಕು ಅಥವಾ ಹೊಸ ದೇಶಗಳ ವಿದೇಶಾಂಗ ವ್ಯವಹಾರಗಳ ಬಗ್ಗೆ ಸಹನೆಯಿರಬೇಕು ಎಂದು ನೆಹರು ಹೇಳಿದ್ದರು.

5. **ವಸಾಹಾತುಷಾಹಿ ಮತ್ತು ವರ್ಣಭೇದಕ್ಕೆ ವಿರೋಧ:**

ಆಲಿಪ್ತ ದೇಶಗಳು ವಸಹಾತುಷಾಹಿಗೆ, ಜನಾಂಗೀಯ ನೀತಿಗೆ ಮತ್ತು ವರ್ಣಭೇದಕ್ಕೆ ವಿರುದ್ಧವಾಗಿದೆ. ಇಂಡೋನೇಷಿಯಾ ಮೇಲಿನ ಡಚ್ ಕಾರ್ಯಾಚರಣೆಯನ್ನು ಖಂಡಿಸಲು ನೆಹರು ಅವರು 1954ರಲ್ಲಿ ದೆಹಲಿಯಲ್ಲಿ ಸಮ್ಮೇಳನವನ್ನೇ ನಡೆಸಿದ್ದರು. ಆ ಸಮ್ಮೇಳನದಲ್ಲಿ ಏಶಿಯ ಮತ್ತು ಆಫ್ರಿಕಾದ ಪ್ರತಿನಿಧಿಗಳು ಭಾಗವಹಿಸಿದ್ದರು. ಸುಕರ್ಣೋ ಮತ್ತು ನೆಹರು ಅವರು ವಸಹಾತುಷಾಹಿ ವಿರುದ್ಧದ ಹೋರಾಟ ಎಲ್ಲಿ ಸಾಂಸ್ಥೀಕರಣಗೊಳ್ಳುವುದೋ ಎಂದು ಚಿಂತಿಸುತ್ತಿದ್ದರು. ಜಿಂಬಾಬ್ವೆಯು ವಸಾಹಾತುಷಾಹಿಯಿಂದ ಬಿಡುಗಡೆ ಹೊಂದಿದ್ದನ್ನು ಎಲ್ಲ



downloaded from: www.kpscvaani.com

ಆಲಿಪ್ತ ದೇಶಗಳು ಸ್ವಾಗತಿಸಿ ಅದರಲ್ಲಿ ಭಾರತದ ಪಾತ್ರವನ್ನು ಪ್ರಶಂಸಿಸಿದ್ದವು. ಆಲಿಪ್ತ ಚಳವಳಿಯು ಜನಾಂಗೀಯ ಧೋರಣೆಯನ್ನು ಸಹ ವಿರೋಧಿಸುತ್ತದೆ.

### 6. ಆಲಿಪ್ತ ಚಳವಳಿಯ ಪ್ರಸ್ತುತತೆ:

ಸಮಕಾಲೀನ ಜಗತ್ತಿನಲ್ಲಿ ಆಲಿಪ್ತ ಚಳವಳಿ ಅಪ್ರಸ್ತುತವಾಗುತ್ತಿದೆ. ಚಳವಳಿಯ ಬಗ್ಗೆ ಇಂಥ ಅನುಮಾನಗಳು ಶೀತಲ ಸಮರದ ಕಾಲದಲ್ಲಿಯೂ ಇದ್ದವು. ಈಗ ಆಲಿಪ್ತ ಚಳವಳಿಯ ದೇಶಗಳಲ್ಲಿಯೇ ಚಳವಳಿಯ ಪ್ರಸ್ತುತತೆಯ ಬಗ್ಗೆ ಅನುಮಾನಗಳು, ಆತಂಕಗಳು ಇವೆ. ಆಲಿಪ್ತ ಚಳುವಳಿ ಶೀತಲಸಮರದ ಪರಿಣಾಮದಿಂದ ಉದ್ಭವಿಸಿದ ಶಿಶು. ಶೀತಲ ಸಮರ ಈಗ ಇಲ್ಲದೇ ಇದ್ದುದರಿಂದ ಅಲಿಪ್ತ ಚಳುವಳಿ ಈಗ ಅಪ್ರಸ್ತುತ ಎಂದು ಹೇಳಲಾಗುತ್ತಿದೆ. ಆಲಿಪ್ತ ಚಳವಳಿಯ ಬಗ್ಗೆ ಟೀಕೆಗಳು, ಅನುಮಾನಗಳು ತಳ್ಳಿ ಹಾಕುವಂಥವಲ್ಲ. ಆದರೆ ಚಳವಳಿಯ ಉದ್ದೇಶ ಈಗಲೂ ಸ್ವತಂತ್ರವಾಗಲು ಪ್ರಯತ್ನಿಸುವ ಯಾವುದೇ ಶೋಷಿತ ದೇಶಕ್ಕೆ ಬೆಂಬಲ ದೊರಕಿಸುವುದು ಚಳವಳಿಯ ಉದ್ದೇಶ ಆಗಿರುವುದರಿಂದ ಚಳವಳಿ ಪ್ರಸ್ತುತವಾಗುತ್ತದೆ. ಚಳವಳಿಯನ್ನು ಟೀಕಿಸುವವರು, ಇದರ ಪ್ರಸ್ತುತತೆಯ ಬಗ್ಗೆ ಅನುಮಾನವುಳ್ಳವರು ಇದರ ಪ್ರಸ್ತುತತೆಯನ್ನು ಒಪ್ಪಿಕೊಳ್ಳುವುದಿಲ್ಲ. ಅದಕ್ಕಾಗಿ ಹೋರಾಡುವ ದೇಶಗಳಿಗೆ ಮಾನಸಿಕ ಧೈರ್ಯ, ಬೆಂಬಲ ನೀಡುತ್ತದೆ.

ಶಾಶ್ವತ ಸದಸ್ಯ ರಾಷ್ಟ್ರಗಳ ವೆಟೋ ಕೂಡ ಈಗ ಅಪ್ರಸ್ತುತವಾಗಿದೆ. ಹೀಗಿರುವಾಗ ಅಲಿಪ್ತ ಚಳವಳಿಯನ್ನು ಪುನರಚಿಸಿ, ಅದರಲ್ಲಿ ಬದಲಾವಣೆ ಮಾಡಿ ಮುಂದುವರಿಸುವ ಅಗತ್ಯವಿದೆ.

### 7. ಹೊಸ ಆದ್ಯತೆಗಳು:

ಆಲಿಪ್ತ ಚಳು`ವಳಿ ಈಗ ತನ್ನ ಆದ್ಯತೆಗಳಲ್ಲಿ ಬದಲಾವಣೆ ತರಬೇಕಾದರೆ ಚಳವಳಿ ದಕ್ಷಿಣ ಸಹಯೋಗದ ವಾಹಕವಾಗಬೇಕು. ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತಾಸಕ್ತಿಯನ್ನು ರಕ್ಷಿಸುವುದು ಚಳವಳಿಯ ಆದ್ಯತೆಯಾಗಬೇಕಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಆರ್ಥಿಕ ದಿಗ್ಬಂಧನ ಹೇರುವುದರ ವಿರುದ್ಧ ದನಿಯೆತ್ತಬೇಕು. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ತಾವೇ ಸ್ವತಃ ಆರ್ಥಿಕವಾಗಿ ಮುಂದೆ ಬರಬೇಕೆಂದು ಅಭಿವೃದ್ಧಿ ಹೊಂದಿದ ದೇಶಗಳು ಎಚ್ಚರಿಕೆ ನೀಡಿವೆ. ಇದನ್ನು ಅಲಿಪ್ತ ಚಳವಳಿ ಗಂಭೀರವಾಗಿ ಪರಿಗಣಿತವಾಗಿದೆ.



downloaded from: www.kpscvaani.com

## ‘ಗಂಗಾ ಉಳಿಸಿ’ ಆಂದೋಲನ

ಇದು ಗಂಗಾನದಿ ಹರಿಯುವ ರಾಜ್ಯಗಳಲ್ಲಿ ಸಾಧುಗಳ, ಸಾರ್ವಜನಿಕ ಕಾರ್ಯಕರ್ತರ ಮತ್ತು ಪರಿಸರವಾದಿಗಳ ಬೆಂಬಲದ ಗಾಂಧಿ ಮಾರ್ಗದ, ಗಾಂಧಿ ರೀತಿಯ ಅಹಿಂಸಾತ್ಮಕ ಚಳವಳಿ. Ganga Save Abhiyanam, ಪೂನಾ ಮೂಲದ National Woman’s Organisation ದಂಥ ಅನೇಕ ಸಂಘಟನೆಗಳ ಸಹಾಯ, ಸಹಕಾರ, ಬೆಂಬಲ ಈ ಚಳವಳಿಗಿದೆ. ಧಾರ್ಮಿಕ ಮುಖಂಡರು, ರಾಜಕೀಯ ನಾಯಕರು, ಶಿಕ್ಷಣ ತಜ್ಞರು, ವಿಜ್ಞಾನಿಗಳು ಈ ಚಳವಳಿಯನ್ನು ಬೆಂಬಲಿಸಿದ್ದಾರೆ. ಇದರ ಉದ್ದೇಶ ಗಂಗಾನದಿಯನ್ನು ಮಾಲಿನ್ಯ ಮುಕ್ತವಾಗಿಸುವುದಾಗಿದೆ. ಚಳವಳಿಯ ನೆಲೆಗಳು ಗಂಗಾನದಿಯ ದಡದಲ್ಲಿರುವ ಪ್ರಮುಖ ನಗರಗಳಾದ ವಾರಣಾಸಿ, ಹರಿದ್ವಾರ, ಮಥುರಾ, ಅಲಹಾಬಾದ್ ಮತ್ತು ಇತರ ನಗರಪಟ್ಟಣಗಳು. ನಾಯಕತ್ವ ಕೇಂದ್ರವಿಲ್ಲದ ಈ ಚಳವಳಿಯ ಮುಂಚೂಣಿಯಲ್ಲಿರುವವರು ಪ್ರೊ. ಜಿ.ಡಿ. ಅಗರವಾಲ, ಶ್ರೀಮತಿ ರಮಾ ರೌತ್ ಮತ್ತು ಆಚಾರ್ಯ ಜೀತೇಂದ್ರ.

ಗಂಗಾ, ಭಾರತದಲ್ಲಿ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಭೌತಿಕ ಮಹತ್ವದ, ಪ್ರಭಾವದ ಪವಿತ್ರ ನದಿ. ಇದು 11 ರಾಜ್ಯಗಳಲ್ಲಿ ದೇಶದ ಜನಸಂಖ್ಯೆಯ 40% ಜನರಿಗೆ ನೀರೋದಗಿಸುವ ಜೀವನದಿಯಾಗಿದೆ. ಸುಮಾರು 500 ದಶಲಕ್ಷ ಜನರು ತಮ್ಮ ಜೀವನ ನಿರ್ವಹಣೆಗಾಗಿ ಈ ನದಿಯನ್ನು ಅವಲಂಬಿಸಿದ್ದಾರೆ. ದೇಶದ ಒಟ್ಟು ಜನಸಂಖ್ಯೆಯ 1/3 ಜನರು ಈ ನದಿಯ ಪಾತ್ರ ಪ್ರದೇಶದಲ್ಲಿ ವಾಸವಾಗಿದ್ದಾರೆ. ಈ ನದಿಯು 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯ 29 ನಗರಗಳು, 50 ಸಾವಿರದಿಂದ 1 ಲಕ್ಷ ಜನಸಂಖ್ಯೆಯವರೆಗಿನ 23 ನಗರಗಳು ಮತ್ತು 48 ಪಟ್ಟಣಗಳು ಒಳಗೊಳ್ಳುವ ಜನದಟ್ಟಣೆಯ ವಲಯಗಳಲ್ಲಿ ಹರಿಯುತ್ತದೆ. ಜನರು ಸ್ನಾನ ಮಾಡುವುದು, ಬಟ್ಟೆ ಒಗೆಯುವುದು ಮತ್ತು ಮನುಷ್ಯರ ಹಾಗೂ ದನಕರುಗಳ ಮಲಮೂತ್ರ ವಿಸರ್ಜನೆಯಿಂದ ಅಲ್ಲದೆ ಕೈಗಾರಿಕೆಗಳ ತ್ಯಾಜ್ಯವಸ್ತುಗಳಿಂದ ಗಂಗಾನದಿ ಮಲಿನವಾಗಿದೆ. ಅಸಂಖ್ಯಾತ ರಸಾಯನಿಕ ಸ್ಥಾವರಗಳು, ಜವಳಿ ಗಿರಣಿಗಳು, ಸರಾಯಿ ಬಾಟ್ಲಿಗಳು, ಕಸಾಯಿಖಾನೆಗಳು, ಆಸ್ಪತ್ರೆಗಳ ದಿನನಿತ್ಯದ ತ್ಯಾಜ್ಯ ವಸ್ತುಗಳು (ಘನ ಮತ್ತು ದ್ರವ) ಗಂಗಾನದಿಯನ್ನು ಸೇರುತ್ತವೆ. ಅವುಗಳನ್ನು ಯಾವ ಭಯ ಭೀತಿ ಇಲ್ಲದೆ ಗಂಗಾ ನದಿಗೆ ಹಾಕಲಾಗುತ್ತದೆ. ಪ್ರತಿದಿನ 2900 ದಶಲಕ್ಷ ಲೀಟರ್ ಕೊಳೆ ನೀರು ಗಂಗಾನದಿಗೆ ಸೇರುತ್ತದೆ. ಹೀಗೆ ಸಂಸ್ಕರಿಸದ ತ್ಯಾಜ್ಯ ಮತ್ತು ಜೈವಿಕ ತ್ಯಾಜ್ಯಗಳು ಗಂಗೆಯನ್ನು ಮಲಿನಗೊಳಿಸಿವೆ. ಹೀಗಾಗಿ ಗಂಗಾನದಿಯು ನಿರ್ಮಲವಾಗಿ, ಪವಿತ್ರವಾಗಿ ಉಳಿಯದೆ ಕೊಳೆಯಾಗಿದೆ, ಮೈಲಿಗೆಯಾಗಿದೆ. ನದಿಯ ನೀರು ಮತ್ತು ಅದರ ಪರಿಸರ ಮೊದಲಿನಂತೆ ಆಗದಷ್ಟು ಕೆಟ್ಟುಹೋಗಿದೆ.



downloaded from: www.kpscvaani.com

1. **ಆಣೆಕಟ್ಟುಗಳು**

1854ರಲ್ಲಿ ಬ್ರಿಟಿಷರ ಕಾಲದಲ್ಲಿ ನಿರ್ಮಿಸಲಾದ ಹರಿದ್ವಾರ ಆಣೆಕಟ್ಟೆಯಿಂದ ಹರಿಯುವ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದಲೂ ಗಂಗಾನದಿಯ ನೈರ್ಮಲ್ಯಕ್ಕೆ ಧಕ್ಕೆಯಾಗಿದೆ. ಭಾಗೀರಥಿ ನದಿಗೆ ಶುದ್ಧ ನೀರನ್ನು ಒದಗಿಸಲು ನಿರ್ಮಿಸಲಾದ ಫರಕ್ಕಾ ಆಣೆಕಟ್ಟೆಯಿಂದ ಗಂಗಾನದಿಗೆ ಸೇರ್ಪಡೆಯಾಗುವ ಲವಣಾಂಶಗಳ ಪ್ರಮಾಣ ಹೆಚ್ಚಾಗಿವೆ. ಆದ್ದರಿಂದ ಅಂತರ್ಜಲ ಮಲಿನವಾಗಿದೆ. ನದಿ ದಡದ ಮಣ್ಣು ಹರಿದು ಹೋಗಿದೆ. ಸವಕಳಿಯಾಗಿದೆ. ಗಂಗಾನದಿಯ ಮೇಲೆ 300 ಆಣೆಕಟ್ಟುಗಳನ್ನು ನಿರ್ಮಿಸಲು ಭಾರತ ಸರಕಾರ ಈ ಹಿಂದೆ ಯೋಚಿಸಿತ್ತು. ಮಾಲಿನ್ಯ ಕಾರಣಕ್ಕೆ 34 ಆಣೆಕಟ್ಟುಗಳನ್ನು ಕೆಡುವಬೇಕೆಂದು ಸರ್ಕಾರ ನೇಮಕ ಮಾಡಿದ ಹಸಿರು ತಂಡ ಶಿಫಾರಸ್ಸು ಮಾಡಿದ ಹಿನ್ನೆಲೆಯಲ್ಲಿ 300 ಆಣೆಕಟ್ಟುಗಳ ನಿರ್ಮಾಣ ಕೈ ಬಿಡಲಾಗಿದೆ.

2. **ಕ್ಷೀಣಿಸುತ್ತಿರುವ ಗಂಗೋತ್ರಿ**

ಗಂಗಾನದಿಗೆ ನೀರು ಪೂರಣ ಮಾಡುವ ಗಂಗೋತ್ರಿ ಗ್ಲೇಸಿಯರ್ ಈಗ 30.2 ಕಿ.ಮೀ. ಉದ್ದವಾಗಿದೆ. ಅಗಲ 0.5 ಮತ್ತು 2.5 ಕಿ.ಮೀ. ಅದು ಹಿಮಾಲಯದಲ್ಲಿ ದೊಡ್ಡದಾಗಿದೆ. ಆದರೆ ಜಾಗತಿಕ ತಾಪಮಾನದಿಂದ ಗಂಗೋತ್ರಿ 1780 ರಿಂದ ಕ್ಷೀಣಿಸುತ್ತಿದೆ. ಅಧ್ಯಯನಗಳ ಪ್ರಕಾರ ಅದರ ಹಿಂದಕ್ಕೆ ಸರಿಯುವಿಕೆ 1971 ರಿಂದ ತೀವ್ರವಾಗಿದೆ. ಕಳೆದ 25 ವರ್ಷಗಳಲ್ಲಿ ಗಂಗೋತ್ರಿ 850 ಮೀಟರ್ ಹಿಂದಕ್ಕೆ ಸರಿದಿದೆ. 2030ರ ವೇಳೆಗೆ ಗಂಗೋತ್ರಿಯ ಹರಿಯುವಿಕೆ ಪೂರ್ತಿ ನಿಲ್ಲುವ ಸಾಧ್ಯತೆಯಿದೆ. ಹೀಗಾಗಿ ಗಂಗಾನದಿ ಮಳೆಗಾಲದಲ್ಲಿಯೇ ಸಾಮಾನ್ಯ ಋತುಮಾನದ ನದಿಯ ಮಟ್ಟಕ್ಕೆ ಕುಸಿಯಬಹುದು.

3. **ಗಂಗಾ ಕ್ರಿಯಾ ಯೋಜನೆ**

1986ರಲ್ಲಿ ರಾಜೀವಗಾಂಧಿಯವರು ಗಂಗಾ ಕ್ರಿಯಾ ಯೋಜನೆಯನ್ನು ಆರಂಭಿಸಿದರು. ಅದರ ಉದ್ದೇಶ ನದಿಯ ಮೇಲಿನ ಮಾಲಿನ್ಯದ ಭಾರ ಕಡಿಮೆ ಮಾಡುವುದಾಗಿತ್ತು. 90171.1 ಕೋಟಿ ರೂ. (190 ಮಿಲಿಯನ್ ಡಾಲರ್)ದಷ್ಟು ಹಣ ಖರ್ಚಾದರೂ ನದಿಯಲ್ಲಿನ ಮಾಲಿನ್ಯ ಕಡಿಮೆ ಮಾಡಲು ಸಾಧ್ಯವಾಗಲಿಲ್ಲ. ಕ್ರಿಯಾ ಯೋಜನೆಯಡಿಯಲ್ಲಿ ಒಟ್ಟು 35000 ಕೋ. ರೂ. ಖರ್ಚಾಯಿತು. ಆದರೂ ಯೋಜನೆ ವಿಫಲವಾಯಿತು. 2000 ಮಾರ್ಚ್ 31ರಂದು ಯೋಜನೆಯನ್ನು ಹಿಂತೆಗೆದುಕೊಳ್ಳಲಾಯಿತು. ಕ್ರಿಯಾ ಯೋಜನೆ ವಿಫಲವಾದ ಯೋಜನೆ ಎಂದು ವಿಜ್ಞಾನಿಗಳ ಮತ್ತು ಎನ್‌ಜಿಓಗಳ ವರದಿಗಳಲ್ಲಿ ವರ್ಣಿಸಲಾಗಿದೆ.



downloaded from: www.kpscvaani.com

## 4. ಹಿನ್ನೆಲೆ

ಚಳುವಳಿ ಒಮ್ಮೆಲೆ ಉದ್ಭವಿಸಲಿಲ್ಲ. ಗಂಗಾನದಿಯ ಮಾಲಿನ್ಯ ಅನೇಕ ವರ್ಷಗಳಿಂದ ಸಮಸ್ಯೆಯಾಗಿದೆ. ಚಳವಳಿಗೆ ಪರಿಸರವಾದಿಗಳ ಬೆಂಬಲ ಸಿಗಲು, ಜನರಲ್ಲಿ ಜಾಗ್ರತಿ ಮೂಡಲು ಕೆಲವು ವರ್ಷಗಳೇ ಬೇಕಾಯಿತು. ವಿವಿಧ ಅಧ್ಯಯನದ ವರದಿಗಳು ಗಂಗಾನದಿಯ ಸ್ಥಿತಿಗತಿ ಹದಗೆಟ್ಟಿದ್ದನ್ನು ಎತ್ತಿ ತೋರಿಸಿವೆ. 1998ರಲ್ಲಿ ರಾಷ್ಟ್ರೀಯ ಮಹಿಳಾ ಸಂಘಟನೆಯ ಸ್ಥಾಪಕಿ ರಮಾ ರೌತ್ ಅವರು ಚಳವಳಿಯಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಯ ಅವಶ್ಯಕತೆಯನ್ನು ಮನಗಂಡರು. ಡಾ. ಸುಶೀಲಾ ನಾಯರ್ ಅವರ ನಾಯಕತ್ವದಲ್ಲಿ ಸಾರ್ವಜನಿಕ ಪಾಲ್ಗೊಳ್ಳುವಿಕೆಗೆ ಉಪಕ್ರಮವನ್ನು ಆರಂಭಿಸಿದರು. 1998 ನವಂಬರ್ 13ರಂದು ಕಾನಪುರದಲ್ಲಿ ಗಂಗಾ ಔರ್ ಹಮಾರಾ ದಾಯಿತ್ವಾಂಯೆ (ಗಂಗಾ ಮತ್ತು ನಮ್ಮ ಕರ್ತವ್ಯಗಳು) ಎಂಬ ವಿಷಯದ ಮೇಲೆ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಶೀಘ್ರದಲ್ಲಿಯೇ ಗಾಂಧಿವಾದಿ, ಖ್ಯಾತ ಪರಿಸರವಾದಿ ಸುಂದರವಾಲ ಬಹುಗುಣ ಮತ್ತು ಕಾಂಚನಲತಾ ಅವರು ಚಳವಳಿಗೆ ಸೇರಿಕೊಂಡರು.

ಗಂಗಾ ನದಿಯ ಮೇಲೆ ಆಣೆಕಟ್ಟುಗಳನ್ನು ನಿರ್ಮಿಸುವುದನ್ನು ವಿರೋಧಿಸಿ ಗಂಗಾ ಮಹಾಸಭಾದ ಪ್ರೊ. ಜಿ.ಡಿ. ಅಗರವಾಲ ಅವರು 2008 ಮತ್ತು 2009ರಲ್ಲಿ ಎರಡು ಸಲ ಆಮರಣಾಂತರ ಉಪವಾಸ ಮುಷ್ಕರ ಕೈಗೊಂಡರು. ಅವರು ಎರಡೂ ಸಲ ದೇಶದ ಸೂಕ್ಷ್ಮ ಮತ್ತು ಪವಿತ್ರ ವಲಯಗಳಲ್ಲಿ ಥರ್ಮಲ್ ಸ್ಥಾವರಗಳನ್ನು ಸ್ಥಾಪಿಸಬಾರದೆಂದು ಸರಕಾರಕ್ಕೆ ಒತ್ತಾಯಿಸಿದರು. ಅಣ್ಣಾ ಹಜಾರೆಯವರಂಥ ಸಾಮಾಜಿಕ ಹೋರಾಟಗಾರರು ಚಳವಳಿಯನ್ನು ಬೆಂಬಲಿಸಿದರು. ಉತ್ತರಾಖಂಡದಲ್ಲಿ ನಿರ್ಮಾಣಗೊಳ್ಳುತ್ತಿದ್ದ ಜಲವಿದ್ಯುತ್ ಸ್ಥಾವರದ ನಿರ್ಮಾಣದ ಸ್ಥಗಿತಕ್ಕೆ ಆಗಿನ ಪ್ರಧಾನಮಂತ್ರಿ ಮನಮೋಹನಸಿಂಗ್ ಅವರು ಸಾರ್ವಜನಿಕವಾಗಿ ಒಪ್ಪಿಕೊಂಡರು. ಅಲ್ಲದೆ ಗಂಗಾನದಿಯಲ್ಲಿನ ಹೊಲಸು ನೀರು ಹೊರಗೆ ಹೋಗಲು ಕಾಲುವೆಗಳ ನಿರ್ಮಾಣಕ್ಕೆ, ಹೊಲಸು ನೀರನ್ನು ಪಂಪ್ ಮಾಡಿ ಹೊರಹಾಕಲು ಪಂಪಿಂಗ್ ಸ್ಟೇಷನ್‌ಗಳನ್ನು ತೆರೆಯಲು, ವಿದ್ಯುತ್ ಚಿತಾಗಾರಗಳನ್ನು ಆರಂಭಿಸಲು, ಸಾಮೂಹಿಕ ಶೌಚಾಲಯಗಳನ್ನು ಕಟ್ಟಲು ಮತ್ತು ನದಿಗೆ ಸಂಬಂಧಿಸಿದ ಇತರ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಮಂಜೂರಾದ 2.6 ಬಿಲಿಯನ್ ರೂ. ಉಪಯೋಗಿಸಿಕೊಳ್ಳಬೇಕೆಂದು ಅದಕ್ಕಾಗಿ ರಾಷ್ಟ್ರೀಯ ಗಂಗಾನದಿ ಪಾತ್ರ ಪ್ರಾಧಿಕಾರಕ್ಕೆ ಕರೆಯಿತ್ತರು.



downloaded from: www.kpscvaani.com

## 5. ಬೇಡಿಕೆಗಳು

ಚಳವಳಿ ಒಂದೇ ಗುರಿಯ ಮೇಲೆ ಕೇಂದ್ರೀಕೃತವಾಯಿತು. ಗಂಗಾನದಿಯ ವಿರುದ್ಧ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುವುದೇ ಆ ಗುರಿ. ಚಳುವಳಿ ಪ್ರತಿರೋಧಿಸುವ ಒಡಂಬಡಿಕೆಗಳೆಂದರೆ ಗಂಗಾನದಿಯಲ್ಲಿ ಮತ್ತು ನದಿಯ ಪರಿಸರದಲ್ಲಿ ನಡೆಯುವ ಪ್ರಕೃತಿ ವಿರುದ್ಧದ, ಮಾನವ ವಿರುದ್ಧದ, ಪರಿಸರ ವಿರುದ್ಧದ ಚಟುವಟಿಕೆಗಳು. ಗಂಗಾನದಿಯ ಸಾಂಸ್ಕೃತಿಕ ಮಹತ್ವವನ್ನು, ಪವಿತ್ರತೆಯನ್ನು ಕಾಪಾಡುವುದು ಒಂದೇ ಗುರಿಯಲ್ಲಿ ಅಡಕವಾಗಿದೆ. ಹೆಚ್ಚಿನ ಎಲ್ಲ ಬೇಡಿಕೆಗಳು ಗಂಗಾನದಿಯ ಮೇಲೆ ನಿರ್ಮಾಣವಾಗುವ ಆಣೆಕಟ್ಟುಗಳಿಗೆ ಸಂಬಂಧಿಸಿವೆ.

## 6. ನಿರ್ಮಾಣ ಸ್ಥಗಿತ

ಗಂಗಾನದಿಯ ಮೇಲ್ಭಾಗದಲ್ಲಿ ನದಿಗೆ ಧಕ್ಕೆಯುಂಟು ಮಾಡುವಂಥ ನಿರ್ಮಾಣವನ್ನು ಕಟ್ಟು ನಿಟ್ಟಾಗಿ ನಿಲ್ಲಿಸಬೇಕೆಂದು ಒತ್ತಾಯಿಸಲಾಗಿದೆ. ಗಂಗಾನದಿ ಪರಿಸರವನ್ನು ವನ್ಯ ನದಿ ವಲಯ ಎಂದು ಘೋಷಿಸಲು ಮತ್ತು ಗಂಗೋತ್ರಿ ರಾಷ್ಟ್ರೀಯ ಉದ್ಯಾನಕ್ಕೆ ಬರುವ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲು ಒತ್ತಾಯಿಸಲಾಗಿದೆ. ಉತ್ತರಾಖಂಡದ ಕಾಲಬದ್ಧ ವಾಣಿಜ್ಯೇತರ ಅರಣ್ಯ ಸೃಷ್ಟಿಗೆ ಕ್ರಮ ಕೈಗೊಳ್ಳುವುದು ಸ್ಥಳೀಯ ಸಸ್ಯಗಳನ್ನು ಬೆಳೆಯುವುದು ಇತರ ಬೇಡಿಕೆಗಳಾಗಿವೆ. ಈ ಎಲ್ಲ ಬೇಡಿಕೆಗಳನ್ನು ಇತ್ತೀಚಿನ ವರದಿಗಳು ಬೆಂಬಲಿಸಿವೆ. ಗಂಗಾ ನದಿಯ ಮೇಲೆ ನಿರ್ಮಾಣಗೊಳ್ಳುತ್ತಿರುವ 34 ಆಣೆಕಟ್ಟುಗಳನ್ನು ನಿಷ್ಕ್ರಿಯಗೊಳಿಸಲು ವರದಿಗಳು ಶಿಫಾರಸು ಮಾಡಿದವು.

## 7. ಮಾಲಿನ್ಯ ನಿಯಂತ್ರಣ

ಗಂಗಾನದಿ ವಿವಿಧ ಮಾನವ ಚಟುವಟಿಕೆಗಳಿಂದ ಮಾಲಿನ್ಯಗೊಂಡಿದೆ. ಜನರು ಸ್ನಾನ ಮಾಡುವುದು, ಬಟ್ಟೆ ಒಗೆಯುವುದು, ತ್ಯಾಜ್ಯ ವಸ್ತುಗಳನ್ನು ನದಿಗೆ ಎಸೆಯುವುದು ಇಂಥ ಚಟುವಟಿಕೆಗಳನ್ನು ನಿಯಂತ್ರಿಸಬೇಕಾಗಿದೆ. ನದಿಯ ದಡಗಳಲ್ಲಿ ಸ್ನಾನ ಘಟ್ಟಗಳಲ್ಲಿ ಸಾರ್ವಜನಿಕ ವ್ಯವಸ್ಥೆಗಳಿಲ್ಲ. ಎಲ್ಲಿ ನೋಡಿದರಲ್ಲಿ ಕಸ, ಕೆಟ್ಟ ವಾಸನೆ, ಪ್ರಾಣಿಗಳು ಸ್ನಾನಘಟ್ಟಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡುತ್ತವೆ. ಇದೆಲ್ಲದರ ನಿಯಂತ್ರಣ ಆಗಬೇಕು.



downloaded from: www.kpscvaani.com

## 8. ಕೈಗಾರೀಕರಣ

ಕೈಗಾರಿಕೆಗಳ ಸಾವಯವವಲ್ಲದೆ, ಜೈವಿಕವಲ್ಲದ ದ್ರವ ಮತ್ತು ಘನ ತ್ಯಾಜ್ಯ ವಸ್ತುಗಳನ್ನು ಗಂಗಾ ನದಿಗೆ ಯಾವ ಎಗ್ಗಿಲ್ಲದೆ ಹಾಕುತ್ತಿರುವುದರಿಂದ ಗಂಗಾನದಿ ಮಲಿನವಾಗಿದೆ. ನದಿ ಮಾಲಿನ್ಯಗೊಂಡಿರುವುದರಲ್ಲಿ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳ ಪಾತ್ರವೇ ಹೆಚ್ಚಿದೆ. ಅದಕ್ಕಾಗಿ ಗಂಗಾನದಿ ಪ್ರದೇಶದಲ್ಲಿ ಸೂಕ್ತ ನಿರ್ವಹಣೆ ಇಲ್ಲದೆ ಯಾವುದೇ ಹೊಸ ಕೈಗಾರಿಕೆಗಳ ಸ್ಥಾಪನೆ ಆಗಬಾರದೆಂದು ಒತ್ತಾಯಿಸಲಾಗಿದೆ.

## 9. ಜಾಗೃತಿ

ಪರಿಸರ ಮಾಲಿನ್ಯದ ವಿರುದ್ಧ ಮುಖ್ಯವಾಗಿ ಗಾಳಿ, ನೀರು ಮತ್ತು ನೆಲಮಾಲಿನ್ಯದ ವಿರುದ್ಧ ಸಮೂಹ ಜಾಗೃತಿ ಮೂಡಿಸುವುದರ ಅವಶ್ಯಕತೆ ಇದೆ. ಇದಕ್ಕಾಗಿ ರೇಡಿಯೋ ಟಿವಿಯಂಥ ಸಮೂಹ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾಗಿದೆ.

NEERI, TRC ಯಂಥ ರಾಷ್ಟ್ರೀಯ ಪ್ರಯೋಗಾಲಯಗಳು ಎಲ್ಲಾ ನದಿಗಳ ಮಾಲಿನ್ಯದ ಮೇಲೆ ನಿಗಾ ಇಡಬೇಕು. ಗಂಗಾ ಮತ್ತು ದೇಶದ ಇತರ ನದಿಗಳ ರಕ್ಷಣೆಗಾಗಿ ವೆಬ್‌ಸೈಟ್‌ಗಳನ್ನು ಆರಂಭಿಸಬೇಕು. ಮತ್ತೆ ಪರಿಸರ ನೈತಿಕತೆಯನ್ನು ಶಾಲೆ ಕಾಲೇಜುಗಳ ಪಠ್ಯಗಳಲ್ಲಿ ಸೇರಿಸಬೇಕು.

## 10. ವಿವಾದಗಳು

- ಪರಮಾಣು ಸ್ಥಾವರಗಳಿಗಾಗಿ ಭಾರತ ಅಮೇರಿಕದಿಂದ ಯುರೇನಿಯಂ ಖರೀದಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಗಂಗಾನದಿಯ ಪ್ರದೇಶದಲ್ಲಿ ಹೈಡೆಲ್ ಪವರ ಪ್ರಾಜೆಕ್ಟಗಳ ಸ್ಥಾಪನೆಗೆ ವಿರೋಧ ಮಾಡಲಾಗುತ್ತಿದೆ ಎಂದು ಅಂಥ ಪ್ರಾಜೆಕ್ಟ್‌ಗಳನ್ನು ಬೆಂಬಲಿಸುತ್ತಿರುವವರು ಆಪಾದಿಸಿದ್ದಾರೆ.
- ಪ್ರತಿಭಟನೆ ನಡೆಸುತ್ತಿರುವ ಸಾಧುಗಳ ಮತ್ತು ಕಾಂಗ್ರೆಸ್ ಪಕ್ಷದ ನಡುವೆ ವಿವಾದಗಳು ಹುಟ್ಟಿಕೊಂಡಿವೆ. ಕಾಂಗ್ರೆಸ್‌ನ ಹಿರಿಯ ಮುಖಂಡರು ಶಾರದಾ ಜ್ಯೋತಿಷ್ಯದ ಶಂಕರಾಚಾರ್ಯ ಮತ್ತು ದ್ವಾರಕಾ ಪೀಠದ ಸ್ವರೂಪಾನಂದ ಸರಸ್ವತಿಯವರೊಂದಿಗೆ ಇದ್ದಾರೆ.



downloaded from: www.kpscvaani.com

## 11. ಆಚಾರ್ಯ ಜಿತೇಂದ್ರ

ಇವರು ಗಂಗಾ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. 2000ದಿಂದ ಗಂಗಾನದಿಗಾಗಿ ಹೋರಾಡುತ್ತಿದ್ದಾರೆ. ಖ್ಯಾತ ಸಾಮಾಜಿಕ ಕಾರ್ಯಕರ್ತ (ಪರಿಸರವಾದಿ)ರಾಗಿದ್ದಾರೆ. ಎಲ್.ಕೆ. ಅಡ್ವಾನಿಯವರಿಗೆ ಗಂಗಾ ಸಂರಕ್ಷಣೆಯನ್ನು ಮನಗಾಣಿಸಿದವರು ಇವರೇ. ಉತ್ತರಾಖಂಡದಲ್ಲಿ ಆಣೆಕಟ್ಟುಗಳ ನಿರ್ಮಾಣ ಕೈಬಿಡಲು ಮುಖ್ಯಮಂತ್ರಿ ಬಿ.ಪಿ. ಖಂಡೋರಿ ಅವರನ್ನು ಒತ್ತಾಯಿಸಿದವರೂ ಇವರೇ. 2010ರಲ್ಲಿ ಲೊಹಾರಿನಾಗ ಪಾಲಾ ಹೈಡೆಲ್ ಪ್ರಾಜೆಕ್ಟ್ ನಿರ್ಮಾಣ ನಿಲ್ಲಿಸಲು ಅಗರ್‌ವಾಲ್ ಅವರೊಂದಿಗೆ ಉಪವಾಸ ಮುಷ್ಕರ ಕೈಗೊಂಡಿದ್ದರು. ರಾಮದೇವ ಮತ್ತು ಆಚಾರ್ಯ ಜಿತೇಂದ್ರ ಅವರೊಂದಿಗೆ ಗಂಗಾ ಉಳಿಸಿ ಚಳವಳಿಯಲ್ಲಿ ಭಾಗವಹಿಸಿದ್ದಾರೆ ಎಂದು ಕೆ.ಎನ್. ಗೋವಿಂದಾಚಾರ್ಯ ಹೇಳಿದ್ದಾರೆ. ಚಳುವಳಿಗೆ ಬೆಂಬಲ ನೀಡಲು ಆಚಾರ್ಯರು ಅನೇಕ ರಾಜಕೀಯ ಮುಖಂಡರ ಮನವೊಲಿಸಿದ್ದಾರೆ.

## 12. ನಿಗಮಾನಂದ

ಸ್ವಾಮಿ ನಿಗಮಾನಂದ ಸರಸ್ವತಿ ಅವರು ಹರಿದ್ವಾರದಲ್ಲಿ ನಡೆಯುತ್ತಿರುವ ಕಾಯ್ದೆ ಬಾಹಿರ ಗಣಿಗಾರಿಕೆಯ ವಿರುದ್ಧ 2011ರಲ್ಲಿ ಪ್ರತಿಭಟನೆ ನಡೆಸಿದರು. 2011ರಲ್ಲಿ ಉಪವಾಸ ಸತ್ಯಾಗ್ರಹ ಕುಳಿತಿರುವಾಗ ಮರಣ ಹೊಂದಿದರು. ಅವರ ಆಶ್ರಮದ ಸ್ವಾಮಿ ಶಿವಾನಂದ ಅವರು ಉಪವಾಸ ಸತ್ಯಾಗ್ರಹವನ್ನು ಮುಂದುವರಿಸಿದರು. ಉತ್ತರಾಖಂಡ ಸರಕಾರ ಕಾಯ್ದೆಬಾಹಿರ ಗಣಿಗಾರಿಕೆಯನ್ನು ನಿಷೇಧಿಸಿತು.

ಚಳವಳಿಯ ಉದ್ದೇಶ ಒಂದು ಕಡೆ ಸಾಮಾನ್ಯವಾಗಿ ಪವಿತ್ರ ಗಂಗಾನದಿ ಮತ್ತು ಹಿಮಾಲಯ ಪ್ರದೇಶದಲ್ಲಿ ಜೀವ ವೈವಿಧ್ಯ ರಕ್ಷಣೆಗೆ ಪರಿಸರ ಸ್ನೇಹಿ. ಅಹಿಂಸಾತ್ಮಕ ಸಾಂಸ್ಕೃತಿಕ ಹೋರಾಟ ಮತ್ತು ಇನ್ನೊಂದು ಕಡೆ ಗಂಗಾ ನದಿಯನ್ನು ಸಾಂಕೇತಿಸುವ ಎಲ್ಲ ನದಿಗಳ ಮಾಲಿನ್ಯ ತಡೆಗೆ ಹೋರಾಟವಾಗಿದೆ ಎಂದು ಗಂಗಾ ಉಳಿಸಿ ಚಳವಳಿಯ ರಮಾ ರೌತ್ ಹೇಳುತ್ತಾರೆ.



downloaded from: www.kpscvaani.com

## ಕರ್ನಾಟಕದ ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಲೋಕಾಯುಕ್ತರ ಪಾತ್ರ

ಭ್ರಷ್ಟಾಚಾರವನ್ನು ಬುಡಸಹಿತ ಕಿತ್ತೊಗೆಯುತ್ತೇವೆ ಎಂದು ಅಧಿಕಾರದ ಚುಕ್ಕಾಣಿ ಹಿಡಿದ ರಾಜಕಾರಣಿಗಳು ಆಗಾಗ ಘರ್ಜಿಸುವುದನ್ನು ನಾವು ಕೇಳಿದ್ದೇವೆ. ಸರ್ಕಾರಿ ಕಚೇರಿಗೆ 10 ಸಲ ಹೋಗಿ ಅಲೆಯುವ ಬದಲು 200–300 ರೂ.ಗಳ ಲಂಚಕೊಟ್ಟು ಒಂದೇ ದಿನದಲ್ಲಿ ಕೆಲಸ ಮಾಡಿಕೊಂಡು ಹೊರಬರುವುದೇ ಮೇಲು ಎಂದು ಆಲೋಚಿಸುವುದನ್ನು ನೋಡಿದ್ದೇವೆ. ಇಂತಹ ಜನ ಸಮೂಹಕ್ಕೆ 'ಲೋಕಾಯುಕ್ತ' ಒಬ್ಬ ಗುರುವಾಗಿ, ನಿರ್ದೇಶಕನಾಗಿ ನಿಲ್ಲುವ ಆದರ್ಶಪುರುಷ, ಬರ್ತ್‌ಸರ್ಟಿಫಿಕೇಟ್‌ನಿಂದ ಡೆತ್ ಸರ್ಟಿಫಿಕೇಟ್‌ವರೆಗೂ ಮೈ ಚಾಚಿಕೊಂಡಿರುವ ಭ್ರಷ್ಟಾಚಾರವನ್ನು ಬಗ್ಗುಬಡಿಯುವ ಸಾಮರ್ಥ್ಯವಿರುವ ಇವರಿಗೆ, ಈ ಭ್ರಷ್ಟಾಚಾರವನ್ನು ನಿಯಂತ್ರಿಸುವುದಕ್ಕೆ ಸಾಧ್ಯವಿಲ್ಲ ಎಂದು ಕೈ ಚೆಲ್ಲಿ ಕೂರುವ ಜನರ ಕಂಗಳಲ್ಲಿ ಆಶಾವಾದದ ಕಿರಣಗಳನ್ನು ಮೂಡಿಸುವ ಶಕ್ತಿ ಹೊಂದಿರುವ ಆತ್ಮವಿಶ್ವಾಸಿ ಈತ ಪ್ರಸಿದ್ಧ ಇತಿಹಾಸಕಾರ, ತತ್ವಜ್ಞಾನಿ 'ಎಡ್ವರ್ಡ್‌ಗಿಬ್ಬನ್'ಗೆ "ಶ್ರೀಮಂತ ರೋಮ್ ಸಾಮ್ರಾಜ್ಯದ ಅಧಃಪತನಕ್ಕೆ ಕಾರಣವೇನು?" ಎಂದು ಕೇಳಿದಾಗ ಆತ ಒಂದೇ ಪದದಲ್ಲಿ 'ಭ್ರಷ್ಟಾಚಾರ' ಎಂದು ಉತ್ತರಿಸಿದ್ದನಂತೆ ಇಂತಹ ಸಾಮ್ರಾಜ್ಯಗಳನ್ನೇ ಮುಳುಗಿಸುವ ವಿಕೃತ ಪಕ್ಷಿಯ ರೆಕ್ಕೆಪುಕ್ಕಗಳನ್ನು ಕತ್ತರಿಸಿ ನಿಸ್ತೇಜ ಮಾಡುವ ಹೊಣೆಗಾರಿಕೆ ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ಲಾಭಕೋರ ವ್ಯಾಪಾರಿಗಳು, ನಮ್ಮ ನಿಮ್ಮಂತಹ ಜನ ಸಾಮಾನ್ಯರ ಮೇಲಿದ್ದರೂ ಕತ್ತಲ ಕಾಳಗರ್ಭದಲ್ಲಿ ಅಡಗಿ ಗೋಮುಖವ್ಯಾಘ್ರನಂತೆ ವೇಷಮರೆಸಿ ಕುಳಿತಿರುವ ಆ ಕ್ರೂರಪಕ್ಷಿಯನ್ನು ಬೆಳಕಿಡಿದು ತೋರಿಸುವ, ದಂಡಿಸುವ ಕಾರ್ಯದಲ್ಲಿ ಲೋಕಾಯುಕ್ತರ ಪಾತ್ರ ನಿಜಕ್ಕೂ ಅವರ್ಣನೀಯ.

'ವರ್ಲ್ಡ್ ಎಕನಾಮಿಕ್ ಫೋರಮ್' ಪ್ರಕಟಿಸಿರುವ 49 ಭ್ರಷ್ಟ ರಾಷ್ಟ್ರಗಳ ಹೆಸರಿನಲ್ಲಿ ಭಾರತಕ್ಕೆ 4ನೆಯ ಸ್ಥಾನ ದೊರೆತಿದ್ದರೆ, ಕರ್ನಾಟಕಕ್ಕೆ ಪ್ರಥಮಸ್ಥಾನವಿದೆ ಎಂಬುದು ನಿಜಕ್ಕೂ ವಿಷಾದಕರ, ಇಂತಹ ಸಂದರ್ಭದಲ್ಲಿ ಜನರ ಸಂಪೂರ್ಣ ಬೆಂಬಲ, ಸಹಕಾರದಿಂದ ಭ್ರಷ್ಟ ಅಧಿಕಾರಿಗಳ ಕೆಟ್ಟ ಲಂಚ ದಾಹವನ್ನು ಕಿತ್ತೊಗೆಯಲು ಮುಂದಾದ ಮಾಜಿ ಲೋಕಾಯುಕ್ತ ವೆಂಕಟಾಚಲರವರ ಪ್ರಯತ್ನ ಮತ್ತು ಹೋರಾಟ ನಮ್ಮೆಲ್ಲರ ಹೃದಯಗಳಿಗೆ ಅಲ್ಪಮಟ್ಟದ ಸಾಂತ್ವನವನ್ನಾದರೂ ತೋರಿದೆ ಎನ್ನುವಾಗ ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಲೋಕಾಯುಕ್ತರ ಪಾತ್ರದ ಮಹತ್ವ ಅಷ್ಟೇ ಅಭೂತಪೂರ್ವವೆನಿಸುತ್ತದೆ.



downloaded from: www.kpscvaani.com

## ಲೋಕಾಯುಕ್ತರ ಕಾರ್ಯವ್ಯಾಪಿ ಮತ್ತು ಅವರ ಪಾತ್ರ

ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಅಂದರೆ 1983ರಲ್ಲಿ ಲೋಕಾಯುಕ್ತ ಸಂಸ್ಥೆಯ ಸ್ಥಾಪನೆಯಾಯಿತು. 1984ರಲ್ಲಿ 'ಕರ್ನಾಟಕ ಲೋಕಾಯುಕ್ತ ಕಾಯಿದೆ'ಯನ್ನು ಲೋಕಾಯುಕ್ತರ ಶಕ್ತಿಯನ್ನು ಇಮ್ಮಡಿಗೊಳಿಸಲು ಹೊರಡಿಸಲಾಯಿತು. ಇದು ಭ್ರಷ್ಟಾಚಾರ, ಅನೀತಿಯುತ ಆಡಳಿತ, ಪಕ್ಷಪಾತ ಧೋರಣೆಗಳಿಂದ ಹತ್ತಿಕ್ಕುವುದರಿಂದ ಹಿಡಿದು ಮುಖ್ಯಮಂತ್ರಿಯವರ ಕಚೇರಿಯವರೆಗೂ ಪ್ರವೇಶಿಸುವ ಹಕ್ಕು ಮತ್ತು ಅಧಿಕಾರವನ್ನು ಕರ್ನಾಟಕದಲ್ಲಿ ಲೋಕಾಯುಕ್ತರಿಗೆ ನೀಡಿದೆ.

### 1. ಆಡಳಿತ ಸುಧಾರಣಾ ಮಂಡಳಿ :

1968ರಲ್ಲಿ ಮೊರಾರ್ಜಿ ದೇಸಾಯಿಯವರ ನೇತೃತ್ವದಲ್ಲಿ ಕೇಂದ್ರದಲ್ಲಿ 'ಲೋಕಾಪಾಲ್' ಹಾಗೂ ರಾಜ್ಯಗಳಲ್ಲಿ 'ಲೋಕಾಯುಕ್ತ'ರನ್ನು ನೇಮಿಸಬೇಕೆಂದೂ 'ಲೋಕಪಾಲರ ನೇಮಕಕ್ಕೆ ಹಲವಾರು ಮಸೂದೆಗಳನ್ನು ಶಿಫಾರಸ್ಸು ಮಾಡಿತಾದರೂ ಅದರಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಕಾಲಾಂತರದಲ್ಲಿ ರಾಜ್ಯಗಳಲ್ಲಿ ಲೋಕಾಯುಕ್ತರನ್ನು ನೇಮಿಸುವ ಪ್ರಕ್ರಿಯೆಯಲ್ಲಿ ಯಶಸ್ವಿಯಾಯಿತು. ಲೋಕಾಯುಕ್ತರು ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ, ಕಾನೂನು ಇವರಿಗೆ ಎಷ್ಟು ಸಹಕರಿಸುತ್ತದೆ ಎಂಬುದನ್ನೂ ನಾವು ಗಮನಿಸಬೇಕಾಗುತ್ತದೆ.

- ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರನ್ನೊಳಗೊಂಡ ಸಮಿತಿ ಯಾವುದೇ ಸರ್ಕಾರೀ ನೌಕರನ ವಿರುದ್ಧ ಭ್ರಷ್ಟಾಚಾರದ ಆರೋಪಗಳಿದ್ದಲ್ಲಿ ಆತನನ್ನು ತನಿಖೆಗೆ ಒಳಪಡಿಸಬಹುದು.
- ಲೋಕಾಯುಕ್ತರು ಒಬ್ಬ ಸಾಮಾನ್ಯ ಗುಮಾಸ್ತನಿಂದ ಹಿಡಿದು ಮುಖ್ಯಮಂತ್ರಿಯವರ ಕಚೇರಿಯವರೆಗೂ ತಪಾಸಣೆ ನಡೆಸಬಹುದು.
- ಸರ್ಚ್' ಮತ್ತು 'ಸೀಜರ್' ವಾರೆಂಟ್‌ಗಳನ್ನು ಹೊರಡಿಸುವ ಅಧಿಕಾರವೂ ಇವರಿಗಿರುತ್ತದೆ.
- ತನಿಖೆಯ ನಂತರ ಆರೋಪಿ ಅಪರಾಧಿಯೆಂದು ಸಾಬೀತಾದರೆ ಲೋಕಾಯುಕ್ತರು ಆ ನೌಕರನನ್ನು ವಜಾ ಮಾಡಲು ಸೂಚಿಸಬಹುದು, ಆದರೆ ಅದನ್ನು ತಾವೇ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ.



downloaded from: www.kpscvaani.com

- ‘ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಲೋಕಾಯುಕ್ತ ಶಿಫಾರಸ್ಸನ್ನು ಮೇಲಾಡಳಿತ ಸ್ವೀಕರಿಸಿದ್ದೇ ಆದರೆ ಆ ಅಪರಾಧಿ ತನ್ನ ವೃತ್ತಿಗೆ ರಾಜಿನಾಮೆ ನೀಡಬೇಕಾಗುತ್ತದೆ.
- ಲೋಕಾಯುಕ್ತರಿಗೆ ಪೋಲಿಸರನ್ನು ಆರೋಪಿಯ ಮನೆ ಶೋಧಿಸುವ ಕಾರ್ಯಕ್ಕೆ ಆಜ್ಞೆ ಹೊರಡಿಸುವ ಅಧಿಕಾರವೂ ಉಂಟು.
- ಕರ್ನಾಟಕದಲ್ಲಿ ಪ್ರತಿಯೊಬ್ಬ ಸರ್ಕಾರೀ ನೌಕರನೂ ತನ್ನ ಆಸ್ತಿಪತ್ರಗಳ ವಿವರಣೆಯನ್ನು ಪ್ರತಿವರ್ಷವೂ ನೀಡಿ ಸರಿಯಾಗಿ ತೆರಿಗೆ ನೀಡಲೇಬೇಕು.
- ಯಾವುದೇ ಕಂಪ್ಲೇಂಟ್ ಇಲ್ಲದೆ ಎಲ್ಲಿಗೂ ದಾಳಿ ಮಾಡುವ ವಿಶೇಷ ಅಧಿಕಾರ ಲೋಕಾಯುಕ್ತರಿಗಿದೆ.
- ಲೋಕಾಯುಕ್ತರಿಗೆ ದೂರುನೀಡಿದ ವ್ಯಕ್ತಿಗೆ ಪೋಲಿಸರಿಂದಲೂ ರಕ್ಷಣೆಯಿದೆ ಹಾಗೆಯೇ ‘ವಿಸಲ್ ಬ್ಲೋಯರ್ ಪ್ರೊಟೆಕ್ಷನ್ ಆಕ್ಟ್’ ಇದ್ದು ಇದು ದೂರು ನೀಡಿದ ವ್ಯಕ್ತಿಗಳಿಗೆ ಸಂಪೂರ್ಣ ರಕ್ಷಣೆಯನ್ನು ನೀಡುತ್ತದೆ.

ಈ ಚೌಕಟ್ಟಿನಲ್ಲಿ ಲೋಕಾಯುಕ್ತ ಕಾರ್ಯೋನ್ಮುಖರಾಗಬೇಕಿರುವುದರಿಂದ ಅವರ ಪಾತ್ರ ಕೆಲವು ಬಾರಿ ಪರಿಣಾಮಕಾರಿ ಅಲ್ಲದಿರಲೂಬಹುದು. ಆದರೂ ಮಾಜಿ ಲೋಕಾಯುಕ್ತ ವೆಂಕಟಾಚಲರವರು ಪ್ರಥಮಬಾರಿಗೆ ‘ವಿಚಕ್ಷಣ ದಳದ ನಿರ್ದೇಶಕರ’ನ್ನು ನೇಮಿಸಿದರು ಆರೋಗ್ಯ, ಶಿಕ್ಷಣ, ಸಾಮಾಜಿಕ ಕ್ಷೇಮಾಭಿವೃದ್ಧಿಯ ಬಗ್ಗೆ ಡಾ. ಎಚ್.ಸುದರ್ಶನ್‌ರವರನ್ನು ‘ವಿಜಿಲೆನ್ಸ್ ಡೈರೆಕ್ಟರ್’ ಆಗಿ ನೇಮಿಸಲಾಯಿತು. ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿಯನ್ನು ಗಮನಿಸಲು ಕೆ.ವಿ. ವಾಸುದೇವ ಮೂರ್ತಿಯವರನ್ನು ಹಾಗೆಯೇ ‘ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ’ದ ವಿಜಿಲೆನ್ಸ್ ಡೈರೆಕ್ಟರ್’ ಆಗಿ ಎನ್. ವೀರಭದ್ರಯ್ಯನವರನ್ನು ನೇಮಿಸಲಾಗಿದೆ. ಇದು ಲೋಕಾಯುಕ್ತರ ಕಾರ್ಯದಕ್ಷತೆಯನ್ನು ಇಮ್ಮಡಿಗೊಳಿಸಲು ಅನುವಾಯಿತು.

### 2. ಲೋಕಾಯುಕ್ತರು ಜನಸಾಮಾನ್ಯರಲ್ಲಿ ಜಾಗೃತಿ ಮಾಡಿಸುವ ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

ದೂರು ನೀಡಿದವರ ಬಳಿ ಸಮಾಧಾನವಾಗಿ ಮಾತನಾಡಿ ಹತಾಶೆ, ಅವಮಾನಗಳಿಂದ ಅವರನ್ನು ಹೊರತಂದು ಒಬ್ಬ ಯಶಸ್ವೀ ‘ಸಲಹೆಗಾರ’ ಕೂಡ ಆಗಬೇಕಿರುತ್ತದೆ. ಲೋಕಾಯುಕ್ತರ ಮನಸ್ಸು ವಿಶಾಲವಾಗಿಯೂ ಇರಬೇಕಾಗುತ್ತದೆ.



downloaded from: www.kpscvaani.com

ಇತ್ತೀಚೆಗಷ್ಟೇ ಇಂದಿನ ಲೋಕಾಯುಕ್ತರಾದ ಶ್ರೀ ಸಂತೋಷ ಹೆಗಡೆ'ಯವರು ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಹಿರಿಯ ಶಿಕ್ಷಣ ತಜ್ಞರಿಂದ ಸಲಹೆಗಳನ್ನು ಸ್ವೀಕರಿಸಿದ್ದಾಗಿಯೂ ಮತ್ತು ಭ್ರಷ್ಟಾಚಾರ ನಿರ್ಮೂಲನೆ ಕಾಯ್ದೆಯ ಅಡಿಯಲ್ಲಿ ರಾಜ್ಯಸರ್ಕಾರವು ಲೋಕಾಯುಕ್ತರ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಹೇಳಿದ್ದಾರೆ. ಆದರೆ, ಕರ್ನಾಟಕ ಲೋಕಾಯುಕ್ತ ಕಾಯ್ದೆಯಲ್ಲಿ ಕೆಲವು ಲೋಪದೋಷಗಳಿವೆ ಎಂಬುದನ್ನು ನಾವು ತಳ್ಳಿ ಹಾಕುವಂತಿಲ್ಲ.

- ಲೋಕಾಯುಕ್ತ ಇಲಾಖೆಗೆ ಭ್ರಷ್ಟ ಅಧಿಕಾರಿಗಳನ್ನು ಶಿಕ್ಷಿಸುವ ಅಧಿಕಾರ ನೀಡಬೇಕು. ಭ್ರಷ್ಟ ಅಧಿಕಾರಿಗಳಿಗೆ ರಾಜಕಾರಣಿಗಳ ಸಂಪೂರ್ಣ ರಕ್ಷಣೆಯಿರುವುದರಿಂದ ನಾಗರೀಕರ ಮೇಲೆ ಲಂಚದ ಹೊಡೆತ ಬೀಳುವುದು ನಿರಂತರವಾಗಿ ಸಾಗಿದೆ. ಕಾರ್ಯಾಂಗದಲ್ಲಿ ರಾಜಕಾರಣಿಗಳ ಹಸ್ತಕ್ಷೇಪವನ್ನು ಸಂಪೂರ್ಣವಾಗಿ ತಡೆಗಟ್ಟಬೇಕು, ಹಿಂದಿನ ಲೋಕಾಯುಕ್ತರು ಆಸ್ಪತ್ರೆ, ನಗರಪಾಲಿಕೆ, ಕಂದಾಯ, ಶಿಕ್ಷಣ, ಆರ್‌ಟಿಓ ಇತ್ಯಾದಿ ಇಲಾಖೆಗಳಿಂದ ಭ್ರಷ್ಟ ಅಧಿಕಾರಿಗಳನ್ನು ಪತ್ತೆಹಚ್ಚಿ ಅವರಿಗೆ ಛಿಮಾರಿ ಹಾಕಿದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ, ಕ್ರೈಂ ಡೈರಿ, ಕ್ರೈಂ ಸ್ಟೋರಿಗಳಲ್ಲಿ ನೋಡಿದ್ದೇವೆ. ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದು ಕಕ್ಕಾಬಿಕ್ಕಿಯಾಗಿ "ಇನ್ನುಮುಂದೆ ಹೀಗೆ ಮಾಡುವುದಿಲ್ಲ ಈಗ ಕ್ಷಮಿಸಿ ಬಿಡಿ" ಎಂದು ಅಂಗಲಾಚಿ ಬೇಡಿದ್ದನ್ನು ನಾವು ನೋಡಿದ್ದೇವೆ ಆದರೆ ಪರಿಣಾಮವೇನಾಯಿತು? ಇಂತಹ ಕಾರ್ಯಾಚರಣೆಗಳಿಂದ ದೊರೆತ ಫಲವಾದರೂ ಏನು? ನೀವೇ ಚಿಂತಿಸಿ.
- ರಾಜಕಾರಣಿಗಳನ್ನು ಶಿಕ್ಷಿಸುವ ಅಧಿಕಾರವನ್ನು ಕೇಳಿದ್ದಕ್ಕೆ ನ್ಯಾ. ವೆಂಕಟಾಚಲರವರಿಗೆ ಮತ್ತೊಮ್ಮೆ ಲೋಕಾಯುಕ್ತರಾಗುವ ಅವಕಾಶವೇ ಹೋಯಿತು. ಕೇವಲ 5000–1000 ರೂ.ಗಳ ಲಂಚ ಪಡೆಯುವ ವ್ಯಕ್ತಿಗಳನ್ನು ಮಾಧ್ಯಮಗಳಲ್ಲಿ ವಿಜೃಂಭಿಸಲಾಗುತ್ತದೆ. ಆದರೆ, ಅದೇ ಕೋಟ್ಯಾಂತರ ರೂ.ಗಳನ್ನು ಕೊಳ್ಳೆ ಹೊಡೆದು, ತಮ್ಮ ಓಟ್‌ಬ್ಯಾಂಕನ್ನು ತುಂಬಿಸಿಕೊಳ್ಳಲು ಪ್ರಾಮಾಣಿಕರನ್ನೂ ಅಪ್ರಾಮಾಣಿಕರನ್ನಾಗಿ ಮಾಡಿ ಅನ್ಯಾಯಕ್ಕೆ ಕುಮ್ಮಕ್ಕೂ ನೀಡುತ್ತಾ ಲೂಟಿ ಮಾಡಿದ ಹಣವನ್ನೆಲ್ಲಾ ದೂರದ ಸ್ವಿಸ್ ಬ್ಯಾಂಕಿನಲ್ಲಿಡುವ ರಾಜಕಾರಣಿಗಳೇ ನಿಜವಾದ ಭ್ರಷ್ಟರು ಇಂಥಹವರನ್ನೇ ತನಿಖೆಗೊಳಪಡಿಸುವ ಅಧಿಕಾರವಿಲ್ಲವೆಂದ ಮೇಲೆ ಲೋಕಾಯುಕ್ತರ ಪಾತ್ರ ಸೀಮಿತವಾಗುವುದಿಲ್ಲವೇ?



downloaded from: www.kpscvaani.com

- ನಮ್ಮ ದೇಶದ ಆಡಳಿತದಲ್ಲಿ ಪಾರದರ್ಶಕತೆಯಿಲ್ಲ ಮಾಹಿತಿ ಹಕ್ಕಿಗೆ ಧ್ವನಿಯಿಲ್ಲ, ಲೆಕ್ಕಪತ್ರ ವ್ಯವಹಾರಗಳಲ್ಲಿ ನೈಜತೆಯಿಲ್ಲದಿರುವುದೂ ಲೋಕಾಯುಕ್ತರ ಕಾರ್ಯಗಳಿಗೆ ಅಡ್ಡಲಾಗಿದೆ.
- ತನಿಖೆ ನಡೆದ ಮೇಲೆ ಬೆಂಬಲ, ಶಿಫಾರಸ್ಸುಗಳಿಂದ ಪ್ರಕರಣಗಳನ್ನು ಮುಚ್ಚಿ ಹಾಕಲಾಗುತ್ತದೆ, ಈ ರೀತಿ ಸಿಕ್ಕಿಬಿದ್ದ ಅಪರಾಧಿಗಳಿಗೆ ಎಂಥಹ ಶಿಕ್ಷೆ ನೀಡಬೇಕೆನ್ನುವ ಮಾಹಿತಿಯೂ ಇಲ್ಲ.
- ಲೋಕಾಯುಕ್ತರಿಗೆ ಸಂವಿಧಾನಾತ್ಮಕ ಹಾಗೂ ಆಡಳಿತಾತ್ಮಕ ಅಧಿಕಾರಗಳನ್ನು ನೀಡದಿದ್ದರೆ ಅವರ ಪಾತ್ರ ಸಂಕುಚಿತವಾಗುತ್ತದೆ.
- ಲೋಕಾಯುಕ್ತ ಪೋಲಿಸರೇ ತಮಗೆ ಸಿಕ್ಕಿದ ಮಾಹಿತಿಯ ಬಗ್ಗೆ ಗೋಪ್ಯತೆಯನ್ನು ಕಾಪಾಡದೇ ಭ್ರಷ್ಟ ಅಧಿಕಾರಿಗಳಿಗೆ ಹಿಂದಿನಿಂದ ಕುಮ್ಮಕ್ಕು ನೀಡಿ ಅಮಾನತ್ತಾದ ಅವರ ಹೆಸರಿನ ದೊಡ್ಡ ಪಟ್ಟಿಯೇ ಇದೆ.
- ಕರ್ನಾಟಕದಲ್ಲಿ ಲೋಕಾಯುಕ್ತರಿಗೆ ತಮ್ಮ ಅಧೀನ ಅಧಿಕಾರಿಗಳು ತಪ್ಪಿತಸ್ಥರಾದಾಗ ದಂಡಿಸುವ ಅಧಿಕಾರವಿಲ್ಲ.
- ಕರ್ನಾಟಕ ಲೋಕಾಯುಕ್ತರ ಕಾಯ್ದೆ 1984ರ ಅಡಿಯಲ್ಲಿ ಉಪಲೋಕಾಯುಕ್ತರಿಗೂ ಅವಕಾಶ ಕಲ್ಪಿಸಲಾಯಿತು. ಆದರೆ ಲೋಕಾಯುಕ್ತ, ಉಪಲೋಕಾಯುಕ್ತರ ನಡುವೆ ತಾಳತಪ್ಪಿ ಒಬ್ಬರ ಮೇಲೆ ಮತ್ತೊಬ್ಬರು ಆರೋಪ ಪ್ರತ್ಯಾರೋಪಗಳನ್ನು ಮಾಡುತ್ತಾ ತಮ್ಮ ಕರ್ತವ್ಯಗಳನ್ನು ಮರೆಯುವರಿಸಿದ್ದಾರೆ. ಈ ದೋಷಗಳನ್ನು ಸರಿಪಡಿಸದ ಹೊರತು ಲೋಕಾಯುಕ್ತ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಫಲ ನಿರೀಕ್ಷಿಸಲು ಸಾಧ್ಯವಿಲ್ಲ.
- ಊಟ ಮಾಡಲು ಅಳುವ ಮಗುವಿಗೆ ಚಂದಮಾಮನನ್ನು ತೋರಿಸುತ್ತಾ ಚಾಕ್‌ಲೇಟ್ ಆಮಿಷವೊಡ್ಡಿ ಪ್ರಾರಂಭವಾಗುವ ಈ ಲಂಚ ಮುಂದೆ ಆ ಮಗುವಿನ ಓದು, ಕೆಲಸ, ಮದುವೆಯವರೆಗೂ ಮುಂದುವರೆಯುತ್ತದೆ. ಮಕ್ಕಳು ಆಡುವಾಗ ನೀ ನನ್ನ ಮುಂದೆ ಸೋತರೆ ನಿನಗೆ 2 ಗೋಲಿಗಳನ್ನು ಕೊಡುತ್ತೇನೆ ಎಂದು 2 ಗೋಲಿಗಳಲ್ಲಿ ಪ್ರಾರಂಭವಾಗುವ ಲಂಚ ಮುಂದೆ ವಿಶ್ವ ವಿಖ್ಯಾತ ಕ್ರಿಕೆಟ್ ಕ್ರೀಡೆಯವರೆಗೂ ಮುಂದುವರೆಯುತ್ತದೆ. ಗೋವಿಗೆ ಹಾಕುವ ಮೇವಿನಿಂದ ಮಾನವ ಉಪಯೋಗಿಸುವ ಆಹಾರ ತೈಲಗಳವರೆಗೆ ಹಗರಣ ಬೆಳೆಯುತ್ತದೆ. ಮಗು ಹುಟ್ಟಿದಾಗ ಆಸ್ಪತ್ರೆಯಲ್ಲೇ ಪ್ರಾರಂಭವಾಗುವ ರುಷವತ್ತು ಮುಂದೆ ಶವದ ಪೆಟ್ಟಿಗೆಯವರೆಗೂ ತ್ರಿವಿಕ್ರಮನ ಹಾಗೆ ನಿಲ್ಲುತ್ತದೆ. ಇಂತಹ ಪಾರ್ಥೆನಿಯಂ ಭ್ರಷ್ಟಾಚಾರವನ್ನು ಹೊಡೆದೋಡಿಸುವ ಕರ್ತವ್ಯ



downloaded from: www.kpscvaani.com

ನಮ್ಮಂತಹ ಸಾಮಾನ್ಯರ ಸಹಕಾರ ಬೆಂಬಲದೊಂದಿಗೆ ಟೊಂಕಕಟ್ಟಿ ನಿಂತರೆ ಲೋಕಾಯುಕ್ತರ ಕಾರ್ಯಕ್ಷೇತ್ರ ಮಿಂಚಿನಂತೆ ಹಿಗ್ಗುತ್ತದೆ. ನವೆಂಬರ್ 6 ರಿಂದ 10ರವರೆಗೆ ಎಚ್ಚರದ 'ಜಾಗೃತಿವಾರ' ಆಚರಿಸುತ್ತಿರುವ ಈ ಸಂದರ್ಭದಲ್ಲಿ ಇನ್ನಾದರೂ ನಾವೆಲ್ಲರು ಪ್ರಾಮಾಣಿಕವಾಗಿ ಭ್ರಷ್ಟಾಚಾರದ ವಿರುದ್ಧ ಸಮರ ಸಾರಲು ಕಂಕಣಬದ್ಧರಾಗೋಣ.

**"ಪ್ರಾಮಾಣಿಕತೆ ಚಿರಾಯುವಾಗಲಿ, ಭ್ರಷ್ಟಾಚಾರ ಅಳಿಯಲಿ"**

## ಜಾಗತಿಕ ಹವಾಮಾನ ವೈಪರೀತ್ಯಗಳು

ಅಪಾಯದ ಅಂಚಿನಲ್ಲಿರುವ ಜಾಗತಿಕ ಹವಾಮಾನದಲ್ಲಿ ಹಿಂದೆಂದೂ ಕಾಣದಂತ ತೀವ್ರತೆಯೂ ಪರಾಕಾಷ್ಟೆಯನ್ನು ತಲುಪಿ ಜಾಗತಿಕ ತಾಪಮಾನ ಏರುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಿಶ್ವ ಸಂಸ್ಥೆಯು ಸಹ ಭೂಮಿಯ ತಾಪಮಾನ ಏರುತ್ತಿರುವುದನ್ನು ದೃಢಪಡಿಸಿದೆ. 2006ರಲ್ಲಿ ಭಾರತ ದೇಶದ ಥಾರ್ ಮರುಭೂಮಿಯ ಬಾಮರ್ಸ್‌ನಲ್ಲಿ ಪ್ರವಾಹ ಉಂಟಾಯಿತು. ಅಲ್ಲದೆ ಹಿಮಾಲಯದ ನೀರ್ಗಲ್ಲು ಕರಗುವ ಪ್ರಮಾಣ ಹೆಚ್ಚಾಗಿದೆ. ಅಲ್ಲದೆ ಚೀನ ಇನ್ನು 10 ವರ್ಷಗಳಲ್ಲಿ ಚೀನಾದ 31 ಮಿ.ಮೀ. ಭೂಮಿ ಸಮುದ್ರದಲ್ಲಿ ಮುಳುಗುವ ಸಂಭವವಿದೆ. ಹೈನಾನ್ ಕರಾವಳಿ ಅಲ್ಪ ಭಾಗ ಈಗಾಗಲೇ ಸಮುದ್ರದ ಪಾಲಾಗಿದೆ. ಬೀಜಿಂಗ್‌ನಲ್ಲಿ ಮೊದಲ ಬಾರಿಗೆ ಹಿಮಪಾತವಾಯಿತು. ಥಾಯ್ಲೆಂಡ್‌ನಲ್ಲಿ ಭಾರಿ ಬದಲಾವಣೆ ಭೀಕರ ಬರ 6 ತಿಂಗಳ ಬಳಿಕ ಭಾರಿ ಪ್ರವಾಹ. ಆಸ್ಟ್ರೇಲಿಯಾದ ಮರುಭೂಮಿಯಲ್ಲಿ ಭಾರಿ ಮಳೆ ಹಾಗೂ ಪ್ರವಾಹ. ಬ್ರಿಟನ್‌ನಲ್ಲಿ ಹೆಚ್ಚಿನ ಉಷ್ಣಾಂಶ ದಾಖಲಾಗಿದ್ದೂ ಕ್ರಿ.ಶ. 1659ರಲ್ಲಿ ಇದ್ದ ದಾಖಲೆ ಮುರಿದು ಬಿದ್ದಿದ್ದು. 2006ರಲ್ಲಿ ಯುರೋಪ್‌ನ ಹಿಮಚ್ಛಾದಿತ ಪ್ರದೇಶದಲ್ಲಿ ಹಿಮದ ಪ್ರಮಾಣ ಈಗ ಕಡಿಮೆಯಾಗಿದೆ. ಚಳಿಗಾಲದಲ್ಲಿ ಹಿಮಬೆಟ್ಟಗಳ ಮೇಲೆ ಹೂಗಳು ಬೆಳೆದಿವೆ. ನ್ಯೂಯಾರ್ಕ್‌ನ ಚಳಿಗಾಲದ ಉಷ್ಣಾಂಶ 3 ಡಿಗ್ರಿ ಸೆಲ್ಸಿಯಸ್ ಆದರೆ 2006ರ ಜನವರಿಯಲ್ಲಿ ದಾಖಲಾದದ್ದು, 18 ಡಿಗ್ರಿ ಸೆಲ್ಸಿಯಸ್, ವೆನಿಜುವೆಲ್ಲಾ 1972ರಲ್ಲಿ ಇದ್ದ 6 ನೀರ್ಗಲ್ಲುಗಳ ಪೈಕಿ ಈಗ ಉಳಿದಿರುವುದು ಕೇವಲ 2 ಮಾತ್ರ. ಇನ್ನು 10 ವರ್ಷಗಳ ಒಳಗೆ ತಾಪಮಾನದಿಂದಾಗಿ ಕರಗಬಹುದು. ಆಸ್ಟ್ರಿಯಾ 1300 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಅಧಿಕ ತಾಪಮಾನ ದಾಖಲಾಗಿತ್ತು. ಮಳೆಯನ್ನೇ ಕಾಣದ ವಿಶ್ವದ ಅತಿ ದೊಡ್ಡ ಮರುಭೂಮಿ ಸಹರಾದಲ್ಲಿ ಕಳೆದ ಫೆಬ್ರವರಿಯಲ್ಲಿ ಭಾರಿ ಮಳೆ ಶೇ. 70% ಆಹಾರ ಉತ್ಪಾದನೆ ನಾಶ. 6 ಲಕ್ಷ ಜನ ನಿರಾಶ್ರಿತರು.



downloaded from: www.kpscvaani.com

ಕರ್ನಾಟಕ ರಾಜಧಾನಿ ಬೆಂಗಳೂರು ಸಹ ಇದರಿಂದ ಹೊರತಾಗಿಲ್ಲ. ಹಿಂದಿನ ಹಿಂಗಾರು ಮಳೆ ವೈಪರೀತ್ಯದಿಂದಾಗಿ ಬೆಂಗಳೂರು ಮತ್ತು ಆಸುಪಾಸಿನ ಗ್ರಾಮಾಂತರ ಪ್ರದೇಶಗಳೂ ಸಹ ಈ ಸಾಲಿನ ಬೇಸಿಗೆಯ ಮಾರ್ಚ್ ಉಷ್ಣಾಂಶ 37–38 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಾಗಬಹುದೆಂದು ಹವಾಮಾನದ ಇಲಾಖೆ ಮುನ್ಸೂಚನೆ ನೀಡಿದೆ.

ಗ್ಲೋಬಲ್ ವಾರ್ಮಿಂಗ್ (ಭೂಮಿ ಬಿಸಿ ಏರುವುದು) ಎಂಬ ಅಂಶ 19ನೇ ಶತಮಾನದಲ್ಲೇ ಬೆಳಕಿಗೆ ಬಂದಿದೆ. “ವಾತಾವರಣದಲ್ಲಿ ಉಷ್ಣಾಂಶಕ್ಕೆ ಹಾಗೂ ಮನುಷ್ಯನ ಜೀವನ ಕ್ರಮಕ್ಕೆ ಸಂಬಂಧವಿದೆ” ಎಂಬ ನಿಗೂಢ ವಿಷಯವನ್ನು ಮೊಟ್ಟ ಮೊದಲ ಬಾರಿಗೆ ಹೊರಗೆಡಹಿದವರು ಸ್ವೀಡನ್‌ನ ಸ್ವಾಂಟೆ ಅರೇನಿಯಸ್– ಎಂಬ ವಿಜ್ಞಾನಿ ಆಗಲೇ ನಮ್ಮ ಕೈಗಾರಿಕೆಗಳು ಬಿಡುಗಡೆಗೊಳಿಸುವ ಕಾರ್ಬನ್ ಡೈ ಆಕ್ಸೈಡ್ ವಾತಾವರಣ ಒಟ್ಟಾರೆ ನಮ್ಮ ಗ್ರಹ ಬಿಸಿಯೇರಲು ಕನಿಷ್ಠ 3 ಸಾವಿರ ವರ್ಷಗಳು ಬೇಕಾಗುತ್ತದೆಂದು ಆಗಲೇ ಹೇಳಿದ್ದರು. ಭೂಮಿಯಲ್ಲಿ ಜೀವರಾಶಿಗಳ ಬದುಕಿಗೆ ಹವಾಮಾನ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ವಾತಾವರಣದ ಉಷ್ಣಾಂಶ ಮಳೆ–ಮಾರುತಗಳು ಮಾನವರ ವಿಷಯದಲ್ಲಿ ನೇರ ಪ್ರಭಾವವನ್ನು ಬೀರದಿರಬಹುದು. ಆದರೆ ವೃಕ್ಷ ಸಂಪತ್ತು, ಬೆಳೆಗಳು ಹಾಗೂ ಪ್ರಾಣಿಗಳ ಮೇಲೆ ಅವು ಸಾಕಷ್ಟು ಪ್ರಭಾವ ಬೀರುತ್ತವೆ. ಬರ, ಚಂಡಮಾರುತ, ಪ್ರವಾಹ, ಸುನಾಮಿಯಂತಹ ಭೀಕರ ಪ್ರಕೃತಿ ವಿಕೋಪಗಳು, ಸಂಭವಿಸಿದಾಗ ಮಾತ್ರ ಮನುಷ್ಯರಿಗೆ ವಾತಾವರಣದ ಹವಾಮಾನದ ವೈಪರೀತ್ಯಗಳ ಬಗ್ಗೆ ಅರಿವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತದಿಂದ ಅಮೇರಿಕದವರೆಗೆ ಈ ಬಗೆಯ ಕೆಲವು ಪ್ರಕೃತಿ ವಿಕೋಪಗಳು ಅನುಭವವಾಗಿವೆ.

ಗ್ರೀನ್ ಹೌಸ್ ಅನಿಲಗಳೂ ಮಿತಿಮೀರುವುದರಿಂದ ಉದ್ಭವಿಸುವ ಈ ವೈಪರೀತ್ಯ ಪರಿಣಾಮಗಳೇ ವಿಜ್ಞಾನಿಗಳನ್ನು ಆತಂಕಕ್ಕೊಳಪಡಿಸುತ್ತಿವೆ. ಸೂರ್ಯನ ಉಷ್ಣ ಶಕ್ತಿ ಭೂಮಿಯನ್ನು ತಾಕಿದಾಗ ಅದರ ಬಹುತೇಕ ಭಾಗ ಅಂತರಿಕ್ಷದೊಳಕ್ಕೆ ಹಿಂತಿರುಗಿ ಹೋಗಿ ಬಿಡುತ್ತದೆ. ಭೂಮಿಗೆ ಅಂಟಿಕೊಂಡೇ ಇರುವ ವಾತಾವರಣದ ವಾಯು ಪೊರೆ ಸ್ವಲ್ಪ ಸೌರ ಉಷ್ಣವನ್ನು ತನ್ನೊಳಕ್ಕೆ ಸೆಳೆದುಕೊಳ್ಳುವುದರಿಂದ ಆ ಅಲ್ಪ ಪ್ರಮಾಣದ ಉಷ್ಣ ಶಕ್ತಿಯೇ ಭೂಮಿಯನ್ನು ಬಿಸಿಯಾಗಿಸುತ್ತದೆ. ವಾತಾವರಣವು ಟ್ರೋಪೋಸ್ಫಿಯರ್, ಸ್ಟ್ರಾಟೋಸ್ಫಿಯರ್, ಮೆಸೋಸ್ಫಿಯರ್, ಥರ್ಮೋಸ್ಫಿಯರ್ ಹಾಗೂ ಎಕ್ಸೋಸ್ಫಿಯರ್‌ಗಳಾಗಿ ಒಟ್ಟು 5 ಪದರಗಳಾಗಿ ಒಟ್ಟುಗೂಡಿ ಜೀವ ಸಂಕುಲಕ್ಕೆ ಪ್ರಾಣಾಂತಿಕವಾದ ಸೂರ್ಯನ ನೇರಳಾತೀತ ಕಿರಣಗಳು ಅಂತರಿಕ್ಷದಲ್ಲಿನ ಇತರೆ ತೊಂದರೆಗಳಿಂದ ತಪ್ಪಿಸಲು ಇವು ಸಹಾಯಕವಾಗಿ ನಿಲ್ಲುತ್ತವೆ.



downloaded from: www.kpscvaani.com

ವಾತಾವರಣದಲ್ಲಿನ ಗ್ರೀನ್‌ಹೌಸ್ ಅನಿಲಗಳೇ ಒಂದು ರೀತಿಯಲ್ಲಿ ಭೂಮಿಗೆ ರಕ್ಷಾ ಕವಚಗಳಾಗಿವೆ.

ಮನುಷ್ಯನಿಗೆ ಆಮ್ಲಜನಕ ಹೇಗೆ ಮುಖ್ಯವೋ ಸಸ್ಯಗಳಿಗೆ ಇಂಗಾಲದ ಡೈ ಆಕ್ಸೈಡ್ ಅಷ್ಟೆ ಮುಖ್ಯ. ಸಿಲಾಜ ಇಂಧನಗಳನ್ನು ಉರಿಸುವುದರ ಮೂಲಕ ಉತ್ಪನ್ನವಾಗುವ ಈ ವಾಯು ವಾತಾವರಣದಲ್ಲಿ ಬಾರಿ ಪ್ರಮಾಣದಲ್ಲಿ ಆವರಿಸುತ್ತದೆ. ಈ ರೀತಿಯಾಗಿ ಹೆಚ್ಚಿನ ಪ್ರಮಾಣದಲ್ಲಿ ತುಂಬಿಕೊಂಡಿರುವ ಆಮ್ಲ ಜೀವ ಸಂಕುಲಕ್ಕೆ ಮಾರಕವಾಗಿ ಪರಿಣಮಿಸುತ್ತದೆ. ಇದು ಸುಮಾರು 200 ವರ್ಷಗಳ ಕಾಲ ನೆಲೆಗೊಂಡಿರುತ್ತದೆ ಎಂಬುದು ವಿಜ್ಞಾನಿಗಳ ವಿಶ್ಲೇಷಣೆಯಾಗಿದೆ. ಆದ್ದರಿಂದ ಇತ್ತೀಚೆಗೆ ಗ್ರೀನ್ ಹೌಸ್ ಗ್ಯಾಸಸ್ ಕಡಿತಕ್ಕಾಗಿ ಕೈಗಾರಿಕೆಗಳ ಮೇಲೆ ಗ್ಲೋಬಲ್ ವಾರ್ಮಿಂಗ್ 6 ಡಿಗ್ರಿ ಸೆಲ್ಸಿಯಸ್ ಡಾ. ಮೀರಜ್ ಪಾಟೀಲ ಅಪಾಯ 2050ಗೆ ಈ ಕಾಯ್ದೆಯಡಿ ಲಂಡನ್‌ನಲ್ಲಿ ಹಸಿರು ತೆರಿಗೆ ಜಾರಿಗೊಳಿಸಿದಂತೆ ನಮ್ಮ ದೇಶದಲ್ಲೂ ಕಟ್ಟುನಿಟ್ಟಾಗಿ ಕೈಗಾರಿಕೆಗಳ ಮೇಲೆ ಹಸಿರು ತೆರಿಗೆ ಜಾರಿಯಾಗಲಿ, ಮಿತಿ ಮೀರಿದ ಜನಸಂಖ್ಯೆ ಏರಿಕೆಯಿಂದಾಗಿ ಮಾನವ ತನ್ನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸ್ವಾರ್ಥ ಲಾಲಸೆಯಿಂದ ಅಡ್ಡ ದಾರಿ ಹಿಡಿದು, "ನದಿಗಳಿಗೆ ಅಡ್ಡಲಾಗಿ ಎಲ್ಲೆಂದರಲ್ಲಿ ಆಣೆಕಟ್ಟುಗಳನ್ನು ನಿರ್ಮಿಸಿ ಜಲವಿದ್ಯುತ್ ಉತ್ಪಾದಿಸುವುದರಿಂದ ನೈಸರ್ಗಿಕ ಅಸಮತೋಲನ ಉಂಟಾಗಿ ಜೀವ ನದಿಗಳ ಮೂಲ ಸ್ವರೂಪವೇ ಬದಲಾಗಿ ನಶಿಸಿ ಹೋಗುವ ಹಂತ ತಲುಪಿವೆ" ಎಂದು ಡಬ್ಲು.ಡಬ್ಲ್ಯು.ಎಫ್. ನಿರ್ದೇಶಕ ಜೆ.ಮಿ. ಪೀಟಾಕ್ ಆತಂಕ ವ್ಯಕ್ತಪಡಿಸಿದ್ದಾರೆ. ಅಂತೆಯೇ ಉತ್ತರ ಭಾರತದ ಜೀವನದಿಗಳಾದ ಗಂಗಾ ಮತ್ತು ಸಿಂಧು ನದಿಗಳು ಅತಿಯಾದ ನಗರೀಕರಣ ಹಾಗೂ ಆಣೆಕಟ್ಟೆಗಳ ನಿರ್ಮಾಣದಿಂದಾಗಿ ವಿಶ್ವದಲ್ಲಿ ಅಪಾಯದ ಅಂಚಿನಲ್ಲಿರುವ "ಟಾಪ್ 10" ನದಿಗಳ ಪಟ್ಟಿಯಲ್ಲಿವೆ ಎಂದು ವಿಶ್ವ "ನಿಸರ್ಗ ನಿಧಿ". ಈ ಅಪಾಯಕಾರಿ ಹಾಗೂ ಆಘಾತಕಾರಿ ಅಂಶಗಳನ್ನು ಹೊರಗೆಡವಿದೆ.

ಪುರಾಣ ಇತಿಹಾಸ ಕಾಲದಿಂದಲೂ – ಪಾವನ ಗಂಗೆ– ಗಂಗಾ ಮಾತೆ ಎಂದೆಲ್ಲಾ ಕರೆಸಿಕೊಳ್ಳುವ ಉತ್ತರ ಭಾರತದ ಗಂಗಾನದಿ ತನ್ನ ಜಲಧಾರೆಯ ಸೊಬಗನ್ನು ಕಳೆದುಕೊಂಡು ಸೊರಗುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. **"ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ"**ದ ಪ್ರಕಾರ 21ನೇ ಶತಮಾನದ ಅಂತ್ಯದ ವೇಳೆಗೆ ಗಂಗಾನದಿ ಬತ್ತಿ ಹೋಗಬಹುದು. ಗಂಗಾನದಿಯ ಮೂಲವಾದ ಗಂಗೋತ್ರಿ ಹಿಮ ನದಿಯ ಕರಗುವಿಕೆಯ ವೇಗ ಹೆಚ್ಚಾಗಿದ್ದು ಅದು ಇನ್ನು ಮುಂದೆಯೂ ಅದೇ ಸ್ಥಿತಿಯಲ್ಲಿ ಮುಂದುವರೆದರೆ ಗಂಗಾನದಿ ಮುಂದಿನ 100 ವರ್ಷಗಳಲ್ಲಿ ಸಂಪೂರ್ಣವಾಗಿ ಬತ್ತಿ ಹೋಗಬಹುದು.



downloaded from: www.kpscvaani.com

ಗಣಿಗಾರಿಕೆ, ಅರಣ್ಯ ನಾಶ, ಕೈಗಾರಿಕೀಕರಣ, ಪರಿಸರ ಮಾಲಿನ್ಯ ಹಾಗೂ ಮಿತಿಮೀರಿದ ಕೊಳವೆ ಬಾವಿ ನಿರ್ಮಾಣದಿಂದಾಗಿ ಭೂಮಿಯ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ವಾತಾವರಣದ ಈ ಬಿಸಿಯಿಂದಾಗಿ ನೀರ್ಗಲ್ಲುಗಳೂ ಹಿಂದೆಂದಿಗಿಂತಲೂ ವೇಗವಾಗಿ ನಿಂತಲ್ಲೇ ನೀರಾಗುತ್ತಿವೆ. ಅಂಟಾರ್ಟಿಕ, ಗ್ರೀನ್‌ಲ್ಯಾಂಡ್ ಹಿಮಾಲಯದ ಉಪನದಿಗಳಿಂದ ಉಗಮವಾಗಿರುವ ಎಲ್ಲಾ ನದಿಗಳು ಇದೇ ರೀತಿ ಅಪಾಯವನ್ನು ಎದುರಿಸುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ಗಂಗಾನದಿ ಮೂಲವಾದ ಗಂಗೋತ್ರಿ ನೀರ್ಗಲ್ಲು ಶರವೇಗದಲ್ಲಿ ಕರಗುತ್ತಿರುವುದರಿಂದ ಗಂಗೆ ಬತ್ತಿ ಹೋಗಬಹುದೇನೋ ಎಂಬ ಆತಂಕ ಎದುರಾಗಿದೆ. ಡಬ್ಲೂ. ಡಬ್ಲೂ. ಎಫ್. ನ ಸಮೀಕ್ಷಾ ವರದಿಯ ಪ್ರಕಾರ ಹಿಮಾಲಯದ ನೀರ್ಗಲ್ಲುಗಳೂ ವರ್ಷಕ್ಕೆ ಸರಾಸರಿ 10 ರಿಂದ 12 ಮೀಟರ್‌ನಷ್ಟು ಕರಗಿ ಹಿಂದೆ ಸರಿಯುತ್ತಿವೆ. ಗಂಗೋತ್ರಿ ಹಿಮನದಿಯಂತೂ ವರ್ಷಕ್ಕೆ 23 ಮೀಟರ್‌ನಷ್ಟು ಕರಗುತ್ತಿದೆ. ಕಳೆದ 30 ವರ್ಷಗಳಲ್ಲಿ 2 ಶತಮಾನಕ್ಕಿಂತ 3 ಪಟ್ಟು ಹೆಚ್ಚು ಕರಗಿದೆ. ಗಂಗೆ ಯಾವ ಬಗೆಯ ಅಪಾಯಕ್ಕೆ ಸಿಲುಕಿದ್ದಾಳೆಂಬುದಕ್ಕೆ ಇದೊಂದು ಪ್ರತ್ಯಕ್ಷ ಉದಾಹರಣೆಯಾಗಿದೆ. ಗಂಗೋತ್ರಿ ಹಿಮನದಿಯು ಹೆಚ್ಚಿನ ಪ್ರಮಾಣದಲ್ಲಿ ಕರಗುವುದರಿಂದ ನದಿಯಲ್ಲಿ ನೀರಿನ ಮಟ್ಟ ಹೆಚ್ಚತೊಡಗುತ್ತದೆ. ಮುಂದೊಂದು ದಿನ ಭೀಕರ ಪ್ರವಾಹಕ್ಕೂ ಕಾರಣವಾಗಬಹುದು. ಕೆಲವು ಅಧ್ಯಯನಗಳ ಪ್ರಕಾರ ಮುಂದಿನ 50 ವರ್ಷಗಳಲ್ಲಿ ಹಿಮಾಲಯದ ನದಿಗಳು ಬೇಸಿಗೆಯಲ್ಲಿ ಅಪಾಯದ ಮಟ್ಟದಲ್ಲಿ ಹರಿಯಲಿವೆ.

ಜಗತ್ತಿನ ಶೇಕಡಾ 70% ರಷ್ಟು ಸಿಹಿನೀರಿಗೆ ಈ ಹಿಮನದಿಗಳೇ ಮೂಲ. ಧೃವ ಪ್ರದೇಶಗಳಲ್ಲಿ ಶೇಖರವಾಗಿರುವ ಹಿಮವೇ ಜಗತ್ತಿನ ನದಿಗಳ ಸಿಹಿನೀರಿನ ಸೆಲೆ. ಧೃವ ಪ್ರದೇಶಗಳಲ್ಲಿ ಅತಿ ಹೆಚ್ಚು ಸಿಹಿನೀರು ಶೇಖರವಾಗಿರುವುದು ಹಿಮಾಲಯದಲ್ಲೇ, ಜಗತ್ತಿನ ತಾಪಮಾನದಲ್ಲಿ ಏರಿಕೆಯಾಗುತ್ತಿರುವ ಕುರಿತು ವಿಜ್ಞಾನಿಗಳು ಎಚ್ಚರಿಸುತ್ತಲೇ ಇದ್ದಾರೆ. 70ರ ದಶಕಕ್ಕೆ ಹೋಲಿಸಿದರೆ ಹಿಮಾಲಯ ಪ್ರದೇಶದ ತಾಪಮಾನದಲ್ಲಿ 1 ಡಿಗ್ರಿಯಷ್ಟು ಏರಿಕೆಯಾಗಿದೆ. ಹಾಗೆ ನೀರ್ಗಲ್ಲು ಕೂಡ ಹಿಂದೆಂದಿಗಿಂತಲೂ ಹೆಚ್ಚು ಕರಗಿವೆ. 1953ರಲ್ಲಿ ತೇನ್‌ಸಿಂಗ್ ಎವರೆಸ್ಟ್ ಶಿಖರವನ್ನು ಹತ್ತಲು ಬಳಸಿದ್ದ ನೇಪಾಳದ ಕುಂಬು ಹಿಮನದಿ ಇಂದು 3 ಮೈಲಿಯಷ್ಟು ಹಿಂದೆ ಸರಿದಿವೆ. ವಿಶ್ವ ಪರಿಸರ ಅಧ್ಯಯನಗಳ ಪ್ರಕಾರ ಮುಂದಿನ 30 ವರ್ಷಗಳಲ್ಲಿ ಹಿಮಾಲಯದ ಶೇ. 20% ರಷ್ಟು ಹಿಮ ಕರಗಿ ಹೋಗಲಿದೆ. 2050ರ ವೇಳೆಗೆ ಜಗತ್ತಿನ ಹಿಮನದಿಗಳಲ್ಲಿ ಕಾಲು ಭಾಗದಷ್ಟು ಮಾಯವಾಗಲಿವೆ. ಹಿಮನದಿಗಳ ತವರಾದ ಅಂಟಾರ್ಟಿಕಾ ಹಾಗೂ ಗ್ರೀನ್‌ಲ್ಯಾಂಡ್ ಕೂಡ ಇದೇ ರೀತಿ ಅಪಾಯ ಎದುರಿಸಲಿವೆ.



downloaded from: www.kpscvaani.com

ವಾತಾವರಣದ ಬದಲಾವಣೆಗಳಿಂದಾಗಿ ಭೂಗೋಳಕ್ಕೆ ಸಂಭವಿಸಬಹುದಾದ 2 ದೊಡ್ಡ ಅಪಾಯಗಳ ವಿಷಯದಲ್ಲಿ ವಿಜ್ಞಾನಿಗಳೂ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. "ಗಲ್ಫ್ ಆಫ್ ಮೆಕ್ಸಿಕೊ" ದಿಂದ ಅಂಟ್ಲಾಂಟಿಕ್ ಮಹಾಸಾಗರದ ಮೂಲಕ ಯುರೋಪ್ ಕಡೆ ಪ್ರಯಾಣಿಸುವ ಅತ್ಯುಷ್ಣ ವಿದ್ಯುತ್ (ಗಲ್ಫ್ ಸ್ಟ್ರೀಮ್) ಅವುಗಳ ಪೈಕಿ ಒಂದಾದರೆ ಮತ್ತೊಂದು ಸಮುದ್ರದ ಮಟ್ಟಗಳ ಏರಿಕೆ ಸಮುದ್ರ ಪ್ರವಾಹ ಉಷ್ಣವನ್ನು (ವಿದ್ಯುತ್) ವಿಜ್ಞಾನಿಗಳೂ ಸೆವೆಡ್ರಪ್ಸ್‌ಗಳಲ್ಲಿ ಅಳೆಯುತ್ತಾರೆ. ಗಲ್ಫ್ ಸ್ಟ್ರೀಮ್– ಎಂಬುದು ಒಂದು ಉತ್ತರದ ಪ್ರಸರಣದ ವ್ಯವಸ್ಥೆ ಇದನ್ನೇ "ಉತ್ತರ ಅಂಟ್ಲಾಂಟಿಕ್ ಗೈರ್" ಎಂತಲೂ ಕರೆಯುತ್ತಾರೆ. ಇದರ ಶಿಖರ ಸ್ಥಾನದಲ್ಲಿ ಉಷ್ಣ ವಿದ್ಯುತ್ 150 ಸೆವೆರ್ ಡ್ರಪ್ಸ್ ಏರಿದೆ ಎನ್ನಲಾಗಿದೆ. ಸರಾಸರಿಯಾಗಿ ಅದು 100 ಸೆವೆರ್ ಡ್ರಪ್ಸ್‌ಗಳಲ್ಲಿ ಇರುತ್ತದೆ. ಇದೇ ಗಲ್ಫ್‌ಸ್ಟ್ರೀಮ್ ಸೇರಿದ ಇದೇ ಬ್ರಿಟನ್‌ನ ಉತ್ತರ ಭಾಗದ ಪರಿಸರಗಳಲ್ಲಿ ತಾಪಮಾನ ಶೂನ್ಯ ಸ್ಥಿತಿಯಲ್ಲಿರುತ್ತದೆ. ಆದರೆ ಈಗ ಅಲ್ಲಿ ಸುಮಾರು 8 ಡಿಗ್ರಿ ಸೆಲ್ಸಿಯಸ್ ಉಷ್ಣ ವಿದ್ಯುತ್ ಇದೆ.

ಮಾನವ ಎಸಗುತ್ತಿರುವ ಕುಕೃತ್ಯಗಳಿಂದ ಭೂಮಿ ಬಿಸಿಯಾಗಿದೆ. ಜಾಗತಿಕ ತಾಪಮಾನ ಗಣನೀಯ ಪ್ರಮಾಣದಲ್ಲಿ ಏರುತ್ತಿದೆ. ಚಳಿಗಾಲದಲ್ಲಿ ಭಯಂಕರ ಸೆಕೆ, ಬೇಸಿಗೆಯಲ್ಲಿ ಭಾರಿ ಮಳೆ, ಅಂತೆಯೇ ಮಳೆಗಾಲದಲ್ಲಿ ಭೀಕರ ಬರ. 21ನೇ ಶತಮಾನದಲ್ಲಿ ವಿಶ್ವದ ತಾಪಮಾನ 1.8 ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಲಿದೆ!

## ಮಹಿಳಾ ಸಬಲೀಕರಣ

**"ಪಕ್ಷಿಗೆ ಹೇಗೆ ಒಂದೇ ರೆಕ್ಕೆಯಿಂದ ಹಾರುವುದು ಅಸಾಧ್ಯವಾಗಿರುತ್ತದೆಯೋ ಹಾಗೆ, ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಳ್ಳದ ಹೊರತು ಜಗತ್ತಿನ ಕಲ್ಯಾಣದ ಬಗ್ಗೆ ಚಿಂತಿಸುವುದು ಅಸಾಧ್ಯವಾಗಿರುತ್ತದೆ."**

–ಸ್ವಾಮಿ ವಿವೇಕಾನಂದ

ಮಹಿಳೆಯರನ್ನು ಇನ್ನೂ ಒಂದು ಭೋಗದ ವಸ್ತುವಾಗಿ ಉಪಯೋಗಿಸಿ ಎಸೆಯಲಾಗುತ್ತಿರುವುದರಿಂದ, ಸಮಾಜದ ಮುಖ್ಯವಾಹಿನಿಯಿಂದ ಅವಳನ್ನು ದೂರ ಇಟ್ಟು ಕಡೆಗಣಿಸಲಾಗುತ್ತಿರುವುದರಿಂದ ಮತ್ತು ಮಹಿಳೆಯರು ಇನ್ನೂ ಅಶಕ್ತರಿರುವದರಿಂದಲೇ ಮಹಿಳಾ ಸಶಕ್ತೀಕರಣ ಎಂಬ ವಿಷಯವು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ ಮತ್ತು ಅವರು ಸಶಕ್ತರಾಗುವ ತನಕ ಮುಂದುವರಿಯುತ್ತಲೇ ಇರುತ್ತದೆ. ಪುರುಷ ಪ್ರಧಾನವಾದ ಈ



downloaded from: www.kpscvaani.com

ಸಮಾಜವು ಮಹಿಳೆಯರಿಗೆ ಯಾವಾಗಲೂ ಸ್ವಾತಂತ್ರ್ಯ ಮತ್ತು ಸ್ವಯಂ ಆಡಳಿತವನ್ನು ನಿರಾಕರಿಸುತ್ತ ಬಂದಿದೆ. ಈ ಲಿಂಗ ತಾರತಮ್ಯವು ಮಾನವೀಯ ಮುಖವನ್ನು ವಿಕಾರಗೊಳಿಸಿದೆ. ಈ ತಾರತಮ್ಯವು ಹೆಣ್ಣು ಮಗುವಿನ ಜನನಕ್ಕೆ ಮುಂಚೆಯೇ ಪ್ರಾರಂಭವಾಗಿ ಅದು ಅವಳ ಹೆಣ್ಣುತನದ ಜೀವನಗುಂಟ ಉಳಿದುಬಿಡುತ್ತದೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಮತ್ತು ಮಹಿಳೆಯರಿಗೆ ಉನ್ನತ ಸ್ಥಾನ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಭಾರತದಲ್ಲಿ ಮಹಿಳೆಯರು ಒಟ್ಟು ಜನಸಂಖ್ಯೆಯ ಶೇ. 50ರಷ್ಟನ್ನು ಪ್ರತಿನಿಧಿಸುತ್ತಾರೆ. ಅನಾದಿ ಕಾಲದಿಂದಲೂ ಭಾರತೀಯ ಮಹಿಳೆ ವೈಶಿಷ್ಟ್ಯ ಪೂರ್ಣವಾಗಿರುವಳು. ಸ್ನೇಹ, ಸಹನಶೀಲತೆ, ಮಮತೆ ಮುಂತಾದ ಸದ್ಗುಣಗಳ ಗಣಿಯಾಗಿರುವಳು ಮನೆಯ ಸರ್ವತೋಮುಖ ಏಳ್ಗೆಗಾಗಿ ಪರಿಶ್ರಮ ಪಡುತ್ತಾ ಆರ್ಥಿಕವಾಗಿ ಪುರುಷನ ಸಮಾನವಾಗಿ ದುಡಿಯುತ್ತಿದ್ದಾಳೆ. ಈ ರೀತಿ ಮಹಿಳೆಯರ ಮಹತ್ವವನ್ನು ಅರಿತೋ ಏನೋ ನಮ್ಮ ಪೂರ್ವಜರು ಮಾತ್ರ ಸ್ಥಾನಕ್ಕೆ ಅತ್ಯಂತ ಗೌರವವನ್ನು ತೋರಿದ್ದಾರೆ. ನಮ್ಮ ರಾಷ್ಟ್ರೀಯತೆಯನ್ನು ಮಾತೆಗೆ ಹೋಲಿಸಿ 'ಭಾರತ ಮಾತೆ' ಎಂದು ಕರೆಯಲಾಗುತ್ತದೆ. ಭಾರತವು ಕೃಷಿ ಪ್ರಧಾನ ದೇಶವಾಗಿದ್ದರಿಂದ ಭೂಮಿಯೇ ಜೀವನಾಧಾರಕ್ಕೆ ಪ್ರಮುಖ ಮೂಲವಾಗಿದೆ. ಇದನ್ನು ಕೂಡ 'ಭೂತಾಯಿ' ಎಂಬ ರೂಪದಲ್ಲಿ ಹೆಣ್ಣಿಗೆ ಹೋಲಿಸಲಾಗಿದೆ. ಮಹಿಳೆಗೆ ಇಷ್ಟೆಲ್ಲಾ ಸ್ಥಾನಮಾನ ಅಧಿಕಾರಗಳನ್ನು ಕೊಟ್ಟಿದ್ದಾಗಿಯೂ, ಭಾರತದಲ್ಲಿ ಮಹಿಳೆಯರನ್ನು ದ್ವಿತೀಯ ದರ್ಜೆಯಲ್ಲಿ ನೋಡಿಕೊಳ್ಳಲಾಗುತ್ತಿದೆ. ಅಂತೆಯೇ "ಮಹಿಳೆಯಿಲ್ಲದ ಜೀವನವು ಅಪೂರ್ಣವಿದ್ದಾಗಲೂ ಕೂಡ ಮಹಿಳೆಯರನ್ನು ಜೀವನದ ಇನ್ನೊಂದು ಅರ್ಧ ಎಂದು ಯಾವಾಗಲೂ ಪರಿಗಣಿಸಿಲ್ಲಾ" ಎಂದು ಶ್ರೀ ಸಿಮೋನ ಡಿ. ಬಿವಿಯರ್ ಹೇಳುತ್ತಾರೆ.

ಇತಿಹಾಸವನ್ನು ಅವಲೋಕಿಸಿದಾಗ ಮಹಿಳೆಯರ ಸಬಲೀಕರಣಕ್ಕೆ / ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಅನೇಕ ಮಹನೀಯರ ಬಗ್ಗೆ ತಿಳಿದು ಬರುತ್ತದೆ. ಅವರಲ್ಲಿ ಪ್ರಮುಖರಾದವರೆಂದರೆ ಬುದ್ಧ, ಆದಿಶಂಕರಾಚಾರ್ಯ, ಬಸವಣ್ಣ, ರಾಜಾರಾಮ ಮೋಹನ್ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧಿ, ಜವಾಹರಲಾಲ್ ನೆಹರು ಮುಂತಾದವರು. ಇವರಲ್ಲದೆ ಬ್ರಿಟಿಷ್ ಸರ್ಕಾರವೂ ಕೂಡ ಮಹಿಳೆಯರ ಸಶಕ್ತೀಕರಣಕ್ಕೆ ಕೆಲವೊಂದು ಕಾನೂನುಗಳನ್ನು ಜಾರಿಗೆ ತಂದಿತು. ಆದರೆ ಮಹಿಳೆಯರನ್ನು ಸಬಲೀಕರಣಗೊಳಿಸಬೇಕೆಂಬ ಇಚ್ಛೆ ಹೊಂದಿದ ಜನರಿಂದ ಮಾತ್ರ ಮಹಿಳೆಯರ ಸಶಕ್ತೀಕರಣ ಮಾಡಲು ಸಾಧ್ಯವಾಗುವುದಿಲ್ಲ. ಮಹಿಳೆಯರು ಸ್ವಂತ ತಾವೇ ಮುಂದೆ ಬಂದು ಯಾವುದೇ ಜಾತಿ, ಧರ್ಮ ಎಂದು ಭೇದ ಮಾಡದೇ ತಮ್ಮ ಸಶಕ್ತೀಕರಣದ ಕಡೆಗೆ



downloaded from: www.kpscvaani.com

ಒಗ್ಗಟ್ಟಾಗಿ ಮುಂದೆ ಸಾಗಬೇಕು. ಸಾಮಾನ್ಯ ಮಹಿಳೆಯರು ಈಗಾಗಲೇ ಸಶಕ್ತೀಕರಣಗೊಂಡು ಮಹತ್ವದ ಸಾಧನೆ ಮಾಡಿದ ಮಹಿಳೆಯರಿಂದ ಪ್ರಭಾವಿತರಾಗಿ ಅವರ ಮಾರ್ಗವನ್ನು ಅನುಸರಿಸಲು ಪ್ರಯತ್ನಿಸಬೇಕು. ಇಂತಹ ಪ್ರಭಾವಿ ದಿಟ್ಟ ಮಹಿಳೆಯರಲ್ಲಿ ಪ್ರಮುಖರಾದವರೆಂದರೆ: ಭಾರತದ ಪ್ರಥಮ ಮಹಿಳಾ ಪ್ರಧಾನಿ ಮತ್ತು ಉಕ್ಕಿನ ಮಹಿಳೆ ಶ್ರೀಮತಿ ಇಂದಿರಾಗಾಂಧಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ನೊಬೆಲ್ ಶಾಂತಿ ಪುರಸ್ಕಾರ ಪಡೆದ ಸಮಾಜ ಸೇವಕಿ ಮದರ್ ತೆರೇಸಾ, ಗಾನ ಕೋಗಿಲೆ ಸರೋಜಿನಿ ನಾಯ್ಡು, ಪ್ರಥಮ ಮಹಿಳಾ ಮುಖ್ಯಮಂತ್ರಿ ಸುಚೇತಾ ಕೃಪಲಾನಿ, ಪ್ರಥಮ ಮಹಿಳಾ ಐಪಿಎಸ್ ಅಧಿಕಾರಿ ಕಿರಣ್ ಬೇಡಿ, ಗಗನ ಯಾತ್ರಿ ಕಲ್ಪನಾ ಚಾವ್ಲಾ, ಮೀನಾಕುಮಾರಿ, ಐಶ್ವರ್ಯಾ ರೈ, ಲತಾ ಮಂಗೇಶ್ಕರ್, ಸೋನಿಯಾ ಗಾಂಧಿ, ಸುಷ್ಮಾ ಸ್ವರಾಜ್, ಉಮಾ ಭಾರತಿ ಮುಂತಾದವರು, ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

## ಮಹಿಳೆ ಅಂದು–ಇಂದು

ವೇದ ಮತ್ತು ಉಪನಿಷತ್ತುಗಳಲ್ಲಿ ಮಹಿಳೆಗೆ 'ಮಾತಾ' ಹಾಗೂ 'ದೇವಿ' ಎಂಬ ಉನ್ನತ ಪೀಠದಲ್ಲಿ ಕುಳ್ಳಿರಿಸಿ ಪುರುಷರಿಗೆ ಸರಿಸಮಾನವಾದ ಸ್ಥಾನವನ್ನು ಕೊಡಲಾಗಿತ್ತು. ಆದರೆ ನಿಜವಾಗಿಯೂ ಅವಳ ಪರಿಸ್ಥಿತಿಯು ತೃಪ್ತಿಕರವಾಗಿರಲಿಲ್ಲ. ಮನುಸ್ಮೃತಿಯ ದೃಷ್ಟಿಯಲ್ಲಿ ಅವಳು ಅತ್ಯಂತ ಅಮೂಲ್ಯ ಹಾಗೂ ಗೌರವಾನ್ವಿತಳಾಗಿದ್ದಳು ಹಾಗೂ ಅವಳಿಗೆ ಮೊದಲು ತಂದೆ ರಕ್ಷಣೆ ಕೊಡಬೇಕಾಗಿತ್ತು. ನಂತರ ಗಂಡ ಮತ್ತು ಕೊನೆಯದಾಗಿ ಅವಳ ಮಗ ಅವಳಿಗೆ ರಕ್ಷಣೆ ಕೊಡಬೇಕಾಗಿತ್ತು. ಆದರೆ ಈ ಆಧುನಿಕ ಯುಗದಲ್ಲಿ ಗಂಡಸು ಈ ಅಮೂಲ್ಯವಾದ ಜೀವಿಯನ್ನು ಅಮೂಲ್ಯವಾದ ಸರಕನ್ನಾಗಿ ಬದಲಿಸಿ ತನ್ನ ಸ್ವಾಧೀನಪಡಿಸಿಕೊಂಡು ತನಗೆ ಬೇಕಾದ ಹಾಗೆ ಉಪಯೋಗಿಸಿಕೊಂಡು ನಂತರ ಬಿಟ್ಟುಬಿಟ್ಟ. ಮಹಿಳೆಯರನ್ನು ಸಮಾಜದ ಮುಖ್ಯ ವಾಹಿನಿಯಿಂದ ದೂರವಿಡಲಾಯಿತು. ಬಲಿಷ್ಠ ಕಾನೂನುಗಳಿದ್ದರೂ ಕೂಡ ಮಹಿಳೆಯರನ್ನು ಕ್ರೂರವಾಗಿ ಹಾಗೂ ಅನಾಗರೀಕವಾಗಿ ನಡೆಸಿಕೊಂಡು ಹಿಂಸಿಸಲಾಗುತ್ತಿದೆ. ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಬಾಲಕಾರ್ಮಿಕತೆ, ಬಾಲ್ಯವಿವಾಹ, ವರದಕ್ಷಿಣೆ, ಅತ್ಯಾಚಾರ, ಲೈಂಗಿಕ ಕಿರುಕುಳ, ಲಿಂಗ ಅಸಮಾನತೆ, ಪೀಡಿಸುವುದು, ಬಲತ್ಕಾರದ ವೇಶ್ಯಾವಾಟಿಕೆ ಮುಂತಾದ ರೂಪಗಳಲ್ಲಿ ಹಿಂಸಿಸಲಾಗುತ್ತಿದೆ. ಇಂದು ಒಬ್ಬ ಭಾರತೀಯ ವಿಧವೆಯ ಪರಿಸ್ಥಿತಿಯು ಬಹಳ ಶೋಚನೀಯವಾಗಿದೆ. ಅವಳು ತನ್ನ ಕುಟುಂಬ ವರ್ಗದವರಿಂದ ಮತ್ತು ಸಮಾಜದಿಂದ ಕಡೆ ಗಣಿಸಲ್ಪಟ್ಟಿದ್ದಾಳೆ. ಅವಳ ಮೂಲಭೂತ ಅವಶ್ಯಕತೆಗಳನ್ನು, ಜೀವನಾವಶ್ಯಕ ವಸ್ತುಗಳನ್ನು ಕಿತ್ತುಕೊಂಡು ಅವಳನ್ನು ಬಲವಂತವಾಗಿ ವೇಶ್ಯಾವಾಟಿಕೆಗೆ ತಳ್ಳಲಾಗುತ್ತಿದೆ. ಇದು ಪಶ್ಚಿಮ



downloaded from: www.kpscvaani.com

ಬಂಗಾಲ, ವಾರಣಾಸಿ, ಮಥುರಾ, ಎಲ್ಲಮ್ಮನ ಗುಡ್ಡ ಮುಂತಾದ ಸ್ಥಳಗಳಲ್ಲಿ ನಡೆಯುತ್ತಿದೆ. ಈ ರೀತಿ ಗುಲಾಮಳಾದ ಮಹಿಳೆ ಅವ್ಯವಸ್ಥಿತ ಜೀವನ ಸಾಗಿಸುತ್ತಿದ್ದಾಳೆ ಮತ್ತು ಅಸಹಾಯಕ ಬಲಿಪಶುವಾಗಿ ಭಯಾನಕ ಏಡ್ಸ್‌ನಂತಹ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾಳೆ.

## ಇಂದಿನ ಸಮಾಜದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆ

ಮದುವೆಯು ಒಂದು ವ್ಯಾಪಾರವಾಗಿಬಿಟ್ಟಿದೆ, ಇದು ವರನಿಗೆ ಲಾಭದಾಯಕವಾದರೆ ವಧುವಿನ ಕಡೆಯವರಿಗೆ ಖರ್ಚಿನದ್ದಾಗಿರುತ್ತದೆ. ವಧುವು ಅಪಾರ ಪ್ರಮಾಣದಲ್ಲಿ ವರದಕ್ಷಿಣೆ ಕೊಡಬೇಕಾಗುತ್ತದೆ. ವರದಕ್ಷಿಣೆಯ ಹೆಸರಿನಲ್ಲಿ ಸಾವಿರಾರು ಹೆಣ್ಣು ಮಕ್ಕಳನ್ನು ಹಿಂಸಿಸಿ ಸಾಯಿಸಲಾಗುತ್ತಿದೆ. ರಾಷ್ಟ್ರೀಯ ಮಹಿಳಾ ಆಯೋಗ (NWC) ಮತ್ತು ಮಹಿಳಾ ಹಕ್ಕು ಆಯೋಗ (WRC)ದ ವರದಿಯ ಪ್ರಕಾರ ಮಹಿಳೆಯರ ವಿರುದ್ಧ ಅಪರಾಧಗಳು ಆತಂಕಕಾರಿಯಾಗಿ ಹೆಚ್ಚುತ್ತಿವೆ. ಅತ್ಯಾಚಾರ ಪ್ರಕರಣಗಳು ಮಹಿಳೆಯರ ವಿರುದ್ಧ ಹೆಚ್ಚುತ್ತಿವೆ. ಅಪ್ರಾಪ್ತ ಬಾಲಕಿಯರು ಇದಕ್ಕೆ ಸುಲಭವಾಗಿ ಬಲಿಯಾಗುತ್ತಿದ್ದಾರೆ. ಸುಮಾರು 14,000 ಬಲಾತ್ಕಾರದ ಪ್ರಕರಣಗಳು 2004ರಲ್ಲಿ ಮಾತ್ರವೇ ವರದಿಯಾಗಿವೆ. ಇದು ಕೇವಲ ಅಧಿಕಾರಿಕ ಅಂಕಿ ಅಂಶಗಳು. ಇನ್ನೂ ಅದೆಷ್ಟೋ ಪ್ರಕರಣಗಳು ಸಾಮಾಜಿಕ ಕಳಂಕದ ಹೆದರಿಕೆಯಿಂದಾಗಿ ವರದಿಯಾಗುವುದೇ ಇಲ್ಲ. ಇದಕ್ಕೆ ಬಲಿಯಾದ ಹೆಣ್ಣು ಮಕ್ಕಳು ಬಹಳ ವೇದನೆ ಅನುಭವಿಸುತ್ತಾರೆ, ಇವರು ಕಾನೂನಿನ ಅಮಾನವೀಯ ಮತ್ತು ಅಸಭ್ಯ ವಿಚಾರಣೆಗೆ ಅವರ ನೈತಿಕ ಸ್ಥೈರ್ಯವನ್ನು ಕುಗ್ಗಿಸಿಬಿಡುತ್ತದೆ. ಆರ್ಥಿಕವಾಗಿ ಹಾಗೂ ಬೌದ್ಧಿಕವಾಗಿ ಉನ್ನತ ಮಟ್ಟದಲ್ಲಿರುವ ಮಹಿಳೆಯರೂ ಕೂಡ ಅಸಹ್ಯ ವರ್ತನೆಗಳಿಂದ ಹಾಗೂ ಲೈಂಗಿಕ ಶೋಷಣೆಯಿಂದ ಸುರಕ್ಷಿತರಾಗಿಲ್ಲ. ಉದಾಹರಣೆಗೆ ಅತಿ ಹೆಚ್ಚು ಸಾಕ್ಷರತೆಯನ್ನು ಹೊಂದಿದ ಕೇರಳದ ಹಿರಿಯ ಮಹಿಳಾ ಐ.ಎ.ಎಸ್. (IAS) ಅಧಿಕಾರಿಯನ್ನು ಆ ರಾಜ್ಯದ ಒಬ್ಬ ಮಂತ್ರಿಯು ಲೈಂಗಿಕ ಶೋಷಣೆ ಮಾಡಿದ್ದನ್ನು ಪತ್ರಿಕೆಗಳಲ್ಲಿ ನೋಡಿದ್ದೇವೆ. ಈ ರೀತಿಯ ಶೋಷಣೆಯು ಒಬ್ಬ ಹಿರಿಯ ಮಹಿಳಾ ಐ.ಎ.ಎಸ್. ಅಧಿಕಾರಿಗೇ ಆದರೆ ಇನ್ನು ಉಳಿದ ಸಾಮಾನ್ಯ ಮತ್ತು ನಿರ್ಗತಿಕ ಮಹಿಳೆಯರ ಪರಿಸ್ಥಿತಿಯನ್ನು ನಾವು ಊಹಿಸಿಕೊಳ್ಳಬಹುದಾಗಿದೆ. ಭಾರತದ ರಾಜಧಾನಿ ದೆಹಲಿಯು ಬಲತ್ಕಾರದ ಪ್ರಕರಣಗಳಲ್ಲಿ ಮೊದಲ ಸ್ಥಾನದಲ್ಲಿದೆ. ಇಲ್ಲಿ ಪ್ರತಿ ತಿಂಗಳು ಸುಮಾರು 500 ರಿಂದ 550 ಬಲತ್ಕಾರದ ಪ್ರಕರಣಗಳು ವರದಿಯಾಗುತ್ತಿವೆ. ಇತ್ತೀಚೆಗೆ ದೆಹಲಿಯನ್ನು ಮಹಿಳೆಯರಿಗೆ ಅಸುರಕ್ಷಿತ ಸ್ಥಳವೆಂದು ಘೋಷಿಸಲಾಗಿದೆ. ಆದರೆ ಒಬ್ಬ ಭಾರತೀಯ ಮಹಿಳೆಗೆ ಯಾವುದೇ ಸ್ಥಳ ಮತ್ತು ವೇಳೆ ಸುರಕ್ಷಿತವಾಗಿರುವುದಿಲ್ಲ. ಸ್ವಿಟ್ಜರ್‌ಲ್ಯಾಂಡ್ ರಾಯಭಾರ ಕಚೇರಿಯ ಮಹಿಳಾ



downloaded from: www.kpscvaani.com

ಉದ್ಯೋಗಿಯನ್ನು ನಮ್ಮ ರಾಷ್ಟ್ರಪತಿಯ ಅಂಗರಕ್ಷಕರೇ ಬಲಾತ್ಕಾರ ಮಾಡಿರುವುದು ಇದಕ್ಕೆ ಒಂದು ನಿದರ್ಶನವಾಗಿದೆ. ಇತ್ತೀಚೆಗೆ ದೆಹಲಿಯಲ್ಲಿ ಜರ್ಮನಿಯ ಯುವತಿಯನ್ನು ಟ್ಯಾಕ್ಸಿ ಚಾಲಕರು ಅಪಹರಿಸಿ ಬಲತ್ಕಾರ ಮಾಡಿದರು. ಈ ಪ್ರಕರಣದಲ್ಲಿ ಟ್ಯಾಕ್ಸಿ ಚಾಲಕರಿಗೆ ತ್ವರಿತ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ಕೂಡ ವಿಧಿಸಿದೆ. ಬಲತ್ಕಾರಕ್ಕೆ ಒಳಗಾದ ಮಹಿಳೆಯು 'ಬಲತ್ಕಾರಕ್ಕೆ' ಒಳಗಾದವಳು ಎಂಬ ಹಣೆಪಟ್ಟಿ ಹಚ್ಚಿಕೊಂಡು ವಿವಿಧ ರೀತಿಯ ಮಾನಸಿಕ ಮತ್ತು ದೈಹಿಕ ಯಾತನೆಗಳನ್ನು ಅನುಭವಿಸುತ್ತಾಳೆ. ಈ ಎಲ್ಲ ಶೋಷಣೆಗಳ ವಿರುದ್ಧ ಮಹಿಳೆ ಧ್ವನಿ ಎತ್ತಬೇಕು, ಪ್ರತಿಭಟನೆ ಮಾಡಿ ಹೋರಾಡಬೇಕು. ಆರೋಪಿಗಳಿಗೆ ಶಿಕ್ಷೆಯಾಗುವಂತೆ ಕಾನೂನಿನ ಸಹಾಯ ಪಡೆಯಬೇಕು.

## ಬಾಲ್ಯ ವಿವಾಹ

ಭಾರತೀಯ ಸಮಾಜದ ಮತ್ತೊಂದು ಅನಿಷ್ಟ ಪದ್ಧತಿ ಎಂದರೆ ಬಾಲ್ಯವಿವಾಹ. ರಾಜಸ್ಥಾನದ ಕೆಲವೊಂದು ಭಾಗಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಜನರು 'ಅಖತ್ತೀಜ' (Akhateej) ಎಂಬ ಉತ್ಸವದಲ್ಲಿ ಪಾಲ್ಗೊಂಡು ನೂರಾರು ಅಪ್ರಾಪ್ತ ಬಾಲಕ, ಬಾಲಕಿಯರ ಮದುವೆ ಮಾಡಿ, ಬಾಲ್ಯ ವಿವಾಹ ತಡೆಗಟ್ಟುವ ಕಾಯ್ದೆಯನ್ನು ಸಂಪೂರ್ಣ ಉಲ್ಲಂಘನೆ ಮಾಡುತ್ತಾರೆ. ಹುಡುಗಿಯು ಶಾಲೆಗೆ ಹೋಗಿ ತನ್ನ ಪುಸ್ತಕ ಮತ್ತು ಗೆಳತಿಯರೊಂದಿಗೆ ಆಟವಾಡಿಕೊಂಡಿರುವ ಸಮಯದಲ್ಲಿ ಅವಳು ಮದುವೆಯಾಗುವಂತೆ ಒತ್ತಾಯಿಸಲ್ಪಡುತ್ತಾಳೆ. ಬಾಲಕಿಯು ತಾಯಿಯಾಗುವುದಕ್ಕೆ ಮಾನಸಿಕವಾಗಿ ಮತ್ತು ದೈಹಿಕವಾಗಿ ತಯಾರಾಗಿಲ್ಲದಿರುವಾಗ ತಾಯಿಯಾಗಬೇಕಾಗುತ್ತದೆ, ಅಪ್ರಾಪ್ತ ವಯಸ್ಸಿನಲ್ಲಿ ತಾಯಿಯಾಗುವುದರಿಂದ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಕೆಲವು ವೇಳೆ ಆ ಬಾಲಕಿಯ ಸಾವು ಕೂಡ ಸಂಭವಿಸಬಹುದಾಗಿದೆ. ಇತ್ತೀಚೆಗೆ ಮಧ್ಯಪ್ರದೇಶದ ಒಂದು ಹಳ್ಳಿಯಲ್ಲಿ ಬಾಲ್ಯ ವಿವಾಹವನ್ನು ಪ್ರತಿಭಟಿಸಿದ್ದಕ್ಕಾಗಿ ಒಬ್ಬ ಮಹಿಳಾ ಸಾಮಾಜಿಕ ಕಾರ್ಯಕರ್ತೆಯ ಎರಡೂ ಕೈಗಳನ್ನು ಕತ್ತರಿಸಲಾಯಿತು. ಈ ವಿಷಯವು ರಾಷ್ಟ್ರಮಟ್ಟದಲ್ಲಿ ಚರ್ಚೆಯಲ್ಲಿತ್ತು.

## ಶಿಶು ಹತ್ಯೆ

ಹೆಣ್ಣು ಶಿಶುವಿನ ಜನನವನ್ನು ಒಂದು ರೀತಿಯಲ್ಲಿ ಅಸಹ್ಯ ಹಾಗೂ ಕೀಳೆಂದು ಪರಿಗಣಿಸಲಾಗುತ್ತಿದೆ. ನವಜಾತ ಹೆಣ್ಣು ಶಿಶುವಿನ ಅಳುವಿನ ಜೊತೆಗೇ ಇಡೀ ಕುಟುಂಬ ಅಳಲು ಪ್ರಾರಂಭಿಸುತ್ತದೆ. ಹೊಟ್ಟೆಯಲ್ಲಿರುವ ಮಗು ಹೆಣ್ಣೆಂದು ತಿಳಿದ ಕೂಡಲೇ, ಅದು ಈ ಜಗತ್ತಿಗೆ ಬರುವ ಮೊದಲೇ ಆ ಹೆಣ್ಣು ಭ್ರೂಣವನ್ನು ಹತ್ಯೆ ಮಾಡಲಾಗುತ್ತಿದೆ. ಜೀವ



downloaded from: www.kpscvaani.com

ಉಳಿಸುವಲ್ಲಿ ದೇವರ ನಂತರದ ಸ್ಥಾನ ಹೊಂದಿರುವ ವೈದ್ಯರುಗಳು ವಿಜ್ಞಾನ ಮತ್ತು ತಂತ್ರಜ್ಞಾನದ ದುರುಪಯೋಗ ಪಡೆದು ಹಣಕ್ಕಾಗಿ ಲಿಂಗ ಪತ್ತೆ ಹಚ್ಚಿ ಹೆಣ್ಣು ಶಿಶುಗಳ ಮರಣಕ್ಕೆ ಕಾರಣರಾಗುತ್ತಿದ್ದಾರೆ. 'ಭಾರತದಲ್ಲಿ ಪ್ರತಿ 1000 ಪುರುಷರಿಗೆ 927 ಮಹಿಳೆಯರಿದ್ದಾರೆ. ಈ ರೀತಿ ಹೆಣ್ಣು ಭ್ರೂಣ ಹತ್ಯೆ ಮಾಡುವ ಜನರು ಮಹಿಳೆಯ ಹುಟ್ಟುವ ಹಕ್ಕನ್ನೇ (Right to be Born) ನಿರಾಕರಿಸಿದಂತಾಗುತ್ತದೆ. ಇದಕ್ಕೆ ಅವಳು ಮಾಡಿದ ಬಹುದೊಡ್ಡ ಅಪರಾಧ ಎಂದರೆ ಅವಳು 'ಹುಡುಗಿ' ಆಗಿರುವುದು. ಗಂಡು ಮಗುವಿನ ಬಯಕೆಯು ಜನಸಂಖ್ಯೆಯ ಸಮತೋಲನ ಕಾಯ್ದುಕೊಳ್ಳಲು ತೊಡಕಾಗಿರುವುದು.

## ವರದಕ್ಷಿಣೆ ಸಾವುಗಳು

ವರದಕ್ಷಿಣೆ ಸಾವುಗಳು ಸಾಮಾನ್ಯವಾಗಿ ಬಿಟ್ಟಿವೆ. ಈ ವರದಕ್ಷಿಣೆ ಸಾವುಗಳು ಪ್ರತಿದಿನ ದಿನಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಸಮಾಜದ ಅಭಿವೃದ್ಧಿಯಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಶಿಕ್ಷಣವೇ ವರದಕ್ಷಿಣೆಯ ಆಚರಣೆಗೆ ಪ್ರೋತ್ಸಾಹ ಕೊಡುತ್ತಿದೆ. ಉನ್ನತ ಶಿಕ್ಷಣ ಪಡೆದ ವರನು, ಬಹಳಷ್ಟು ವರದಕ್ಷಿಣೆಯ ಬೇಡಿಕೆಯನ್ನು ಮುಂದಿಡುತ್ತಾನೆ. ಹೆಚ್ಚು ಕಲಿತಷ್ಟು ಹೆಚ್ಚು ವರದಕ್ಷಿಣೆ ಎಂಬ ರೂಢಿ ಜಾರಿಗೆ ಬರುತ್ತಿದೆ. ವರದಕ್ಷಿಣೆಯನ್ನು ಹಣದ ರೂಪದಲ್ಲಿ ಕೊಡುವುದಲ್ಲದೆ ಕಾರು, ಬಂಗಾರ, ಮನೆ ಇತ್ಯಾದಿಗಳ ರೂಪದಲ್ಲಿ ಕೊಡಲಾಗುತ್ತಿದೆ. ಮಧ್ಯಮ ವರ್ಗದ ಕುಟುಂಬಗಳು ಈ ಪದ್ಧತಿಯಿಂದಾಗಿ ಬಹಳ ತೊಂದರೆ ಅನುಭವಿಸುತ್ತಿವೆ. ವರದಕ್ಷಿಣೆ ತರದ ಹೆಣ್ಣು ಮಕ್ಕಳನ್ನು ಗಂಡನ ಮನೆಯವರು ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ಕೊಡುತ್ತಾರೆ ಮತ್ತು ಕೆಲವೊಮ್ಮೆ ಈ ಲೋಕದಿಂದಲೇ ಇಲ್ಲವಾಗಿಸಿಬಿಡುತ್ತಾರೆ.

ಹೆಣ್ಣು ಮಕ್ಕಳ ಅಶ್ಲೀಲತೆಯ ಪ್ರದರ್ಶನ ಮತ್ತು ಅನೈತಿಕವಾಗಿ ಮಾರಾಟ ಮಾಡುವವದರ ಮೂಲಕ ಹೆಣ್ಣು ಮಕ್ಕಳನ್ನು ವ್ಯಾಪಾರೀಕರಣಗೊಳಿಸಲಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದ ಮತ್ತು ಗುಡ್ಡಗಾಡು ಜನಾಂಗದ ಅಪ್ರಾಪ್ತ ಬಾಲಕಿಯರನ್ನು ಮಾರಾಟ ಮಾಡಿ ವೇಶ್ಯೆಯರನ್ನಾಗಿ ಮಾಡಲಾಗುತ್ತಿದೆ.

## ರಾಜಕೀಯ ಶಕ್ತಿಯಾಗಿ ಮಹಿಳೆ

ಭಾರತವು 57ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವಂತಹ ಈ ಸಂದರ್ಭದಲ್ಲಿ ಮಹಿಳಾ ಸಶಕ್ತೀಕರಣ ಎಂಬ ವಿಷಯವು ಇನ್ನೂ ಅಸ್ತಿತ್ವದಲ್ಲಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ದೇಶವು 2020ರ ಹೊತ್ತಿಗೆ ಯೋಜಿತ ಅಭಿವೃದ್ಧಿ ಸಾಧಿಸಬೇಕಾದರೆ



downloaded from: www.kpscvaani.com

ಬಹಳಷ್ಟು ಸಾಧಿಸಬೇಕಾಗಿದೆ. ಇದರಲ್ಲಿ ಮಹಿಳಾ ಸಶಕ್ತೀಕರಣವು ಒಂದು. 1952ರಲ್ಲಿ ಸಂಸತ್ತಿನಲ್ಲಿ ಶೇ. 4.4 ಇದ್ದ ಮಹಿಳಾ ಪ್ರತಿನಿಧಿತ್ವವು ಈಗಿನ ಶೇ. 8.8ರಷ್ಟು ತಲುಪಲು ಸುಮಾರು 50 ವರ್ಷಗಳನ್ನು ಹಾಗೂ 13 ಲೋಕಸಭೆ ಚುನಾವಣೆಗಳನ್ನು ತೆಗೆದುಕೊಂಡಿತು. ಸಂಸತ್ತಿನ ಹೊರಗೆ ಮತ್ತು ಒಳಗೆ ಬಹಳಷ್ಟು ಚರ್ಚೆಯ ನಂತರ, ಸಂಸತ್ತು 73ನೇ ಮತ್ತು 74ನೇ ಸಂವಿಧಾನ ತಿದ್ದುಪಡಿಗಳನ್ನು ಮಾಡಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿಯನ್ನು ಒದಗಿಸಿತು. ಈಗ ಮಹಿಳೆಯರು ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ತಮ್ಮ ವಿಚಾರಗಳನ್ನು ಮಂಡಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಇವರಿಗೆ ತಮ್ಮ ಪ್ರತಿಭೆ ಮೆರೆಯಲು ಅವಕಾಶಗಳು ಪ್ರಾಪ್ತವಾಗುತ್ತಿವೆ. ನಮ್ಮ ದೇಶದ ನಾಲ್ಕು ಪ್ರಮುಖ ರಾಜ್ಯಗಳಲ್ಲಿ ಮಹಿಳಾ ಮುಖ್ಯಮಂತ್ರಿಗಳಿರುವುದು, ಭಾರತದ ರಾಜಕೀಯದಲ್ಲಿ ಮಹಿಳೆಯರಿಗೆ ಆಶಾದಾಯಕ ಅವಕಾಶಗಳಿರುವುದನ್ನು ಕಾಣುತ್ತೇವೆ.

## ಇತರ ಕ್ಷೇತ್ರಗಳಲ್ಲಿ ಮಹಿಳೆಯ ಸಬಲೀಕರಣ

ಈ ಮೊದಲು ಮಹಿಳೆಯ ಜೀವನವು ಅವಳ ಮನೆಯ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗಿತ್ತು. ಮಕ್ಕಳನ್ನು ಹೆರುವುದು ಅವುಗಳ ಲಾಲನೆ, ಪಾಲನೆ ಮಾಡುವುದು ಮತ್ತು ಕುಟುಂಬವನ್ನು ನೋಡಿಕೊಳ್ಳುವುದು ಮಾತ್ರ ಅವಳ ಕೆಲಸವಾಗಿತ್ತು. ಆದರೆ ಈಗ ಕಾಲ ಬದಲಾಗುತ್ತಿದೆ. ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ಮುನ್ನುಗ್ಗುತ್ತಿದ್ದಾಳೆ. ಅವಳ ಈ ಸಾಧನೆಗೆ ಸಹಾಯಕವಾದ ಶಿಕ್ಷಣ ಮತ್ತು ಮಾಧ್ಯಮಗಳಿಗೆ ಧನ್ಯವಾದಗಳನ್ನು ಅರ್ಪಿಸಲೇಬೇಕು. ಭಾರತೀಯ ಮಹಿಳೆಯು ಹೊಲದಲ್ಲಿ ಕೆಲಸ ಮಾಡುವುದರಿಂದ ಹಿಡಿದು ವಿಮಾನ ನಡೆಸುವ ಮತ್ತು ಮೌಂಟ್ ಎವರೆಸ್ಟ್ ಶಿಖರ ಹತ್ತುವ ಮಟ್ಟಕ್ಕೆ ಬೆಳೆದಿದ್ದಾಳೆ. ಈಗ ಮಹಿಳೆಯರು ಸಂಘಟಿತ, ಅಸಂಘಟಿತ, ಖಾಸಗಿ ಹಾಗೂ ಸಾರ್ವಜನಿಕ ವಲಯಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಪ್ರವೇಶಿಸಿ ತಮ್ಮ ಪ್ರತಿಭೆ ಮೆರೆಯುತ್ತಿದ್ದಾರೆ. ಸರಕಾರವು ಹಿಂದುಳಿದ ವರ್ಗದ ಮಹಿಳೆಯರಿಗಾಗಿಯೇ ವಿಶೇಷ ಸವಲತ್ತುಗಳನ್ನು ಮತ್ತು ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದೆ.

## ಮಹಿಳಾ ಸಬಲೀಕರಣದಲ್ಲಿ ಸರಕಾರದ ಪಾತ್ರ

6ನೇ ಪಂಚವಾರ್ಷಿಕ ಯೋಜನೆಯವರೆಗೆ ಮಹಿಳೆಯರಿಗಾಗಿಯೇ ಯಾವುದೇ ಪ್ರತ್ಯೇಕ ಅಭಿವೃದ್ಧಿ ಯೋಜನೆಗಳು ಹಾಕಿಕೊಂಡಿರಲಿಲ್ಲ. ಈ ಯೋಜನೆಯಲ್ಲಿ ಮಹಿಳೆಯರಿಗಾಗಿ ಕೆಲವೊಂದು ವಿಶೇಷ ಯೋಜನೆಗಳನ್ನು ಹಾಕಿಕೊಳ್ಳಲಾಯಿತು. 1987ರಲ್ಲಿ



downloaded from: www.kpscvaani.com

ಮಹಿಳಾ ತರಬೇತಿ ಮತ್ತು ಉದ್ಯೋಗಕ್ಕೆ ನೆರವು ನೀಡುವ ಯೋಜನೆ (STEP)ಯನ್ನು ಮಹಿಳೆಯರಿಗೆ ಉದ್ಯೋಗ ನೀಡುವ ಗುರಿಯೊಂದಿಗೆ ಜಾರಿಗೆ ತರಲಾಯಿತು. 1982ರಲ್ಲಿ ಗ್ರಾಮೀಣ ಪ್ರದೇಶದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (DWCRA) ಗಳನ್ನು ಜಾರಿಗೆ ತರಲಾಯಿತು. 1988ರಲ್ಲಿ ರಾಷ್ಟ್ರೀಯ ಮಹಿಳಾ ಸಮೃದ್ಧಿ ಯೋಜನೆ (MSV) 1995ರಲ್ಲಿ ಇಂದಿರಾ ಮಹಿಳಾ ಯೋಜನೆಯನ್ನು ಮತ್ತು 2001ರಲ್ಲಿ 'ಸ್ವಯಂ ಸಿದ್ಧ' ಯೋಜನೆಗಳನ್ನು ಜಾರಿಗೆ ತರಲಾಯಿತು. ಗ್ರಾಮೀಣ ಜನತೆಗೆ ಸ್ವ ಉದ್ಯೋಗ ಒದಗಿಸುವ 'ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ' ಯೋಜನೆಯಡಿಯಲ್ಲಿ ಶೇ. 40ರಷ್ಟು ಫಲಾನುಭವಿಗಳು ಮಹಿಳೆಯರಾಗಿದ್ದಾರೆ. ಕರ್ನಾಟಕದಲ್ಲಿ 'ಸ್ತ್ರೀ ಶಕ್ತಿ' ಯೋಜನೆ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಒದಗಿಸಲಾಗಿದೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 1/3ರಷ್ಟು ಮೀಸಲಾತಿಯನ್ನು ಒದಗಿಸಲಾಗಿದೆ. ಸರಕಾರದ ಈ ಎಲ್ಲಾ ಕಾರ್ಯಕ್ರಮಗಳು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಮಹಿಳೆಯರನ್ನು ಗುರಿಯಾಗಿಸಿಕೊಂಡಿವೆ. 2001ನೇ ವರ್ಷವನ್ನು "ಮಹಿಳಾ ಸಶಕ್ತೀಕರಣ ವರ್ಷ" ಎಂದು ಘೋಷಿಸಲಾಗಿದೆ. ಮಹಿಳೆಯರ ಸಶಕ್ತೀಕರಣದಲ್ಲಿ ರಾಜಕೀಯ ಪಕ್ಷಗಳಿಗಿಂತ ಸ್ವಯಂ ಸೇವಾ ಸಂಸ್ಥೆಗಳೇ (N.G.O.) ಬಹಳ ಮಹತ್ವದ ಪಾತ್ರ ವಹಿಸಿವೆ.

## ಮಹಿಳಾ ಸಬಲೀಕರಣ ಮಾಡುವುದು ಹೇಗೆ?

ಮಹಿಳೆಯು ಸುರಕ್ಷತೆ ಮತ್ತು ಉತ್ತಮ ಆರೋಗ್ಯ ಹೊಂದುವುದರ ಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಬೌದ್ಧಿಕ, ಶೈಕ್ಷಣಿಕ, ಮಾನಸಿಕ ಹಾಗೂ ದೈಹಿಕವಾಗಿ ಸಶಕ್ತಗೊಳ್ಳುವ ಅಗತ್ಯ ಇದೆ. ಮಹಿಳೆಯರ ಸುರಕ್ಷತೆಗೋಸ್ಕರ ಹಲವಾರು ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಆದರೆ ಈ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿಲ್ಲ. ಕಾನೂನುಗಳನ್ನು ಯಾವುದೇ ಪಕ್ಷಪಾತವಿಲ್ಲದೇ ಸಮರ್ಪಕವಾಗಿ ಜಾರಿಗೆ ತರುವ ತನಕ ಮಹಿಳೆಯರ ವಿರುದ್ಧದ ಅಪರಾಧಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಮಹಿಳೆಯರ ಅಭಿವೃದ್ಧಿಯಲ್ಲಿ ರಾಜಕೀಯವನ್ನು ಮಾಡಬಾರದು. ಮಹಿಳೆಯರ ವಿರುದ್ಧದ ಸಾವಿರಾರು ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿವೆ.

ಎಷ್ಟೋ ಪ್ರಕರಣಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಕೈ ಬಿಡಲಾಗಿದೆ. ಅನೇಕ ಪ್ರಕರಣಗಳು ದೀರ್ಘಕಾಲ ನಡೆಯುತ್ತಿವೆ. ನಮ್ಮ ಕಾನೂನುಗಳಲ್ಲಿಯ ಕೆಲವೊಂದು



downloaded from: www.kpscvaani.com

ಲೋಪಗಳಿಂದಾಗಿ ಆರೋಪಿಗಳು ಪಾರಾಗುತ್ತಿದ್ದಾರೆ. ಈ ಕಾನೂನುಗಳನ್ನು ಸರಿಪಡಿಸಬೇಕಾಗಿದೆ. ಮಧ್ಯಪೂರ್ವ ಮತ್ತು ಅರಬ್ ರಾಷ್ಟ್ರಗಳಲ್ಲಿ ಜಾರಿಯಲ್ಲಿರುವ ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕು. ಮಹಿಳೆಯರಿಗೆ ಹಿಂಸೆ ಕೊಡುವವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು. ಅತ್ಯಾಚಾರಿಗಳಿಗೆ, ಕೊಲೆಗಡುಕರಿಗೆ ಮರಣ ದಂಡನೆಯನ್ನು ವಿಧಿಸಬೇಕು. ಮಹಿಳೆಯರಿಗೆ ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಸುಲಭವಾಗಿ ದೊರೆಯಬೇಕು ಹಾಗೂ ಪುರುಷರೊಂದಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಸರಕಾರವು ಮಹಿಳೆಯರಿಗೆ ಉಚಿತ ಪ್ರಾಥಮಿಕ ಕಂಪ್ಯೂಟರ್ ತರಬೇತಿಯನ್ನು ಕೊಡಬೇಕು. ಒಳ್ಳೆಯ ಶಿಕ್ಷಣ ಮತ್ತು ಉತ್ತಮ ಉದ್ಯೋಗಾವಕಾಶಗಳು ಮಹಿಳೆಯರ ಮನೋಸ್ಥೈರ್ಯವನ್ನು ಹೆಚ್ಚಿಸುತ್ತವೆ. ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಹೆಣ್ಣು ಮಕ್ಕಳಿಗೆ ಶಿಷ್ಯವೇತನ ಕೊಡಬೇಕು ಮತ್ತು ಪದವಿಯವರೆಗೆ ಎಲ್ಲ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಕೊಡಬೇಕು. ಮಹಿಳೆಯರು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆಯನ್ನಿಟ್ಟು ತಮ್ಮ ಸ್ವಂತ ಗುರುತನ್ನು ಸ್ಥಾಪಿಸಿಕೊಳ್ಳಬೇಕು. ಪುರುಷ ಸಮಾಜವು ಮಹಿಳೆಯನ್ನು ಜೀವನದ ಅರ್ಧಾಂಗ ಎಂದು ಒಪ್ಪಿಕೊಳ್ಳಬೇಕು. ಮಹಿಳೆಯಿಲ್ಲದೆ ಪುರುಷನ ಜೀವನವು ಅಪೂರ್ಣ ಎಂಬ ಸತ್ಯವನ್ನು ಎಲ್ಲರೂ ತಿಳಿದುಕೊಳ್ಳಬೇಕು.

## ಉಪಸಂಹಾರ

ಪ್ರಾಚೀನ ಕಾಲದಿಂದಲೂ ಮಹಿಳೆಯರ ಸ್ಥಾನಮಾನ ಕುಂದುತ್ತಾ ಬಂದಿದೆ. ಹಲವಾರು ಯೋಜನೆಗಳನ್ನು ಹಾಕಿಕೊಂಡರೂ ಸಮಗ್ರವಾದ ಬದಲಾವಣೆಯಾಗಿಲ್ಲ. ಕೆಲವು ಸಾಮಾಜಿಕ ಬದಲಾವಣೆಗಳನ್ನು ತರುವ ಅವಶ್ಯಕತೆ ಇದೆ. ಲಿಂಗ ಸಮಾನತೆಯ ಹೋರಾಟವನ್ನು ಪುರುಷರ ವಿರುದ್ಧದ ಹೋರಾಟ ಎಂದು ಪರಿಗಣಿಸಬಾರದು. ಇದು ಮಹಿಳೆಯರ ಶೋಷಣೆಯ ವಿರುದ್ಧದ ಹೋರಾಟ ಎಂದು ಪರಿಗಣಿಸಬಾರದು. ಮಹಿಳೆಯ ಸಬಲೀಕರಣ ಕೇವಲ ಸರ್ಕಾರದ ಹೊಣೆಯಲ್ಲ, ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಹೊಣೆಯಾಗಿದೆ. ಜವಾಹರಲಾಲ್ ನೆಹರುರವರು “ಜನರನ್ನು ಜಾಗೃತಗೊಳಿಸಬೇಕಾದರೆ ಮೊದಲು ಮಹಿಳೆಯನ್ನು ಜಾಗೃತಗೊಳಿಸಬೇಕು, ಒಂದು ಸಲ ಮಹಿಳೆ ಪ್ರಗತಿ ಪಥದಲ್ಲಿ ಚಲಿಸಲು ಪ್ರಾರಂಭಿಸಿದರೆ ಇಡೀ ಕುಟುಂಬ, ಹಳ್ಳಿ ಮತ್ತು ಸಂಪೂರ್ಣ ದೇಶದ ಪ್ರಗತಿಯಾಗುತ್ತದೆ” ಎಂದು ಹೇಳಿದ್ದಾರೆ. ಆದ್ದರಿಂದ ಮಹಿಳೆಯರ ಸಬಲೀಕರಣ ದೇಶದ ಪ್ರಗತಿಗೆ ಅತ್ಯವಶ್ಯಕವಾಗಿದೆ.



downloaded from: www.kpscvaani.com

## ಭಾರತದಲ್ಲಿ ಚುನಾವಣಾ ಸುಧಾರಣೆಗಳು

"ಚುನಾವಣೆಗಳು ಪ್ರಜಾಪ್ರಭುತ್ವದ ಆತ್ಮ"

ಪ್ರಜಾಪ್ರಭುತ್ವವೊಂದರಲ್ಲಿ ಚುನಾವಣೆಗಳ ಸ್ಥಾನ ಹಾಗೂ ಪಾತ್ರ ಅತಿ ಮಹತ್ವದ ವಿಚಾರಗಳು. ಹಾಗೆ ನೋಡಿದರೆ ಪ್ರಜಾರಾಜ್ಯದ ಸುಗಮ ಕಾರ್ಯ ನಿರ್ವಹಣೆಗೆ ಚುನಾವಣೆಯೇ ಆಧಾರಸ್ತಂಭ. ಚುನಾವಣೆಗಳು ನಿರ್ವಹಿಸುವ ಪಾತ್ರ ಹಿರಿದಾದುದು. ಚುನಾವಣೆಗಳಿಂದ

- ವಿವಾದ ರಹಿತ ಸರ್ಕಾರದ ಆಯ್ಕೆ
- ಜವಾಬ್ದಾರಿಯುತ, ಉತ್ತರದಾಯಿ ಪ್ರತಿನಿಧಿಗಳ ಆಯ್ಕೆ
- ಜನಾಭಿಪ್ರಾಯದ ಸ್ಪಷ್ಟ ಅಭಿವ್ಯಕ್ತಿ ಮಾಧ್ಯಮ
- ಜನತೆಯಲ್ಲಿ 'ರಾಜಕೀಯ ಅರಿವು' ಉಂಟು ಮಾಡುವಿಕೆ ಸಾಧ್ಯವಾಗುತ್ತದೆ

ಹೀಗೆ ಚುನಾವಣೆಗಳ ಮಹತ್ವ ಹಿರಿದಾದುದರಿಂದಲೇ ನಮ್ಮ ಸಂವಿಧಾನದಲ್ಲಿ ಬಹಳ ಜಾಗರೂಕತೆಯಿಂದ ಚುನಾವಣೆ ಕುರಿತ ನಿಯಮ / ಅವಕಾಶಗಳನ್ನು ಮಾಡಲಾಗಿದೆ. ಈ ಕೆಳಗಿನ ಚುನಾವಣಾ ಪದ್ಧತಿಗಳಿಂದ ಜವಾಬ್ದಾರಿ ಸರ್ಕಾರವನ್ನು ಆರಿಸಬಹುದಾಗಿದೆ.

- ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ
- ಸ್ವತಂತ್ರ ಚುನಾವಣಾ ಆಯೋಗ
- ಬಹುತೇಕ ನೇರ ಚುನಾವಣಾ ಪದ್ಧತಿ
- ಗುಪ್ತ ಮತದಾನ ಪದ್ಧತಿ

ಸಂವಿಧಾನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರ ರಚನಾಕಾರರ ಕಲ್ಪನೆ ಗೋಚರವಾಗುತ್ತದೆ. 'ಸ್ವತಂತ್ರ ಹಾಗೂ ನ್ಯಾಯಯುತ ಚುನಾವಣೆಯೇ ನಮ್ಮ ರಾಷ್ಟ್ರದ ಜೀವಾಳ' ಎಂಬುದನ್ನು ಅವರು ಮನಗಂಡಿದ್ದರು. ಬಡತನ, ಅನಕ್ಷರತೆ, ಹಸಿವು, ಅಜ್ಞಾನಗಳಿಂದ ತುಂಬಿದ್ದ ಭಾರತೀಯ ಸಮಾಜಕ್ಕೆ 'ಪ್ರತಿಯೊಬ್ಬರಿಗೂ ಒಂದು ಮತ'ದ ಅವಕಾಶ ನೀಡಿ ನೇರ ಚುನಾವಣಾ ಪದ್ಧತಿಯನ್ನು ಅಳವಡಿಸಿಕೊಂಡಿರುವುದು ಒಂದು ಅದ್ಭುತ, ಕ್ಲಿಷ್ಟಕರ ವಿಚಾರವಾಗಿ ಗೋಚರಿಸುತ್ತದೆ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಚುನಾವಣೆ ನಡೆಸುವುದು ಸವಾಲಿನ ವಿಷಯ. ಲೆಕ್ಕವಿಲ್ಲದಷ್ಟು ಜಾತಿ, ನಂಬಿಕೆ, ಆಮಿಷಗಳು ಇಂದು ಚುನಾವಣೆ, ಮತದಾರ, ಸರ್ಕಾರಗಳೊಡನೆ ತಳುಕು ಹಾಕಿಕೊಂಡಿವೆ.



downloaded from: www.kpscvaani.com

ಇಂದಿನವರೆಗೆ 14 ಸಾರ್ವತ್ರಿಕ ಚುನಾವಣೆಗಳು, ಇನ್ನೂ ಹೆಚ್ಚು ರಾಜ್ಯ ವಿಧಾನಸಭೆ, ಪರಿಷತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಜರುಗಿವೆ. ಸರ್ಕಾರಗಳು ರಚನೆಯಾಗಿವೆ, ಸರ್ಕಾರಗಳು ಉರುಳಿವೆ, ಮಂತ್ರಿ ಮಹೋದಯರು ಉದ್ಭವಿಸಿ ಮೆರೆದು ಮರೆಯಾಗಿದ್ದಾರೆ. ಮತದಾರರು ಇದ್ದಾರೆ ಕೆಲವೊಮ್ಮೆ ಉಕ್ಕಿ ಹರಿವ ಹೊಳೆಗಳಂತೆ, ಆರ್ಭಟಿಸುವ ಗುಡುಗಿನಂತೆ ಮತ್ತು ತಣ್ಣಗೆ, ಶಾಂತ ಸಾಗರದಂತೆ.

ಇಂದು ಹಿಂದೆಂದೂ ಇಲ್ಲದಷ್ಟು 'ಚುನಾವಣಾ ಸುಧಾರಣೆ'ಯ ಬೇಡಿಕೆ ಕೇಳಿ ಬರುತ್ತಿದೆ. ಸುಧಾರಣೆ ಎಲ್ಲಿ ಆಗಬೇಕು ಮತ್ತು ಹೇಗೆ? ನಿಜವಾಗಲೂ ಸುಧಾರಣೆಯ ಅವಶ್ಯಕತೆ ಇದೆಯೇ? ಸುಧಾರಣೆಯಾದರೆ ಎಲ್ಲ ಸರಿಯಾದೀತೇ? ಇದುವರೆಗಿನ ಸುಧಾರಣೆಗಳ ಪಾಡೇನು?...... ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಇಂದಿನ ಅಗತ್ಯ.

## ಸುಧಾರಣೆಗಳ ಅವಶ್ಯಕತೆ

ಭಾರತದಲ್ಲಿ ಚುನಾವಣಾ ಸುಧಾರಣೆಗಳ ಅವಶ್ಯಕತೆಯಂತೂ ಇದ್ದೇ ಇದೆ. ಸುಧಾರಣೆಯ ಅವಶ್ಯಕತೆಯನ್ನು ಧ್ವನಿಸುವ ಅವ್ಯವಸ್ಥೆಗಳು ಹೀಗಿವೆ.

1. ಕಣ್ಣಿಗೆ ರಾಚುವಂತಹ ಅಕ್ರಮ, ಅನೀತಿಯುತ ವಿಧಾನಗಳು ಇಲ್ಲಿನ ಚುನಾವಣೆಗಳಲ್ಲಿ ತಾಂಡವವಾಡುತ್ತಿವೆ.
   ಉದಾ– 2005ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸಶಸ್ತ್ರಧಾರೀ ವ್ಯಕ್ತಿಗಳು ಮತದಾರರನ್ನು ಬೆದರಿಸುತ್ತಿದ್ದ ದೃಶ್ಯಗಳು ಸರ್ವೇ ಸಾಮಾನ್ಯವಾಗಿದ್ದವು. ಇಂದು ಹಣ, ಹೆಂಡ, ಬಟ್ಟೆ ಹಾಗೂ ಇತರೆ ಆಮಿಷಗಳನ್ನು ಒಡ್ಡಿ ಮತಗಳನ್ನು ಎಲ್ಲೆಡೆ ಖರೀದಿಸಲಾಗುತ್ತಿದೆ.
2. ಪ್ರಜಾ ಪ್ರತಿನಿಧಿಗಳಲ್ಲಿ ಬಹುತೇಕರು ಅಪರಾದ ಹಿನ್ನೆಲೆಯುಳ್ಳವರು; ಅಕ್ರಮವಾಗಿ ಸಂಪತ್ತು ಗಳಿಸಿರುವವರು; ಜಾತಿ–ಧರ್ಮಗಳ ಆಧಾರದ ಮೇಲೆ ಚುನಾಯಿತರಾದವರೇ ಆಗಿದ್ದಾರೆ. ಇದು ಮತದಾರರು ತಮ್ಮ 'ಮತ'ದ ಅಮೂಲ್ಯತೆಯ ಬಗೆಗೆ ಹೊಂದಿರುವ ಅಜ್ಞಾನದ ದ್ಯೋತಕ ಹಾಗೂ ನಮ್ಮ ಅಸಮರ್ಪಕ ಚುನಾವಣಾ ಪದ್ಧತಿಗೆ ಹಿಡಿದ ಕೈಗನ್ನಡಿ.



downloaded from: www.kpscvaani.com

3. ಹೆಚ್ಚುತ್ತಿರುವ ಚುನಾವಣೆಗಳಿಗೆ ಹಲವಾರು ಕಾರಣಗಳಿವೆ. ರಾಜಕೀಯ ದೊಂಬರಾಟ, 'ಅಧಿಕಾರ ಕೇಂದ್ರಿತ' ರಾಜಕೀಯ ಸರ್ಕಸ್, ಬೇಜವಾಬ್ದಾರಿ ವ್ಯಕ್ತಿಗಳ ಆಯ್ಕೆ.
4. ಮಿತಿ ಮೀರಿರುವ ಚುನಾವಣಾ ವೆಚ್ಚವೂ ಚುನಾವಣಾ ಸುಧಾರಣೆಯ ಮಹತ್ವ ಹೆಚ್ಚಿಸಿದೆ. ಒಂದು ಕಡೆ ಸರ್ಕಾರೀ ಬೊಕ್ಕಸದ ಹಣ ಪೋಲಾಗುತ್ತಿದ್ದರೆ, ಮತ್ತೊಂದೆಡೆ ಅಕ್ರಮ ಮೂಲದ ಹಣ ಹೊಳೆಯಂತೆ ಹರಿದು ಬರುತ್ತಿದೆ.
5. ಅತಂತ್ರ ಸರ್ಕಾರಗಳು ಪ್ರಜಾಪ್ರಭುತ್ವದ ಅತಿ ಭಯಂಕರ ಸಮಸ್ಯೆ. ದೂರದೃಷ್ಟಿ ಇಲ್ಲದ ನೀತಿಗಳು, 'ಇದ್ದಷ್ಟು ಸಮಯ ದೋಚಿಕೊಂಡು ಹೋಗು' ಎಂಬ ನೀತಿ, ಪ್ರಜಾಪ್ರಭುತ್ವದ ಬಗ್ಗೆಯೇ ಮೂಡುತ್ತಿರುವ ಶಂಕೆಗೆ ಕಾರಣವಾಗಿದೆ. ಅಪ್ರಬುದ್ಧ ಮತದಾನ, ಹಣದ ಆಟ, ಜಾತಿ–ಧರ್ಮ–ಭಾಷೆಗಳ ಆರ್ಭಟ, ದುರ್ಬಲ ಚುನಾವಣಾ ಪ್ರಕ್ರಿಯೆ ಇದನ್ನು ಪೋಷಿಸುತ್ತಿದೆ.
6. 'ಚುನಾವಣಾ ಆಯೋಗ'ದ ರಾಜಕೀಯ ನಂಟು ಕೂಡ ಅಪಾಯಕಾರಿ ಬೆಳವಣಿಗೆ. ಆಯೋಗ ಹೆಸರಿಗೆ ಸ್ವತಂತ್ರವಾಗಿದ್ದರೂ ಅದರ ಮೂಲದಲ್ಲಿ ರಾಜಕೀಯದ ಕಮಟು ವಾಸನೆ ಸುಳಿದಾಡುತ್ತಲೇ ಇದೆ. ಆಡಳಿತಗಾರರ ಮರ್ಜಿಗೆ ಆಗಾಗ ನರ್ತಿಸುವ ಆಯೋಗಕ್ಕೆ ಸಂಪೂರ್ಣವಾಗಿ 'ಸ್ವತಂತ್ರ ನ್ಯಾಯಯುತ' ಚುನಾವಣೆ ನಡೆಸಲು ಸಾಧ್ಯವಾಗಿಲ್ಲ.
7. ರಾಜ್ಯ, ರಾಷ್ಟ್ರದ ನೀತಿ ನಿರೂಪಣೆಯಲ್ಲಿ 'ಶೂನ್ಯ'ವೇ ಆಗಿರುವ ಜನತಾ ಪಾತ್ರ. ಚುನಾವಣೆ ಇಂದು ಕೆಲವು ದಿನಗಳ ಮಟ್ಟಿನ ವಿನೋದ, ಆಮೋದ–ಪ್ರಮೋದಗಳ ಕೂಟವಾಗಿದೆ. ಜನ ಹೃದಯಪೂರ್ವಕವಾಗಿ, ರಾಷ್ಟ್ರದ, ಸಮಾಜದ ಹಿತಾಸಕ್ತಿಗಾಗಿ ಭಾಗವಹಿಸುತ್ತಿಲ್ಲ.
8. ಅಕ್ರಮ ಮತದಾನ, ಮತದಾರರ ಪಟ್ಟಿ ದೋಷಗಳು, ಅಸಮರ್ಪಕ ಕ್ಷೇತ್ರ ಪುನರ್ವಿಂಗಡಣೆ' ಹಾಗೂ ಬಿಗಿಯಾಗಿಲ್ಲದ ಕಾನೂನುಗಳು ಇತ್ಯಾದಿ. ಎಷ್ಟೇ ಬರೆದರೂ ಈ ಪಟ್ಟಿ ಮುಗಿಯುವುದಿಲ್ಲ. ಹೀಗಾಗಿ ಆಯೋಗವು ಚುನಾವಣೆಯಲ್ಲಿ ಸುಧಾರಣೆ ತರಬೇಕೆನ್ನುವುದು ನಿರ್ವಿವಾದ.



downloaded from: www.kpscvaani.com

# GNANADHARE ACADEMY

#2 Sharada Arcade,Nagarbhavi Main Road Prashanth Nagar, Vijaynagar
North Bangalore-560079, Mob:9513804777/9513809777


## ಇದುವರೆಗೆ ಆದದ್ದೇನು?

ಚುನಾವಣೆಗಳು ಕಾಲಿಟ್ಟಂದಿನಿಂದ ಸುಧಾರಣೆಗಳ ಸರಣಿಯೇ ಸಾಗಿ ಬಂದಿದೆ. ಕಾಲಕಾಲಕ್ಕೆ ಚುನಾವಣಾ ಆಯೋಗದ ಸಲಹೆಗಳು; ಇತರ ಸರ್ಕಾರೀ ಹಾಗೂ ಖಾಸಗೀ ಸಮಿತಿ, ಆಯೋಗಗಳ ವರದಿಗಳು; ಜನ ಸಂಘಟನೆಗಳು, ರಾಜಕೀಯ ಪಕ್ಷಗಳು ಹಾಗೂ ಪಂಡಿತರ ಸಂಘಗಳ ಮನವಿಗಳು ಅನೇಕ ಆಗಿಹೋಗಿವೆ.

### 1. ಪ್ರಜಾ ಪ್ರತಿನಿಧಿ ಕಾಯ್ದೆ – 1950 ಹಾಗೂ ಪ್ರಜಾ ಪ್ರತಿನಿಧಿ ಕಾಯ್ದೆ – 1951

ಚುನಾವಣೆ ಕುರಿತ ಸಮಗ್ರ ನೀತಿ, ನಿಯಮಗಳನ್ನು ಒಳಗೊಂಡ ಈ ಕಾಯ್ದೆಗಳಿಗೆ ಕಾಲ ಕಾಲಕ್ಕೆ ತಿದ್ದುಪಡಿ ಮಾಡಿ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನ ಮಾಡಲಾಗಿದೆ.

- ಜಾತಿ, ಕುಲ, ಧರ್ಮ, ಹುಟ್ಟಿದ ಸ್ಥಳ, ಭಾಷೆಗಳ ನಡುವೆ ಶತ್ರುತ್ವ ಭಾವನೆ ಉಂಟು ಮಾಡುವುದು, ಲಂಚ, ಅತ್ಯಾಚಾರ, ಮಹಿಳೆಯರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ, ನಿರ್ಬಂಧಿತ ವಸ್ತುಗಳ ಕಳ್ಳಸಾಗಣೆ, ನಿಷೇಧಿತ ಸಂಘಟನೆಗಳ ಸದಸ್ಯತ್ವ, ಮಾದಕ ದ್ರವ್ಯ ಕಾಯ್ದೆ 1985ರಡಿ ಅಪರಾಧ, ಭಯೋತ್ಪಾದನಾ ಚಟುವಟಿಕೆ, ಧಾರ್ಮಿಕ ದುರ್ಬಳಕೆ, ಸತಿ ಆಚರಣೆ ಇನ್ನೂ ಮುಂತಾದ ಅಪರಾಧಗಳಲ್ಲಿ ಅಪರಾಧಿ ಎಂದು ಘೋಷಿಸಲ್ಪಟ್ಟು ದಂಡ ಅಥವಾ ಸೆರೆಮನೆವಾಸದ ಶಿಕ್ಷೆ ಪಡೆದಿರುವ ವ್ಯಕ್ತಿಯನ್ನು 6 ವರ್ಷಗಳ ಕಾಲ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ತಡೆಯುವುದು. (1956, 1966, 1989, 1991, 1996, 2003ರ ತಿದ್ದುಪಡಿಗಳ ಮೂಲಕ)
- ಅನೇಕ ಅಪರಾಧಗಳಡಿ ಶಿಕ್ಷಿಸಲ್ಪಟ್ಟ ವ್ಯಕ್ತಿಯ ಮತದಾನದ ಹಕ್ಕನ್ನು 6 ವರ್ಷಗಳವರೆಗೆ ಕಿತ್ತುಕೊಳ್ಳುವುದು.
- ಚುನಾವಣಾ ಆಯೋಗದ ಅಧಿಕಾರ, ಕರ್ತವ್ಯವನ್ನು ಕೆಳಗಿನ ಹಂತದ ಚುನಾವಣಾಧಿಕಾರಿಗಳಿಗೆ ನಿಯೋಜಿಸುವುದು.
- ರಾಜಕೀಯ ಪಕ್ಷಗಳ ಕಡ್ಡಾಯ ನೋಂದಣಿ; ಬ್ಯಾಂಕ್ ಖಾತೆಗಳ ವಿವರ ಬಹಿರಂಗಗೊಳಿಸುವಿಕೆ; ದಾನ ಸ್ವೀಕಾರಗಳ ಘೋಷಣೆ. (1989, 2003)
- ಅಭ್ಯರ್ಥಿಗಳು ತಮ್ಮ ಹಿನ್ನೆಲೆಯನ್ನು ನಾಮಪತ್ರದಲ್ಲಿ ಕಡ್ಡಾಯವಾಗಿ ನಮೂದಿಸುವುದು.



downloaded from: www.kpscvaani.com

- ಲೋಕಸಭಾ ಚುನಾವಣೆಗೆ ಠೇವಣಿ ಮೊತ್ತ ಹೆಚ್ಚಳ. ಸಾಮಾನ್ಯ ಅಭ್ಯರ್ಥಿಗೆ ರೂ. 500ರಿಂದ ರೂ.10000; ಪರಿಶಿಷ್ಟ ಜಾತಿ / ಪಂಗಡದ ಅಭ್ಯರ್ಥಿಗೆ ರೂ. 250 ರಿಂದ ರೂ. 5000. ವಿಧಾನಸಭಾ ಚುನಾವಣೆ : ಸಾಮಾನ್ಯ ಅಭ್ಯರ್ಥಿ– ರೂ. 250 ರಿಂದ ರೂ. 5000. ಎಸ್.ಸಿ. / ಎಸ್.ಟಿ. ಅಭ್ಯರ್ಥಿ ರೂ. 125 ರಿಂದ ರೂ. 2500 (1996ರ ತಿದ್ದುಪಡಿ)
- ಸ್ವತಂತ್ರ ಅಥವಾ ಮಾನ್ಯ ಮಾಡದ ಪಕ್ಷಗಳ ಅಭ್ಯರ್ಥಿಗಳ ಬೆಂಬಲ ಸೂಚಕರ ಸಂಖ್ಯೆ ಹೆಚ್ಚಳ.
- ಚಲಾವಣೆಯಾದ ಪುರಸ್ಕೃತ ಮತಗಳ 1/6ರಷ್ಟು ಮತ ಗಳಿಸದ ಅಭ್ಯರ್ಥಿಯ ಠೇವಣಿ ನಷ್ಟ.
- ಮತಗಟ್ಟೆಯ ಬಳಿ ಆಮಿಷ ಒಡ್ಡುವವರಿಗೆ 3 ತಿಂಗಳವರೆಗೆ ಸೆರೆವಾಸ ಹಾಗೂ ದಂಡ. ಅಂತಹ ಆಮಿಷದ ಹಣ ಸ್ವೀಕಾರಕ್ಕೆ ಒಂದು ವರ್ಷದವರೆಗೆ ಸೆರೆವಾಸ ಹಾಗೂ ದಂಡ.
- ಧಾರ್ಮಿಕ ನಂಬಿಕೆ, ಭಾವನೆಗಳನ್ನು ದುರ್ಬಳಕೆ ಮಾಡಿ ಮತ ಹಾಕದಂತೆ ಅಥವಾ ನಿರ್ದಿಷ್ಟ ವ್ಯಕ್ತಿಗೆ ಹಾಕುವಂತೆ ಭಯ ಬೀಳಿಸುವ ಅಥವಾ ಪ್ರಚೋದಿಸುವ ಅಪರಾಧಕ್ಕೆ ಒಂದು ವರ್ಷದವರೆಗೆ ಸಜೆ ಹಾಗೂ ದಂಡ.
- ಚುನಾವಣಾ ವೆಚ್ಚ ಮಿತಿ :
  - ದೊಡ್ಡ ರಾಜ್ಯಗಳಲ್ಲಿ : ಲೋಕಸಭೆ – ರೂ. 25 ಲಕ್ಷ, ವಿಧಾನಸಭೆ –ರೂ. 10 ಲಕ್ಷ
  - ಸಣ್ಣ ರಾಜ್ಯಗಳಲ್ಲಿ : ಲೋಕಸಭೆ – ರೂ. 10 ಲಕ್ಷ, ವಿಧಾನಸಭೆ – ರೂ. 5 ಲಕ್ಷ
- ಚುನಾವಣಾ ಫಲಿತಾಂಶ ಘೋಷಣೆಯಾದ 30 ದಿನಗಳೊಳಗಾಗಿ ಎಲ್ಲಾ ಅಭ್ಯರ್ಥಿಗಳೂ ವೆಚ್ಚದ ವರದಿ ಒಪ್ಪಿಸತಕ್ಕದು. ತಪ್ಪಿದರೆ 3 ವರ್ಷಗಳವರೆಗೆ ಯಾವುದೇ ಚುನಾವಣೆಯಿಂದ ಸ್ಪರ್ಧಿಸದಂತೆ ತಡೆಯಬಹುದು.
- 2 ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಒಬ್ಬನೇ ಅಭ್ಯರ್ಥಿ ಸ್ಪರ್ಧಿಸುವಂತಿಲ್ಲ.
- ಜಾಮೀನಿನ ಮೇಲೆ ಬಿಡುಗಡೆ ಹೊಂದಿರುವ ಹಾಗೂ ನ್ಯಾಯ ನಿರ್ಣಯಕ್ಕಾಗಿ ಕಾಯುತ್ತಿರುವ ಅಪರಾಧಿಯು ಸ್ಪರ್ಧಿಸಲು ಅನರ್ಹ.



downloaded from: www.kpscvaani.com

ಹೀಗೆ ಪ್ರಜಾಪ್ರತಿನಿಧಿ ಕಾಯ್ದೆಯ ಅನೇಕ ಅಂಶಗಳು ಚುನಾವಣೆಗಳನ್ನು ಸ್ವತಂತ್ರ ಮತ್ತು ನ್ಯಾಯಯುತಗೊಳಿಸುವತ್ತ ಗಮನ ಹರಿಸಿವೆ. ಅಪರಾಧಿಗಳನ್ನು ಸ್ಪರ್ಧೆಯಿಂದ ಅನರ್ಹಗೊಳಿಸುವುದು ಗಮನಾರ್ಹ ಸಂಗತಿ. ಆದರೆ, ಈ ಕುರಿತ ಕಾನೂನುಗಳು ಕಾಗದದ ಮೇಲೆ ಮಾತ್ರ ಉಳಿದಿರುವಂತೆ ತೋರುತ್ತಿದೆ. ಅಭ್ಯರ್ಥಿಗಳ ಕುರಿತ ಮಾಹಿತಿಗಳನ್ನು ಕಲೆ ಹಾಕುವತ್ತ ಆಯೋಗವೇ ಚಿತ್ತ ಹರಿಸಬೇಕಾಗಿದೆ.

ಠೇವಣಿ ಹೆಚ್ಚಿಸಿರುವುದು ಅನಪೇಕ್ಷಿತ ಹಾಗೂ ಗಂಭೀರವಲ್ಲದ ಅಭ್ಯರ್ಥಿಗಳನ್ನು ತಡೆಯುವಲ್ಲಿ ಅಲ್ಪಮಟ್ಟಿನ ಯಶಸ್ಸನ್ನು ಸಾಧಿಸಿರಬಹುದು. ಠೇವಣಿಯನ್ನು ಮತ್ತಷ್ಟು ಹೆಚ್ಚಿಸಬೇಕಾದ ಅಗತ್ಯವಿದೆ.

ಇನ್ನು ಆಮಿಷ ಒಡ್ಡುವಿಕೆ, ಸ್ವೀಕಾರಗಳನ್ನು ತಡೆಯುವಲ್ಲಿ ಕಾನೂನಿನ ಅನುಷ್ಠಾನ ಶೂನ್ಯವೆಂದೇ ಹೇಳಬೇಕು.

## 2. ಸಂವಿಧಾನದ 61ನೇ ತಿದ್ದುಪಡಿ ಕಾಯ್ದೆ – 1988

**1988**ರ ಮೂಲಕ 326ನೇ ವಿಧಿಯನ್ನು ತಿದ್ದುಪಡಿ ಮಾಡಿ ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಲಾಗಿದೆ. ಯುವ ಸಮೂಹವನ್ನು ರಾಜಕೀಯ ವ್ಯವಸ್ಥೆಯೆಡೆಗೆ ಗಮನಹರಿಸುವಂತೆ ಮಾಡಲು ಸಫಲವಾಗಿದೆಯಾದರೂ ನೈಜ ಅರ್ಥದಲ್ಲಿ ಕೇವಲ ಮತದಾರರ ಸಂಖ್ಯೆ ಜಾಸ್ತಿಯಾಗಿದೆ. ಯುವಕರಿಗೆ ರಾಜಕೀಯ ಶಿಕ್ಷಣದ ಅಗತ್ಯವಿದೆ.

## 3. ವಿ.ಎಂ. ತಾರ್ಕುಂಡೆ ಸಮಿತಿ ವರದಿ – 1975

‘ಸಂಪೂರ್ಣ ಕ್ರಾಂತಿ’ಯ ಸಂದರ್ಭದಲ್ಲಿ ‘ಸಿಟಿಜನ್ಸ್ ಫಾರ್ ಡೆಮಾಕ್ರಸಿ’ ಸಂಘದ ಪರವಾಗಿ ಜಯಪ್ರಕಾಶ್ ನಾರಾಯಣರು ರಚಿಸಿದ್ದ ಸಮಿತಿ. ಸಮಿತಿಯು ಹಲವಾರು ಸಂಘ, ಸಂಸ್ಥೆ, ಜನತೆಯ ನಡುವೆ ವಿಚಾರ ವಿನಿಮಯ ನಡೆಸಿ ಫೆಬ್ರವರಿ 1975ರಲ್ಲಿ ತನ್ನ ಚುನಾವಣಾ ಸುಧಾರಣಾ ಸಲಹೆಗಳನ್ನು ಮುಂದಿರಿಸಿತು.

ಚುನಾವಣೆಗಳಿಗೆ ಸರ್ಕಾರವೇ ಹಣ ಖರ್ಚು ಮಾಡುವ ವ್ಯವಸ್ಥೆ ಜಾರಿಗೆ ಸಮಿತಿ ಶಿಫಾರಸು ಮಾಡಿತ್ತು.



downloaded from: www.kpscvaani.com

### 4. ನವೆಂಬರ್ 1983ರ ಚುನಾವಣಾ ಆಯೋಗದ ಶಿಫಾರಸುಗಳು

ರಾಜಕೀಯ ಪಕ್ಷಗಳೊಂದಿಗಿನ ಚರ್ಚೆಗಳ ನಂತರ ಆಯೋಗ ಅನೇಕ ಶಿಫಾರಸುಗಳನ್ನು ಮಾಡಿತು. ಕಾಗದದಲ್ಲೇ ಉಳಿದ ಅವುಗಳು 1988ರಲ್ಲಿ ಅಲ್ಪಮಟ್ಟಿಗೆ ಜಾರಿಗೆ ಬಂದವು. ಮತಗಟ್ಟೆ ಆಕ್ರಮಣಕ್ಕೆ ಶಿಕ್ಷೆ, ಇಡೀ ಕ್ಷೇತ್ರದ ಚುನಾವಣೆಯನ್ನು ಆಯೋಗವು ರದ್ದುಗೊಳಿಸುವ ಅಧಿಕಾರ ಇವೇ ಮುಂತಾದವು ಜಾರಿಗೆ ಬಂದವು.

### 5. ದಿನೇಶ್ ಗೋಸ್ವಾಮಿ ಸಮಿತಿ ವರದಿ– 1990

ನ್ಯಾಷನಲ್ ಫ್ರಂಟ್ ಸರಕಾರ ರಚಿಸಿದ್ದ ಸರ್ವಪಕ್ಷ ಸಮಿತಿ ಇದು. ಮೇ 1990ರಲ್ಲಿ ಸಮಿತಿ ಶಿಫಾರಸ್ಸುಗಳನ್ನು ಮಾಡಿತು. ಸರ್ಕಾರವೇ ಉರುಳಿದ್ದರಿಂದ ವರದಿ ನೆನೆಗುದಿಗೆ ಬಿದ್ದಿತು. ಮಾನ್ಯತೆ ಪಡೆದ ಅಭ್ಯರ್ಥಿಗಳ ಕೆಲವು ನಿರ್ದಿಷ್ಟ ಚುನಾವಣಾ ವೆಚ್ಚವನ್ನು ಸರ್ಕಾರವೇ ನಗದಲ್ಲದ ರೂಪದಲ್ಲಿ ಭರಿಸಬೇಕೆಂಬುದು ಸಮಿತಿಯ ಪ್ರಮುಖ ಸಲಹೆಯಾಗಿತ್ತು.

### 6. ಎನ್.ಎನ್. ವೋಹ್ರಾ ಸಮಿತಿ

80ರ ದಶಕದಲ್ಲಿ ಹೆಚ್ಚುತ್ತಿರುವ ರಾಜಕೀಯ ಅಪರಾಧೀಕರಣದ ಬಗೆಗೆ ಕಳವಳ ವ್ಯಕ್ತಪಡಿಸಿತ್ತು.

### 7. ಮತದಾರರ ಭಾವಚಿತ್ರ ಸಹಿತ ಗುರುತಿನ ಚೀಟಿ ವಿತರಣೆ – 1993

ಅಂದಿನ ಮುಖ್ಯ ಚುನಾವಣಾ ಆಯುಕ್ತರಾದ ಟಿ.ಎನ್. ಶೇಷನ್‌ರ ಆಸಕ್ತಿಯ ಕಾರ್ಯ. ಇಂದಿನವರೆಗೂ ಈ ಚೀಟಿ ವಿತರಣೆ ಕಾರ್ಯ ನಿಧಾನಗತಿಯಲ್ಲಿ ಸಾಗುತ್ತಾ ಬಂದಿದೆ. ಗುರುತಿನ ಚೀಟಿ ವಿತರಣೆಯಿಂದ ಅಕ್ರಮ ಮತದಾನ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗಿದ್ದರೂ ವಿತರಣೆಯಲ್ಲಿನ ದೋಷದಿಂದ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ.

### 8. ಚುನಾವಣಾ ಆಯೋಗ– ಬಹು ಸದಸ್ಯ ಆಯೋಗವಾಗಿ ಮಾರ್ಪಾಡು

1989ರ ತನಕ ಏಕಸದಸ್ಯ ಅಂಗವಾಗಿದ್ದ ಆಯೋಗಕ್ಕೆ ಆ ವರ್ಷದ ಸಾರ್ವತ್ರಿಕ ಚುನಾವಣೆಗೆ ಸ್ವಲ್ಪ ಮೊದಲು ಇಬ್ಬರು ಸದಸ್ಯರನ್ನು ನೇಮಕ ಮಾಡಲಾಯಿತು. ಚುನಾವಣೆಯ ನಂತರ ಮತ್ತೆ ಏಕ–ಸದಸ್ಯ ಅಂಗವಾಯಿತು. 1993ರಲ್ಲಿ ಮತ್ತಿಬ್ಬರು ಸದಸ್ಯರನ್ನು ನೇಮಕ ಮಾಡಲಾಗಿ ಅಂದಿನಿಂದ ತ್ರಿಸದಸ್ಯ ಸಂಸ್ಥೆಯಾಗಿದೆ. ಎಲ್ಲ ಸದಸ್ಯರು ಸಮಾನ ಅಧಿಕಾರ ಹೊಂದಿದ್ದು, ಮುಖ್ಯ ಚುನಾವಣಾ ಆಯುಕ್ತರು ಕೇವಲ ಮುಖ್ಯಸ್ಥರಂತೆ



downloaded from: www.kpscvaani.com

ಕಾರ್ಯ ನಿರ್ವಹಿಸುತ್ತಾರೆ. ಯಾವುದೇ ನಿರ್ಧಾರವನ್ನು ಬಹುಮತದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಆದರೆ, ಆಯುಕ್ತರುಗಳ ನೇಮಕಾತಿ ಸಂಪೂರ್ಣವಾಗಿ ರಾಜಕೀಯದಿಂದ ಹೊರತಾದುದಾಗಿಲ್ಲ.

## 1996ರ ಸುಧಾರಣೆಗಳು

ಪ್ರಜಾಪ್ರತಿನಿಧಿ ಕಾಯ್ದೆಯಲ್ಲಿ ಮೇಲೆ ಉಲ್ಲೇಖಿಸಿದಂತೆ ಹಲವಾರು ಸುಧಾರಣೆಗಳನ್ನು ತರಲಾಯಿತು.

## ಇಂದ್ರಜಿತ್ ಗುಪ್ತಾ ಸಮಿತಿ – 1988

ಚುನಾವಣಾ ವೆಚ್ಚವನ್ನು ಸರ್ಕಾರ ಭರಿಸುವುದರ ಕುರಿತು ರಚಿಸಲಾಗಿದ್ದ ಸರ್ವಪಕ್ಷ ಸಮಿತ ಹಲವಾರು ಸಲಹೆಗಳನ್ನು ಮುಂದಿಟ್ಟಿತು. ಅವು

- ಸರ್ಕಾರವು ಚುನಾವಣಾ ವೆಚ್ಚವನ್ನು ಹಣಕಾಸು ರೂಪದಲ್ಲಿ ಭರಿಸಬಾರದು
- ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನೆರವಿನಿಂದ 'ಚುನಾವಣಾ ನಿಧಿ'

## ಸ್ಥಾಪನೆ

- ವಾರ್ಷಿಕ ಹಣಕಾಸು ನೆರವು.
- ಮಾನ್ಯತೆ ಪಡೆದ ಪಕ್ಷಗಳಿಗೆ ಮಾತ್ರ ನೆರವು.
- ರಾಜಕೀಯ ಪಕ್ಷಗಳು ತಮ್ಮ ವಾರ್ಷಿಕ ಹಣಕಾಸು ವಿವರಗಳನ್ನು ಆಯೋಗಕ್ಕೆ ನೀಡುವುದು.

ಹೀಗೆ ಹತ್ತು ಹಲವಾರು ಸಮಿತಿಗಳು ಶಿಫಾರಸು, ಸಲಹೆಗಳನ್ನು ನೀಡಿವೆ. ಕೆಲವು ಜಾರಿಗೆ ಬಂದಿದ್ದರೂ ಬಹುತೇಕ ನೆನೆಗುದಿಗೆ ಬಿದ್ದಿವೆ.

## ಆಗಬೇಕಾಗಿರುವುದು

### 1. ಚುನಾವಣಾ ಪದ್ಧತಿಯ ಪುನರ್ರಚನೆ

- 'ಫಸ್ಟ್ ಪಾಸ್ಟ್ ದಿ ಪೋಸ್ಟ್' (ಎಫ್‌ಪಿಟಿಪಿ) ಪದ್ಧತಿಯಲ್ಲಿ ಕೆಲವಾರು ದೋಷಗಳಿದ್ದರೂ ಸರಳವಾಗಿದೆ. ಭಾರತದಂತಹ ಬೃಹತ್ ಹಾಗೂ ಹೆಚ್ಚು ಅನಕ್ಷರಸ್ಥ



downloaded from: www.kpscvaani.com

ಸಮಾಜದಲ್ಲಿ ಈ ಪದ್ಧತಿ ಸೂಕ್ತವಾಗಿದೆ. ಆದರೆ, 'ಗೆಲ್ಲುವ ಅಭ್ಯರ್ಥಿಯು ಕನಿಷ್ಠ ಶೇ. 50ರಷ್ಟು ಮತ ಗಳಿಸಲೇಬೇಕು' ಎಂಬ ಕಾನೂನು ಮಾಡುವುದು ಸೂಕ್ತ.

- ಪಕ್ಷಗಳು ಗಳಿಸುವ ಮತ ಪ್ರಮಾಣದಲ್ಲೇ ಅವುಗಳ ಪ್ರತಿನಿಧಿತ್ವ ಆದಷ್ಟು ಮಟ್ಟಿಗೆ ಇರಬೇಕು.

## 2. ಹಣದ ಆಟದ ನಿರ್ಮೂಲನೆ

- ಸಾಧ್ಯವಾದಷ್ಟು ಮಟ್ಟಿಗೆ ಚುನಾವಣಾ ವೆಚ್ಚವನ್ನು ಸರ್ಕಾರ ಭರಿಸಬೇಕು.
- ಆಮಿಷ ಒಡ್ಡುವವರನ್ನು, ಸ್ವೀಕರಿಸುವವರನ್ನು ಅತ್ಯಂತ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.
- ಪ್ರಚಾರ ಸಾಮಗ್ರಿಗಳನ್ನು ನಿಯಂತ್ರಣದಲ್ಲಿಟ್ಟು, ಟಿ.ವಿ., ರೇಡಿಯೋ ಹಾಗೂ ಇತರೆ ಮಾಧ್ಯಮಗಳ ಮೂಲಕ, ಭಾಷಣ, ಮನವಿಗಳ ಮೂಲಕ ಪ್ರಚಾರಕ್ಕೆ ಒತ್ತು ನೀಡಿ, ಪ್ರೋತ್ಸಾಹಿಸಬೇಕು.

## 3. ರಾಜಕೀಯ ಪಕ್ಷಗಳ ಕಾರ್ಯ ನಿರ್ವಹಣೆಯ ನಿಯಂತ್ರಣ

- ಪಕ್ಷಗಳಲ್ಲಿ 'ಆಂತರಿಕ ಪ್ರಜಾಪ್ರಭುತ್ವ' ಅಳವಡಿಕೆಯನ್ನು ಕಡ್ಡಾಯಗೊಳಿಸುವುದು
- ಏಕ ಚಕ್ರಾಧಿಪತ್ಯ / ಕುಟುಂಬ ನಿಯಂತ್ರಣಕ್ಕೆ ನಿಷೇಧ ಹೇರಬೇಕು
- ಖಾತೆಗಳ ಕಡ್ಡಾಯ ವಿವರ ಸಲ್ಲಿಸುವುದು
- ಸದಸ್ಯತ್ವ ವಿವರಗಳ ಕಡ್ಡಾಯ ಪ್ರಕಟಣೆ

## 4. ರಾಜಕೀಯ ಅಪರಾಧೀಕರಣದ ಮೂಲೋತ್ಪಾಟನೆ

- ಅಪರಾಧಿ ಹಿನ್ನೆಲೆಯುಳ್ಳವರಿಗೆ ಯಾವ ಪಕ್ಷದಲ್ಲಿಯೂ ಸದಸ್ಯತ್ವ ನೀಡಬಾರದು
- ಅಭ್ಯರ್ಥಿಗಳ ಪೂರ್ವಾಪರ ಶೋಧನೆ
- ತೋಳು ಬಲ ಬಳಸುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು

## 5. ಮಹಿಳಾ ಪ್ರಾತಿನಿಧ್ಯ

- ಲೋಕಸಭೆ, ವಿಧಾನ ಸಭೆಗಳಲ್ಲೂ ಮಹಿಳಾ ಮೀಸಲಾತಿ ಜಾರಿಯಾಗಬೇಕು



downloaded from: www.kpscvaani.com

- ಚುನಾವಣಾ ಆಯೋಗ ಹಾಗೂ ಚುನಾವಣಾ ಪ್ರಕ್ರಿಯೆ
- ಚುನಾವಣಾ ಆಯೋಗವನ್ನು ಸಂಪೂರ್ಣ 'ರಾಜಕೀಯ ವಿಮುಕ್ತಿ'ಗೊಳಿಸಬೇಕು
- ಆಯೋಗದ ಜೊತೆಗೆ ಒಂದು 'ಶೋಧನಾ / ವಿಚಕ್ಷಣ ಆಯೋಗ' ರಚಿಸಬೇಕು. ಅದು ಅಭ್ಯರ್ಥಿಗಳ ಹಿನ್ನೆಲೆ, ಚಟುವಟಿಕೆ, ಚುನಾವಣಾ ಪ್ರಕ್ರಿಯೆಗಳ ಮೇಲೆ ನಿಗಾ ಇಟ್ಟು ಆಯೋಗಕ್ಕೆ ವರದಿ ನೀಡುತ್ತಿರಬೇಕು.
- ಮತದಾರರ ಪಟ್ಟಿಯನ್ನು ವರ್ಷಕ್ಕೊಮ್ಮೆ ಪರಿಷ್ಕೃತಗೊಳಿಸುತ್ತಾ ಸಾಗಬೇಕು. ಗುರುತಿನ ಪತ್ರದ ಬದಲು, 'ಭಾವಚಿತ್ರ ಸಮೇತ ಮತದಾರರ ಪಟ್ಟಿ' ಸಿದ್ಧಪಡಿಸಬೇಕು.

### 6. ರಾಜಕೀಯ ಶಿಕ್ಷಣ

- ಜನತೆಗೆ ತಮ್ಮ ಮತದ ಅಮೂಲ್ಯತೆಯನ್ನು ಅರ್ಥ ಮಾಡಿಸಬೇಕು.
- ದೇಶ, ರಾಜ್ಯಗಳ ಉಳಿವಿನ ಬಗೆಗೆ, ಪ್ರಗತಿಯ ಬಗೆಗೆ ಉದಾತ್ತವಾಗಿ ಆಲೋಚಿಸುವಂತೆ ಅರಿವು ಮೂಡಿಸಬೇಕು.
- ಚುನಾವಣಾ ಆಯೋಗವೇ ಉಪನ್ಯಾಸ, ಭಾಷಣ, ಮನವಿಗಳ ಮೂಲಕ ಮತದಾರರನ್ನು ಜಾಗೃತಿಗೊಳಿಸಬೇಕು

## ಕೊನೆಯದಾಗಿ

ಯಾವುದೇ ಚುನಾವಣೆ ಪ್ರತಿಶತ ಸಮರ್ಪಕವಲ್ಲ ಎಂಬ ಮಾತಿದೆ. ಅಂತಹ ಸಿನಿಕ ಮಾತುಗಳನ್ನು ಆಡಿ ಕೈ ಕಟ್ಟಿ ಕೂರುವ ಬದಲು ಉತ್ತಮ ವ್ಯವಸ್ಥೆಯ ಕಡೆಗೆ ತುಡಿಯುತ್ತಿರುವುದೇ ಮೇಲು. ಪ್ರಜಾಪ್ರಭುತ್ವದಲ್ಲಿ ಸ್ವತಂತ್ರ, ನ್ಯಾಯಯುತ ಚುನಾವಣೆ ನಡೆಸಬೇಕಾಗಿರುವುದು ಅವಶ್ಯ.

## ಯೋಜನಾ ಆಯೋಗದ ಉಗಮ, ಬೆಳವಣಿಗೆ ಮತ್ತು ರದ್ಧತಿ

1947 ಆಗಸ್ಟ್ 15ರಂದು ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ಭಾರತದ ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರೂರವರು ಭಾರತದ ಪ್ರಗತಿಗೆ ವೇಗ ಮತ್ತು ನಿರ್ದಿಷ್ಟ ರೂಪ ನೀಡಲು ಹಲವಾರು ಸಂವಿಧಾನೇತರ ಸಂಸ್ಥೆಗಳನ್ನು ಸ್ಥಾಪಿಸುವ ಆಶಯ ವ್ಯಕ್ತಪಡಿಸಿದರು. ಇಂತಹ ಆಶಯದಲ್ಲಿ ಭಾರತದ ಪ್ರಗತಿಗಾಗಿ ಸ್ಥಾಪಿತವಾದ ಸಂಸ್ಥೆಯೇ ಭಾರತದ



downloaded from: www.kpscvaani.com

ಯೋಜನಾ ಆಯೋಗ. ಭಾರತ ಸರ್ಕಾರದ ಕಾರ್ಯಾಂಗದ ಗೊತ್ತುವಳಿಯ ಮೂಲಕ 1950ರಲ್ಲಿ ಯೋಜನಾ ಆಯೋಗದ ಮಂಡಳಿಯನ್ನು ಸ್ಥಾಪಿಸಲಾಯಿತು. 1946ರಲ್ಲಿ ಕೆ.ಸಿ. ನಿಯೋಗಿರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಲಹಾ ಯೋಜನಾ ಮಂಡಳಿಯ ಶಿಫಾರಸ್ಸಿನ ಮೇರೆಗೆ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. ಭಾರತದ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯಾಗಿ ಯೋಜನೆಯನ್ನು ರೂಪಿಸುವ ಪರಮೋಚ್ಛ ಸಂಸ್ಥೆಯಾದ ಯೋಜನಾ ಆಯೋಗವು 1950ರಿಂದ ಇಂದಿನವರೆಗೆ ಭಾರತದ ಅಭಿವೃದ್ಧಿಯಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಆದರೆ ಇತ್ತೀಚೆಗೆ ಕೇಂದ್ರದಲ್ಲಿ ಅಸ್ತಿತ್ವಕ್ಕೆ ಬಂದ ಎನ್.ಡಿ.ಎ. ಸರ್ಕಾರದ ನೂತನ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಆಗಸ್ಟ್ 15, 2014 ರಂದು ಕೆಂಪುಕೋಟೆಯ ಮೇಲೆ ಮಾಡಿದ ತಮ್ಮ ಮೊದಲ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಯೋಜನಾ ಆಯೋಗವನ್ನು ರದ್ದುಪಡಿಸುವ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಯೋಜನಾ ಆಯೋಗವನ್ನು ರದ್ದುಪಡಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಪ್ರೇರಿತ ಸಮಾಜವಾದಿ ಸಂರಚನೆಯನ್ನು ಹೊಡೆದು ಉರುಳಿಸಿದ್ದಾರೆ.

ಈ ಯೋಜನಾ ಆಯೋಗಕ್ಕೆ ಇತಿಹಾಸವೇ ಇದೆ. ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೂ ಮೊದಲು 1938ರಲ್ಲಿ ಸುಭಾಶ್‌ಚಂದ್ರಬೋಸ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಯೋಜನಾ ಆಯೋಗಕ್ಕೆ ಅಡಿಗಲ್ಲು ಹಾಕಿದರು. ಮೇಘನಾದ್ ಸಹಾ ಆಯೋಗದ ರೂಪುರೇಷೆಗಳನ್ನು ಸಿದ್ಧಪಡಿಸಿದ್ದರು. 1938ರಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಬೋಸ್, 'ಸ್ವತಂತ್ರ್ಯ ಭಾರತವನ್ನು ಹಸಿವು ಮುಕ್ತ ಭಾರತ' ಮಾಡಲು ಕೇಂದ್ರ ಯೋಜನಾ ಆಯೋಗ ರಚಿಸಲಾಗುವುದು ಎಂದು ಹೇಳಿದ್ದರು. ನೆಹರೂ ಇದರ ಮೊದಲ ಅಧ್ಯಕ್ಷರಾದರು.

## ಈವರೆಗಿನ ಯೋಜನಾ ಆಯೋಗದ ಉಪಾಧ್ಯಕ್ಷರುಗಳು

1. ಗುಲ್ಜಾರಿಲಾಲ್ ನಂದ
2. ವಿ.ಟಿ. ಕೃಷ್ಣಮಾಚಾರಿ
3. ಸಿ.ಎಂ. ತ್ರಿವೇದಿ
4. ಅಶೋಕ್ ಮೆಹ್ತಾ
5. ಡಾ. ಡಿ.ಆರ್. ಗಾಡ್ಗೀಳ್
6. ಸಿ. ಸುಬ್ರಹ್ಮಣ್ಯಂ
7. ಡಿ.ಪಿ. ಧರ್
8. ಪಿ.ಎನ್. ಹಕ್ಸರ್
9. ಡಾ. ಡಿ.ಟಿ. ಲಕ್ಕವಾಲ
10. ಎನ್.ಡಿ. ತಿವಾರಿ
11. ಎಸ್.ವಿ. ಚವ್ಹಾಣ್
12. ಪಿ.ಸಿ. ಸೇಥಿ



downloaded from: www.kpscvaani.com

13. ಪಿ.ವಿ. ನರಸಿಂಹರಾವ್
14. ಮನಮೋಹನ್ ಸಿಂಗ್
15. ಪಿ. ಶಿವಶಂಕರ್
16. ಮಾಧವ್‌ಸಿಂಗ್ ಸೋಲಂಕಿ
17. ರಾಮಕೃಷ್ಣ ಹೆಗಡೆ
18. ಪ್ರೊ. ಮಧು ದಂಡಾವತೆ
19. ಮೋಹನ್ ಧಾರಿಯಾ
20. ಪ್ರಣಬ್ ಮುಖರ್ಜಿ
21. ಜಸ್ವಂತ್ ಸಿಂಗ್
22. ಕೆ.ಸಿ. ಪಂಥ್
23. ಮಾಂಟೆಕ್ ಸಿಂಗ್ ಅಹ್ಲುವಾಲಿಯಾ

ಇದು ನಮ್ಮ ಮಿತ್ರರಾಷ್ಟ್ರ ರಷ್ಯಾದ ಬಳುವಳಿ ಎಂದರೆ ತಪ್ಪಲ್ಲ. ಮೊದಲ ಪ್ರಪಂಚ ಯುದ್ಧದ ನಂತರ ರಷ್ಯಾ ಎಲ್ಲ ಕ್ಷೇತ್ರಗಳಲ್ಲೂ ಜಾಗತಿಕ ಮಟ್ಟದಲ್ಲಿ ಅಗಾಧ ಮುನ್ನಡೆ ಸಾಧಿಸಿತು. ರಷ್ಯಾದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದೇ ಅಲ್ಲಿನ ಯೋಜನಾ ಆಯೋಗ. ರಷ್ಯಾ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಮೂಲಕ ಪಾಶ್ಚಾತ್ಯ ರಾಷ್ಟ್ರಗಳಿಗೆ ಸಡ್ಡು ಹೊಡೆಯಿತು. ಅಂತದೇ ಯೋಜನೆಗಳನ್ನು ಭಾರತದಲ್ಲಿ ಜಾರಿಗೊಳಿಸಲು ಮುಂದಾದ ಅಂದಿನ ಪ್ರಧಾನಿ ಜವಹರಲಾಲ್ ನೆಹರು 1950ರಲ್ಲಿ ಯೋಜನಾ ಆಯೋಗಕ್ಕೆ ಅಡಿಗಲ್ಲು ಹಾಕಿದರು. ಅಂದಿನಿಂದಲೇ ಭಾರತದಲ್ಲೂ ಪಂಚವಾರ್ಷಿಕ ಯೋಜನೆಗಳು ಆರಂಭಗೊಂಡವು. ಆರಂಭದಲ್ಲಿ ಆಯೋಗ ನೇರವಾಗಿ ಪ್ರಧಾನಮಂತ್ರಿಗಳಿಗೆ ವರದಿ ಮಾಡಿಕೊಳ್ಳಬೇಕಾಗಿತ್ತು. 1951ರಿಂದ ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸಿತು. 1965ರ ನಂತರ ಮೂರು ವರ್ಷದಲ್ಲಿ ಕಂಡ ಭಾರತ–ಪಾಕ್ ನಡುವಿನ ಯುದ್ಧ, ಭೀಕರ ಬರಗಾಲ, ಬೆಲೆ ಏರಿಕೆ ಮತ್ತಿತರ ಕಾರಣಗಳಿಂದ ಪಂಚವಾರ್ಷಿಕ ಯೋಜನೆ ಮಾಡಲಿಲ್ಲ. ವಾರ್ಷಿಕ ಯೋಜನೆಗಳನ್ನಷ್ಟೆ ಮಾಡಲಾಗಿತ್ತು. 1969ರ ಕೇಂದ್ರದಲ್ಲಿ ಸೃಷ್ಟಿಯಾದ ರಾಜಕೀಯ ಅಸ್ಥಿರತೆ ಸಂದರ್ಭದಲ್ಲೂ ಎರಡು ವರ್ಷ ಪಂಚವಾರ್ಷಿಕ ಯೋಜನೆ ಸ್ಥಗಿತಗೊಂಡಿತ್ತು. 1992ರಿಂದ ಮತ್ತೆ ಚಾಲನೆಗೊಂಡಿತು.

ಯೋಜನಾ ಆಯೋಗ ಅತ್ಯಂತ ಪ್ರಮುಖವಾದ ಮೂರು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದೆ. ಮೊದಲನೆಯದಾಗಿ ಹಣಕಾಸು ವ್ಯವಸ್ಥೆಯ ಕ್ರಮಬದ್ಧ ಅಭಿವೃದ್ಧಿ ನೋಡಿಕೊಳ್ಳುವುದು. ಎರಡನೆಯದಾಗಿ ಹಣಕಾಸು ಸಚಿವಾಲಯ ಮತ್ತು ಇತರೆ ಸಚಿವಾಲಯಗಳ ನಡುವೆ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಂಪರ್ಕ ಕೊಂಡಿಯಾಗಿ ಕಾರ್ಯ ನಿರ್ವಹಿಸುವುದು. ಅಂದರೆ ಯೋಜನೆ ರೂಪಿಸುವುದು ಮತ್ತು ಅದಕ್ಕೆ ಅಗತ್ಯವಾದ ಹಣಕಾಸು ನೆರವು ಕಲ್ಪಿಸುವುದು. ಮೂರನೆಯ ಮತ್ತು ಅತಿ ಮುಖ್ಯವಾದದ್ದು ಯೋಜನೆಗಳ ಸಮರ್ಪಕ ಮತ್ತು ಗುಣಾತ್ಮಕವಾಗಿ ಅನುಷ್ಠಾನದ ಬಗ್ಗೆ



downloaded from: www.kpscvaani.com

ನಿಗಾವಹಿಸಿ ಮಾಡಿ ಕೇಂದ್ರ ಸರ್ಕಾರಕ್ಕೆ ವರದಿ ಮಾಡುವುದು. ಆಯೋಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವುದರೊಂದಿಗೆ ಒಕ್ಕೂಟ ವ್ಯವಸ್ಥೆಯನ್ನು ಮತ್ತಷ್ಟು ಬಲಿಷ್ಠಗೊಳಿಸುತ್ತದೆ. ಆರ್ಥಿಕವಾಗಿ ಬಲಿಷ್ಠ ಮತ್ತು ದುರ್ಬಲ ರಾಜ್ಯಗಳ ನಡುವೆ ಸಮತೋಲ ಸಾಧಿಸಲು ಅಗತ್ಯವಾದ ಕಾರ್ಯಕ್ರಮ ರೂಪಿಸುವುದು, ಅಸಮಾನ ಅಭಿವೃದ್ಧಿಯನ್ನು ದೂರ ಮಾಡುವ ಕೆಲಸ ಮಾಡುತ್ತದೆ. ಹಾಗೆಯೇ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಗೆ ಪ್ರತ್ಯೇಕ ಯೋಜನೆಗಳು, ಬುಡಕಟ್ಟು ಸಮುದಾಯಗಳ ಅಭಿವೃದ್ಧಿ, ಮಹಿಳಾ ಸಬಲೀಕರಣ, ಸಾರ್ವತ್ರಿಕ ಶಿಕ್ಷಣ, ಮೂಲಸೌಕರ್ಯಗಳನ್ನು ಕೈಗೊಳ್ಳಲು ಅಗತ್ಯ ಯೋಜನೆಗಳನ್ನು ರೂಪಿಸುವುದೇ ಯೋಜನಾ ಆಯೋಗ. ಕೃಷಿ, ನೀರಾವರಿ, ಆಹಾರ ಉತ್ಪಾದನೆಯಂತಹ ಪ್ರಮುಖ ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಯೋಜನಾ ಆಯೋಗ ಹೊಂದಿದೆ. ಇದೇ ಸಂದರ್ಭದಲ್ಲಿ ಜನಸಮುದಾಯ ಆರ್ಥಿಕ, ಸಾಮಾಜಿಕ ಮತ್ತಿತರ ಕ್ಷೇತ್ರಗಳಲ್ಲಿನ ವಸ್ತುಸ್ಥಿತಿ ಕುರಿತು ಸಮೀಕ್ಷೆಗಳನ್ನು ಕೈಗೊಂಡು ಅದಕ್ಕೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತದೆ. 1951 ರಿಂದ ಹತ್ತು ವರ್ಷಗಳ ಅವಧಿಯನ್ನು ಸುವರ್ಣಯುಗ ಎಂದು ಕರೆಯಲಾಗುವುದು. ಅದಕ್ಕೆ ಕಾರಣವೂ ಇಲ್ಲದಿಲ್ಲ. ನೆಹರೂ ಅಧ್ಯಕ್ಷತೆಯಲ್ಲಿ ಆಯೋಗ ಭಾರತದ ನಿರ್ಮಾಣದಲ್ಲಿ ಮುಂಚೂಣಿಯಲ್ಲಿತ್ತು. ನೆಹರೂ ಸಮಕಾಲೀನರಾದ ಸಾಂಖಿಕ ತಜ್ಞರೆಂದೇ ಜನಪ್ರಿಯರಾದ ಮಹಾಲನೋಬಿಸ್, ಪೀತಾಂಬರ್ ಪಂತ್‌ರಂತಹ ತಜ್ಞರ ಚಿಂತನೆಯಲ್ಲಿ ಕಾಂಗ್ರೆಸ್‌ನ ಹೊರಗಿನವರಾದ ವಿ.ಟಿ. ಕೃಷ್ಣಮಾಚಾರಿ, ಅಶೋಕ್ ಮೆಹ್ತಾ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ದೇಶದ ಅಭಿವೃದ್ಧಿಗೆ ಆಗ ರೂಪಿಸಿದ್ದ ಯೋಜನೆಗಳೇ ಇಂದು ಭಾರತದ ಅಭಿವೃದ್ಧಿಯ ಅಡಿಗಲ್ಲುಗಳು. ಆಯೋಗ ದೇಶದಲ್ಲಿನ ಅಭಿವೃದ್ಧಿ ಚಟುವಟಿಕೆಗಳ ಕೇಂದ್ರಬಿಂದುವಾಗಿತ್ತು.

## ಆಡಳಿತ ಮಂಡಳಿ

ಆಯೋಗಕ್ಕೆ ಪ್ರಧಾನಮಂತ್ರಿಗಳು ಪದನಿಮಿತ್ತ ಅಧ್ಯಕ್ಷರು, ಉಳಿದಂತೆ ಉಪಾಧ್ಯಕ್ಷರನ್ನು ನೇಮಿಸಲಾಗುವುದು. ಇವರಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನ ನೀಡಲಾಗಿದೆ. ಹಣಕಾಸು, ಕೃಷಿ, ಗೃಹ, ಆರೋಗ್ಯ, ರಾಸಾಯನಿಕ ಗೊಬ್ಬರ, ಮಾನವ ಸಂಪನ್ಮೂಲ, ಮಾಹಿತಿ ತಂತ್ರಜ್ಞಾನ ಮತ್ತು ಯೋಜನಾ ಖಾತೆ ರಾಜ್ಯ ಸಚಿವರು ಇದರ ಸದಸ್ಯರಾಗಿರುತ್ತಾರೆ. ಇವರ ಜೊತೆಗೆ ಕೃಷಿ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳ ತಜ್ಞರು ಸದಸ್ಯರಾಗಿರುತ್ತಾರೆ.



downloaded from: www.kpscvaani.com

## ಸೂಪರ್ ಕ್ಯಾಬಿನೆಟ್

ಯೋಜನಾ ಆಯೋಗದ ಸುತ್ತ ಹಲವಾರು ವಿವಾದಗಳೂ ಇವೆ. ಆಯೋಗ ನೇರವಾಗಿ ಪ್ರಧಾನಮಂತ್ರಿಗಳಿಗೆ ವರದಿ ಮಾಡಿಕೊಳ್ಳುತ್ತದೆ. ಹೀಗಾಗಿ ವಿವಿಧ ಸಚಿವಾಲಯಗಳು ಬಜೆಟ್ ಮಂಜೂರಾತಿಗಾಗಿ ಆಯೋಗದ ಮುಂದೆ ಕೈಕಟ್ಟಿ ನಿಲ್ಲಬೇಕು ಎಂಬ ಅಪವಾದಗಳು ಮೊದಲಿನಿಂದಲೂ ಕೇಳಿಬರುತ್ತಿವೆ. ಆಯೋಗ ಸೂಪರ್ ಕ್ಯಾಬಿನೆಟ್ ಆಗಿದೆ ಎಂದು ದೇಶದ ಪ್ರಥಮ ಹಣಕಾಸು ಸಚಿವರಾಗಿದ್ದ ಜಾನ್ ಮಥಾಯ್ ಸಚಿವಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

## ಪ್ರಮುಖ ಕಾರ್ಯಗಳು:

- ದೇಶದಲ್ಲಿರುವ ನೈಸರ್ಗಿಕ, ಬಂಡವಾಳ, ಮಾನವ ಸಂಪನ್ಮೂಲವನ್ನು (ತಂತ್ರಜ್ಞರು ಸೇರಿ) ಅಂದಾಜು ಮಾಡುವುದು, ದೇಶದ ಪ್ರಗತಿಗೆ ಯಾವುದೇ ಸಂಪನ್ಮೂಲ ಕೊರತೆಯಿದ್ದಲ್ಲಿ ಅದನ್ನು ಹೆಚ್ಚಿಸುವುದು.
- ಸಂಪನ್ಮೂಲಗಳನ್ನು ಸಮತೋಲನವಾಗಿ ಬಳಕೆ ಮಾಡಿಕೊಳ್ಳಲು ಅಗತ್ಯವಾದ ಯೋಜನೆ ರೂಪಿಸುವುದು.
- ಆದ್ಯತೆಗಳನ್ನು ಗುರುತಿಸಿ ಎಷ್ಟು ಹಂತಗಳಲ್ಲಿ ಯೋಜನೆ ಪೂರ್ಣಗೊಳಿಸಬೇಕೆಂದು ನಿರ್ಧರಿಸುವುದು ಮತ್ತು ಪ್ರತಿ ಹಂತಕ್ಕೂ ಅಗತ್ಯವಾದ ಸಂಪನ್ಮೂಲ ಒದಗಿಸುವುದು.
- ಆರ್ಥಿಕ ಅಭಿವೃದ್ಧಿಗೆ ತೊಡಕಾಗಿರುವ ಅಂಶಗಳನ್ನು ಗುರುತಿಸುವುದು ಮತ್ತು ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ ಯಶಸ್ವಿ ಅನುಷ್ಠಾನಕ್ಕೆ ಯೋಜನೆ ರೂಪಿಸುವುದು.
- ಎಲ್ಲ ಆಯಾಮಗಳಲ್ಲೂ ಯೋಜನೆ ಯಶಸ್ವಿಯಾಗಿ ಜಾರಿಗೊಳಿಸಲು ಅಗತ್ಯವಾದ ಕಾರ್ಯಕ್ರಮ ರೂಪಿಸುವುದು.
- ಯೋಜನೆಯ ಪ್ರತಿ ಹಂತದ ಅನುಷ್ಠಾನದ ಮೇಲ್ವಿಚಾರಣೆ ನೋಡಿಕೊಳ್ಳುವುದು. ಅಗತ್ಯವಾದಲ್ಲಿ ನೀತಿಗಳು ಮತ್ತು ಕ್ರಮಗಳಲ್ಲಿ ಮಾರ್ಪಾಟು ಮಾಡುವುದು.
- ಯೋಜನೆಯೊಂದನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪರವಾಗಿ ವಾಸ್ತವ ಪರಿಸ್ಥಿತಿಗಳ ಕುರಿತು ಅಧ್ಯಯನ ನಡೆಸಿ ವರದಿ ನೀಡುವುದು. ಕೆಲವು ಯೋಜನೆಗಳ ಅನುಷ್ಠಾನದ ಮಧ್ಯೆ ಎದುರಾಗುವ ಆರ್ಥಿಕ, ರಾಜಕೀಯ ಪರಿಸ್ಥಿತಿಗಳ ಕುರಿತೂ ಶಿಫಾರಸ್ಸುಗಳನ್ನು ಮಾಡುವುದು.



downloaded from: www.kpscvaani.com

ಭಾರತ ಒಂದು ಒಕ್ಕೂಟ ವ್ಯವಸ್ಥೆಯಾಗಿದ್ದು ವಿವಿಧ ಪಕ್ಷಗಳು ಮುನ್ನಡೆಸುವ ರಾಜ್ಯ ಸರ್ಕಾರಗಳು, ರಾಜಕಾರಣದಲ್ಲಿ ತಮ್ಮದೇ ಸೈದ್ಧಾಂತಿಕ ನಿಲುವುಗಳನ್ನು ಹೊಂದಿರುವ ನಾಯಕರೂ ಇದ್ದಾರೆ. ಹೀಗಿರುವಾಗ ಹತ್ತಾರು ಚಿಂತಕರು ಸೇರಿ ಆಯಾ ರಾಜ್ಯಗಳ ಯೋಜನೆಗಳನ್ನು ನಿರ್ದೇಶಿಸುವುದು ಎಷ್ಟು ಸರಿ ಎಂಬ ಪ್ರಶ್ನೆಗಳು ಆಗಾಗ್ಗೆ ಎದ್ದಿದ್ದವು. ರಾಜ್ಯಗಳಿಂದ ಕೇಂದ್ರ ಬೊಕ್ಕಸಕ್ಕೆ ಸಾಕಷ್ಟು ತೆರಿಗೆ ಸಂಗ್ರಹವಾಗುತ್ತದೆ. “ನಮ್ಮ ಹಣ ನಮಗೆ ಕೊಡಿ”, ಎಂದು ಆಯೋಗದ ಮುಂದೆ ಕೇಳಿಕೊಳ್ಳುವಂತಿದೆ ಎಂಬ ಆರೋಪಗಳಿವೆ. ರಾಜ್ಯಗಳಲ್ಲಿ ಇಂಥದೇ ಯೋಜನೆಗಳನ್ನು ರೂಪಿಸಬೇಕೆಂದು ಆಯೋಗ ಹೇಳುತ್ತಿತ್ತು. ಇದು ರಾಜ್ಯಗಳ ಪಿತ್ತವನ್ನು ನೆತ್ತಿಗೇರಿಸುತ್ತಿತ್ತು.

ಕೆಲವೊಮ್ಮೆ ಕೇಂದ್ರ ಮತ್ತು ರಾಜ್ಯದಲ್ಲಿ ಬೇರೆ ಸರ್ಕಾರಗಳಿದ್ದಾಗ ರಾಜ್ಯ ಸರ್ಕಾರದ ಯೋಜನೆಗಳಿಗೆ ಅನುಮೋದನೆ ನೀಡದೆ ಆಯೋಗ ಸತಾಯಿಸುತ್ತಿತ್ತು. ಪಶ್ಚಿಮ ಬಂಗಾಳದಲ್ಲಿ ಹಲ್ದಿಯಾ ರಿಫೈನರೀಸ್ ಸ್ಥಾಪಿಸಲು ಅಂದಿನ ಜ್ಯೋತಿ ಬಸು ನೇತೃತ್ವದ ಎಡರಂಗ ಸರ್ಕಾರ ಶತಪ್ರಯತ್ನ ನಡೆಸಿತ್ತು. ಯುಪಿಎ ಅಧಿಕಾರ ಅವಧಿಯಲ್ಲಿ ಮೋದಿ ನೇತೃತ್ವದ ಗುಜರಾತ್ ಸರ್ಕಾರದ ಹಲವು ಯೋಜನೆಗಳಿಗೆ ಆಯೋಗ ಕೆಂಪು ಬಾವುಟ ತೋರಿಸಿತ್ತು. ನರೇಂದ್ರ ಮೋದಿ ಪ್ರಧಾನಿಯಾದ ನಂತರ ಯೋಜನಾ ಆಯೋಗ ರದ್ದುಪಡಿಸಲು ಇದು ಮುಖ್ಯ ಕಾರಣ ಎಂಬ ಮಾತುಗಳು ಕೇಳಿಬರುತ್ತಿವೆ.

ಪ್ರಧಾನಿಯಾಗಿದ್ದ ರಾಜೀವ್‌ಗಾಂಧಿ, ಯೋಜನಾ ಆಯೋಗವನ್ನು ವಾಚಾಮಗೋಚರ ಟೀಕಿಸಿದ್ದರು. ಅದೊಂದು ಜೋಕರ್‌ಗಳ ಗುಂಪು ಎಂತಲೂ ಹೇಳಿದ್ದರು. ವಿದೇಶದ ಕೆಲವು ತಜ್ಞರು ಸಹ ಭಾರತದ ಆರ್ಥಿಕತೆ ಮತ್ತು ಯೋಜನಾ ಆಯೋಗದ ಕಾರ್ಯವೈಖರಿ ಕುರಿತು ಹಲವು ಟೀಕೆಗಳನ್ನು ಮಾಡಿದ್ದರು. ಇವರ ಪೈಕಿ ಮಿಲ್ಟನ್ ಫ್ರೀಡ್‌ಮನ್ ಭಾರತದ ಮಿಶ್ರ ಆರ್ಥಿಕ ವ್ಯವಸ್ಥೆ ಕುರಿತು ಅಧ್ಯಯನ ಮಾಡಲು ಬಂದಿದ್ದರು. ಯೋಜನಾ ಆಯೋಗದ ಕುರಿತು ಪ್ರತಿಕ್ರಿಯಿಸಿದ್ದ ಅವರು, “ವಿದೇಶಗಳಲ್ಲಿನ ಆರ್ಥಿಕತೆ ಕುಸಿತಕ್ಕೆ ಶತಮಾನಗಳು ಹಿಡಿದರೆ ಅಭಿವೃದ್ಧಿಗೆ ದಶಕಗಳು ಬೇಕಾದರೆ ಭಾರತಕ್ಕೆ ಶತಮಾನಗಳನ್ನು ಬೇಕಾಗುವುದು” ಎಂದು ಟೀಕಿಸಿದ್ದರು.

ಲಾಲ್‌ಬಹದ್ದೂರ್ ಶಾಸ್ತ್ರಿ ಪ್ರಧಾನಮಂತ್ರಿಯಾಗಿದ್ದಾಗ ಆಯೋಗದ ಗಾತ್ರವನ್ನು ಕುಗ್ಗಿಸುವುದರೊಂದಿಗೆ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುವ ಕುರಿತು ಚಿಂತನೆ ನಡೆಸಿದ್ದರು. ಹಾಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಆಯೋಗಕ್ಕೆ ತಿಲಾಂಜಲಿ ಇಡುವ



downloaded from: www.kpscvaani.com

ಮಾತನ್ನಾಡಿದ್ದಾರೆ. ಈಗಿರುವ ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಸಮಿತಿಗೆ ಬದಲಾಗಿ ಹತ್ತು ಮಂದಿ ತಜ್ಞರ ಸಮಿತಿ ನೇಮಿಸುವುದು. ಇದೇ ಸಮಿತಿ ಯೋಜನಾ ಆಯೋಗದ ಉಸ್ತುವಾರಿ ನೋಡಿಕೊಳ್ಳುವ ಚಿಂತನೆ ನಡೆಸಿದ್ದಾರೆ. ಯೋಜನಾ ಆಯೋಗದ ಬಾಗಿಲು ಮುಚ್ಚುತ್ತಿರುವ ಕುರಿತು ತಿಂಗಳ ಕಾಲ ನಡೆದ ಬಜೆಟ್ ಅಧಿವೇಶನದಲ್ಲಿ ಪ್ರಧಾನಮಂತ್ರಿ ಪ್ರಕಟಿಸಿರಲಿಲ್ಲ. ಇದರ ಅಗತ್ಯ ಕುರಿತು ಎಲ್ಲ ಪಕ್ಷಗಳ ಅಭಿಪ್ರಾಯ ಕೇಳಲಿಲ್ಲ. ಅಧಿವೇಶನ ಮುಗಿದ ಮರುದಿನವೇ ಈ ಕುರಿತು ಪ್ರಕಟಿಸಿದ್ದಾರೆ. ಇಷ್ಟೊಂದು ದೊಡ್ಡ ಸಂಸ್ಥೆಯನ್ನು ಮುಚ್ಚುವ ಕುರಿತು ಸಂಸತ್ತಿನಲ್ಲಿ ಚರ್ಚಿಸದ ಸರ್ಕಾರದ ಕ್ರಮಕ್ಕೆ ವಿರೋಧಗಳು ವ್ಯಕ್ತವಾಗಿವೆ.

ಭಾರತ ಉತ್ಪಾದನಾ ಕೇಂದ್ರ ಮಾಡಬೇಕೆಂಬುದು ಹಲವು ತಜ್ಞರ ಅಭಿಪ್ರಾಯ. ಇದಕ್ಕೆ ಆಯೋಗವನ್ನು ಸಂಪೂರ್ಣವಾಗಿ ಪುನಾರಚಿಸಬೇಕು ಮತ್ತು ಕ್ರಿಯಾತ್ಮಕಗೊಳಿಸಬೇಕು. ಆದರೆ ಸಂಸ್ಥೆಗೆ ಬೀಗ ಹಾಕುವ ಕುರಿತು ಹಲವು ತಜ್ಞರು ವಿರೋಧ ವ್ಯಕ್ತಪಡಿಸಿದ್ದಾರೆ. 21ನೇ ಶತಮಾನಕ್ಕೆ ಅಗತ್ಯವಾದ ರೀತಿಯಲ್ಲಿ ಸಂಸ್ಥೆ ಯೋಜನೆಗಳನ್ನು ರೂಪಿಸಬೇಕು. ಅದು ದೂರಗಾಮಿಯಾಗಿರಬೇಕು. ಇದಕ್ಕಾಗಿ ಎಲ್ಲ ಸಂಸ್ಥೆಗಳಲ್ಲಿ ಸಮಗ್ರ ಬದಲಾವಣೆ ತರಬೇಕು. ಅಧಿಕಾರಿಗಳೊಂದಿಗೆ ಜೊತೆಜೊತೆಯಾಗಿ ಕಾರ್ಯನಿರ್ವಹಿಸಬೇಕು. ಯೋಜನೆಗಳ ಅನುಷ್ಠಾನ ವೇಗ ಹೆಚ್ಚಿಸಬೇಕು ಮತ್ತು ಸಮಗ್ರ ಅಭಿವೃದ್ಧಿಗೆ ಅಗತ್ಯವಾದ ಮಾರ್ಗದರ್ಶನ ನೀಡಬೇಕು. ಒಂದು ಸಂಸ್ಥೆಯನ್ನು ಮುಚ್ಚುವುದರಿಂದ ದೇಶದ ಒಟ್ಟಾರೆ ಆಂತರಿಕ ಉತ್ಪಾದನೆ (ಜಿಡಿಪಿ), ಬಡತನ, ಆರೋಗ್ಯ, ಶಿಕ್ಷಣ, ಗೌರವಯುತ ಬದುಕು ಮತ್ತಿತರ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಲು ಸಾಧ್ಯವಿಲ್ಲ ಎಂಬುದು.

## ಕರ್ನಾಟಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಮತ್ತು ಬೆಳವಣಿಗೆ

ಭಾರತಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆ ಹೊಸದೇನಲ್ಲ. ವೇದಗಳ ಕಾಲದಿಂದಲೂ ಗ್ರಾಮಗಳ ಆಡಳಿತ ಸ್ಥಳೀಯ ಸಂಸ್ಥೆಗಳ ಮೂಲಕ ನಡೆಯುತ್ತಾ ಬಂದಿದೆ. ಇವು ಚಿಕ್ಕಗಣರಾಜ್ಯಗಳಂತೆ ಕೆಲಸ ಮಾಡಿಕೊಂಡು ಬಂದಿವೆ. ಪ್ರಾಚೀನ ಕಾಲದಲ್ಲಿ ಪಂಚಾಯಿತಿಗಳು ತಮ್ಮದೇ ಆದ ವಿತ್ತೀಯ ಜವಾಬ್ದಾರಿ ಹೊಂದಿದ್ದವು. ಗ್ರಾಮ ಸಮಿತಿಗಳು ಗ್ರಾಮೀಣ ಪ್ರದೇಶದಲ್ಲಿನ ಹೆಚ್ಚಿನ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಆಗ ಈ ಸಂಸ್ಥೆಗಳಿಗೆ ಹಣಕಾಸಿನ ಸಂಪನ್ಮೂಲ ಕಡಿಮೆ ಇತ್ತು. ಭಾರತದಲ್ಲಿ ಬ್ರಿಟಿಷರ ಕಾಲದಿಂದಲೂ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮಹತ್ವ ನೀಡಲಾಗಿತ್ತು.



downloaded from: www.kpscvaani.com

ಈ ವ್ಯವಸ್ಥೆ ಭಾರತ ಬ್ರಿಟಿಷ್ ಗೌರ್ನರ್ ಆಗಿದ್ದ ಸರ್. ಚಾರ್ಲ್ಸ್‌ಮೆಟ್‌ಕಾಫ್‌ನ "ಚಿಕ್ಕ ಗಣರಾಜ್ಯ" (1830)ದಿಂದ ಪ್ರಾರಂಭವಾಗಿ ಗಾಂಧೀಜಿಯವರ ಗ್ರಾಮಸ್ವರಾಜ್ಯ ಎಂಬ ರೂಪತಾಳಿ ದೇಶದ ಪ್ರಥಮ ಪ್ರಧಾನಿ ನೆಹರೂ ಅವರ ಸಮುದಾಯ ಘಟಕವಾಗಿ 1970ರಲ್ಲಿ ಕೇಂದ್ರ ಸರ್ಕಾರದ "ಸಮಗ್ರ ಗ್ರಾಮೀಣ ಅಭಿವೃದ್ಧಿ" ಕಾರ್ಯಕ್ರಮವಾಗಿ ವಿಕಾಸಗೊಂಡು ನಂತರ ಈಗ ವಿಕೇಂದ್ರೀಕರಣ ಹಂತಕ್ಕೆ ಬಂದುದಾಗಿದೆ. ಪಂಚಾಯತ್, ಪಂಚರು ಎಂಬ ಪದ ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿತ್ತು. ಪಂಚ ಎಂದರೆ ಐದು ಈ ಪದದಿಂದ ಪಂಚಾಯತ್ ನಿಷ್ಪನ್ನವಾಗಿದೆ. ಪ್ರಾರಂಭದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನ ಕೊಟ್ಟಿರಲಿಲ್ಲ. ನಂತರ ಇವುಗಳಿಗೆ ಸಂವಿಧಾನಾತ್ಮಕ ಸ್ಥಾನ ದೊರೆಯಿತು. ಭಾರತ ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಇವುಗಳಿಗೆ ಅವಕಾಶ ನೀಡಲಾಯಿತು. ಈ ತಿದ್ದುಪಡಿಯಿಂದ 2 ಹಂತದ ಒಕ್ಕೂಟ ವ್ಯವಸ್ಥೆ ಬಹುಹಂತದ ಒಕ್ಕೂಟ ವ್ಯವಸ್ಥೆಯಾಗಿ ರೂಪುಗೊಂಡಿತು. 1862 ರಿಂದಲೂ ಕರ್ನಾಟಕವು ಸ್ಥಳೀಯ ಸಂಸ್ಥೆಯನ್ನು ಅನುಷ್ಠಾನಗೊಳಿಸಬೇಕೆಂದು ಪ್ರಯತ್ನಿಸುತ್ತಾ ಬಂದಿದೆ. 1874ರಲ್ಲಿ ಪ್ರತಿ ಜಿಲ್ಲೆಯಲ್ಲಿ "ಸ್ಥಳೀಯನಿಧಿ" ಸೃಷ್ಟಿಸಿ ಅದಕ್ಕೊಂದು ಸಮಿತಿ ರಚಿಸಲಾಯಿತು.

1882ರಲ್ಲಿ ಸ್ಥಳೀಯ ಸರ್ಕಾರಗಳ ಜನಕವೆಂದು ಕರೆಯಲ್ಪಡುವ ಲಾರ್ಡ್‌ರಿಪ್ಪನ್ ಸ್ಥಳೀಯ ಸರ್ಕಾರಗಳ ರಚನಾ ಕಾಯಿದೆಯನ್ನು ಜಾರಿಗೊಳಿಸಿದರು. 1902ರಲ್ಲಿ ಮೈಸೂರು ಲೋಕಲ್ ಬೋರ್ಡ್ ಕಾಯ್ದೆ ಅಸ್ತಿತ್ವಕ್ಕೆ ಬಂದು 3 ಹಂತದ ಸ್ಥಳೀಯ ಸರ್ಕಾರಗಳನ್ನು ಜಾರಿಗೆ ತರುವ ಪ್ರಯತ್ನ ಮಾಡಲಾಯಿತು. ವಿಲೇಜ್ ಪಂಚಾಯಿತಿ, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್, ಡಿಸ್ಟ್ರಿಕ್ಟ್ ಡೆವಲೆಪ್‌ಮೆಂಟ್ ಕೌನ್ಸಿಲ್ ರಚಿಸುವಂತೆ ಕಾಯಿದೆ ರೂಪಿಸಲಾಯಿತು. 1914ರಲ್ಲಿ ಮೈಸೂರು ಸರ್ಕಾರವು ಸ್ಥಳೀಯ ಸರ್ಕಾರಗಳ ಅಧಿಕಾರಗಳು ಮತ್ತು ಹಣಕಾಸಿನ ಬಗ್ಗೆ ಚರ್ಚಿಸಲು ಕಾಂತರಾಜ್ ಅರಸ್ ಮತ್ತು ಸಿ. ಶ್ರೀನಿವಾಸ್ ಅಯ್ಯಂಗಾರ್ ನೇತೃತ್ವದಲ್ಲಿ ಸಮಿತಿಗಳನ್ನು ರಚಿಸಿತು.

1918ರಲ್ಲಿ ಮೈಸೂರು ಸರ್ಕಾರವು ಲೋಕಲ್ ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿ ಕಾಯ್ದೆಯನ್ನು ತಂದಿತು. 1927ರ ಕೊನೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾಯಿತ ಸದಸ್ಯರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. 1949–1954ರ ಅವಧಿಯಲ್ಲಿ ವಿಲೇಜ್ ಪಂಚಾಯತ್ ಮತ್ತು ಡಿಸ್ಟ್ರಿಕ್ಟ್ಸ್ ಡೆವಲೆಪ್‌ಮೆಂಟ್ ಕೌನ್ಸಿಲ್‌ಗಳ ಕಾರ್ಯವೈಖರಿಯನ್ನು ಬಲಗೊಳಿಸಲು ವೆಂಕಟಪ್ಪನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು 2 ಹಂತದ ಸರ್ಕಾರಗಳ ರಚನೆಗೆ



downloaded from: www.kpscvaani.com

ಶಿಫಾರಸ್ಸು ಮಾಡಿತು. 1952ರಲ್ಲಿ ದಿ ಮೈಸೂರು ವಿಲೇಜ್ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಕಾಯ್ದೆ ಜಾರಿಗೆ ತರಲಾಯಿತು. 1954ರಲ್ಲಿ ಡಿ. ಚಂದ್ರಶೇಖರಯ್ಯ ನೇತೃತ್ವದಲ್ಲಿ ರಾಜ್ಯ ಸರ್ಕಾರವು ದಿ ಲೋಕಲ್ ಬೋರ್ಡ್ ಎನ್‌ಕ್ವಯರಿ ಕಮಿಟಿ ರಚಿಸಿತು. ಈ ಸಮಿತಿಯು 3 ಹಂತದ ಸ್ಥಳೀಯ ಸರ್ಕಾರಗಳ ಬಗ್ಗೆ ಶಿಫಾರಸ್ಸು ಮಾಡಿತು.

1957ರಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರಮಟ್ಟದಲ್ಲಿ ಬಲವಂತರಾಯ್ ಮೆಹ್ತ ನೇತೃತ್ವದಲ್ಲಿ ಸಮಿತಿ ನೇಮಿಸಿತು. ಈ ಸಮಿತಿಯು 3 ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಶಿಫಾರಸ್ಸು ಮಾಡಿತು. ಈ ಶಿಫಾರಸ್ಸಿನ ಅನ್ವಯ 1959ರಲ್ಲಿ ದ ಮೈಸೂರು ವಿಲೇಜ್ ಪಂಚಾಯಿತಿ ಲೋಕಲ್ ಬೋರ್ಡ್ ಕಾಯ್ದೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿತು. ಆಗ 3 ಹಂತದ ಸ್ಥಳೀಯ ಸರ್ಕಾರಗಳನ್ನು ಅಸ್ತಿತ್ವಕ್ಕೆ ತರಬೇಕೆಂದು ಹೇಳಲಾಯಿತು. ಅವುಗಳೆಂದರೆ ವಿಲೇಜ್ ಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ, ಜಿಲ್ಲಾ ಅಭಿವೃದ್ಧಿ ಪರಿಷತ್, ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಮಹಿಳೆಯರಿಗೆ ಪ್ರಾಧಾನ್ಯತೆ ನೀಡಲು ಸಲಹೆ ನೀಡಲಾಗಿತ್ತು.

ಕರ್ನಾಟಕದಲ್ಲಿ ಸ್ಥಳೀಯ ಸರ್ಕಾರಗಳಿಗೆ ಸಂಬಂಧಿಸಿದಂತೆ 1962ರಲ್ಲಿ ಕೊಂಡಜ್ಜಿ ಬಸಪ್ಪನವರ ನೇತೃತ್ವದಲ್ಲಿ ಸಮಿತಿ ರಚಿಸಿತು. ಈ ಸಮಿತಿ ಶಿಫಾರಸ್ಸಿನ ಮೇರೆಗೆ 1964ರಲ್ಲಿ 3 ಹಂತದ ಪಂಚಾಯಿತಿ ವ್ಯವಸ್ಥೆಯ ಮಸೂದೆಯನ್ನು ಸರ್ಕಾರವು ವಿಧಾನಸಭೆಯಲ್ಲಿ ಮಂಡಿಸಿತು. ಆದರೆ ಹಲವು ಕಾರಣಗಳಿಂದಾಗಿ ಈ ಮಸೂದೆ ಅಂಗೀಕಾರವಾಗಲಿಲ್ಲ. ಕೇಂದ್ರ ಸರ್ಕಾರ ರಾಷ್ಟ್ರಮಟ್ಟದಲ್ಲಿ 1978ರಲ್ಲಿ ಮೆಹ್ತಾ ನೇತೃತ್ವದಲ್ಲಿ ಸಮಿತಿ ನೇಮಿಸಿತು. ಈ ಸಮಿತಿ ಶಿಫಾರಸ್ಸಿನಂತೆ ಗ್ರಾಮಮಟ್ಟದಲ್ಲಿ ಮಂಡಲ ಪಂಚಾಯಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ತರುವ ಮೂಲಕ 2 ಹಂತದ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವಂತೆ ಸಲಹೆ ಮಾಡಿತು. 1980ರಲ್ಲಿ ಕರ್ನಾಟಕವೂ ಸೇರಿದಂತೆ ದೇಶದ ಕೆಲವು ರಾಜ್ಯಗಳು ಅಧಿಕಾರದ ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಹೊಸ ಶಕೆಯನ್ನು ಆರಂಭಿಸಿದವು. ಅಶೋಕ್ ಮೆಹ್ತಾ ಸಮಿತಿ ವರದಿ ಆಧಾರದ ಮೇಲೆ 1983ರಲ್ಲಿ ಪಂಚಾಯತ್‌ರಾಜ್ ಕಾಯಿದೆಯನ್ನು ಜಾರಿಗೊಳಿಸಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲು ತೀರ್ಮಾನಿಸಿತು. 1983ರಲ್ಲಿ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯಿತಿ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯಿತಿ ಕಾಯಿದೆಯನ್ನು ಅನುಷ್ಠಾನಕ್ಕೆ ತಂದಿತು. 1987ರಲ್ಲಿ ಕರ್ನಾಟಕದಲ್ಲಿ ಜಿಲ್ಲಾಪರಿಷತ್, ತಾಲ್ಲೂಕ್ ಪಂಚಾಯಿತಿ



downloaded from: www.kpscvaani.com

ಸಮಿತಿ ಮತ್ತು ಮಂಡಲ ಪಂಚಾಯಿತಿಗಳ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಅಸ್ತಿತ್ವಕ್ಕೆ ಬಂದವು.

ಕರ್ನಾಟಕದ ಪಂಚಾಯತ್‌ರಾಜ್ ಕಾಯಿದೆಯಿಂದ ಪ್ರಭಾವಕ್ಕೊಳಗಾಗಿ ಕೇಂದ್ರ ಸರ್ಕಾರ ಇಡೀ ಭಾರತದಲ್ಲಿ ಒಂದೇ ರೀತಿಯ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶದಿಂದ ಎಲ್.ಎಂ.ಸಿಂಘ್ವಿ ನೇತೃತ್ವದಲ್ಲಿ ಸಮಿತಿಯನ್ನು ನೇಮಿಸಿತು. 1986ರಲ್ಲಿ ಸಂಸತ್ತಿನಲ್ಲಿ ಮಸೂದೆಯನ್ನು ಮಂಡಿಸಲಾಯಿತು. ಆ ಮಸೂದೆ ಲೋಕಸಭೆಯಲ್ಲಿ ಅಂಗೀಕಾರವಾಗಿ ರಾಜ್ಯಸಭೆಯಲ್ಲಿ ತಿರಸ್ಕರಿಸಲ್ಪಟ್ಟಿತು. 1991ರಲ್ಲಿ ಮಸೂದೆಯನ್ನು ಸಂಸತ್ತಿನ ಉಭಯಸದನಗಳಿಂದ ರಚಿಸಿ ಸಂಸತ್ ಸಮಿತಿಯು ಅಧ್ಯಯನ ನಡೆಸಿದ ನಂತರ 1992ರಲ್ಲಿ ಸಂಸತ್ತಿನಲ್ಲಿ ಮಂಡಿಸಲಾಯಿತು. ಸಂಸತ್ ಈ ಮಸೂದೆಗೆ ಒಪ್ಪಿಗೆ ಕೊಟ್ಟಿತು. 1993ರಲ್ಲಿ ಸಂವಿಧಾನದ 73ನೇ ತಿದ್ದುಪಡಿಗೆ ಅವಕಾಶ ಕಲ್ಪಿಸಿಕೊಡಲಾಯಿತು. ಆಗ ಇಡೀ ದೇಶದಲ್ಲಿ ಒಂದೇ ರೀತಿಯ ಸ್ಥಳೀಯ ಸರ್ಕಾರಗಳು ಅಸ್ತಿತ್ವಕ್ಕೆ ಬಂದವು. ಈ ತಿದ್ದುಪಡಿಯಲ್ಲಿ 3 ಹಂತದ ಪಂಚಾಯಿತಿಗಳಾದ ಜಿಲ್ಲಾಪಂಚಾಯಿತಿ, ತಾಲ್ಲೂಕ್ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳನ್ನು ಅಸ್ತಿತ್ವಕ್ಕೆ ತರಲಾಯಿತು.

## 1959 ಸ್ಥಳೀಯ ಸರ್ಕಾರಗಳ ಕಾಯಿದೆ ವಿಲೇಜ್ ಪಂಚಾಯಿತಿ

ಇದು 1500 ಜನಸಂಖ್ಯೆಗಿಂತ ಕಡಿಮೆ ಇಲ್ಲದಂತೆ 10,000 ಜನ ಸಂಖ್ಯೆಗಿಂತ ಹೆಚ್ಚಿಲ್ಲದಂತೆ ರಚನೆಯಾಗಿತ್ತು. 11 ಜನ ಸದಸ್ಯರಿಗಿಂತ ಕಡಿಮೆ ಇಲ್ಲದಂತೆ 19 ಸದಸ್ಯರಿಗಿಂತ ಹೆಚ್ಚಿಲ್ಲದಂತೆ ವಿಲೇಜ್ ಪಂಚಾಯಿತಿ ಚುನಾಯಿತ ಸದಸ್ಯರಿರುತ್ತಿದ್ದರು. ಜಿಲ್ಲಾಧಿಕಾರಿಗಳು ಅವುಗಳ ಜವಾಬ್ದಾರಿ ನೋಡಿಕೊಳ್ಳುತ್ತಿದ್ದರು.

ವಿಲೇಜ್ ಪಂಚಾಯಿತಿಯಲ್ಲಿ **ಪಂಚಾಯತ್ ಫಂಡ್** ಇರುತ್ತಿತ್ತು. ಗ್ರಾಮದಲ್ಲಿ ಸಂಗ್ರಹವಾದ ಭೂಕಂದಾಯದ ಶೇ. 30ರಷ್ಟು ವರಮಾನದ ಜೊತೆಗೆ ಶೇ. 10ರ ವಿವೇಚನಾಯುತ ಅನುದಾನವನ್ನು ಸರ್ಕಾರದಿಂದ ಇವು ಪಡೆದುಕೊಳ್ಳುತ್ತಿದ್ದವು. ಈ ಪಂಚಾಯಿತಿಗಳು ಭೂಕಂದಾಯ, ಕಟ್ಟಡ, ಜಾತ್ರೆ, ಹಬ್ಬ, ಮನರಂಜನೆ, ವಾಹನಗಳ ಮೇಲೆ ತೆರಿಗೆ, (ಮೋಟಾರ್ ವಾಹನ ಹೊರತುಪಡಿಸಿ) ಎತ್ತಿನಬಂಡಿಗಳ ನಿಲ್ದಾಣ ಶುಲ್ಕ, ಮಾರುಕಟ್ಟೆ ಶುಲ್ಕ ಇತ್ಯಾದಿ ತೆರಿಗೆ ಮತ್ತು ಶಿಲ್ಕಗಳನ್ನು ವಿಧಿಸುವ ವಿತ್ತೀಯ ಅಧಿಕಾರ ಹೊಂದಿದ್ದವು. ರಾಜ್ಯ ಸರ್ಕಾರದಿಂದ ಹಂಚಿಕೆಯಾಗುವ ಅನುದಾನ ಟಿ.ಡಿ.ಬಿ.ಯಿಂದ ಕೊಡುಗೆ ರೀತಿಯ ಅನುದಾನವು ಬರುತ್ತಿತ್ತು. ಇವು ವಿಲೇಜ್ ಪಂಚಾಯಿತಿಯ ಆದಾಯದ ಮೂಲಗಳಾಗಿದ್ದವು.



downloaded from: www.kpscvaani.com

## ತಾಲ್ಲೂಕು ಅಭಿವೃದ್ಧಿ ಮಂಡಳಿ

ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಟಿ.ಡಿ.ಬಿ. ಕೆಲಸ ನಿರ್ವಹಿಸುತ್ತಿತ್ತು. ವಿಲೇಜ್ ಪಂಚಾಯಿತಿಗಳ ಮೇಲುಸ್ತರದಲ್ಲಿ ಟಿ.ಡಿ.ಬಿ. ಅಸ್ತಿತ್ವದಲ್ಲಿರುತ್ತಿತ್ತು. ಟಿ.ಡಿ.ಬಿ. ಸದಸ್ಯರು ಆಯಾ ತಾಲ್ಲೂಕಿನ ವಿಸ್ತೀರ್ಣದೊಳಗೆ ಜನರಿಂದ ನೇರವಾಗಿ ಆಯ್ಕೆಯಾಗುತ್ತಿದ್ದರು. 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಟಿ.ಡಿ.ಬಿ.ಗೆ 15 ಸ್ಥಾನಗಳು, 1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಟಿ.ಡಿ.ಬಿ.ಗೆ 20 ಸ್ಥಾನಗಳು ನಿಗದಿಯಾಗಿದ್ದವು. ಎಸ್‌ಸಿ/ಎಸ್‌ಟಿ ಮತ್ತು ಮಹಿಳೆಯರಿಗೆ ಸ್ಥಾನ ಕಲ್ಪಿಸಿಕೊಳ್ಳುತ್ತಿದ್ದರು. ಇವರೊಂದಿಗೆ ವಿವಿಧ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದವು. ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ 5 ವರ್ಷಗಳು, ಇದರಲ್ಲಿ ಅಧ್ಯಕ್ಷ / ಉಪಾಧ್ಯಕ್ಷರನ್ನು ಚುನಾಯಿತ ಪ್ರತಿನಿಧಿಗಳು ಆಯ್ಕೆ ಮಾಡುತ್ತಿದ್ದರು.

ಟಿ.ಡಿ.ಬಿ. ತನ್ನ ಕಾರ್ಯಗಳನ್ನು ನಿರ್ವಹಿಸಲು "ತಾಲ್ಲೂಕು ಬೋರ್ಡ್ ನಿಧಿ"ಯನ್ನು ಹೊಂದಿತ್ತು. ಆ ನಿಧಿಗೆ ವಿವಿಧ ಮೂಲಗಳಿಂದ ವರಮಾನ ಸಂಗ್ರಹವಾಗುತ್ತಿತ್ತು. ದರಗಳು, ಸೆಸ್ಸು, ದಂಡ, ಜುಲ್ಮಾನೆ, ಮುದ್ರಾಂಕ ಶುಲ್ಕ, ಬಡ್ಡಿ ಲಾಭ, ಇತ್ಯಾದಿ ಅದೇ ರೀತಿ ಕೊಡುಗೆಗಳು ಮತ್ತು ಅನುದಾನಗಳಿಂದ ವರಮಾನ ದೊರೆಯುತ್ತಿತ್ತು. ಹೆಚ್ಚುವರಿಯಾಗಿ ತಾಲ್ಲೂಕಿನಲ್ಲಿ ವಸೂಲಾದ ಭೂಕಂದಾಯದ ಶೇ. 50ರಷ್ಟು ಪಾಲನ್ನು ವಾರ್ಷಿಕವಾಗಿ ಸರ್ಕಾರದಿಂದ ಪಡೆಯುತ್ತಿದ್ದವು. ರಾಜ್ಯದಲ್ಲಿ ಸಂಗ್ರಹವಾದ ಒಟ್ಟು ಭೂಕಂದಾಯದ ಶೇ. 10ರಷ್ಟು ವರಮಾನವನ್ನು ಸರ್ಕಾರದಿಂದ ಪಡೆಯುತ್ತಿದ್ದವು.

## ಜಿಲ್ಲಾ ಅಭಿವೃದ್ಧಿ ಪರಿಷತ್

ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಅಭಿವೃದ್ಧಿ ಪರಿಷತ್ ಅಸ್ತಿತ್ವದಲ್ಲಿದ್ದು, ಅದು ಸಲಹೆ ಮತ್ತು ಸಂಪರ್ಕದ ಅಂಗವಾಗಿ ಕಾರ್ಯನಿರ್ವಹಿಸುತ್ತಿತ್ತು. ವಿಪಿ ಮತ್ತು ಟಿಡಿಬಿಗಳ ಸಂಪರ್ಕ ಮತ್ತು ಅಭಿವೃದ್ಧಿ ಚಟುವಟಿಕೆಯನ್ನು ನೋಡಿಕೊಳ್ಳುತ್ತಿತ್ತು. ಜಿಲ್ಲಾಧಿಕಾರಿ, ಎಂಎಲ್‌ಸಿ ಜಿಲ್ಲೆಯ ಎಲ್ಲಾ ಟಿಡಿಬಿ ಅಧ್ಯಕ್ಷರು ಮತ್ತು ಸರ್ಕಾರದಿಂದ ನಾಮನಿರ್ದೇಶನ ಹೊಂದಿದ ಎಸ್ಸಿ ಮತ್ತು ಮಹಿಳಾ ಪ್ರತಿನಿಧಿಗಳು ಸದಸ್ಯರಾಗಿರುತ್ತಿದ್ದರು. ಜಿಲ್ಲಾಧಿಕಾರಿ ಡಿಡಿಸಿಯ ಪದನಿಮಿತ್ತ ಅಧ್ಯಕ್ಷರಾಗಿರುತ್ತಿದ್ದರು. ಡಿಡಿಸಿ ಪ್ರಮುಖವಾದ ಕಾರ್ಯಾಂಗದ ಅಧಿಕಾರಗಳನ್ನು ಕೊಟ್ಟಿರಲಿಲ್ಲ. ವಿಪಿ ಮತ್ತು ಟಿಡಿಬಿಗಳಿಗೆ ಮಾತ್ರ ಅಧಿಕಾರ ನೀಡಲಾಗಿತ್ತು. ಡಿ.ಡಿ.ಸಿ.ಗೆ ಸ್ವತಂತ್ರ್ಯವಾದ ಯಾವುದೇ ಆದಾಯದ ಮೂಲಗಳಿರಲಿಲ್ಲ. ಇದು ಕೇವಲ ಸಲಹಾ ಸಮಿತಿಯಾಗಿ ಕೆಲಸ ಮಾಡುತ್ತಿತ್ತು.



downloaded from: www.kpscvaani.com

1959ರಿಂದ ಸುಮಾರು 2 1/2 ದಶಕಗಳವರೆಗೆ ಈ ವಿಕೇಂದ್ರಿಕರಣ ಪ್ರಕ್ರಿಯೆ ಅಸ್ತಿತ್ವದಲ್ಲಿತ್ತು. ಕರ್ನಾಟಕದ 1959ರ ಸ್ಥಳೀಯ ಸರ್ಕಾರಗಳ ಕಾಯಿದೆಯ ದೋಷಗಳನ್ನು ಸರಿಪಡಿಸಲು 1983 ಪಂಚಾಯತ್‌ರಾಜ್ ಕಾಯಿದೆ ಜಾರಿಗೆ ಬಂದಿತು. ಪಂಚಾಯತ್‌ರಾಜ್ ವ್ಯವಸ್ಥೆಯ ವಿಕಾಸದಲ್ಲಿ ಇದು ಉತ್ತಮ ಹೆಜ್ಜೆ ಆಯಿತು.

## 1983ರ ಪಂಚಾಯತ್‌ರಾಜ್ ಕಾಯಿದೆ

1983ರಲ್ಲಿ ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆಯು ಮೊದಲ ಬಾರಿಗೆ ಮೇಲಿನ ಹಂತದ ಸರ್ಕಾರಗಳು ಕೆಳಹಂತದ ಸರ್ಕಾರಗಳಿಗೆ ಅಧಿಕಾರ ನೀಡುವ ಮನಸ್ಸು ಮಾಡಿದವು. ಯಾವುದೇ ಹಂತದ ಸರ್ಕಾರಗಳು ಕಾರ್ಯನಿರ್ವಹಿಸಬೇಕೆಂದರೆ ಹಣಕಾಸಿನ ಸಂಪನ್ಮೂಲದ ಅವಶ್ಯಕತೆ ಇದೆ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರಗಳು ಸ್ವಾವಲಂಬಿಯಾಗಿರಬೇಕು ಹಾಗೂ ಸ್ವಾಯುತ್ತವಾಗಿರಬೇಕು. ಈ ಕಾಯಿದೆ ಪ್ರಕಾರ ಕೆಳಕಂಡ ಪಂಚಾಯತ್‌ರಾಜ್ ಸಂಸ್ಥೆಗಳ ವಿವಿಧ ಹಂತಗಳು ಅಸ್ತಿತ್ವಕ್ಕೆ ಬಂದವು.

### ಜಿಲ್ಲಾ ಪರಿಷತ್

1983ರ ಕಾಯಿದೆಯಲ್ಲಿ ಹೇಳಿರುವಂತೆ ಶೇ. 25ರ ಮೀಸಲಾತಿ ಮಹಿಳೆಯರಿಗೆ, ಶೇ. 18ನ್ನು ಎಸ್‌ಸಿ/ಎಸ್‌ಟಿಗಳಿಗೆ ನೀಡಬೇಕು. ಪ್ರತಿ 28000 ಜನಸಂಖ್ಯೆಗೆ ಒಬ್ಬ ಜಿಲ್ಲಾ ಪರಿಷತ್ ಸದಸ್ಯನಿರುತ್ತಾನೆ. ಮಲೆನಾಡು ಪ್ರದೇಶದಲ್ಲಿ ಆ ಸಂಖ್ಯೆ 12000 ಆಗಿರುತ್ತದೆ. ಎಂಎಲ್.ಎ/ಎಂ.ಎಲ್.ಸಿ.ಗಳು ಜಿಲ್ಲಾ ಪರಿಷತ್ ಸದಸ್ಯರಾಗಿರುತ್ತಾರೆ. ಅಧ್ಯಕ್ಷ / ಉಪಾಧ್ಯಕ್ಷರು ಚುನಾಯಿತ ಜಿಲ್ಲಾ ಪರಿಷತ್ ಸದಸ್ಯರಿಂದ ಆಯ್ಕೆಯಾಗುತ್ತಾರೆ. ಐ.ಎ.ಎಸ್. ದರ್ಜೆಯ ಅಧಿಕಾರಿ ಆಡಳಿತವನ್ನು ನಡೆಸುತ್ತಾರೆ. ಅವರನ್ನು ಮುಖ್ಯ ಕಾರ್ಯದರ್ಶಿ ಎನ್ನಲಾಗುತ್ತದೆ.

ಜಿಲ್ಲಾ ಪರಿಷತ್ ತನ್ನದೇ ಆದ ಜಿಲ್ಲಾ ಪರಿಷತ್ ನಿಧಿ ಹೊಂದಿರುತ್ತಿತ್ತು. ಜಿಲ್ಲಾ ಪರಿಷತ್‌ಗೆ ತೆರಿಗೆ ವಿಧಿಸುವ ಅಧಿಕಾರವಿಲ್ಲ. ಸರ್ಕಾರದ ಅನುದಾನ, ಜಿಲ್ಲಾಪರಿಷತ್ ವಿಧಿಸುವ ಶುಲ್ಕ, ದಂಡ ಜುಲ್ಮಾನೆ, ಬಾಡಿಗೆ ಇತ್ಯಾದಿ ಆದಾಯದ ಮೂಲಗಳಾಗಿವೆ.

### ತಾಲ್ಲೂಕು ಪಂಚಾಯಿತಿ ಸಮಿತಿ

ಇದು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ನಡುವೆ ಸಲಹಾ ಸಮಿತಿಯಾಗಿ ತನ್ನ ಕಾರ್ಯನಿರ್ವಹಿಸುತ್ತಿತ್ತು. ಇದಕ್ಕೆ ಯಾವುದೇ ರೀತಿಯ ಹಣಕಾಸಿನ



downloaded from: www.kpscvaani.com

ಅಧಿಕಾರಗಳು ಇರಲಿಲ್ಲ. ಇದು ಸರ್ಕಾರವು ನೀಡುವ ಅನುಧಾನವನ್ನು ಅವಲಂಬಿಸಿಕೊಂಡಿತ್ತು.

## ಮಂಡಲ ಪಂಚಾಯಿತಿ

ಇದು ಗ್ರಾಮಗಳ ಸಮೂಹವಾಗಿದ್ದು 8000 ದಿಂದ 12000 ಜನಸಂಖ್ಯೆಯನ್ನು ಒಳಗೊಂಡಿತ್ತು. 400 ಜನಕ್ಕೆ ಒಬ್ಬ ಚುನಾಯಿತ ಸದಸ್ಯನಿರುತ್ತಿದ್ದನು. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಮಹಿಳೆಯರಿಗೆ ಸ್ಥಾನವನ್ನು ಮೀಸಲಾಗಿಡಲಾಗಿರುತ್ತಿತ್ತು.

## ಹಣಕಾಸು ಅಧಿಕಾರಗಳು

ಹಣಕಾಸು ನಿರ್ವಹಣೆಗಾಗಿ ಮಂಡಲ ಪಂಚಾಯಿತಿ ನಿಧಿ ಇರುತ್ತಿತ್ತು. ಇವುಗಳಿಗೆ ತೆರಿಗೆ ವಿಧಿಸಿ ವರಮಾನ ಸಂಗ್ರಹಿಸುವ ಅಧಿಕಾರವಿತ್ತು. ಭೂಮಿ, ಕಟ್ಟಡ, ಮನರಂಜನೆ, ವಾಹನತೆರಿಗೆ (ಎತ್ತಿನಬಂಡಿಗಳು) ಮತ್ತು ಶುಲ್ಕ ವಿಧಿಸಬಹುದಾಗಿತ್ತು. ಬಸ್‌ನಿಲ್ದಾಣ, ಮಾರುಕಟ್ಟೆ, ಸ್ಥಿರಸ್ವತ್ತುಗಳು ಇತ್ಯಾದಿ ಮಂಡಲಗಳಿಂದ ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಸಂಪನ್ಮೂಲವನ್ನು ಸಂಗ್ರಹಿಸುತ್ತಿತ್ತು. ಇದರ ಜೊತೆಗೆ ಸರ್ಕಾರದಿಂದ ಅನುದಾನ ಪಡೆಯುತ್ತಿತ್ತು.

## 1993ರ ಪಂಚಾಯತ್ ಕಾಯಿದೆ

ಭಾರತದ ಸಂವಿಧಾನದ 73ನೇ ತಿದ್ದುಪಡಿಯಿಂದ 1993ರಲ್ಲಿ ಕರ್ನಾಟಕದ ಪಂಚಾಯತ್‌ರಾಜ್ ಕಾಯಿದೆ ಅಸ್ತಿತ್ವಕ್ಕೆ ಬಂದಿತು. ಅವುಗಳೆಂದರೆ, ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ.

## ಜಿಲ್ಲಾ ಪಂಚಾಯಿತಿ

40,000 ಜನಸಂಖ್ಯೆಗೆ ಒಬ್ಬ ಜಿಲ್ಲಾ ಪಂಚಾಯಿತಿ ಸದಸ್ಯನಿರುತ್ತಾನೆ. ಮಲೆನಾಡು ಪ್ರದೇಶಗಳಲ್ಲಿ ಈ ಸಂಖ್ಯೆಯನ್ನು ಸಡಿಲಗೊಳಿಸಲಾಗಿದೆ. ಇದರಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿರುತ್ತಾರೆ. ಇವರ ಅಧಿಕಾರಾವಧಿ 20 ತಿಂಗಳು ಐ.ಎ.ಎಸ್. ದರ್ಜೆಯ ಅಧಿಕಾರಿ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಇವರನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯೆನ್ನಲಾಗಿದೆ. ಜಿಲ್ಲಾ ಪಂಚಾಯಿತಿಯಲ್ಲಿ ವಿವಿಧ ಸಮಿತಿಗಳಿದ್ದು, ಕೆಲಸ ನಿರ್ವಹಿಸುತ್ತವೆ.



downloaded from: www.kpscvaani.com

ಜಿಲ್ಲಾ ಪಂಚಾಯಿತಿಗಳು ಕೇಂದ್ರ / ರಾಜ್ಯ ಸರ್ಕಾರಗಳು ನೀಡುವ ಅನುದಾನಗಳ ಮೇಲೆ ಅವಲಂಬಿತವಾಗಿರುತ್ತದೆ. ಇವುಗಳು ಆಧಾಯ ಪಡೆಯುವ ಇತರ ಮೂಲಗಳೆಂದರೆ ಶುಲ್ಕ, ದರಗಳು, ಕೊಡುಗೆಗಳು, ಬಾಡಿಗೆ, ಇತ್ಯಾದಿ, ಜಿಲ್ಲಾ ಪಂಚಾಯಿತಿಗಳು ಪ್ರಕರಣ 216ರ ಪ್ರಕಾರ ಅಭಿವೃದ್ಧಿ ಯೋಜನೆಗಳಿಗೆ ಸಾಲವನ್ನು ಪಡೆದುಕೊಳ್ಳಬಹುದಾಗಿದೆ.

## ತಾಲ್ಲೂಕು ಪಂಚಾಯಿತಿ

ಪ್ರತಿ 10,000 ಜನಸಂಖ್ಯೆಗೆ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯನಿರುತ್ತಾನೆ. ಇದರಲ್ಲಿ ಅಧ್ಯಕ್ಷ / ಉಪಾಧ್ಯಕ್ಷ ಚುನಾಯಿತ ಸದಸ್ಯರಿಂದ ಆಯ್ಕೆಯಾಗಿರುತ್ತಾರೆ. 20 ತಿಂಗಳು ಅಧಿಕಾರಾವಧಿ ಇರುತ್ತದೆ. ರಾಜ್ಯ ಸರ್ಕಾರದ 1ನೇ ದರ್ಜೆ ಅಧಿಕಾರಿ ಇದರ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾನೆ.

ತಾಲ್ಲೂಕು ಪಂಚಾಯಿತಿಗೆ ತೆರಿಗೆ ವಿಧಿಸುವ ಅಧಿಕಾರವಿಲ್ಲ. ಇವು ರಾಜ್ಯದ ಮುದ್ರಾಂಕ ಶುಲ್ಕದ ಶೇ. ರಷ್ಟು ಪಾಲನ್ನು ಪಡೆಯುತ್ತವೆ. ಇವು ತಮ್ಮ ಸ್ವಂತ ಆಸ್ತಿಯಿಂದ ಆದಾಯ ವೃದ್ಧಿಸಿಕೊಳ್ಳಬಹುದು. ರಾಜ್ಯ / ಕೇಂದ್ರ ಸರ್ಕಾರಗಳಿಂದ ಅನುದಾನ ಪಡೆಯುತ್ತವೆ. ಕೇಂದ್ರ ಹಣಕಾಸು ಆಯೋಗದಿಂದಲೂ ಅನುದಾನ ದೊರೆಯುತ್ತದೆ. ಪಂಚಾಯತ್ ಅಧಿನಿಯಮ ಪ್ರಕರಣ 215ರ ಪ್ರಕಾರ ಅಭಿವೃದ್ಧಿ ಕಾರ್ಯಗಳಿಗೆ ಸಾಲ ಪಡೆಯಬಹುದು.

## ಗ್ರಾಮ ಪಂಚಾಯಿತಿ

ಗ್ರಾಮ ಪಂಚಾಯಿತಿಯು 5000 ದಿಂದ 7000 ಜನಸಂಖ್ಯೆಯನ್ನು ಹೊಂದಿರುತ್ತದೆ. 400 ಜನರಿಗೆ ಒಬ್ಬ ಚುನಾಯಿತ ಪ್ರತಿನಿಧಿ ಇರುತ್ತಾನೆ. ಅಧ್ಯಕ್ಷ / ಉಪಾಧ್ಯಕ್ಷರನ್ನು ಚುನಾಯಿತ ಸದಸ್ಯರು ಆಯ್ಕೆ ಮಾಡುತ್ತಾರೆ. ಇವರ ಅಧಿಕಾರಾವಧಿ 20 ತಿಂಗಳುಗಳು. ಕಾರ್ಯದರ್ಶಿ ಸರ್ಕಾರದಿಂದ ನೇಮಕಗೊಂಡಿದ್ದು, ಗ್ರಾಮ ಪಂಚಾಯಿತಿ ಆಡಳಿತವನ್ನು ನೋಡಿಕೊಳ್ಳುತ್ತಿರುತ್ತಾನೆ.

ಗ್ರಾಮ ಪಂಚಾಯಿತಿಗಳಿಗೆ ತೆರಿಗೆ ವಿಧಿಸಿ ವರಮಾನ ಸಂಗ್ರಹಿಸುವ ಅಧಿಕಾರ ನೀಡಲಾಗಿದೆ. ಮನೆ ಕಂದಾಯ, ನೀರಿನ ಕಂದಾಯ, ಮನೋರಂಜನೆ (ಸಿನಿಮಾ ಹೊರತುಪಡಿಸಿ) ಮಾರುಕಟ್ಟೆ, ಬಸ್‌ನಿಲ್ದಾಣ ಶುಲ್ಕ ಹಾಗೂ ಅಂಗಡಿಗಳಿಂದ ಬಾಡಿಗೆ, ಕರಾರು ಸ್ವಂತ ಆಸ್ತಿ ಮಾರಾಟ, ಕೊಡುಗೆಗಳು ಮುಂತಾದ ಮೂಲಗಳಿಂದ ತೆರಿಗೆಯೇತರ



downloaded from: www.kpscvaani.com

ಆದಾಯವನ್ನು ಪಡೆಯುತ್ತದೆ. ಜೊತೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅನುದಾನ ಪಡೆಯುತ್ತವೆ. ಹಣಕಾಸು ಆಯೋಗದಿಂದ ಅನುದಾನವನ್ನು ಪಡೆಯುತ್ತವೆ. ಕರ್ನಾಟಕದ ಪಂಚಾಯತ್‌ರಾಜ್ ಅಧಿನಿಯಮ ಪ್ರಕರಣ 214 ಪ್ರಕಾರ ಸಾಲವನ್ನು ಅಭಿವೃದ್ಧಿ ಉದ್ದೇಶಗಳಿಗೆ ಎತ್ತಬಹುದಾಗಿದೆ.

## ಗ್ರಾಮಸಭೆ

ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಮ ಪಂಚಾಯಿತಿಗಳು ಗ್ರಾಮಸಭೆ ನಡೆಸಬೇಕು. ಅಲ್ಲಿ ಫಲಾನುಭವಿಗಳನ್ನು ಗುರುತಿಸಬೇಕು. ಕೊಡುಗೆ ಸಂಗ್ರಹಣೆ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆ ನಡೆಯಬೇಕು. ಗ್ರಾಮ ಪಂಚಾಯಿತಿ ಅಧ್ಯಕ್ಷ ಗ್ರಾಮಸಭೆಯ ಅಧ್ಯಕ್ಷತೆ ವಹಿಸಬೇಕು.

## ಜಮಾಬಂದಿ

ಗ್ರಾಮ ಪಂಚಾಯಿತಿಯು ಮಾಡಿದ ಕಾರ್ಯಗಳ ವೆಚ್ಚಕ್ಕೆ ಸಾಮಾಜಿಕ ಲೆಕ್ಕಪತ್ರ ತಪಾಸಣೆ ಮಾಡುವುದೇ ಜಮಾಬಂದಿಯಾಗಿದೆ. ಪ್ರತಿ ವರ್ಷ ಆಗಸ್ಟ್ 15 ರಿಂದ ಸೆಪ್ಟೆಂಬರ್ 15ರೊಳಗೆ ಜಮಾಬಂದಿಯನ್ನು ನಡೆಸುವ ಅವಧಿಯನ್ನು ನಿಗಧಿಪಡಿಸಲಾಗಿದೆ. ವರ್ಷಕ್ಕೆ ಒಂದು ಸಾರಿ ಜಮಾಬಂದಿ ಮಾಡಲಾಗುತ್ತದೆ. ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು ಮತ್ತು ಜನತೆ ಒಂದು ಕಡೆ ಸೇರಿ ಚರ್ಚಿಸಲು ಇದು ಉತ್ತಮ ವೇದಿಕೆಯಾಗಿದೆ.

## ರಾಜ್ಯ ಹಣಕಾಸು ಆಯೋಗಗಳು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳು

ಭಾರತ ಸಂವಿಧಾನದ 73ನೇ ತಿದ್ದುಪಡಿಯಲ್ಲಿ ರಾಜ್ಯ ಹಣಕಾಸು ಆಯೋಗದ ಸ್ಥಾಪನೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ರಾಜ್ಯ ಸರ್ಕಾರಗಳು ಪ್ರತಿ 5 ವರ್ಷಕ್ಕೆ ಒಮ್ಮೆ ರಾಜ್ಯ ಹಣಕಾಸು ಆಯೋಗವನ್ನು ನೇಮಿಸುವುದು ಕಡ್ಡಾಯವಾಗಿದೆ. ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳ ನಡುವೆ ಹಣಕಾಸು ನಿರ್ವಹಣೆಗೆ ರಾಜ್ಯ ಹಣಕಾಸು ಆಯೋಗಗಳನ್ನು ರಚಿಸಲಾಯಿತು. ಕರ್ನಾಟಕ ಸರ್ಕಾರವು 1995ರಲ್ಲಿ ಡಾ. ಜಿ. ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಪ್ರಥಮ ರಾಜ್ಯ ಹಣಕಾಸು ಆಯೋಗವನ್ನು, 2002ರಲ್ಲಿ ಶ್ರೀ ಕೆ.ಪಿ. ಸುರೇಂದ್ರನಾಥ್ ಇವರ ಅಧ್ಯಕ್ಷತೆಯಲ್ಲಿ 2ನೇ ರಾಜ್ಯ ಹಣಕಾಸು ಆಯೋಗವನ್ನು, 2006ರಲ್ಲಿ ಶ್ರೀ ಎ.ಜಿ. ಕೊಡ್ಗಿ ಅವರ ನೇತೃತ್ವದಲ್ಲಿ 3ನೇ ರಾಜ್ಯ ಹಣಕಾಸು ಆಯೋಗವು ರಚನೆ ಮಾಡಿತು. ಈ ಮೂರು ಆಯೋಗಗಳು ತಮ್ಮ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿವೆ. 3ನೇ ರಾಜ್ಯ ಹಣಕಾಸು ಆಯೋಗವು ಇತ್ತೀಚೆಗೆ ತನ್ನ ವರದಿ ನೀಡಿದ್ದು ಕೆಲವು ಪ್ರಮುಖ ಶಿಫಾರಸ್ಸುಗಳನ್ನು



downloaded from: www.kpscvaani.com

ಮಾಡಿದೆ. ಜನಸಂಖ್ಯೆ ಆಧಾರದ ಮೇಲೆ ಗ್ರಾಮಪಂಚಾಯಿತಿಗಳನ್ನು ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ. 4000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಪಂಚಾಯಿತಿಗಳಿಗೆ ವಾರ್ಷಿಕ 9 ಲಕ್ಷ, 8000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಪಂಚಾಯಿತಿಗಳಿಗೆ 12 ಲಕ್ಷ 8000ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮಪಂಚಾಯಿತಿಗಳಿಗೆ 15 ಲಕ್ಷ ಅನುದಾನ ನೀಡಲು ಶಿಫಾರಸ್ಸು ಮಾಡಿದೆ.

ಗ್ರಾಮಪಂಚಾಯಿತಿಗಳಿಗೆ ವಾರ್ಷಿಕ ರೂ. 1 ಲಕ್ಷದಿಂದ 3 ಲಕ್ಷಗಳವರೆಗೆ ಹೆಚ್ಚುವರಿ ಅನುದಾನ ನೀಡುವುದು; ಹಿಂದುಳಿದ ತಾಲ್ಲೂಕುಗಳಲ್ಲಿರುವ ಎಲ್ಲಾ ಗ್ರಾಮಪಂಚಾಯಿತಿಗಳಿಗೆ ಪ್ರತಿ ವರ್ಷ ಪ್ರತಿ ಗ್ರಾಮಪಂಚಾಯಿತಿಗೆ 1 ಲಕ್ಷ, ಹೆಚ್ಚು ಹಿಂದುಳಿದ ಗ್ರಾಮಪಂಚಾಯಿತಿಗೆ 2 ಲಕ್ಷ ಅತ್ಯಂತ ಹಿಂದುಳಿದ ಗ್ರಾಮಪಂಚಾಯಿತಿಗೆ 3 ಲಕ್ಷ ಹೆಚ್ಚುವರಿ ಅನುದಾನ ನೀಡಲು ಆಯೋಗ ಶಿಫಾರಸ್ಸು ಮಾಡಿದೆ.

ಗ್ರಾಮಪಂಚಾಯಿತಿಗಳ ವಸೂಲಾತಿಯಲ್ಲಿ ಮತ್ತು ಇತರೆ ಕಾರ್ಯಕ್ರಮಗಳಲ್ಲಿ ಸಾಧಿಸಿದ ಪ್ರಗತಿ ಆಧರಿಸಿ ವಾರ್ಷಿಕ 3 ಲಕ್ಷ ಪ್ರೋತ್ಸಾಹ ನಿಧಿ ನೀಡುವುದು, ಒಂಬುಡ್ಸ್‌ಮನ್ ನೇಮಿಸುವುದು, ಪಂಚಾಯಿತಿಗಳಿಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ಸ್ಥಾಪಿಸುವುದು, ಮೂರು ಹಂತದ ಪಂಚಾಯಿತಿಗಳ ಅಧ್ಯಕ್ಷ / ಉಪಾಧ್ಯಕ್ಷ ಅಧಿಕಾರಾವಧಿಯನ್ನು 5 ವರ್ಷಕ್ಕೆ ಹೆಚ್ಚಿಸುವುದು ಆರು ತಿಂಗಳಿಗೊಮ್ಮೆ ಗ್ರಾಮಸಭೆ ಕಡ್ಡಾಯಗೊಳಿಸಿ ಸಭೆ ನಡೆದ ಬಗ್ಗೆ ವಿಡಿಯೋ ಚಿತ್ರೀಕರಣ ಮಾಡುವುದು, ತೆರಿಗೆ ವಸೂಲಿ ಕುಂಠಿತಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಕಾರ್ಯದರ್ಶಿಗಳನ್ನು ಹೊಣೆಗಾರರನ್ನಾಗಿ ಮಾಡುವುದು, ಇತ್ಯಾದಿ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರ ಹಂತ ಹಂತವಾಗಿ ಜಾರಿಗೊಳಿಸುವ ಅಗತ್ಯವಿದೆ.

ಈ ಹಿಂದೆ ಕರ್ನಾಟಕದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕ ರೂ. 6 ಲಕ್ಷ ಅನುದಾನವನ್ನು ರಾಜ್ಯ ಸರ್ಕಾರ ನೀಡುತ್ತಿತ್ತು. 2010ನೇ ಸಾಲಿನಿಂದ 5000 ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗೆ ರೂ. 8 ಲಕ್ಷ, 10 ಸಾವಿರ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗೆ 10 ಲಕ್ಷ, 10 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗೆ 12 ಲಕ್ಷ ಅನುದಾನವನ್ನು ನೀಡಬೇಕೆಂದು ರಾಜ್ಯ ಸರ್ಕಾರ ಅನುದಾನವನ್ನು ನೀಡಬೇಕೆಂದು ರಾಜ್ಯ ಸರ್ಕಾರ ಪ್ರಕಟಿಸಿದೆ (23–07–2010) 2010ನೇ ವರ್ಷದಲ್ಲಿ ಒಟ್ಟು 5328 ಗ್ರಾಮ ಪಂಚಾಯಿತಿಗಳು ಈ ಸೌಲಭ್ಯವನ್ನು ಪಡೆಯಲಿವೆ.



downloaded from: www.kpscvaani.com

# GNANADHARE ACADEMY

#2 Sharada Arcade,Nagarbhavi Main Road Prashanth Nagar, Vijaynagar
North Bangalore-560079, Mob:9513804777/9513809777


ಜಿಲ್ಲೆಗೆ ಒಬ್ಬರನ್ನು ಓಂಬುಡ್ಸ್‌ಮನ್ ನೇಮಕ ಮಾಡುವ ತೀರ್ಮಾನವನ್ನು ರಾಜ್ಯ ಸರ್ಕಾರ ಮಾಡಿದೆ. 2009–10ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ 2569.20 ಕೋಟಿ ರೂ.ಗಳನ್ನು ಸಂದಾಯ ಮಾಡಲಾಗಿದ್ದು, 2010–11ನೇ ವರ್ಷಕ್ಕೆ 4800 ಕೋಟಿ ರೂ.ಗಳನ್ನು ಈ ಕಾರ್ಯಕ್ರಮಕ್ಕೆ ಕೇಂದ್ರ ನೀಡುವ ನಿರೀಕ್ಷೆ ಇದೆ. ಎಂಜಿಎನ್ ಆರ್‌ಇಜಿಎ ಸಮರ್ಪಕವಾಗಿ ಜಾರಿಗೊಳಿಸಿದರೆ ಉದ್ಯೋಗ ಭದ್ರತೆ ಜನತೆಗೆ ಲಭಿಸಿ ಜನರು ಉತ್ತಮ ಜೀವನ ನಡೆಸಬಹುದಾಗಿದೆ. ನಗರಸಭೆ ಮತ್ತು ಮಹಾನಗರಪಾಲಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡಿಕೊಳ್ಳಬಹುದು. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಯನ್ನು ಓಂಬುಡ್ಸ್‌ಮನ್ ಎಂದು ನೇಮಿಸುವುದು ಇವರ ಜವಾಬ್ದಾರಿ ತಾಲ್ಲೂಕು ಪಂಚಾಯಿತಿ ಮತ್ತು ಪುರಸಭೆಗಳಿಗೆ ಸಂಬಂಧಿಸಿದ ವಿಷಯಗಳನ್ನು ನೋಡಿಕೊಳ್ಳುವುದು. ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್‌ನ್ನು ಓಂಬುಡ್ಸ್‌ಮನ್ ಎಂದು ನೇಮಕ ಮಾಡುವುದು ಅವರು ಗ್ರಾಮ ಪಂಚಾಯಿತಿಗಳು ಮತ್ತು ಪಟ್ಟಣ ಪಂಚಾಯಿತಿಗಳನ್ನು ನೋಡಿಕೊಳ್ಳುವುದು.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳು ಸಂವಿಧಾನಾತ್ಮಕವಾಗಿ ದೊರೆತಿರುವ ಅಧಿಕಾರಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸಿದಾಗ ಗಾಂಧೀಜಿ ಕಂಡ ಗ್ರಾಮ ರಾಜ್ಯದ ಕನಸು ನನಸಾದೀತು. ಇದರ ಜೊತೆಗೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಜನರ ಭಾಗವಹಿಸುವಿಕೆ ಬಹಳ ಪ್ರಮುಖವಾದುದು. ಗ್ರಾಮಪಂಚಾಯಿತಿಗಳು ದೇಶದ ಏಳಿಗೆಯಲ್ಲಿ ಪ್ರಮುಖ ಪಾತ್ರವಹಿಸುವಂತಾಗಿ ತಳಮಟ್ಟದಿಂದ ಪ್ರಜಾಪ್ರಭುತ್ವ ಗಟ್ಟಿಯಾಗಿ ನಿಲ್ಲುವಂತಾಗಬೇಕು. ಭಾರತದಂತಹ ಆರ್ಥಿಕತೆಯಲ್ಲಿ ಗ್ರಾಮೀಣಾಭಿವೃದ್ಧಿಯು ಎಲ್ಲಾ ಪಂಚವಾರ್ಷಿಕ ಯೋಜನೆಗಳ ಉದ್ದೇಶವಾಗಿದೆ. ಅಭಿವೃದ್ಧಿಯಲ್ಲಿ ಗ್ರಾಮೀಣ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಪ್ರಮುಖ ಪಾತ್ರವಹಿಸಬೇಕು. 11ನೇ ಪಂಚವಾರ್ಷಿಕ ಯೋಜನೆ ಮುಖ್ಯ ಉದ್ದೇಶದಂತೆ "ಎಲ್ಲರನ್ನು ಒಳಗೊಂಡ ಅಭಿವೃದ್ಧಿ"ಯು ಸಾಧ್ಯವಾಗಬೇಕಾದರೆ ದೇಶದ ಅಭಿವೃದ್ಧಿಯಲ್ಲಿ ಎಲ್ಲರೂ ಭಾಗವಹಿಸುವಂತಾಗಬೇಕು. ಗ್ರಾಮ ಪಂಚಾಯಿತಿಗಳಿಗೆ ಇತ್ತೀಚೆಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡಲಾಗಿದ್ದು ಹೆಚ್ಚಿನ ಅನುದಾನಗಳು ದೊರೆಯುತ್ತವೆ. ಕೆಳಹಂತದ ಪಂಚಾಯಿತಿಗಳು ಸಮರ್ಪಕ ಯೋಜನೆಗಳನ್ನು ರೂಪಿಸಿ ಸಕ್ರಿಯವಾಗಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ವಿಕೇಂದ್ರೀಕೃತ ತತ್ವವನ್ನು ಅಳವಡಿಸಿ ಜನರಿಗೆ ಹೆಚ್ಚಿನ ಸೇವೆಗಳನ್ನು ನೀಡುವ ಮಾರ್ಗದಲ್ಲಿ ಸಾಗಬೇಕು. ಗ್ರಾಮಸಭೆಗಳನ್ನು ಸಮರ್ಪಕವಾಗಿ ನಡೆಸಬೇಕು. ತೆರಿಗೆ / ತೆರಿಗೇಯೇತರ ಮೂಲಗಳಿಂದ



downloaded from: www.kpscvaani.com

ಹೆಚ್ಚಿನ ಸಂಪನ್ಮೂಲ ಸಂಗ್ರಹಿಸಬೇಕು. ಜಮಾಬಂದಿ ಕಾರ್ಯಕ್ರಮವನ್ನು ಬಲಗೊಳಿಸಬೇಕು. ಸಿಬ್ಬಂದಿಗಳಿಗೆ ನಿರಂತರ ತರಬೇತಿ ನೀಡಬೇಕು. ಪಂಚಾಯತ್‌ರಾಜ್ ಸಂಸ್ಥೆಯು ಸರ್ಕಾರದಿಂದ ಬರುವ ಸ್ವಂತ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವ ಕಡೆ ಹೆಚ್ಚಿನ ಗಮನ ಕೊಡಬೇಕು. ಅದಕ್ಕಾಗಿ ಚುನಾಯಿತ ಪ್ರತಿನಿಧಿಗಳು ದಕ್ಷವಾಗಿ ತಮ್ಮ ವಾರ್ಡ್‌ಗಳ ಕೆಲಸವನ್ನು ನಿರ್ವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಬೇಕು. ಜೊತೆಗೆ ಜನರು ಅಭಿವೃದ್ಧಿಯಲ್ಲಿ ಭಾಗವಹಿಸಿದಾಗ ಮಾತ್ರ ಪಂಚಾಯತ್‌ರಾಜ್ ಸಂಸ್ಥೆಗಳ ಬೆಳವಣಿಗೆ ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮಾಹಿತಿ ತಂತ್ರಜ್ಞಾನದ ಸದ್ಬಳಕೆ, ವಾರ್ಷಿಕ ಎರಡು ಸಾರಿ ಜಮಾಬಂದಿ ಮಾಡುವುದು, ಓಂಬುಡ್ಸ್‌ಮನ್‌ಗಳನ್ನು ಬಲಿಷ್ಠಗೊಳಿಸುವುದರಿಂದ ಎಂಜಿಎನ್‌ಆರ್‌ಇಜಿಎ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲದು.

## ರೂಪಾಯಿ ಅಪಮೌಲ್ಯ ಅಥವಾ ಆರ್ಥಿಕ ಹಿಂಜರಿಕೆ

ಡಾಲರ್ ವಿರುದ್ಧ ರೂಪಾಯಿಯ ಮೌಲ್ಯವು ತೀವ್ರ ಇಳಿಕೆ ದಾಖಲು ಮಾಡುತ್ತಿದೆ. ಹತ್ತಿರದ ಭವಿಷ್ಯದಲ್ಲಿ ಹಿಂದೆಂದೂ ಕಂಡರಿಯದ ಮಟ್ಟಗಳನ್ನು ಮುಟ್ಟಬಹುದಾಗಿರುತ್ತದೆ. ತಾಂತ್ರಿಕವಾಗಿ ವಿದೇಶಿ ವಿನಿಮಯ ಮಾರುಕಟ್ಟೆಗಳಲ್ಲಿ ಬೇಡಿಕೆ ಪೂರೈಕೆಗಳಲ್ಲಿ ಹಠಾತ್ ಬದಲಾವಣೆಗಳ ಕಾರಣದಿಂದ ಉಂಟಾದ ರೂಪಾಯಿ ಅಪಮೌಲ್ಯ ಏರಿಳಿಕೆ ದಿಕ್ಕಿನಲ್ಲಿರುತ್ತದೆ. ಡಾಲರ್ ವಿರುದ್ಧ ರೂಪಾಯಿಯ ಮೌಲ್ಯವು ಕೆಲವೇ ವಾರಗಳಲ್ಲಿ ಶೇ. 14 ಕ್ಕೂ ಹೆಚ್ಚು ಕುಸಿತ ಕಂಡಿರುತ್ತದೆ. ಹಾಗೂ ಈಗಂತೂ ಪ್ರತಿದಿನವೂ ಶೇ. 1 ರಿಂದ 3 ರಷ್ಟಿನ ಬದಲಾವಣೆಗಳು ಸಾಮಾನ್ಯವಾಗಿರುತ್ತವೆ.

1944ರ ಸ್ವಾತಂತ್ರ್ಯ ನಂತರ ಭಾರತೀಯ ರೂಪಾಯಿಯಲ್ಲಿನ ಏರುಪೇರುಗಳು ಹಾಗೂ ಅವುಗಳ ಕಾರಣಗಳ ಸಂಕ್ಷಿಪ್ತ ಮಾಹಿತಿಯನ್ನು ನಾವು ಗಮನಿಸಬಹುದು.

- 1947 ಭಾರತದ ಆಸ್ತಿ ಹೊಣೆಗಾರಿಕೆಗಳಲ್ಲಿ ವಿದೇಶಿ ಸಾಲಗಳು ಇರಲಿಲ್ಲ.
- 1951 – ಪಂಚವಾರ್ಷಿಕ ಯೋಜನೆಗಳ ಆರಂಭ.
- ಇಲ್ಲಿ ಭಾರತ ಸರ್ಕಾರವು ಕಲ್ಯಾಣ ಕಾರ್ಯಗಳಿಗಾಗಿ ಬಾಹ್ಯಮೂಲಗಳಿಂದ ಸಾಲ ಪಡೆಯಲು ಪ್ರಾರಂಭಿಸಿತು. ಒಂದು ಡಾಲರ್‌ನ ಬೆಲೆ = ರೂ. 4.80 ಪೈ.



downloaded from: www.kpscvaani.com

- 1975–85ರ ದಶಕದ ಪ್ರಾರಂಭದಲ್ಲಿ ಪೆಟ್ರೋಲಿಯಂ ತೈಲದ ದರ ಏರಿಕೆ ಮತ್ತು ಇತರೆ ಕಾರಣಗಳಿಂದ ರೂಪಾಯಿ ಅಪಮೌಲ್ಯಗೊಂಡಿತು. ಒಂದು ಡಾಲರ್‌ಗೆ = ರೂ. 12.36 ಪೈಸೆ.
- 1991 ರಲ್ಲಿ ತೀವ್ರತರನಾದ ಪಾವತಿ ಬಿಕ್ಕಟ್ಟು ಉಂಟಾಯಿತು. ದೇಶ ತೀವ್ರ ಹಣದುಬ್ಬರ ಸಮಸ್ಯೆ ಮತ್ತು ಕೆಳಮಟ್ಟದ ಅಭಿವೃದ್ಧಿ ಹಾಗೂ ವಿದೇಶಿ ವಿನಿಮಯ ದಾಸ್ತಾನು ಮೂರು ವಾರಗಳಿಗೆ ಆಮದು ಮಾಡಿಕೊಳ್ಳಲಾರದಷ್ಟು ಮಟ್ಟಕ್ಕೆ ಕುಸಿದಿತ್ತು. ಒಂದು ಡಾಲರ್‌ಗೆ = ರೂ. 17.90 ಪೈಸೆ.
- 1993ರಲ್ಲಿ ಮಾರುಕಟ್ಟೆಯ ಮೌಲ್ಯದಂತೆ ರೂಪಾಯಿಯ ಬೆಲೆ ನಿಗಧಿಗೊಳ್ಳಲು ನಿಷೇಧಗಳನ್ನು ತೆಗೆದುಹಾಕಲಾಯಿತು. ಒಂದು ಡಾಲರ್‌ಗೆ = ರೂ. 31.37.
- 2008ರಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕಾರಣದಿಂದ ರೂಪಾಯಿ ಅಪಮೌಲ್ಯಗೊಂಡಿತು. ಆಗ ಒಂದು ಡಾಲರ್ ಬೆಲೆ ರೂ. 49ಕ್ಕೆ ಏರಿಕೆ ಕಂಡಿತು.
- ಪ್ರಸ್ತುತವಾಗಿ ಆರ್ಥಿಕ ನೀತಿಗಳ ಬಿಕ್ಕಟ್ಟು, ಮೂಲಭೂತ ಸೌಲಭ್ಯಗಳ ಕೊರತೆ, ಅತಿ ಹೆಚ್ಚು ಮಟ್ಟದ ಚಾಲ್ತಿ ಖಾತೆ ಕೊರತೆಯಿಂದಾಗಿ ಪಾವತಿ ಬಾಕಿ, ಕನಿಷ್ಟ ಮಟ್ಟದ ಅಭಿವೃದ್ಧಿ ಈ ಎಲ್ಲಾ ಕಾರಣಗಳಿಂದಾಗಿ ವಿದೇಶಿ ವಿನಿಮಯದ ಹೊರ ಹರಿವು ಉಂಟಾಗಿ ರೂಪಾಯಿ ತೀವ್ರವಾಗಿ ಅಪಮೌಲ್ಯಗೊಂಡಿರುತ್ತದೆ. ಒಂದು ಡಾಲರ್ = ರೂ. 68.80 ಪೈಸೆಯಾಗಿದೆ.

## ರೂಪಾಯಿ ಅಪಮೌಲ್ಯಗೊಳ್ಳಲು ನಾವು ಅನೇಕ ಕಾರಣಗಳನ್ನು ತಿಳಿಯಬಹುದು ಅಂತಹ ಪ್ರಮುಖ ಕಾರಣಗಳೆಂದರೆ

- ಅಂತರರಾಷ್ಟ್ರೀಯ ಮಟ್ಟದಲ್ಲಿನ ಹಠಾತ್ ಬೆಳವಣಿಗೆ
- ಚಾಲ್ತಿ ಖಾತೆಯ ಕೊರತೆ
- ಈ ಚಾಲ್ತಿಖಾತೆಯ ಕೊರತೆಯಿಂದಾಗಿ ಭಾರತದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ)ದ ಶೇ. 4.8 ರಷ್ಟು ಮಟ್ಟಕ್ಕೆ ಏರಿಕೆಗೊಂಡಿರುತ್ತದೆ
- ಯುರೋಪ್ / ಅಮೇರಿಕಾಗಳಲ್ಲಿನ ಆರ್ಥಿಕ ಹಿಂಜರಿತ
- ರಫ್ತು ಪ್ರಮಾಣದಲ್ಲಿನ ಇಳಿಕೆ



downloaded from: www.kpscvaani.com

- ಪೆಟ್ರೋಲಿಯಂ ತೈಲ ಆಮದಿನಲ್ಲಿ ಹೆಚ್ಚಳ
- ಬಂಗಾರದ ಆಮದುಗಳಲ್ಲಿನ ಹೆಚ್ಚಳ
- ಭಾರತದ ಷೇರು ಹಾಗೂ ಸಾಲ ಮಾರುಕಟ್ಟೆಗಳಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಹಠಾತ್ ಹಿಂಪಡೆಯುವಿಕೆ
- ಉದಾರೀಕರಣದ ನಿಧಾನಗತಿ
- ದುರ್ಬಲ ರಾಜಕೀಯ ಸಂವೇದನೆ

ಈ ಮೇಲೆ ತಿಳಿಸಲಾಗಿರುವ ಎಲ್ಲಾ ಸಮಸ್ಯೆಗಳು ರೂಪಾಯಿ ಮೌಲ್ಯವನ್ನು ಹಠಾತ್ತಾಗಿ ವಿಶೇಷವಾಗಿ ಯುರೊ, ಡಾಲರ್, ಪೌಂಡ್, ಸ್ಟರ್ಲಿಂಗ್ ಮತ್ತು ಯೆನ್‌ಗಳ ವಿರುದ್ಧ ತೀವ್ರ ತರದ ಕುಸಿತಕ್ಕೆ ಕಾರಣಗಳಾಗಿವೆ. ಮೇಲೆ ತಿಳಿಸಲಾಗಿರುವ ಅಂಶಗಳಲ್ಲದೆ

- ರಾಜ್ಯ ಆದಾಯದ ಕುಸಿತ
- ಗ್ರಾಹಕ ದರ ಸೂಚ್ಯಂಕದ ಹೆಚ್ಚಳ
- ಆರ್ಥಿಕ ಬೆಳವಣಿಗೆಗಳ ಕುಸಿತ
- ಏರಿಕೆ ರಹಿತ ಕೈಗಾರಿಕೆಗಳ ಅಭಿವೃದಿ
- ಉತ್ಪಾದಕ ಯಂತ್ರೋಪಕರಣಗಳ ಆಮದಿನ ಕುಸಿತ
- ಸ್ಥಳೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಮಟ್ಟದ ಹಣಕಾಸಿನ ಲಭ್ಯತೆ

ಈ ಎಲ್ಲಾ ಕಾರಣಗಳು ಕೂಡ ರೂಪಾಯಿ ಅಪಮೌಲ್ಯಗೊಳ್ಳಲು ಪ್ರಮುಖ ಕಾರಣಗಳಾಗಿವೆ. ಹಾಗಾಗಿ ರೂಪಾಯಿಯ ಮೌಲ್ಯವು ಎರಡೇ ವಾರಗಳಲ್ಲಿ ರೂ. 60 ರಿಂದ ರೂ. 68.80 ಮಟ್ಟಕ್ಕೆ ಕುಸಿತ ಕಂಡಿತು.

ಡಾಲರ್ ವಿರುದ್ಧ ರೂಪಾಯಿಯ ಮೌಲ್ಯ ತೀವ್ರವಾಗಿ ಕುಸಿಯಲು ಕಾರಣವಾದ ಮೊದಲ ಅಂತರರಾಷ್ಟ್ರೀಯ ಸಂದರ್ಭವೆಂದರೆ ಅಮೇರಿಕಾದ ಫೆಡರಲ್ ರಿಸರ್ವ್‌ನ ಅಧ್ಯಕ್ಷರಾದ ಶ್ರೀ ಬೆನ್ ಬನಗಂಕೆಯವರು ಅಮೇರಿಕಾದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ತಿಂಗಳಿಗೆ ಡಾಲರ್ ವಿತರಣೆಯನ್ನು 85 ಬಿಲಿಯನ್‌ಗಳಿಗೆ ಸೀಮಿತಗೊಳಿಸಲಾಗುತ್ತದೆ ಎಂದು ಪ್ರಕಟಿಸಿದ್ದು ಜೊತೆಗೆ ಅಮೇರಿಕಾ ದೇಶದ ಸಾಲ



downloaded from: www.kpscvaani.com

ಪಡೆಯುವ ಸಾಮರ್ಥ್ಯ ಮಾನದಂಡ ಸುಧಾರಣೆ, ದೀರ್ಘಕಾಲದ ಬಡ್ಡಿದರಗಳ ಏರಿಕೆ, ದೇಶಗಳ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತೈಲದರಗಳ ಬೆಲೆಗಳ ನಿರೀಕ್ಷೆ, ಯುರೋ ವಲಯದಲ್ಲಿ ಆರ್ಥಿಕ ಹಿಂಜರಿಕೆ ಮತ್ತು ಐರೋಪ್ಯ ಮತ್ತು ಜಪಾನಿ ಕೇಂದ್ರ ಬ್ಯಾಂಕುಗಳ ಆರ್ಥಿಕ ನೀತಿಗಳು ಇವುಗಳ ಕಾರಣದಿಂದಲೂ ಡಾಲರ್ ಬೆಲೆ ಉತ್ತಮಗೊಂಡಿತು. ಸ್ಥಳೀಯ ಹಾಗೂ ಅಂತರರಾಷ್ಟ್ರೀಯ ಬೆಳವಣಿಗೆಗಳು ಡಾಲರ್ ವಿರುದ್ಧ ರೂಪಾಯಿಯ ಏರುಪೇರುಗಳಿಗೆ ಕಾರಣವಾಗಿ, ಭಾರತದ ಆರ್ಥಿಕ ಸ್ಥಿತಿಗೆ ಹಾಗೂ ಬಾಹ್ಯವಲಯದಲ್ಲಿ ತೀವ್ರ ಬಿಕ್ಕಟ್ಟನ್ನು ಉಂಟು ಮಾಡಿರುತ್ತದೆ.

## ಭಾರತದ ಆರ್ಥಿಕ ಸ್ಥಿತಿ ಹಾಗೂ ಕಂಪನಿಗಳ ಮೇಲೆ ಉಂಟಾಗಿರುವ ಪರಿಣಾಮಗಳು

ಈ ಸ್ಥಳೀಯ ಹಾಗೂ ಅಂತಾರಾಷ್ಟ್ರೀಯ ಅಂಶಗಳು ರೂಪಾಯಿಯ ಏರುಪೇರಿಗೆ ಕಾರಣವಾಗಿದ್ದು ರೂಪಾಯಿ ಮೌಲ್ಯ ಡಾಲರ್‌ಗೆ ರೂ. 68.80 ಹಾಗೂ ಪೌಂಡ್ ಸ್ಟರ್ಲಿಂಗ್‌ಗೆ ರೂ. 104.30 ಮತ್ತು ಯುರೋಗೆ ರೂ. 86 ಈ ಮಟ್ಟಗಳಿಗೆ ಇಳಿಕೆಗೊಂಡು ಇತಿಹಾಸದಲ್ಲಿ ಕಂಡರಿಯದ ಮಟ್ಟಕ್ಕೆ ಕುಸಿದು ಇನ್ನು 2012 ಇಸವಿಯಲ್ಲಿ ಇದ್ದ ದರಗಳಿಗೆ ಮರಳಲಾರದು ಎಂಬ ಅನುಮಾನ ಉಂಟಾಗಿತ್ತು. ಇನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶದ ಕಂಪನಿಗಳು ಸ್ಪರ್ಧಾತ್ಮಕ ಪರಿಸ್ಥಿತಿಗೆ ತಲುಪುವುದು ಅನುಮಾನ ಎಂಬ ಪರಿಸ್ಥಿತಿ ಉಂಟಾಗಿತ್ತು.

## ರಫ್ತುದಾರರ ಮೇಲೆ ಬೀರುವ ಪರಿಣಾಮಗಳು ಮತ್ತು ಸವಾಲುಗಳು

- ರೂಪಾಯಿ ಅಪಮೌಲ್ಯದಿಂದ ದೇಶದ ರಫ್ತುದಾರರಿಗೆ ವಿಶೇಷವಾಗಿ ಮಾಹಿತಿ ತಂತ್ರಜ್ಞಾನಕ್ಕೆ ಮತ್ತು ಆಮದಾಗುವ ವಸ್ತುಗಳನ್ನು ಬಳಸುವವರಿಗೆ ಅನುಕೂಲವಾಗುತ್ತದೆ.
- ವಜ್ರ, ಆಭರಣಗಳು, ಎಂಜಿನಿಯರಿಂಗ್ ಉತ್ಪನ್ನಗಳನ್ನು ಬಳಸುವ ರಫ್ತುದಾರರಿಗೆ ಡಾಲರ್‌ನ ಮೌಲ್ಯದ ವೃದ್ಧಿಯಿಂದ ಸಂಕಷ್ಟ ಎದುರಾಗುತ್ತದೆ.
- ರಫ್ತುದಾರರು ತಮ್ಮ ರಫ್ತು ಪೂರೈಕೆ ಸರಣಿಯನ್ನು ಪರಿಣಾಮಕಾರಿ ಹಾಗೂ ದಕ್ಷಗೊಳಿಸಿ ಭವಿಷ್ಯದ ಸವಾಲುಗಳನ್ನು ಎದುರಿಸಬೇಕು.
- ಈ ಎಲ್ಲಾ ಪರಿಣಾಮಗಳಿಂದಾಗಿ ತಂತ್ರಜ್ಞಾನವನ್ನು ಉತ್ತಮಗೊಳಿಸಿಕೊಳ್ಳಲು, ಇತರೆ ವೆಚ್ಚಗಳನ್ನು ಕಡಿತಗೊಳಿಸಲು ಗುಣಮಟ್ಟವನ್ನು ಉತ್ತಮಗೊಳಿಸಲು ಉತ್ಪಾದನಾ



downloaded from: www.kpscvaani.com

ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು, ಕಡಿಮೆ ವೇತನದ ಕೆಲಸಗಾರರ ದಕ್ಷತೆಯನ್ನು ಸುಧಾರಿಸಲು ಹೆಚ್ಚು ಗಮನ ನೀಡಬೇಕು.

## ಆಮದು ಮತ್ತು ಸಾಲಗಳ ಮೇಲಿನ ಪರಿಣಾಮಗಳು

ಆಮದು ವ್ಯವಹಾರಗಳ ಒಟ್ಟಾರೆ ವೆಚ್ಚಗಳನ್ನು ರೂಪಾಯಿ ಅಪಮೌಲ್ಯ ತೀವ್ರವಾಗಿ ಹೆಚ್ಚಿಸಿರುತ್ತದೆ.

## ರೂಪಾಯಿ ಅಪಮೌಲ್ಯಗೊಳ್ಳುವಿಕೆಯಿಂದ

- ಆಮದುದಾರರಿಗೆ
- ಕಡಿಮೆ ಬಡ್ಡಿ ದರಗಳಲ್ಲಿ ವಿದೇಶಿ ಸಾಲಗಳನ್ನು ಪಡೆದವರಿಗೆ
- ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಉದ್ದೇಶಿಸಿರುವ ವಿದ್ಯಾರ್ಥಿಗಳಿಗೆ
- ವಿದೇಶ ಪ್ರವಾಸ ಕೈಗೊಳ್ಳುವವರಿಗೆ
- ವಿದೇಶಗಳಲ್ಲಿ ವೈದ್ಯಕೀಯ ಸೌಲಭ್ಯ ಪಡೆಯುವವರಿಗೆ ಸಹಾಯಕವಾಗುವುದಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕಿನ ಸಮೀಕ್ಷೆಯ ಪ್ರಕಾರ ಡಾಲರ್ ಮೌಲ್ಯದಲ್ಲಿ ಸಾಲ ಪಡೆದ ಬಹುತೇಕ ಭಾರತೀಯ ಕಂಪನಿಗಳು ವಿದೇಶಿ ವಿನಿಮಯ ಏರಿಳಿತಗಳಿಂದ ನಷ್ಟವಾಗದಿರುವಂತೆ ಮಾರುಕಟ್ಟೆಯಲ್ಲಿ ಅವಕಾಶಗಳಿದ್ದರೂ ಭದ್ರತಾ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ. ಇಂತಹ ವಿವೇಚನಾರಹಿತ ಕ್ರಮಗಳಿಂದ ಅಗ್ಗದ ವಿದೇಶಿ ಸಾಲಗಳು ಡಾಲರ್ ಮೌಲ್ಯದ ಏರಿಕೆಯಿಂದ ರೂಪಾಯಿ ಸಾಲಗಳು ದುಬಾರಿಯಾಗಿ ಪರಿಣಮಿಸಿರುತ್ತದೆ.

## ರೂಪಾಯಿ ಅಪಮೌಲ್ಯದಿಂದ ರಕ್ಷಿಸಿಕೊಳ್ಳುವುದು

ರೂಪಾಯಿಯ ಏರುಪೇರು ವಿದೇಶಿ ವಿನಿಮಯ ಆಪತ್ತಿನ ವಿರುದ್ಧ ರಕ್ಷಿಸಿಕೊಳ್ಳುವುದು ಅಗತ್ಯವಾಗಿರುತ್ತದೆ

- ಭವಿಷ್ಯದ ಮಾರುಕಟ್ಟೆಗಳ ವಹಿವಾಟುಗಳಾದ ಫಾರ್ವರ್ಡ್‌ಗಳು ಷೇರು ವಿನಿಮಯ ವ್ಯವಹಾರಗಳನ್ನು ಹೆಚ್ಚಿಸಿಕೊಳ್ಳುವುದು.



downloaded from: www.kpscvaani.com

- ಫ್ಯೂಚರ್ ಮತ್ತು ಆಪ್ಷನ್‌ಗಳನ್ನು ಬಳಸಿಕೊಂಡು ನವೀನ ರಕ್ಷಣ ತಂತ್ರಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು.
- ವಿದೇಶಿ ವಿನಿಮಯ ವ್ಯವಹಾರಗಳಲ್ಲಿ ಲಭ್ಯವಿರುವ ಅನುಕೂಲಕರ ಭದ್ರತೆಗಳನ್ನು ಬಳಸಿಕೊಳ್ಳುವುದು
- ರೂಪಾಯಿಯ ಅಪಮೌಲ್ಯ ಸವಾಲನ್ನು ಎದುರಿಸಲು ಕಂಪನಿಗಳು ದೀರ್ಘಕಾಲೀನ ವ್ಯವಹಾರಗಳಿಗೆ ತಕ್ಕನಾದೆ ಕಾರ್ಯಾಚರಣೆ ಭದ್ರತೆಯ ತಂತ್ರಗಳನ್ನು ಅಭಿವೃದ್ಧಿ ಪಡಿಸಿಕೊಳ್ಳುವುದು.
- ರಫ್ತು ಕ್ಷೇತ್ರದ ಪ್ರೋತ್ಸಾಹ
- ಚಾಲ್ತಿಖಾತೆಯ ಕೊರತೆಯ ನಿವಾರಣೆ
- ಅನಗತ್ಯ ಆಮದುಗಳನ್ನು ತಡೆಗಟ್ಟುವುದು
- ವಿದೇಶಿ ವಿನಿಮಯಗಳ ವಿರುದ್ಧ ರೂಪಾಯಿಯ ಮೌಲ್ಯ ಕಡಿಮೆಗೊಳ್ಳುವುದನ್ನು ತಡೆಯುವುದು ಮತ್ತು ಮಾರುಕಟ್ಟೆಯನ್ನು ಉತ್ತಮಪಡಿಸುವುದು
- ವಿದೇಶಿ ವ್ಯವಹಾರಗಳಲ್ಲಿ ಸ್ಪರ್ಧಾತ್ಮಕವಾಗಿರಲು ಮತ್ತು ಲಾಭ ಗಳಿಕೆಯನ್ನು ರಕ್ಷಿಸಿಕೊಳ್ಳಲು ವಿದೇಶಿ ವ್ಯವಹಾರ ಮತ್ತು ಸಾಲ ಮತ್ತು ಸಾಲ ವ್ಯವಹಾರಗಳಿಗೆ ತಕ್ಕಂತೆ ನವೀನ ಭದ್ರತೆಗಳನ್ನು ಒದಗಿಸಿಕೊಳ್ಳುವುದು.

ಹೀಗೆ ಈ ಎಲ್ಲಾ ಮೇಲ್ಕಂಡ ಅಂಶಗಳನ್ನು ಕೂಲಂಕುಶವಾಗಿ ಪರಿಗಣಿಸಿ ಮತ್ತು ಇನ್ನೂ ಅನೇಕ ಉಪಯುಕ್ತ ವಿಚಾರಗಳತ್ತ ಗಮನಹರಿಸಿ ಉತ್ತಮ ತಜ್ಞರೊಂದಿಗೆ ಚರ್ಚಿಸಿ ಭಾರತೀಯ ರೂಪಾಯಿ ಅಪಮೌಲ್ಯವನ್ನು ತಗ್ಗಿಸಬಹುದು ಮತ್ತು ಜಾಗತಿಕವಾಗಿ ರೂಪಾಯಿ ಮೌಲ್ಯ ವೃದ್ಧಿಗೊಳ್ಳಲು ಎಚ್ಚರವಹಿಸಬಹುದಾಗಿದೆ.

## ಹೈದರಾಬಾದ್ ಕರ್ನಾಟಕ ಜಿಲ್ಲೆಗಳ ರಚನೆಗೆ 371 (ಜೆ) ಕಲಂ ಜಾರಿ

ರಾಜ್ಯ ಪುನರ್ ವಿಂಗಡಣಾ ಆಯೋಗದ ಶಿಫಾರಸ್ಸಿನಂತೆ 1956ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯವನ್ನು ಅಂದಿನಿಂದಲೂ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯು ಕಾಡುತ್ತಿದೆ. ಅದರ ನಿವಾರಣೆಗೆ ಸರ್ಕಾರವು ಅಂದಿನಿಂದಲೂ ತೀವ್ರತರನಾದ ಪ್ರಯತ್ನವನ್ನು ನಡೆಸುತ್ತಾ ಬಂದಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾದೇಶಿಕ ಅಭಿವೃದ್ಧಿಗೆ ಗಮನ ನೀಡುತ್ತಾ ಬರಲಾಗಿದೆ. ಈ ಸಮಸ್ಯೆಯ ನಿರ್ವಹಣೆಗಾಗಿ 1990ರಲ್ಲಿ ಸರ್ಕಾರವು



downloaded from: www.kpscvaani.com

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿತು. ಮುಂದೆ ಪ್ರಾದೇಶಿಕ ಅಸಮಾನತೆಯ ಅಧ್ಯಯನ ಮಾಡಿ ಅದರ ನಿವಾರಣೆಗೆ ಪರಿಹಾರೋಪಾಯಗಳನ್ನು ಶಿಫಾರಸ್ಸು ಮಾಡಲು ಡಾ. ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರ ಸಮಿತಿಯನ್ನು 2000ದಲ್ಲಿ ನೇಮಿಸಲಾಯಿತು. ಈ ಸಮಿತಿಯು 2002ರಲ್ಲಿ ನೀಡಿದ ವರದಿಯಲ್ಲಿನ ಒಂದು ಶಿಫಾರಸ್ಸಿನಂತೆ 2007–08ರಲ್ಲಿ ಎಂಟು ವರ್ಷಗಳ ರೂ. 31,000 ಕೋಟಿ ಮೊತ್ತದ ವಿಶೇಷ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲಾಯಿತು. ಕೇಂದ್ರ ಸರ್ಕಾರದ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯಲ್ಲಿ ರಾಜ್ಯದ ಹಿಂದುಳಿದ ಜಿಲ್ಲೆಗಳಿಗೆ ವಿಶೇಷ ಅಭಿವೃದ್ಧಿ ನೆರವು ದೊರೆಯುತ್ತದೆ. ಇಷ್ಟಾದರೂ ನಮ್ಮ ರಾಜ್ಯದಲ್ಲಿ ಅಭಿವೃದ್ಧಿ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯು ಬಗೆಹರಿಯಲಿಲ್ಲ. ರಾಜ್ಯದ ಹಿಂದುಳಿದ ಅದರಲ್ಲೂ ಯಾವುದನ್ನು ಚಾರಿತ್ರಿಕವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಕರೆಯುತ್ತಿದ್ದೇವೆಯೋ ಆ ಜಿಲ್ಲೆಗಳ ಜನರನ್ನು ಅಸಹನೀಯ ಮಟ್ಟಕ್ಕೆ ಈ ಅಸಮಾನತೆಯು ಒಯ್ದು ಬಿಟ್ಟಿದೆ. ಈಗ ಈ ಸಮಸ್ಯೆಯ ನಿವಾರಣೆಗೆ ಮತ್ತು ನಿರ್ವಹಣೆಗೆ ಕೇಂದ್ರ ಸರ್ಕಾರವು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಸಂವಿಧಾನದಲ್ಲಿ 371ಜೆ ಪರಿಚ್ಛೇದಕ್ಕೆ ತಿದ್ದುಪಡಿ ತಂದು ನಮ್ಮ ರಾಜ್ಯದ ಗುಲ್ಬರ್ಗಾ ವಿಭಾಗದ ಆರು ಜಿಲ್ಲೆಗಳಾದ ಬೀದರ್, ಗುಲ್ಬಗಾ, ರಾಯಚೂರು, ಯಾದಗಿರಿ, ಬಳ್ಳಾರಿ ಮತ್ತು ಕೊಪ್ಪಳ ವಿಶೇಷ ಸ್ಥಾನಮಾನ ನೀಡುವ 371 ಸಂವಿಧಾನ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಅನುಮೋದಿಸಿದೆ.

## 1. ಪ್ರಾದೇಶಿಕ ಅಸಮಾನತೆಯ ಚಾರಿತ್ರಿಕ ಹಿನ್ನೆಲೆ

ನಮ್ಮ ರಾಜ್ಯವು ಎದುರಿಸುತ್ತಿರುವ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಗೆ ಚಾರಿತ್ರಿಕ ಹಿನ್ನೆಲೆಯಿದೆ. ರಾಜ್ಯ ಪುನರ್ ವಿಂಗಡಣಾ ಆಯೋಗದ ಶಿಫಾರಸ್ಸಿನಂತೆ ಕನ್ನಡ ಮಾತನಾಡುವ ವಿವಿಧ ಪ್ರದೇಶಗಳನ್ನು ಒಂದುಗೂಡಿಸಿ 1956ರಲ್ಲಿ ಕರ್ನಾಟಕ ರಾಜ್ಯವನ್ನು ರಚಿಸಲಾಯಿತು. ಹೀಗೆ ಕರ್ನಾಟಕವನ್ನು ಸೇರಿದ ವಿವಿಧ ಕನ್ನಡ ಮಾತನಾಡುವ ಪ್ರದೇಶಗಳೆಲ್ಲವೂ ಅಭಿವೃದ್ಧಿಯಲ್ಲಿ ಒಂದೇ ಮಟ್ಟದಲ್ಲಿರಲಿಲ್ಲ.

ಉದಾಹರಣೆಗೆ ಬಾಂಬೆ ಪ್ರೆಸಿಡೆನ್ಸಿಯ ಭಾಗವಾಗಿದ್ದ ಬೆಳಗಾವಿ, ಉತ್ತರ ಕನ್ನಡ, ಧಾರವಾಡ ಮತ್ತು ವಿಜಾಪುರ ಜಿಲ್ಲೆಗಳು ವಸಾಹತು ಆಡಳಿತದ ಅಭಿವೃದ್ಧಿ ಫಲಗಳನ್ನು ಅನುಭವಿಸಿದ್ದವು. ಆದರೆ ಇಂತಹ ವಸಹಾತು ಆಡಳಿತದ ಅನುಕೂಲಗಳು ಹೈದರಾಬಾದ್ ನಿಜಾಮ್ ಪ್ರಾಂತ್ಯದಿಂದ ಬಂದು ಕರ್ನಾಟಕವನ್ನು ಸೇರಿದ ಗುಲ್ಬರ್ಗಾ, ಬೀದರ್ ಮತ್ತು



downloaded from: www.kpscvaani.com

ರಾಯಚೂರು ಜಿಲ್ಲೆಗಳಿಗೆ ಒದಗಿ ಬರಲಿಲ್ಲ. ಇದರ ಫಲವಾಗಿ ಯಾವುದನ್ನು ಒಂದು ನಾವು ಮುಂಬೈ ಕರ್ನಾಟಕ ಪ್ರದೇಶವೆಂದು ಕರೆಯುತ್ತಿದ್ದೇವೆಯೋ ಅದರ ಅಭಿವೃದ್ಧಿಯ ಮಟ್ಟವು 1956ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಮಟ್ಟಕ್ಕಿಂತ ಉತ್ತಮವಾಗಿತ್ತು.

ಕರ್ನಾಟಕದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಅನೇಕ ರೀತಿಯಲ್ಲಿ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಈ ದಿಶೆಯಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಸಂಗತಿಯೆಂದರೆ ಸಂವಿಧಾನದ 371(ಜೆ) ಪರಿಚ್ಛೇದ. ಈ ಕ್ರಮದ ಮೂಲಕ ನಮ್ಮ ರಾಜ್ಯದ ಗುಲ್ಬರ್ಗಾ ವಿಭಾಗದ ಆರು ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್, ಬಳ್ಳಾರಿ, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳು ವಿಶೇಷ ಸ್ಥಾನಮಾನ ಪಡೆಯುತ್ತವೆ.

## 2. ಸಂವಿಧಾನದ 371 (ಜೆ) ಪರಿಚ್ಛೇದ ವಿವರ

ನಮ್ಮದು ಒಕ್ಕೂಟ ರಾಜಕೀಯ ವ್ಯವಸ್ಥೆಯಾಗಿದ್ದು ಇಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿವೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಸೌಹಾರ್ದಯುತ ಸಂಬಂಧವಿಟ್ಟುಕೊಂಡು ಹೋಗುವುದು ಅತ್ಯಂತ ಪ್ರಮುಖ ಸಂಗತಿಯಾಗಿದೆ. ಮುಖ್ಯವಾಗಿ ಒಕ್ಕೂಟದ ಎಲ್ಲಾ ಪ್ರದೇಶಗಳಲ್ಲೂ ಅಭಿವೃದ್ಧಿಯು ಸಮನಾಗಿರುವಂತೆ ನೋಡಿಕೊಳ್ಳುವುದು, ಅಸಮಾನತೆಯು ಉಂಟಾಗದಂತೆ ಕ್ರಮಗಳನ್ನು ಕೈಗೊಳ್ಳುವುದು, ಒಕ್ಕೂಟ ವ್ಯವಸ್ಥೆಯನ್ನು ಆರೋಗ್ಯಕರವಾಗಿಟ್ಟುಕೊಳ್ಳುವುದು ಮುಂತಾದವು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ನಮ್ಮ ದೇಶದಲ್ಲಿ ಯಾವುದಾದರೂ ಪ್ರದೇಶ ಅಥವಾ ಭಾಗ ಹಿಂದುಳಿದಿದ್ದರೆ ಅಂತಹ ಪ್ರದೇಶ / ಭಾಗದ ಅಭಿವೃದ್ಧಿಗೆ ವಿಶೇಷ ಅನುಕೂಲಗಳನ್ನು ನೀಡುವುದಕ್ಕಾಗಿ ಸಂವಿಧಾನದಲ್ಲಿ 371ನೆಯ ಪರಿಚ್ಛೇದವನ್ನು ಸೇರಿಸಿದ್ದಾರೆ. ಈ ವ್ಯವಸ್ಥೆಯಲ್ಲಿ ಈಗಾಗಲೇ ಮಹಾರಾಷ್ಟ್ರ, ಆಂಧ್ರಪ್ರದೇಶ, ಮಣಿಪುರ, ಮೇಘಾಲಯ, ತ್ರಿಪುರ ..... ಮುಂತಾದ ಪ್ರದೇಶ ರಾಜ್ಯಗಳಿಗೆ 371ರಡಿಯಲ್ಲಿ ವಿಶೇಷ ಸವಲತ್ತುಗಳನ್ನು ನೀಡುವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನಮ್ಮ ರಾಜ್ಯದ ಗುಲ್ಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಎದುರಿಸುತ್ತಿರುವ ದುಃಸ್ಥಿತಿಯ ನಿವಾರಣೆಗಾಗಿ ಸಂವಿಧಾನಾತ್ಮಕ ಸವಲತ್ತು ಬೇಕು ಎಂಬ ಸಂಗತಿಯನ್ನು ಮುಂದಿಟ್ಟುಕೊಂಡು ಅನೇಕ ದಶಕಗಳಿಂದ ಜನರು ಹೋರಾಟ ಮಾಡುತ್ತಾ ಬಂದಿದ್ದರು. ಈಗ ಸಂವಿಧಾನದ 371 ವಿಧಿಗೆ ತಿದ್ದುಪಡಿ ಮಾಡಿ ನಮ್ಮ ರಾಜ್ಯದ ಗುಲ್ಬರ್ಗಾ ವಿಭಾಗದ ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನ ನೀಡುವುದಕ್ಕಾಗಿ ಅಲ್ಲಿಗೆ 371 (ಜೆ) ಎಂಬ ಹೊಸ



downloaded from: www.kpscvaani.com

ಕಲಂ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರದ ಸಚಿವ ಸಂಪುಟವು ತೀರ್ಮಾನ ತೆಗೆದುಕೊಂಡಿದೆ ಮತ್ತು ಅದಕ್ಕೆ ಸಂಸತ್ತು ಒಪ್ಪಿಗೆ ನೀಡಿದೆ.

ಈ 371(ಜೆ) ಕಲಮಿನಡಿಯಲ್ಲಿ ನಮ್ಮ ರಾಜ್ಯದ ರಾಜ್ಯಪಾಲರಿಗೆ ಕೆಳಕಂಡ ಅಧಿಕಾರವಿರುತ್ತದೆ. ಅವುಗಳೆಂದರೆ,

- ಆರು ಜಿಲ್ಲೆಗಳಿಗೆ ವಿಶೇಷ ಸ್ಥಾನ ಕಲ್ಪಿಸುವುದು
- ಅಭಿವೃದ್ಧಿ ವೆಚ್ಚವನ್ನು ನ್ಯಾಯಯುತವಾಗಿ ಹಂಚುವುದು
- ಶೈಕ್ಷಣಿಕ ಮತ್ತು ವೃತ್ತಿ ತರಬೇತಿ ಸಂಸ್ಥೆಗಳಲ್ಲಿ ವಿಶೇಷ ಸ್ಥಾನ ಮೀಸಲಿಡುವುದು
- ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಒಂದು ಭಾಗವನ್ನು ಮೀಸಲಾಗಿಡುವುದು. ಈ ವ್ಯವಸ್ಥೆಗೆ 'ತೆಲಂಗಾಣ ಮಾದರಿ' ಎಂಬ ಹೆಸರಿನ್ನಿಡಲಾಗಿದೆ.

## 3. ಪ್ರಾದೇಶಿಕ ಅಸಮಾನತೆ ಮತ್ತು ಸರ್ಕಾರದ ಕ್ರಮಗಳು (1956 ರಿಂದ 2012)

ನಮ್ಮ ಸಂವಿಧಾನದ ಆರ್ಟಿಕಲ್ 38(2) 39(ಎ), (ಬಿ) ಮತ್ತು (ಸಿ) ಗಳಲ್ಲಿ ಸ್ಪಷ್ಟಪಡಿಸಿರುವಂತೆ ಕೇವಲ ವ್ಯಕ್ತಿ–ವ್ಯಕ್ತಿಗಳ ನಡುವೆ ಮಾತ್ರವಲ್ಲ ದೇಶದ / ರಾಜ್ಯದ ವಿವಿಧ ಭಾಗಗಳಲ್ಲಿ / ಪ್ರದೇಶಗಳಲ್ಲಿ ನೆಲೆಸಿರುವವರಿಗೆ ಸಂಬಂಧಿಸಿದಂತೆ ಅಸಮಾನತೆಯನ್ನು ನಿವಾರಿಸುವುದು ಸರ್ಕಾರದ ಜವಾಬ್ದಾರಿ. ಜಿಲ್ಲೆ–ಜಿಲ್ಲೆಗಳ ನಡುವಿನ ಅಸಮಾನತೆಗೆ ಸಂಪನ್ಮೂಲಗಳ ಲಭ್ಯತೆಯಲ್ಲಿನ ಭಿನ್ನತೆ, ಸಾಮಾಜಿಕ, ಆರ್ಥಿಕ, ಸಂಸ್ಥೆಗಳ ಪಾತ್ರದಲ್ಲಿನ ವ್ಯತ್ಯಾಸಗಳು ಮತ್ತು ಅಭಿವೃದ್ಧಿ ಅವಕಾಶಗಳಿಗೆ ಪ್ರತಿಕ್ರಿಯೆ ನೀಡಿದ ಪರಿಯಲ್ಲಿನ ಭಿನ್ನತೆಗಳು ಕಾರಣವಾಗಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯದ ಏಕೀಕರಣದ ಸಂದರ್ಭದಲ್ಲಿ ವಿವಿಧ ಹಿಂದುಳಿದ ಪ್ರದೇಶಗಳನ್ನು ವಿಲೀನಗೊಳಿಸಿದ್ದರಿಂದ ಅಭಿವೃದ್ಧಿ ಸಂಬಂಧ ಅಸಮಾನತೆಯು ತಲೆದೋರಿದೆ ಎಂಬ ಮಾತುಗಳು ಕೇಳಿಬಂದವು.

ರಾಜ್ಯ ಸರ್ಕಾರವು 1990ರಲ್ಲಿ ರಾಜ್ಯದ ಹಿಂದುಳಿದ ಗುಲ್ಬರ್ಗಾ ವಿಭಾಗದ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡುವುದಕ್ಕಾಗಿ 'ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಿತು. ಈ ಮಂಡಳಿಗೆ ಸರ್ಕಾರವು ಪ್ರತಿ ವರ್ಷ ಅನುದಾನ ನೀಡುತ್ತಿದೆ. ಆದರೆ ಈ ವ್ಯವಸ್ಥೆಯು ಸಮಸ್ಯೆಯನ್ನು ನಿವಾರಿಸುವಲ್ಲಿ ವಿಫಲವಾಯಿತು. ಇದನ್ನು ಮನಗಂಡ ಸರ್ಕಾರ 2000ರಲ್ಲಿ ಪ್ರಾದೇಶಿಕ ಅಸಮಾನತೆಯ ಅಧ್ಯಯನಕ್ಕಾಗಿ



downloaded from: www.kpscvaani.com

ಉನ್ನತ ಅಧಿಕಾರ ಸಮಿತಿಯನ್ನು ನೇಮಿಸಿತು. ಈ ಸಮಿತಿಯು 2002ರಲ್ಲಿ ತನ್ನ ವರದಿಯನ್ನು ಅನೇಕ ಶಿಫಾರಸ್ಸುಗಳೊಂದಿಗೆ ಸರ್ಕಾರಕ್ಕೂ ಸಲ್ಲಿಸಿತು. ಸರ್ಕಾರವು ಅದರ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಅದನ್ನು 2007–08ರಲ್ಲಿ ಜಾರಿಗೊಳಿಸಿತು.

## 4. ಸಂವಿಧಾನದ 371(ಜೆ) ಪರಿಚ್ಛೇದದ ಪರಿಣಾಮಕಾರಿ ಅನುಷ್ಠಾನ

ಕರ್ನಾಟಕದಲ್ಲಿ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆಯು ತೀವ್ರವಾಗಿದೆ ಎಂಬುದರ ಬಗ್ಗೆ ಯಾವುದೇ ಅನುಮಾನವಿಲ್ಲ. ಆದರೆ ಇದನ್ನು ನಿವಾರಣೆ ಮಾಡಲು ಇದುವರೆವಿಗೂ ಸರ್ಕಾರಗಳು ತೆಗೆದುಕೊಂಡ ಕ್ರಮಗಳು ನಿರೀಕ್ಷಿಸಿದಂತೆ ಫಲ ನೀಡಲಿಲ್ಲ. ಹೀಗಾಗಿ ಪ್ರಾದೇಶಿಕ ಅಸಮಾನತೆಯ ನಿವಾರಣೆಗೆ ಸದ್ಯ ಜಾರಿಗೊಳ್ಳುತ್ತಿರುವ 371(ಜೆ) ಪರಿಚ್ಛೇದದ ಯಶಸ್ಸಿನ ಬಗ್ಗೆ ಅನುಮಾನ' ವ್ಯಕ್ತವಾಗಿದೆ. ಆದ್ದರಿಂದ ನಾವು ಈ ಮುಂಜಾಗ್ರತೆ ವಹಿಸುವುದು ಅಗತ್ಯ.

ಸಂವಿಧಾನದ ವಿಶೇಷ ಸವಲತ್ತಿಗಾಗಿ ಕಳೆದ ಎರಡು–ಮೂರು ದಶಕಗಳಿಂದ ಹೋರಾಟ ನಡೆಸಿಕೊಂಡು ಬಂದ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ 371(ಜೆ) ಜಾರಿಗೆ ಬಂದು ಬಿಟ್ಟಿದೆ ಎಂದು ನಿರ್ಲಿಪ್ತರಾಗಿ ಕುಳಿತುಕೊಳ್ಳಬಾರದು. ಈ ಸವಲತ್ತಿಗಾಗಿ ಹೋರಾಟ ನಡೆಸಿ ಅದರಿಂದ ಬರಬಹುದಾದ ಅನುಕೂಲಗಳ ಬಗ್ಗೆ ಅವರೆಲ್ಲ ಯಾವ ಕನಸನ್ನು ಕಂಡಿದ್ದರೋ ಅದನ್ನು ನನಸು ಮಾಡಿಕೊಳ್ಳುವ ದಿಶೆಯಲ್ಲಿಯೂ ಅವರು ಕ್ರಿಯಾಶೀಲರಾಗಿರಬೇಕಾಗಿರುತ್ತದೆ. ಈ ವಿಷಯದಲ್ಲಿ ನಾಗರಿಕ ಸಮಾಜದ ಜವಾಬ್ದಾರಿ ಹೆಚ್ಚಾಗಿದೆ.

ಅಭಿವೃದ್ಧಿಯ ಉದ್ದೇಶವಿಟ್ಟುಕೊಂಡು ಸಾಂಸ್ಥಿಕ ವ್ಯವಸ್ಥೆಯೊಂದು ಅಸ್ಥಿತ್ವಕ್ಕೆ ಬಂದು ಬಿಟ್ಟರೆ ಸಾಕಾಗುವುದಿಲ್ಲ. ಹೀಗೆ ಅಸ್ಥಿತ್ವಕ್ಕೆ ಬಂದ ಸಾಂಸ್ಥಿಕ ವ್ಯವಸ್ಥೆಯು ಅತ್ಯಂತ ಉಪಯುಕ್ತವಾಗಿ ಮತ್ತು ಕರ್ತವ್ಯದಿಂದ ಕಾರ್ಯವೆಸಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಸಾಂಸ್ಥಿಕ ವ್ಯವಸ್ಥೆಯೇ ಅಭಿವೃದ್ಧಿಯಲ್ಲ. ಅಭಿವೃದ್ಧಿಗೆ ಸಾಂಸ್ಥಿಕ ವ್ಯವಸ್ಥೆಯು ಅಗತ್ಯ. ಆದರೆ ಅದೇ ವ್ಯವಸ್ಥೆಯೇ ಅಭಿವೃದ್ಧಿಯಲ್ಲಿ ಕೇವಲ 371(ಜೆ) ಜಾರಿಗೊಂಡು ಬಿಟ್ಟರೆ ಗುಲ್ಬರ್ಗಾ ವಿಭಾಗದ ಆರು ಜಿಲ್ಲೆಗಳಲ್ಲಿರುವ ವಂಚಿತರಿಗೆ, ದಿನಗೂಲಿ, ದುಡಿಮೆದಾರರಿಗೆ, ದಲಿತರಿಗೆ ಅನುಕೂಲಗಳು ತಾನಾಗಿಯೇ ಹರಿದು ಬರುವುದಿಲ್ಲ. ಕಳೆದ 50 ವರ್ಷಗಳ ಸದರಿ ಪ್ರದೇಶದ ಅಭಿವೃದ್ಧಿ ನಿರ್ವಹಣೆಯಿಂದ ನಾವು ಕಲಿಯಬಹುದಾದ ಪಾಠ ಇದಾಗಿದೆ. ಈ ಪಾಠ ಕಲಿಯದಿದ್ದರೆ '371–ಜೆ'ನ ಕೊಡುಗೆಯು ಹೈದರಾಬಾದ್–ಕರ್ನಾಟಕ ಪ್ರದೇಶ



downloaded from: www.kpscvaani.com

ಅಭಿವೃದ್ಧಿ ಮಂಡಳಿ ಮತ್ತು ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗಳ ಕೊಡುಗೆಗಳಿಗಿಂತ ಭಿನ್ನವಾಗಿರುವುದಿಲ್ಲ. ಈ ಬಗ್ಗೆ ನಾವು ಯೋಚಿಸಿ. ಗುಲ್ಬರ್ಗಾ ವಿಭಾಗದ 112 ಲಕ್ಷ ಜನರನ್ನು ಒಳಗೊಳ್ಳುವಂತೆ ಅಭಿವೃದ್ಧಿಯನ್ನು ನಿರ್ವಹಿಸುವ ಅಗತ್ಯವಿದೆ. ಇಲ್ಲಿ ಉನ್ನತ ಶಿಕ್ಷಣಕ್ಕಿಂತ ಪ್ರಾಥಮಿಕ ಶಿಕ್ಷಣಕ್ಕೆ ಪ್ರಾಥಮಿಕ ಆರೋಗ್ಯಕ್ಕೆ, ಮಹಿಳೆಯರ ಪೌಷ್ಟಿಕತೆಯನ್ನು ಉತ್ತಮಪಡಿಸುವುದಕ್ಕೆ, ಅಕ್ಷರ ಸಂಸ್ಕೃತಿಯನ್ನು ವಿಸ್ತೃತಗೊಳಿಸುವುದಕ್ಕೆ ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿಗೆ ಒಣಭೂಮಿ ಬೇಸಾಯದ ನಿರ್ವಹಣೆಗೆ ಜಲಾನಯನ ಪ್ರದೇಶ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು. ಈ ದಿಸೆಯಲ್ಲಿ 371(ಜೆ) ಕಲಂ ಕೆಲಸ ಮಾಡುತ್ತದೆ ಎಂದು ಭಾವಿಸಬಹುದಾಗಿದೆ. ಹೀಗಾದಲ್ಲಿ ಹೈದರಾಬಾದ್ ಕರ್ನಾಟಕದ ಎಲ್ಲಾ ಜಿಲ್ಲೆಗಳು ಅಭಿವೃದ್ಧಿಯ ಪಥದತ್ತ ಸಾಗುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

## ಉಚಿತ ಮತ್ತು ಕಡ್ಡಾಯ ಶಿಕ್ಷಣ (R.T.E.)

ಶಿಕ್ಷಣ ಒಂದು ನಿರಂತರವಾದ ಪ್ರಕ್ರಿಯೆಯಾಗಿದೆ. ವ್ಯಕ್ತಿಯನ್ನು ಸಾಮಾಜೀಕರಣಗೊಳಿಸುವುದು ಮತ್ತು ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ ಮಾಡುವುದು ಶಿಕ್ಷಣದ ಪ್ರಮುಖ ಧ್ಯೇಯವಾಗಿದೆ. ಭಾರತದ ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರು ಹೇಳಿರುವಂತೆ ಶಿಕ್ಷಣದ ಅರ್ಥ ಮತ್ತು ಮಹತ್ವವನ್ನು ಜನರಿಗೆ ತಿಳಿ ಹೇಳಬೇಕಾಗಿದೆ. ಅಂದರೆ ಇಲ್ಲಿ "ಶಿಕ್ಷಣ ಅಂದರೆ ಏನು? ಯಾವುದು ನಿಜವಾದ ಶಿಕ್ಷಣ" ಎಂಬುದರ ಸ್ಪಷ್ಟ ಕಲ್ಪನೆ ಜನರಿಗಿಲ್ಲ. ಆಗಾಗಿ ಈ ಶಿಕ್ಷಣದ ಕಲ್ಪನೆಯನ್ನು ಜನರಲ್ಲಿ ಬೆಳೆಸಬೇಕಾಗಿದೆ. ನಾವುಗಳು ಬೇರೆ ಬೇರೆ ವಸ್ತು ಅಥವಾ ಆಸ್ತಿ ಮೌಲ್ಯಗಳ ವಿವರವನ್ನು ಹೇಗೆ ಲೆಕ್ಕ ಹಾಕುತ್ತೇವೆಯೋ ಹಾಗೆಯೇ ಶಿಕ್ಷಣವನ್ನು ಯೋಜಿಸಿ ನೀಡಬೇಕಾಗಿದೆ. ಆದಾಯ ಗಳಿಸುವಂತಹ ಶಿಕ್ಷಣಕ್ಕಿಂತ ಮೌಲ್ಯಯುತ ಮತ್ತು ಮಕ್ಕಳ ವ್ಯಕ್ತಿತ್ವ ನಿರ್ಮಾಣ ಮಾಡುವಂತಹ ಶಿಕ್ಷಣ ನೀಡಬೇಕೆಂದು ಯೋಚಿಸುವಂತಹ ಜನ ನಮ್ಮಲ್ಲಿ ಬಹಳ ವಿರಳವೆಂದೇ ಹೇಳಬಹುದು. ಶಿಕ್ಷಣವೆಂದರೆ ಬರೀ ಆದಾಯಗಳಿಸುವಂತಹುದಲ್ಲ. ಜೊತೆಗೆ ಪ್ರಮಾಣಪತ್ರ ಪಡೆಯುವುದಕ್ಕೋಸ್ಕರವಷ್ಟೇ ಅಲ್ಲ. ನೈತಿಕ, ಬೌದ್ಧಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಣ ಎಂಬ ಅರ್ಥದ ಮಾತನ್ನು ಗಾಂಧೀಜಿಯವರು ಹೇಳಿದ್ದಾರೆ.

ಈ ನಿಟ್ಟಿನಲ್ಲಿ ನಮ್ಮ ಭಾರತ ಸರ್ಕಾರವು ಉತ್ತಮ ಸೂಕ್ತ ಹೆಜ್ಜೆಯನ್ನಿರಿಸಿದ್ದು 2010 ಏಪ್ರಿಲ್ 1 ರಿಂದ ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕಾಗಿ ಜಾರಿಗೆ ಬಂದಿದೆ. ಆ ಮೂಲಕ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿ ಮಾಡಿದ ಪ್ರಪಂಚದ 135 ರಾಷ್ಟ್ರಗಳ ಸಾಲಿಗೆ ಭಾರತವು



downloaded from: www.kpscvaani.com

ಸೇರಲಿದೆ. ಇದರೊಂದಿಗೆ ಉನ್ನತ ಶಿಕ್ಷಣ ಸುಧಾರಣೆಗೂ ಸರ್ಕಾರ ಮುಂದಾಗಲಿದೆ. ಉನ್ನತ ಶಿಕ್ಷಣ ಸುಧಾರಣೆಗೆ 'ಉನ್ನತ ಮಂಡಳಿ' ರಚನೆಯಾಗಲಿದೆ. ವಿದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಭಾರತವನ್ನು ಪ್ರವೇಶಿಸಲು ಅನುಮತಿ ನೀಡಲಾಗಿದೆ.

1991ರಲ್ಲಿ ಹಣಕಾಸು ಮಂತ್ರಿಯಾಗಿ 'ಉದಾರೀಕರಣ ನೀತಿ ಜಾರಿಗೆ ತರುವ ಮೂಲಕ ಆರ್ಥಿಕ ಸುಧಾರಣೆಯಲ್ಲಿ ಹೊಸ ಯುಗ ಆರಂಭಿಸಿದವರೆಂದರೆ ಡಾ. ಮನಮೋಹನ್‌ಸಿಂಗ್ ಹನ್ನೊಂದು ಮತ್ತು ಹನ್ನೆರಡನೆ ಪಂಚವಾರ್ಷಿಕ ಯೋಜನೆಯಲ್ಲಿ 'ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅತಿ ಹೆಚ್ಚಿನ ಹಣದ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತಿದೆ. ಈ ರೀತಿಯ ಆರ್ಥಿಕ ಸಹಾಯದಿಂದ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಯ ಜೊತೆಗೆ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸುತ್ತಿರುವುದು ಮಹತ್ವ ವಿಷಯವಾಗಿದೆ ಎಂದು ಹೇಳಬಹುದಾಗಿದೆ.

## ಮೂಲಭೂತ ಹಕ್ಕಾಗಿ ಶಿಕ್ಷಣ

ಶಿಕ್ಷಣ ಮೂಲಭೂತ ಹಕ್ಕಾಗಬೇಕೆಂಬುದು ಜಾಗತಿಕವಾಗಿ ಹೇಳಲಾಗುವ ವಿಚಾರವಾಗಿದೆ. ಅಲ್ಲದೆ ಈ ವಿಚಾರವನ್ನು ಅನೇಕ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ಅನೇಕ ಸಮ್ಮೇಳನಗಳಲ್ಲಿ ಒತ್ತಾಯಿಸಲಾಗಿದೆ. ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ, ಅಂತರರಾಷ್ಟ್ರೀಯ ಸಮಾವೇಶ ಮಹಿಳೆಯರ ವಿರುದ್ಧದ ಯಾವುದೇ ರೀತಿಯ ತಾರತಮ್ಯ ನಿರ್ಮೂಲನೆ ಮಾಡುವುದರ ಸಮಾವೇಶ ಹಾಗೂ ಮಕ್ಕಳ ಹಕ್ಕುಗಳ ಸಮಾವೇಶಗಳಲ್ಲಿ ಶಿಕ್ಷಣ ಮೂಲಭೂತ ಹಕ್ಕನ್ನಾಗಿ ಮಾಡುವುದರ ಬಗ್ಗೆ ಒತ್ತಾಯಿಸಲಾಗಿತ್ತು. ಶಿಕ್ಷಣ ಹಕ್ಕು ಎಂಬುದು ಒಂದು ಮಾನವ ಹಕ್ಕು. ಈ ಮಾನವ ಹಕ್ಕು ಒಂದು ಸಾರ್ವತ್ರಿಕ ಹಕ್ಕಾಗಿದೆ. ಈ ಪ್ರಕಾರ ಲಿಂಗ, ಜನಾಂಗ, ರಾಷ್ಟ್ರೀಯತೆ, ಮುಂತಾದವುಗಳನ್ನು ಮುಂದಿಟ್ಟುಕೊಂಡು ತಾರತಮ್ಯ ಮಾಡುವಂತಿಲ್ಲ.

## ಭಾರತದಲ್ಲಿ ಶಿಕ್ಷಣ ಹಕ್ಕು ಮಸೂದೆ

ಭಾರತ ಸಂವಿಧಾನದ 21(ಎ) ವಿಧಿಯು ಶಿಕ್ಷಣ ಮೂಲಭೂತ ಹಕ್ಕೆಂದು ಹೇಳುತ್ತದೆ. ಆದರೆ ಇದು ಕಾನೂನಾಗಿ ಕಾರ್ಯಾಚರಣೆಗೆ ಬಂದಿರಲಿಲ್ಲ. 2002ರಲ್ಲಿ 21(ಎ) ವಿಧಿಯನ್ವಯ ಸಂವಿಧಾನಕ್ಕೆ 86ನೇ ತಿದ್ದುಪಡಿ ತರಲಾಯಿತು. ಆ ಮೂಲಕ ಶೈಕ್ಷಣಿಕ ಹಕ್ಕು ಮೂಲಭೂತ ಹಕ್ಕಾಗಿ ಮಾನ್ಯತೆ ಪಡೆಯಿತು. ಅದರಂತೆ ಭಾರತ ಸಂವಿಧಾನದ 45ನೇ



downloaded from: www.kpscvaani.com

ವಿಧಿಯು 6–14 ವರ್ಷದವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುತ್ತದೆ.

ಸಾಂವಿಧಾನಿಕ ತಿದ್ದುಪಡಿಗಳೆಲ್ಲಾ ಆದ ತರುವಾಯ ಶಿಕ್ಷಣ ಹಕ್ಕು ಮಸೂದೆಯನ್ನು ಮಂಡಿಸಲು ಸರ್ಕಾರ ಮುಂದಾಯಿತು. ತಿದ್ದುಪಡಿ ತಂದು ಏಳು ವರ್ಷಗಳ ನಂತರ ಅಂದರೆ 2009ರ ಜುಲೈ 2 ರಂದು ಶಿಕ್ಷಣ ಹಕ್ಕಿನ ಮಸೂದೆಗೆ ಸಚಿವ ಸಂಪುಟ ಅನುಮೋದನೆ ನೀಡಿತು. ರಾಜ್ಯಸಭೆಯು 2009ರ ಜುಲೈ 20ರಂದು ಒಪ್ಪಿಗೆ ನೀಡಿದರೆ, ಲೋಕಸಭೆಯು 2009 ಆಗಸ್ಟ್ 4 ರಂದು ಸಮ್ಮತಿ ಸೂಚಿಸಿತು. 2009 ಸೆಪ್ಟೆಂಬರ್ 3 ರಂದು ಭಾರತದ ರಾಷ್ಟ್ರಪತಿಗಳು ಅಂಕಿತ ಹಾಕಿ ಅಧಿಸೂಚನೆ ಹೊರಡಿಸುವುದರೊಂದಿಗೆ ಈ ಮಸೂದೆಯು 'ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕಿನ ಕಾಯ್ದೆ–2009' ಎಂದಾಯಿತು. ನಂತರ ಈ ಕಾನೂನು 2010 ಏಪ್ರಿಲ್ 1 ರಿಂದ ದೇಶಾದ್ಯಂತ ಜಾರಿಗೆ ಬಂದಿತು.

## ಕಾಯ್ದೆಯ ಮುಖ್ಯಾಂಶಗಳು

1. 6–14 ವರ್ಷದ ಎಲ್ಲಾ ಮಕ್ಕಳು ಅವರ ಸಮೀಪದ ಶಾಲೆಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕನ್ನು ಪಡೆದಿರುತ್ತಾರೆ.
2. ಮಕ್ಕಳ ಎಲ್ಲಾ ರೀತಿಯ ಓದಿಗೆ ಸಂಬಂಧಿಸಿದ ವೆಚ್ಚಗಳನ್ನು ಮಾತ್ರ ಸರ್ಕಾರವೇ ಭರಿಸುತ್ತದೆ. ಹಾಗಾಗಿ ಪೋಷಕರಿಗೆ ಯಾವುದೇ ಶುಲ್ಕವನ್ನು ವಿಧಿಸುವಂತಿಲ್ಲ.
3. 1 ರಿಂದ 8ನೇ ತರಗತಿಯವರೆಗೆ ಸಂಪೂರ್ಣ ಉಚಿತ ಶಿಕ್ಷಣವನ್ನು ನೀಡುವುದು.
4. ಎಲ್ಲಾ ಶಾಲೆಗಳು ಅಗತ್ಯ ಮತ್ತು ಮೂಲಭೂತ ಸೌಕರ್ಯಗಳನ್ನು ಹಾಗೂ ಶಿಕ್ಷಕರನ್ನುಒಳಗೊಂಡಿರಬೇಕು.
5. 8ನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವಂತಿಲ್ಲ ಮತ್ತು ಪಬ್ಲಿಕ್ ಪರೀಕ್ಷೆಗಳನ್ನು ಮಾಡುವಂತಿಲ್ಲ.
6. ಖಾಸಗಿ ಅನುದಾನಿತ ಮತ್ತು ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲೂ ಶೇ. 25ರಷ್ಟು ಸೀಟುಗಳನ್ನು ಮೀಸಲಿಡಬೇಕು. ಬಡ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಈ ಸ್ಥಾನಗಳನ್ನು ಮೀಸಲಿಡಬೇಕು ಮತ್ತು ಹೀಗೆ ಮೀಸಲಿಟ್ಟ ಸ್ಥಾನಗಳಿಗೆ ಮಕ್ಕಳ ಆಯ್ಕೆಪಟ್ಟಿಯನ್ನು ಶಾಲೆಯು ಪ್ರಕಟಿಸಬೇಕು.
7. ಖಾಸಗಿ ಶಾಲೆಗಳಲ್ಲಿ ಮೀಸಲಿಟ್ಟ ಶೇ. 25 ರಷ್ಟು ಸೀಟುಗಳ ವೆಚ್ಚವನ್ನು ಶಾಲೆಗಳಿಗೆ ಸರ್ಕಾರವೇ ಭರಿಸಬೇಕು.



downloaded from: www.kpscvaani.com

8. ಶಿಕ್ಷಕರ ಅರ್ಹತೆಯಲ್ಲಿ ರಿಯಾಯಿತಿ ಅಂದರೆ ಈ ಕಾಯ್ದೆ ಜಾರಿಗೊಂಡ 5 ವರ್ಷಗಳು ಮಾತ್ರ ಈ ರಿಯಾಯಿತಿ ಜಾರಿಯಲ್ಲಿರುತ್ತದೆ.
9. ಈ ನೀತಿಯಿಂದ ಉಂಟಾಗುವ ಹೊರೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ 55:45ರ ಅನುಪಾತದಲ್ಲಿ ಹಂಚಿಕೊಳ್ಳಲಿವೆ. ಅಲ್ಲದೆ ಈ ಕಾನೂನನ್ನು ಅನುಷ್ಠಾನಕ್ಕೆ ತರಲು ಹಣಕಾಸು ಆಯೋಗವು ರಾಜ್ಯಗಳಿಗೆ 25,000 ಕೋಟಿ ರೂ. ನೀಡಲಿದೆ.
10. ಪ್ರತಿ ಮಗುವೂ ಮನೆಯ ಸಮೀಪದ ಶಾಲೆಯಲ್ಲಿಯೇ ಶಿಕ್ಷಣ ಪಡೆಯಬೇಕು. ಈ ಹೊಣೆಗಾರಿಕೆ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳದ್ದಾಗಿದೆ. ಅಂದರೆ ಇಲ್ಲಿ ಸಮೀಪದ ಶಾಲೆ ಎಂದರೆ ವಾಸಸ್ಥಳದಿಂದ 1 ಕಿ.ಮೀ. ವ್ಯಾಪ್ತಿಯಲ್ಲಿ 1–5ನೇ ತರಗತಿಯ ಮಕ್ಕಳು 6–8ನೇ ತರಗತಿಯ ಮಕ್ಕಳಿಗೆ ಮಕ್ಕಳ ವಾಸಸ್ಥಳದಿಂದ ಗರಿಷ್ಠ 3 ಕಿ.ಮೀ. ಒಳಗಿರಬೇಕು.
11. ಈ ಕಾಯ್ದೆಯ ಮತ್ತೊಂದು ನೂತನ ನಿಯಮದ ಪ್ರಕಾರ ಪ್ರಸ್ತುತ 5ನೇ ತರಗತಿಯವರೆಗೆ ಮಾತ್ರ ಇರುವ ಶಾಲೆಗಳಲ್ಲಿ 6, 7, 8ನೇ ತರಗತಿಗಳೂ ಬರಬೇಕು. ಒಂದು ವೇಳೆ ಸೂಚಿತ ವ್ಯಾಪ್ತಿಯಲ್ಲಿ ಯಾವುದೇ ಶಾಲೆ ಇಲ್ಲದಿದ್ದರೆ ರಾಜ್ಯ ಸರ್ಕಾರ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು. ಇಲ್ಲವೆ ಮಕ್ಕಳಿಗೆ ವಸತಿ ವ್ಯವಸ್ಥೆ ಒದಗಿಸಬೇಕು.
12. ಶೈಕ್ಷಣಿಕ ವರ್ಷ ಆರಂಭವಾದ ನಂತರದ 6 ತಿಂಗಳವರೆಗೆ ಶಾಲೆಬಿಟ್ಟ ಮಕ್ಕಳನ್ನು ಅಥವಾ ಶಾಲೆಗೆ ಸೇರದೇ ಇದ್ದ ಮಕ್ಕಳನ್ನು ದಾಖಲು ಮಾಡಿಕೊಳ್ಳಬಹುದು. ಲಾಭರಹಿತ ಸಂಸ್ಥೆಗಳು ನಡೆಸುವ ಶಾಲೆಗಳು ಮತ್ತು ಸರ್ಕಾರಿ ಪರಿವೀಕ್ಷಣೆ ವ್ಯಾಪ್ತಿಯಲ್ಲಿ ಬರುವ ಶಾಲೆಗಳನ್ನು ಇದಕ್ಕಾಗಿ ಪರಿಗಣಿಸಬಹುದಾಗಿದೆ.
13. ಅನುದಾನಿತ ಶಾಲೆಗಳಲ್ಲಿ ಎರಡು ವರ್ಷಗಳಿಗೊಮ್ಮೆ ಶಾಲಾ ಆಡಳಿತ ಮಂಡಳಿ ಪುನರ್ ರಚಿಸಬೇಕು.
14. ಶಾಲೆಯ ಅಗತ್ಯತೆಗಳನ್ನು ಕುರಿತು 3 ವರ್ಷಗಳ ಅವಧಿಗೆ ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಗೊಳ್ಳಬೇಕು.
15. ಮಕ್ಕಳ ಹಕ್ಕು ರಕ್ಷಣೆಗಾಗಿ ಪ್ರತಿ ರಾಜ್ಯಗಳು ಆಯೋಗ ರಚಿಸುತ್ತದೆ. ಅಲ್ಲದೆ ಮಧ್ಯಂತರ ಅವಧಿಯಲ್ಲಿ ಮಕ್ಕಳ ಹಕ್ಕು ರಕ್ಷಣಾ ಪ್ರಾಧಿಕಾರ ರಚನೆ ಮಾಡಲಾಗುತ್ತದೆ.
16. ಈ ಕಾಯ್ದೆಯು ಸಮರ್ಪಕವಾಗಿ ಜಾರಿಗೊಂಡಿದೆಯೇ ಎಂದು ಪರಿಶೀಲಿಸುವ ಅವಕಾಶ ರಾಜ್ಯ ಸಲಹಾ ಮಂಡಳಿಗೆ ಇರುತ್ತದೆ.


downloaded from: www.kpscvaani.com

**GNANADHARE ACADEMY**
#2 Sharada Arcade,Nagarbhavi Main Road Prashanth Nagar, Vijaynagar
North Bangalore-560079, Mob:9513804777/9513809777

## ಕಡ್ಡಾಯ ಶಿಕ್ಷಣ ನೀತಿ ಮತ್ತು ಭಾರತ

- ಜಗತ್ತಿನಲ್ಲೇ ಅತಿ ಹೆಚ್ಚು ಮಕ್ಕಳನನ್ನು ಹೊಂದಿರುವ ದೇಶ ನಮ್ಮದು. ರಾಷ್ಟ್ರದ ಒಟ್ಟು ಜನಸಂಖ್ಯೆಯ ಶೇ. 40ರಷ್ಟು ಜನ 18 ವರ್ಷ ವಯಸ್ಸಿನ ಒಳಗಿನವರಿದ್ದಾರೆ.
- ಇದರಲ್ಲಿ ಅರ್ಧದಷ್ಟು ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿದ್ದಾರೆ.
- ದೇಶದ ಒಟ್ಟು ವಸತಿ ನೆಲೆಗಳಲ್ಲಿ ಶೇ. 53 ರಷ್ಟು ಮಾತ್ರ ಪ್ರಾಥಮಿಕ ಶಾಲೆಗಳನ್ನು ಹೊಂದಿವೆ.
- ಶೇ. 20ರಷ್ಟು ವಸತಿ ನೆಲೆಗಳಲ್ಲಿ ಮಾತ್ರ ಪ್ರೌಢಶಾಲೆಗಳಿವೆ
- ಶೇ. 60ರಷ್ಟು ಶಾಲೆಗಳಲ್ಲಿ 1 ರಿಂದ 5ನೇ ತರಗತಿಯಲ್ಲಿ ಬೋಧಿಸುವ ಶಿಕ್ಷಕರ ಸಂಖ್ಯೆ 2 ಕ್ಕಿಂತ ಕಡಿಮೆ ಇದೆ.
- ಅರ್ಧಕ್ಕೆ ಶಾಲೆ ಬಿಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಇದರಲ್ಲಿ ಬಾಲಕರ ಸಂಖ್ಯೆ ಶೇ. 50ರಷ್ಟು, ಬಾಲಕಿಯರ ಸಂಖ್ಯೆ ಶೇ. 58ರಷ್ಟಿದೆ.
- ಮುಂದಿನ 5 ವರ್ಷಗಳಲ್ಲಿ ಈ ಕಾಯ್ದೆಯನ್ನು ಜಾರಿಗೆ ತರಲು 1.78 ಲಕ್ಷ ಕೋಟಿ ರೂ. ಅಗತ್ಯವಿದೆ.
- ದೇಶದಲ್ಲಿರುವ 1,20,000 ಪ್ರಾಥಮಿಕ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿವೆ.
- ಭಾರತದಲ್ಲಿ ಈಗಿನ ಸದ್ಯದ ಪರಿಸ್ಥಿತಿಯಲ್ಲಿ 5,10,000 ಶಿಕ್ಷಕರ ಕೊರತೆ ಕಾಡುತ್ತಿದೆ.

ದೇಶದ 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಮಹತ್ವಾಕಾಂಕ್ಷೆಯ ಹೊಸ ಕಾಯ್ದೆ 2010 ಏಪ್ರಿಲ್ 1 ರಿಂದ ಜಾರಿಗೆ ಬಂದಿದ್ದು ಈ ಕಾಯ್ದೆಯ ಜಾರಿ ಶೈಕ್ಷಣಿಕ ಕ್ಷೇತ್ರದಲ್ಲಿನ ದೊಡ್ಡ ಕ್ರಾಂತಿಯಾಗಿದೆ. ಶಿಕ್ಷಣವನ್ನು ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕನ್ನಾಗಿ ಮಾಡುವ ಈ ಕಾಯ್ದೆ ಪ್ರಗತಿಶೀಲವಾಗಿದೆ.

ಆಗಸ್ಟ್ 4 2009 ರಂದು ಲೋಕಸಭೆಯಲ್ಲಿ ಮತ್ತು ಜುಲೈ 20 2009ರಂದು ರಾಜ್ಯಸಭೆಯಲ್ಲಿ ಒಪ್ಪಿಗೆ ಪಡೆದ ಈ ಮಸೂದೆ ರಾಷ್ಟ್ರಪತಿಗಳ ಅಂಗೀಕಾರದ ನಂತರ ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಭಾರತದ ಎಲ್ಲ ಕಡೆ ಜಾರಿಗೆ ಬಂದಿದೆ. ಈ ಕಾಯ್ದೆಯಿಂದಾಗಿ ಸುಮಾರು 22 ಕೋಟಿ ಮಕ್ಕಳಿಗೆ ಅನುಕೂಲವಾಗಲಿದೆ ಎಂದು ಅಂದಾಜಿಸಲಾಗಿದೆ. 6 ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳೂ ಇನ್ನು ಮುಂದೆ



downloaded from: www.kpscvaani.com

ಪ್ರಾಥಮಿಕ ಶಿಕ್ಷಣ ಪಡೆಯಬೇಕಾಗಿದ್ದು ಅರ್ಹ ವಯೋಮಾನದ ಎಲ್ಲ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೋ, ಇಲ್ಲವೋ ಎಂಬುದನ್ನು ಗಮನಿಸುವ ಹೊಣೆಗಾರಿಕೆ ಆಯಾ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳದ್ದಾಗಿರುತ್ತದೆ. ಈ ಕಾನೂನು ಭಾರತದ ಇತಿಹಾಸದಲ್ಲಿ ಒಂದು ಐತಿಹಾಸಿಕ ಕಾನೂನಾಗಿದ್ದು ಸ್ವಾತಂತ್ರ್ಯ ನಂತರ ಸಂಸತ್ ಒಪ್ಪಿಗೆ ನೀಡಿರುವ ಮಸೂದೆಗಳ ಪೈಕಿ ಅತ್ಯಂತ ಮಹತ್ವದ ಮಸೂದೆಯಾಗಿದೆ. ಈ ಕಾಯ್ದೆಯ ಅನುಷ್ಠಾನಕ್ಕಾಗಿ 5 ವರ್ಷಗಳಲ್ಲಿ 1.71 ಲಕ್ಷ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತದೆ. ಒಟ್ಟಾರೆ ವೆಚ್ಚದಲ್ಲಿ ಕೇಂದ್ರ ಸರ್ಕಾರ ಶೇ. 55 ಮತ್ತು ರಾಜ್ಯ ಸರ್ಕಾರ 45ರಷ್ಟು ವೆಚ್ಚವನ್ನು ಭರಿಸಬೇಕಾಗುತ್ತದೆ. ಈ ಮೂಲಕ ಶಿಕ್ಷಣವನ್ನು ಕಡ್ಡಾಯ ಮತ್ತು ಮೂಲಭೂತ ಹಕ್ಕನ್ನಾಗಿ ಮಾಡಿರುವ 135ನೇ ರಾಷ್ಟ್ರ ಎಂಬ ಕೀರ್ತಿಗೆ ಭಾರತ ಪಾತ್ರವಾಗಿದೆ.

ಕೇಂದ್ರ ಸರ್ಕಾರ ಬಹಳಷ್ಟು ಆಸಕ್ತಿ ವಹಿಸಿ ತಂದಿರುವ ಈ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕಡ್ಡಾಯ ಶಿಕ್ಷಣ ನೀಡುವ ಸಂಬಂಧ 2002ರಲ್ಲಿ ಜಾರಿಗೆ ತಂದ ಕಾಯ್ದೆ ಅಷ್ಟೊಂದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದ ಕಾರಣ ಕೆಲವು ಬದಲಾವಣೆಗಳೊಂದಿಗೆ ಕೇಂದ್ರ ಸರ್ಕಾರ ಈ ಕಾಯ್ದೆಯನ್ನು ಜಾರಿಗೆ ತಂದಿದೆ. ಈ ಕಾಯ್ದೆಯು ಖಾಸಗಿ ಶಾಲೆಗಳ ಮೇಲೆ ನಿಯಂತ್ರಣ ಹೊಂದಲು ಹೆಚ್ಚಿನ ಅವಕಾಶ ಕಲ್ಪಿಸಿದೆ. ಇದರ ಪ್ರಕಾರ ಖಾಸಗಿ ಶಾಲೆಗಳು ಶೇ. 25ರಷ್ಟು ಸೀಟುಗಳನ್ನು ಬಡಮಕ್ಕಳಿಗೆ ಮೀಸಲಿಡಬೇಕು. ಸರ್ಕಾರ ನಿಗಧಿಪಡಿಸಿದ ಶುಲ್ಕವನ್ನು ಮಾತ್ರ ಪಡೆಯಬೇಕು. ವಂತಿಗೆ ವಸೂಲಿ ಮಾಡುವಂತಿಲ್ಲ. ಪ್ರವೇಶ ಸಂದರ್ಭದಲ್ಲಿ ಮಕ್ಕಳಿಗೆ, ಪೋಷಕರಿಗೆ ಸಂದರ್ಶನ ನಡೆಸುವಂತಿಲ್ಲ. ಒಂದು ವೇಳೆ ಕಾಯ್ದೆಯನ್ನು ಉಲ್ಲಂಘಿಸಿ ಮಕ್ಕಳಿಗೆ, ಪೋಷಕರಿಗೆ ಸಂದರ್ಶನ ನಡೆಸಿದರೆ ಕನಿಷ್ಠ 25 ರಿಂದ 50 ಸಾವಿರ ರೂಪಾಯಿವರೆಗೆ ದಂಡ ವಿಧಿಸಲಾಗುತ್ತದೆ. ಪೋಷಕರಿಂದ ಲಂಚ ಪಡೆದರೆ ಅದರ 10 ಪಟ್ಟು ದಂಡವನ್ನು ವಸೂಲಿ ಮಾಡಲಾಗುತ್ತದೆ. ಅಲ್ಲದೆ ಮಕ್ಕಳ ವಯೋಮಿತಿಯ ದಾಖಲಾತಿಗಳು ಸರಿ ಇಲ್ಲ ಎಂಬ ಕಾರಣಕ್ಕಾಗಿ ಪ್ರವೇಶವನ್ನು ನಿರಾಕರಿಸುವಂತಿಲ್ಲ. 6 ರಿಂದ 14 ವರ್ಷದೊಳಗಿನ ಯಾವುದೇ ವಿದ್ಯಾರ್ಥಿ ಶುಲ್ಕ ನೀಡಬೇಕಾಗಿಲ್ಲ. ಮಗು ಶಾಲೆಗೆ ಹೋಗದಂತೆ ಯಾರಾದರೂ ತಡೆದರೆ 10,000 ರೂ. ದಂಡ ವಿಧಿಸಲಾಗುತ್ತದೆ. 8ನೇ ತರಗತಿಯವರೆಗೆ ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣಗೊಳಿಸುವಂತಿಲ್ಲ. ದೈಹಿಕವಾಗಿ ಶಾಲೆಯಲ್ಲಿ ಶಿಕ್ಷೆ ನೀಡುವಂತಿಲ್ಲ. ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಶೇ. 25ರಷ್ಟು ಸೀಟುಗಳನ್ನು ಬಡ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿಡಬೇಕು. ಆ ಮಕ್ಕಳಿಗೆ ಯಾವುದೇ ಶುಲ್ಕ



downloaded from: www.kpscvaani.com

ವಿಧಿಸುವಂತಿಲ್ಲ. ಸರ್ಕಾರ ನಿಗಧಿಪಡಿಸಿದ ಕನಿಷ್ಠ ಶುಲ್ಕವನ್ನು ಸರ್ಕಾರವೇ ಶಿಕ್ಷಣ ಸಂಸ್ಥೆಗಳಿಗೆ ನೀಡಲಿದೆ.

ಹಾಲಿ ಇರುವ ಎಸ್.ಡಿ.ಎಂ.ಸಿ.ಗಳ ಮಾದರಿಯಲ್ಲಿ ಶಾಲಾ ನಿರ್ವಹಣಾ ಸಮಿತಿಗಳನ್ನು ರಚಿಸಬೇಕಾಗುತ್ತದೆ. ಇದರಲ್ಲಿ ಮಹಿಳೆಯರಿಗೆ ಶೇ. 50ರಷ್ಟು ಸ್ಥಾನಗಳನ್ನು ನೀಡಬೇಕು. ಉಳಿದಂತೆ ಪೋಷಕರು, ವಿದ್ಯಾರ್ಥಿ ಪ್ರತಿನಿಧಿಗಳು, ತುಳಿತಕ್ಕೆ ಒಳಗಾದ ಪ್ರತಿನಿಧಿಗಳು ಇದರಲ್ಲಿ ಇರಲಿದ್ದಾರೆ. ಶಾಲಾ ನಿರ್ವಹಣೆ, ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯೋಜನೆಯನ್ನು ಸಿದ್ಧಪಡಿಸುವುದು, ಅನುದಾನದ ಮೇಲ್ವಿಚಾರಣೆ ಇತ್ಯಾದಿ ಕಾರ್ಯಗಳನ್ನು ಸಮಿತಿಗಳು ನೋಡಿಕೊಳ್ಳಲಿವೆ. 1 ರಿಂದ 5ನೇ ತರಗತಿವರೆಗಿನ ಶಾಲೆಗಳು ವರ್ಷಕ್ಕೆ ಕನಿಷ್ಠ 200 ದಿನ, 6 ರಿಂದ 8ನೇ ತರಗತಿವರೆಗಿನ ಶಾಲೆಗಳು ಕನಿಷ್ಠ 220 ದಿನ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು. ಮೂಲಸೌಕರ್ಯಗಳು ಇದ್ದರೆ ಮಾತ್ರ ಹೊಸ ಶಾಲೆಗಳಿಗೆ ಅನುಮತಿ ನೀಡಲಾಗುತ್ತದೆ. ಹಾಲಿ ಇರುವ ಶಾಲೆಗಳಲ್ಲಿ ಮೂಲಸೌಕರ್ಯಗಳು ಇಲ್ಲದೆ ಇದ್ದರೆ 3 ವರ್ಷಗಳಲ್ಲಿ ಅಗತ್ಯ ಮೂಲಸೌಕರ್ಯ ವ್ಯವಸ್ಥೆ ಮಾಡಿಕೊಳ್ಳಬೇಕು. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳು ಇಲ್ಲದ ಕಡೆ ರಾಜ್ಯ ಸರ್ಕಾರಗಳು ಶಾಲೆಗಳನ್ನು ಆರಂಭಿಸಬೇಕು. ಶಿಕ್ಷಕರು ಮನೆ ಪಾಠ ಮಾಡುವುದನ್ನು ನಿಷೇಧಿಸಲಾಗಿದೆ. ಜನಗಣತಿ, ಚುನಾವಣೆ ಮತ್ತು ಪ್ರಕೃತಿ ವಿಕೋಪ ಪರಿಹಾರ ಸಂಬಂಧಿ ಕಾರ್ಯಗಳನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ಕಾರ್ಯಗಳಿಗೆ ಶಿಕ್ಷಕರ ಸೇವೆಯನ್ನು ಬಳಸಿಕೊಳ್ಳುವಂತಿಲ್ಲ.

ಹರಿಯಾಣ ಸರ್ಕಾರವು ಆ ರಾಜ್ಯದಲ್ಲಿ ಮಾನ್ಯತೆ ಪಡೆದ ಎಲ್ಲ ಶಾಲೆಗಳಲ್ಲಿ ಆರ್ಥಿಕವಾಗಿ ದುರ್ಬಲರಾದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ಶೇ. 25% ಸೀಟುಗಳನ್ನು ಮೀಸಲಿಟ್ಟ ಮೊದಲ ರಾಜ್ಯವಾಗಿದೆ. ಆದರೆ ಕರ್ನಾಟಕ ರಾಜ್ಯದ ಎಲ್ಲ ಖಾಸಗಿ ಶಾಲೆಗಳಲ್ಲಿ ಜನವರಿ, ಫೆಬ್ರವರಿ ತಿಂಗಳಲ್ಲಿಯೇ 2010–11ನೇ ಸಾಲಿನ ಮಕ್ಕಳ ದಾಖಲಾತಿ ಪ್ರಕ್ರಿಯೆ ಮುಗಿದಿದ್ದ ಕಾರಣ ಮತ್ತು ಶೇ. 25ರಷ್ಟು ಸೀಟುಗಳನ್ನು ಮೀಸಲಿಡುವ ಸಂಬಂಧ ರಾಜ್ಯ ಸರ್ಕಾರ ಕಾಯ್ದೆ ಜಾರಿ ಸಂಬಂಧ ನಿಯಮಾವಳಿಗಳನ್ನು ರಚಿಸಬೇಕಾಗಿದ್ದ ಕಾರಣ ಕರ್ನಾಟಕದಲ್ಲಿ ಈ ಯೋಜನೆ ವಿಳಂಬವಾಗಿ ಕಾರ್ಯಗತವಾಯಿತು.

ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಉಚಿತ ಹಾಗೂ ಕಡ್ಡಾಯವನ್ನಾಗಿ ಮಾಡುವ ಕಾಯ್ದೆಯ ಜಾರಿ ಶೈಕ್ಷಣಿಕ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯಾಗಿದೆ. ಆದರೆ, ಹೊಸ ಕಾಯ್ದೆ ಜಾರಿಯಾದ ನಂತರವೂ ಸಹ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ನಡುವಿನ ಅಂತರ



downloaded from: www.kpscvaani.com

ಮುಂದುವರೆಯಲಿದೆ. ಹೊಸ ರೀತಿಯ ವರ್ಣಾಶ್ರಮ ಪದ್ಧತಿ ಜಾರಿಗೆ ಬರಲಿದೆ. ಸಾಮಾಜಿಕ ನ್ಯಾಯ ಜಾರಿಯಾಗುವುದಿಲ್ಲ. ಬಡವರು ಮತ್ತು ಶ್ರೀಮಂತರ ಮಕ್ಕಳು ಕಲಿಯುವ ಶಾಲೆಗಳು ಬೇರೆಯಾಗುತ್ತಿವೆ ಎಂಬ ಟೀಕೆಗಳು ಕೇಳಿಬರುತ್ತಿವೆ. ಆದ್ದರಿಂದ ಸರ್ಕಾರ ಕೇವಲ ಕಾರ್ಯಕ್ರಮಗಳನ್ನು ರೂಪಿಸಿದರಷ್ಟೇ ಸಾಲದು ಅವುಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು ಬಹಳ ಮುಖ್ಯ. ಇಂತಹ ಉತ್ತಮ ಕಾರ್ಯಕ್ರಮ ವಿಫಲವಾಗದಂತೆ ನೋಡಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇದರ ಅನುಷ್ಠಾನದಲ್ಲಿರಬಹುದಾದ ಹಲವಾರು ಎಡರು–ತೊಡರುಗಳನ್ನು ಮೀರಿ ಯೋಜನೆಯ ಯಶಸ್ಸಿಗೆ ಬದ್ಧವಾದಾಗ ಮಾತ್ರ ಬದಲಾವಣೆ ನಿರೀಕ್ಷಿಸಲು ಸಾಧ್ಯ. ಸಂಘ ಸಂಸ್ಥೆಗಳು, ಸಾರ್ವಜನಿಕರು ಕೂಡ ಸಕ್ರಿಯವಾಗಿ ಭಾಗವಹಿಸಿ ಯೋಜನೆ ಯಶಸ್ವಿಯಾಗುವಂತೆ ಮಾಡಬೇಕು. ಆಗ ಮಾತ್ರ ಸಮಾಜದಲ್ಲಿ ಎಲ್ಲರೂ ಶಿಕ್ಷಣ ಪಡೆಯಲು ಸಾಧ್ಯ.

## ಉಪಸಂಹಾರ :

ಭಾರತದಲ್ಲಿ ಅರ್ಧದಷ್ಟು ಮಕ್ಕಳು ಅರ್ಧದಲ್ಲಿ ಶಾಲೆ ಬಿಡುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಹೀಗೆ ಶಾಲೆ ತೊರೆಯುತ್ತಿರುವ ಪ್ರತಿ ನಾಲ್ವರು ಮಕ್ಕಳಲ್ಲಿ ಮೂವರು ಮಕ್ಕಳು ಶಾಲೆ ಬಿಡಲು ಕಾರಣ ಖಾಸಗಿ ಶಾಲೆಗಳ ಹೆಚ್ಚಿನ ಶುಲ್ಕ ಪ್ರಮುಖ ಕಾರಣವಾಗಿದೆ. ಇದಲ್ಲದೆ ಬಡತನ ಕೂಡ ಪ್ರಮುಖ ಕಾರಣವೆಂದು ಹೇಳಬಹುದು. ಈಗ ಸರ್ಕಾರವೇ ಮಕ್ಕಳ ಪ್ರಾಥಮಿಕ ಶಿಕ್ಷಣದ ವೆಚ್ಚವನ್ನು ಭರಿಸುವುದರಿಂದ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಗುರುತರ ಹಾಗೂ ಉತ್ತಮ ಬದಲಾವಣೆಗಳನ್ನು ಕಾಣಬಹುದಾಗಿದೆ. ಕೇಂದ್ರ ಸರ್ಕಾರ ಇಂತಹ ಶಿಕ್ಷಣ ಕಾನೂನು ಜಾರಿಗೆ ತಂದಾಗ ಅದರ ಯಶಸ್ಸು ರಾಜ್ಯ ಸರ್ಕಾರಗಳು ಸ್ಥಳೀಯ ಸಂಸ್ಥೆಗಳು ಹಾಗೂ ಪೋಷಕರನ್ನು ಅವಲಂಬಿಸಿರುತ್ತದೆ. ಆದ್ದರಿಂದ ಸರ್ಕಾರಗಳು ಮತ್ತು ಪೋಷಕರು ತಮ್ಮ ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಿದರೆ ಯಶಸ್ಸು ನಿಶ್ಚಿತ. ಈ ಮಧ್ಯೆ ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಇದು ನಮ್ಮ ಹಕ್ಕಿನ ಉಲ್ಲಂಘನೆ ಎಂದು ನ್ಯಾಯಾಲಯದ ಮೊರೆ ಹೋಗಿವೆ. ಪ್ರತಿಷ್ಠೆ ಬದಿಗೊತ್ತಿ, 'ಸರ್ವರಿಗೂ ಶಿಕ್ಷಣ' ಎಂಬ ಕಾರ್ಯಕ್ರಮದಲ್ಲಿ ಈ ಸಂಸ್ಥೆಗಳೂ ಭಾಗವಹಿಸಬೇಕಿದೆ. ಅಲ್ಲದೆ ರಾಜ್ಯ ಸರ್ಕಾರಗಳು ರಾಜಕೀಯ ಬದಿಗಿಟ್ಟು ಈ ಕಾಯ್ದೆಯ ಅನುಷ್ಠಾನ ಮಾಡಬೇಕಿದೆ. ಶಿಕ್ಷಣದ ಬೆಳಕು ಎಲ್ಲೆಲ್ಲೂ ಹರಡಬೇಕಿದೆ ಮತ್ತು ಶಿಕ್ಷಣ ವಲಯದ ಸುಧಾರಣೆ ನಿರಂತರವಾಗಿ ನಡೆಯಬೇಕಾಗಿದೆ.



downloaded from: www.kpscvaani.com

## ಅಂತರಾಷ್ಟ್ರೀಯ ಮಾರಣಾಂತಿಕ ಕಾಯಿಲೆ “ಎಬೋಲಾ”

ಪಶ್ಚಿಮ ಆಫ್ರಿಕಾದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಮಾರಣಾಂತಿಕ ಕಾಯಿಲೆ ‘ಎಬೋಲಾ’ ಅಂತರಾಷ್ಟ್ರೀಯ ಮಟ್ಟದಲ್ಲಿ ತುರ್ತಾಗಿ ಪರಿಗಣಿಸಬೇಕಾದ ಗಂಭೀರ ಕಾಯಿಲೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಿಸಿದೆ. ಇದುವರೆಗೆ ಸುಮಾರು 1060 ಮಂದಿ ಸಾವನ್ನಪ್ಪಿದ್ದು 1,975 ಜನರು ರೋಗದಿಂದ ಬಳಲುತ್ತಿದ್ದಾರೆ ಎಂದು ಸಂಸ್ಥೆ ತಿಳಿಸಿದೆ. ಈ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ಎಲ್ಲರೂ ಕೈಜೋಡಿಸಬೇಕೆಂದು ಅಂತರರಾಷ್ಟ್ರೀಯ ಸಮುದಾಯಕ್ಕೆ ಕರೆ ನೀಡಿದೆ.

ಪಶ್ಚಿಮ ಆಫ್ರಿಕಾದ ಸುಮಾರು 60 ಕಡೆಗಳಲ್ಲಿ ‘ಎಬೋಲಾ’ ಹಬ್ಬಿದ್ದು ಇತರ ರಾಷ್ಟ್ರಗಳಲ್ಲಿ ಈ ಸಮಸ್ಯೆ ತಲೆದೋರುವ ದಿನಗಳು ದೂರವಿಲ್ಲ ಎಂದು ಅಮೇರಿಕಾದ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಇದರ ಬೆನ್ನಲ್ಲೇ ವಿಶ್ವ ಆರೋಗ್ಯ ಸಂಸ್ಥೆ ಅಧಿಕಾರಿಗಳು ತರಾತುರಿಯಲ್ಲಿ ಜಿನಿವಾದಲ್ಲಿ ಎರಡು ದಿನ ಸಭೆ ನಡೆಸಿ ‘ಜಾಗತಿಕ ಆರೋಗ್ಯ ತುರ್ತುಸ್ಥಿತಿ’ ಘೋಷಣೆ ಮಾಡಿದರು. ಕಳೆದ 40 ವರ್ಷಗಳಲ್ಲಿ ಸಾಂಕ್ರಾಮಿಕ ರೋಗವೊಂದು ಇಷ್ಟೊಂದು ವ್ಯಾಪಕವಾಗಿ ಹಬ್ಬಿದ ಉದಾಹರಣೆಗಳಿಲ್ಲ. ಆದ್ದರಿಂದ ಇದೊಂದು ಜಾಗತಿಕ ಗಂಡಾಂತರವೆಂದು ಭಾವಿಸಿ ತೊಂದರೆಯಲ್ಲಿರುವ ದೇಶಗಳಿಗೆ ಇತರ ರಾಷ್ಟ್ರಗಳು ಎಲ್ಲಾ ರೀತಿಯ ನೆರವು ನೀಡಬೇಕೆಂಬುದಾಗಿ ಸಂಸ್ಥೆಯ ನಿರ್ದೇಶಕಿ ಡಾ. ಮಾರ್ಗರೇಟ್ ಚಾನ್ ಮನವಿ ಮಾಡಿದ್ದಾರೆ. ಪಶ್ಚಿಮ ಆಫ್ರಿಕಾ ದೇಶಗಳಾದ ಲೈಬೀರಿಯಾ, ಗಿನಿ ಸಿಯೆರಾದ ಲಿಯೋನ್‌ನಲ್ಲಿ ಈ ರೋಗವು ಭಾರಿ ಅನಾಹುತ ತಂದೊಡ್ಡುತ್ತಿದೆ.

ಎಬೋಲಾ ರೋಗದ ತಲೆನೋವು, ಗಂಟಲುನೋವು, ಮಾಂಸಖಂಡದ ನೋವು, ಚರ್ಮದ ಮೇಲೆ ಬೊಕ್ಕೆ, ತೀವ್ರವಾಗಿ ಕಾಡುವ ನಿಶಕ್ತಿ, ಅತಿಯಾದ ಜ್ವರ, ನಿಲ್ಲದ ರಕ್ತಸ್ರಾವ ಈ ರೋಗವು ರೋಗಿಯ ಎಂಜಲು, ರಕ್ತದಿಂದ ಹರಡುತ್ತದೆ. ರೋಗಿಗಳ ಆರೈಕೆ ಮಾಡುವವರಿಗೆ ಈ ರೋಗ ತಗಲುವ ಸಾಧ್ಯತೆ ಹೆಚ್ಚಾಗಿದೆ. 1976ರಲ್ಲಿ ಮೊದಲ ಬಾರಿಗೆ ಪತ್ತೆಯಾದ ಈ ರೋಗಕ್ಕೆ ಕಾಂಗೊ ಗಣರಾಜ್ಯದ ನದಿ ‘ಎಬೋಲಾ’ದ ಹೆಸರನ್ನಿಡಲಾಗಿದೆ. ಈ ರೋಗದ ಬೆಳವಣಿಗೆಯ ಹಂತಗಳೆಂದರೆ ವಾಂತಿ, ಭೇದಿ, ಆಂತರಿಕ ಮತ್ತು ಬಾಹ್ಯ ರಕ್ತಸ್ರಾವ, ಮೂತ್ರಪಿಂಡ ಮತ್ತು ಯಕೃತ್ ಕಾರ್ಯದಲ್ಲಿ ಏರುಪೇರಾಗುವುದು ಈ ರೋಗದ ಪ್ರಮುಖ ಸಮಸ್ಯೆ ಎಂದೇ ಹೇಳಬಹುದಾಗಿದೆ. ಈ ರೋಗವು ಸಾಂಕ್ರಾಮಿಕ ರೋಗವಾದರೂ ಕೂಡ ಗಾಳಿಯ ಮೂಲಕ ಹರಡುವುದಿಲ್ಲ. ಈ ರೋಗದ ನಿಯಂತ್ರಣಕ್ಕೆ



downloaded from: www.kpscvaani.com

ಸರಿಯಾದ ಪ್ರಮಾಣದಲ್ಲಿ ನೀರು, ಜ್ವರಕ್ಕೆ ಔಷಧ ಮತ್ತು ಸರಿಯಾದ ರೋಗ ಪ್ರತಿರೋಧಕಗಳನ್ನು ಒದಗಿಸಬೇಕಾಗಿದೆ.

ಎಬೋಲಾ ಪೀಡಿತ ಪಶ್ಚಿಮ ಆಫ್ರಿಕಾದಲ್ಲಿ ಅತಿ ಹೆಚ್ಚು ಸಾವು ಸಂಭವಿಸುತ್ತಿದ್ದು ಈ ನಿಟ್ಟಿನಲ್ಲಿ ಪರಿಣಿತರ ತಂಡಕ್ಕೆ ಶವಸಂಸ್ಕಾರ ಕುರಿತಂತೆ ತರಬೇತಿ ನೀಡಲಾಗುತ್ತಿದ್ದು ಅಂತ್ಯಕ್ರಿಯೆಯ ವೇಳೆ ಅವರ ಸಂಬಂಧಿಕರು ಹತ್ತಿರಕ್ಕೆ ಸುಳಿಯದಂತೆ ಆದೇಶಿಸಲಾಗಿದೆ. ಈ ಮಧ್ಯೆ ಲೈಬೀರಿಯಾ ಅಧಿಕಾರಿಗಳು ಜೀವಕ್ಕೆ ಹಾನಿಕಾರಕವಲ್ಲದ ಪ್ರಾಯೋಗಿಕ ಪರೀಕ್ಷೆಗೆ ಒಳಪಡದ ಔಷಧಿಗಳನ್ನು ಎಬೋಲಾ ನಿಯಂತ್ರಣಕ್ಕೆ ಬಳಸಿ ಜೀವ ಉಳಿಸುವ ಕ್ಲಿಷ್ಟಕರ ಆಯ್ಕೆಯೊಂದನ್ನು ಮಾಡಿದ್ದಾರೆ. ಇದುವರೆಗೆ ಯಾರ ಮೇಲೂ ಪ್ರಯೋಗ ನಡೆಸದ 'ಝಡ್‌ಮ್ಯಾಪ್' ಎಂಬ ಔಷಧಿಯನ್ನು ದಕ್ಷಿಣ ಆಫ್ರಿಕಾದಿಂದ ತರಿಸಲಾಗಿದ್ದು ಯಾವ ರೋಗಿಗೂ ನೀಡಲಾಗಿಲ್ಲ ಎಂದು ಹೇಳಲಾಗುತ್ತಿದೆ. ದ್ರವಗಳ ಸಂಪರ್ಕದಿಂದ ಹರಡುವ ಈ ವೈರಸ್ ತಡೆಗೆ ಖಚಿತವಾದ ಯಾವುದೇ ಔಷಧಿ ಇಲ್ಲ. ಆದರೆ ಇನ್ನೂ ಪರೀಕ್ಷಿಸದ 'ಝಡ್‌ಮ್ಯಾಪ್' ಎಂಬ ಔಷಧಿಯನ್ನು ಬಳಸಲು ವೈದ್ಯರು ನಿರ್ಧರಿಸಿದ್ದಾರೆ ಎನ್ನಲಾಗುತ್ತದೆ. ಆದರೆ ಇಂತಹ ಪರೀಕ್ಷಿಸದ ಔಷಧಿಗಳನ್ನು ಏಕಾಏಕಿ ಬಳಸುವ ಸಂಬಂಧ ನೀತಿ ನಿಯಮ ಹಾಗೂ ಯಾರು ಬಳಸಬೇಕು ಎಂಬುದರ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಹಾಗೂ ಜಿಜ್ಞಾಸೆ ಹುಟ್ಟುಹಾಕಿದೆ. ಈಗಾಗಲೇ ಇಬ್ಬರು ಅಮೇರಿಕಾ ಹಾಗೂ ಒಬ್ಬರು ಸ್ಪೈನ್ ಪ್ರಜೆಗಳ ಮೇಲೆ 'ಝಡ್‌ಮ್ಯಾಪ್' ಎಂಬ ಪರೀಕ್ಷಿಸಿದ ಔಷಧಿಗಳ ಪ್ರಯೋಗ ನಡೆದಿದೆ. ಇದರಿಂದ ಅಮೇರಿಕಾ ಪ್ರಜೆಯ ಆರೋಗ್ಯ ಸ್ಥಿತಿಯಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಹೇಳಲಾಗುತ್ತಿದ್ದರೆ ಸ್ಪೈನ್ ಪ್ರಜೆ ಸಾವನ್ನಪ್ಪಿದ್ದಾನೆ ಎಂದು ಹೇಳಲಾಗುತ್ತಿದೆ. ಆದರೆ ಆರೋಗ್ಯ ಸುಧಾರಣೆಯಲ್ಲಿ ಇದೇ ಔಷಧಿ ಪ್ರಮುಖ ಪಾತ್ರ ವಹಿಸಿದೆಯೇ ಎಂಬುದರ ಕುರಿತು ಸ್ಪಷ್ಟವಾಗಿಲ್ಲ. ಈ ಪ್ರಶ್ನೆಯು ಲೈಬೀರಿಯಾ ಅಧಿಕಾರಿಗಳನ್ನು ಕಾಡುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಎಬೋಲಾಕ್ಕೆ ತುತ್ತಾಗಿರುವ ಶೇ. 50ರಷ್ಟು ಮಂದಿ ಈಗಾಗಲೇ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗುತ್ತಿದೆ.

## ಭಾರತದ ಪಾತ್ರ

ಆಫ್ರಿಕಾ ದೇಶಗಳಲ್ಲಿ 45 ಸಾವಿರಕ್ಕೂ ಅಧಿಕ ಭಾರತೀಯರು ನೆಲೆಸಿದ್ದು ಅವರೆಲ್ಲ ದೇಶಕ್ಕೆ ಮರಳುವಾಗ ರೋಗಾಣುಗಳು ಹರಡುವ ಸಾಧ್ಯತೆ ಇರುವ ಕುರಿತು ಶಂಕೆ ವ್ಯಕ್ತಪಡಿಸಲಾಗುತ್ತಿದೆ. ಎಬೋಲಾದ ತೊಂದರೆಗೆ ಈಡಾಗಿರುವ ಲೈಬೀರಿಯಾ, ಗಿನಿಯಾ ಮತ್ತು ಸಿಯೆರಾ ಲಿಯೋನ್‌ನಲ್ಲಿ 4,700 ನೈಜೀರಿಯಾದಲ್ಲಿ 40,000 ಜನ



downloaded from: www.kpscvaani.com

ಭಾರತೀಯರಿದ್ದಾರೆ. ಇದಲ್ಲದೆ ಆಫ್ರಿಕಾ ಖಂಡದಲ್ಲಿ 7,000 ಭಾರತೀಯ ಸೇವಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತವು ತನ್ನ ಕಟ್ಟುನಿಟ್ಟಿನ ಎಚ್ಚರವಹಿಸಿದೆ. ಆದರೂ ಭಾರತದಲ್ಲಿ ಈ ಕಾಯಿಲೆಗೆ ಬೇಕಾದ ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲದೆ ಇರುವುದು ಮತ್ತು ಆಸ್ಪತ್ರೆಗಳಲ್ಲಿ ಉತ್ತಮ ವಾರ್ಡ್‌ಗಳ ವ್ಯವಸ್ಥೆ ಇಲ್ಲದಿರುವುದು ಭಾರತಕ್ಕೆ ಆತಂಕವನ್ನು ತಂದೊಡ್ಡಿದೆ. ಆದರೂ ಇದುವರೆಗೂ ಭಾರತದಲ್ಲಿ ಈ ರೋಗದ ಲಕ್ಷಣಗಳು ಎಲ್ಲಿಯೂ ಕಂಡುಬಂದಿರುವುದಿಲ್ಲ ಎಂಬುದಾಗಿ ತಿಳಿಸಲಾಗಿದೆ. ಆದರೂ ಮುಂದಿನ ದಿನಗಳಲ್ಲಿ ತನ್ನ ಪ್ರಭಾವವನ್ನು ಈ ರೋಗವು ಬೀರುವ ಎಲ್ಲಾ ಲಕ್ಷಣಗಳನ್ನು ತೋರುತ್ತಿದೆ. ಈ ನಿಟ್ಟಿನಲ್ಲಿ ಭಾರತವು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕಾದ ಪರಿಸ್ಥಿತಿ ಭಾರತದ ಮಟ್ಟಿಗೆ ಅತಿ ದೊಡ್ಡ ಸವಾಲೆನಿಸಿದೆ. ಮುಂಜಾಗೃತವಾಗಿ ಭಾರತದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ತಪಾಸಣಾ ಕೇಂದ್ರಗಳನ್ನು ತೆರೆದು ತಪಾಸಣೆಯನ್ನು ನಡೆಸಿ ಈ ಕಾಯಿಲೆಯ ಬಗ್ಗೆ ಎಚ್ಚರವಹಿಸಬಹುದಾಗಿದೆ. ಅಲ್ಲದೆ ತಪಾಸಣಾಕಾರರಿಗೂ ಸೂಕ್ತ ರಕ್ಷಾಕವಚಗಳನ್ನು ಒದಗಿಸುವಂತಹ ಗುರುತರ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಬೇಕಾಗಿದೆ.

## ರಾಷ್ಟ್ರೀಯ ಆಹಾರ ಭದ್ರತಾ ಮಸೂದೆ

ಜಗತ್ತಿನ ಬಹುದೊಡ್ಡ ಆಹಾರ ಕಾರ್ಯಕ್ರಮವೆಂದೇ ಹೆಸರಾದ ರಾಷ್ಟ್ರೀಯ ಆಹಾರ ಭದ್ರತಾ ಮಸೂದೆಯನ್ನು ರಾಷ್ಟ್ರಾದ್ಯಂತ ಜಾರಿಗೊಳಿಸಲು ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದು ನಂತರ ಸಂಸತ್ತಿನಲ್ಲಿ ಅಂಗೀಕಾರ ಪಡೆಯಲು ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ಸೂಚಿಸಿ ನಂತರ ರಾಷ್ಟ್ರಪತಿ ಅಂಕಿತಕ್ಕೆ ಕಳುಹಿಸಲಾಯಿತು. ಕೇಂದ್ರ ಸರ್ಕಾರ ಕಳುಹಿಸಿದ ಈ ಪ್ರಸ್ತಾವನೆಗೆ ರಾಷ್ಟ್ರಪತಿಗಳು ಅಂಕಿತ ಹಾಕಿದರು. ಈ ಮೂಲಕ ಭದ್ರತಾ ಯೋಜನೆಯು ಸುಗ್ರೀವಾಜ್ಞೆ ಮೂಲಕ ಜಾರಿಗೆ ಬಂದಿತು. ಆಹಾರ ಭದ್ರತಾ ಯೋಜನೆಯನ್ನು ಆಗಸ್ಟ್ 20ರಂದು ಮಾಜಿ ಪ್ರಧಾನಿ ರಾಜೀವ್‌ಗಾಂಧಿಯವರ ಹುಟ್ಟಿನ ದಿನವಾಗಿದ್ದು ರಾಷ್ಟ್ರೀಯ ಸದ್ಭಾವನಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಆಗಸ್ಟ್ 20, 2013ರಂದು ಯೋಜನೆಗೆ ಚಾಲನೆ ನೀಡಲು ಉದ್ದೇಶಿಸಲಾಯಿತು.

ಆಹಾರ ಭದ್ರತೆ ಎಂದರೆ ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭೌತಿಕ, ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆ ನಡೆಸುವ ಹಕ್ಕು ಇದೆ. ಅದರಂತೆ ಉತ್ತಮ ಆರೋಗ್ಯವಂತ ಜೀವನಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಪೌಷ್ಠಿಕಾಂಶಯುಕ್ತ ಆಹಾರ ಅಗತ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಸಾಕಷ್ಟು ಪ್ರಮಾಣದಲ್ಲಿ ಆಹಾರ ಸಿಗುವಂತೆ



downloaded from: www.kpscvaani.com

ಮಾಡುವುದಾಗಿದೆ. ಕಡು ಬಡಕುಟುಂಬಗಳಿಗೆ 3 ರೂ.ಗೆ ಅಕ್ಕಿ, 2 ರೂ.ಗೆ ಗೋಧಿ ಮತ್ತು 1 ರೂ.ಗೆ ಬೇಳೆಕಾಳುಗಳನ್ನು ನೀಡುವ ಮೂಲಕ ಹಸಿವನ್ನು ನೀಗಿಸುವುದು ಇದರ ಮೂಲ ಉದ್ದೇಶವಾಗಿದೆ. ಈ ಯೋಜನೆಗೆ ಸರ್ಕಾರ ವೆಚ್ಚ ಮಾಡುವ 1,25,000 ಕೋಟಿ ರೂ. ಈ ಯೋಜನೆಯಲ್ಲಿ ನೀಡುವ ಆಹಾರ: ಕಡು ಬಡಕುಟುಂಬಗಳಿಗೆ ಪ್ರತಿ ತಿಂಗಳಿಗೆ ತಲಾ ಐದು ಕೆ.ಜಿ. ಅಕ್ಕಿ, ಗೋಧಿ ಮತ್ತು ಸಿರಿಧಾನ್ಯ (ಜೋಳ, ಮೆಕ್ಕೆಜೋಳ, ಕೊರ್ಲೆ, ನವಣೆ, ಸಜ್ಜೆ, ಇತ್ಯಾದಿ ಆಹಾರ ಧಾನ್ಯಗಳನ್ನು ನೀಡುವುದಾಗಿದೆ. ಈ ಯೋಜನೆಯು ಒಟ್ಟು ಫಲಾನುಭವಿಗಳು ದೇಶದ ಶೇ. 67% ರಷ್ಟು ಮಂದಿ ಎಂದು ಅಂದಾಜಿಸಲಾಗಿದೆ. ಅಂದರೆ ಇದರಲ್ಲಿ ಗ್ರಾಮೀಣ ಭಾಗದಲ್ಲಿ ಶೇ. 75% ರಷ್ಟು ಹಾಗೂ ನಗರದ ಶೇ. 50%ರಷ್ಟು ಮಂದಿಯು ಈ ಯೋಜನೆ ವ್ಯಾಪ್ತಿಗೆ ಬರುತ್ತಾರೆ.

ಕೇಂದ್ರ ಸರ್ಕಾರ ಅಂತ್ಯೋದಯ ಅನ್ನಯೋಜನೆ ಮೂಲಕ ದೇಶದ 2.45 ಕೋಟಿ ಬಡವರಿಗೆ ಪ್ರತಿ ತಿಂಗಳೂ 35 ಕೆ.ಜಿ. ಅಕ್ಕಿಯನ್ನು ಅತ್ಯಂತ ಕಡಿಮೆ ದರದಲ್ಲಿ ಪಡಿತರ ವ್ಯವಸ್ಥೆ ಮೂಲಕ ನೀಡುತ್ತದೆ. ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ "ವಿಶ್ವದ ಅತಿ ದೊಡ್ಡ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಬಹುಸಂಖ್ಯಾತ ಜನರಿಗೆ ಸಬ್ಸಿಡಿ ದರದಲ್ಲಿ ಆಹಾರ ಧಾನ್ಯ ಪೂರೈಕೆ ಮಾಡುವ ಕೆಲವು ರಾಷ್ಟ್ರಗಳ ಸಾಲಿಗೆ ಭಾರತವು ಸೇರಲಿದೆ. ಈ ಯೋಜನೆಗೆ ಕೇಂದ್ರ ಸರ್ಕಾರವು 1.25 ಲಕ್ಷ ಕೋಟಿ ಒದಗಿಸಬೇಕಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಆಹಾರ ಭದ್ರತೆ ಎಂದು ಖ್ಯಾತಿ ಗಳಿಸಿದೆ. ಆಹಾರ ಭದ್ರತಾ ಯೋಜನೆ ಜಾರಿಗೆ ತರಲು ಆಯಾ ರಾಜ್ಯ ಸರ್ಕಾರಗಳು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಬಿ.ಪಿ.ಎಲ್., ಐ.ಪಿ.ಎಲ್. ಕಾರ್ಡುಗಳನ್ನು ವಿತರಿಸುವುದು ಸಾಮಾಜಿಕ ಆರ್ಥಿಕ ಹಿನ್ನೆಲೆ ಮತ್ತು ಜಾತಿ ಆಧಾರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಕೇಂದ್ರ ಸರ್ಕಾರವು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದು ಈ ಸುಗ್ರೀವಾಜ್ಞೆಗೆ ಸಂಸತ್ತಿನ ಉಭಯಸದನಗಳ ಅನುಮೋದನೆ ಪಡೆಯಬೇಕು. ನಂತರ ಕಾಯ್ದೆಯು ಖಾಯಂ ಆಗಿ ಅನುಷ್ಠಾನಕ್ಕೆ ಬರುತ್ತದೆ. ಫಲಾನುಭವಿಗಳ ಪಟ್ಟಿಯನ್ನು ಬಹಿರಂಗವಾಗಿ ಪ್ರದರ್ಶಿಸಲಾಗುತ್ತದೆ. ಬಯೋಮೆಟ್ರಿಕ್ ವ್ಯವಸ್ಥೆ ಜಾರಿ ಅಂದರೆ ಬೆರಳಚ್ಚು ವ್ಯವಸ್ಥೆಯ ಮೂಲಕ ನೇರವಾಗಿ ಫಲಾನುಭವಿಗಳಿಗೆ ಯೋಜನೆ ತಲುಪಿಸಲಾಗುತ್ತಿದೆ. ಕುಂದುಕೊರತೆ ಬಗ್ಗೆ ನಿಗಾ ಇಡಲು ಐದು ಸದಸ್ಯರ ರಾಜ್ಯ ಆಹಾರ ಆಯೋಗ ರಚನೆ ಸಾರ್ವಜನಿಕರ ಅಹವಾಲಿಗೆ ಪ್ರತ್ಯೇಕ ಕಾಲ್‌ಸೆಂಟರ್, ಸಹಾಯವಾಣಿ ಸ್ಥಾಪನೆ, ವಿಚಕ್ಷಣ ದಳದ ರಚನೆಯಾಗುತ್ತದೆ. ಈ ಯೋಜನೆಯಡಿಯಲ್ಲಿ ಆಹಾರಧಾನ್ಯ ಪೂರೈಕೆಯಾಗದಿದ್ದಲ್ಲಿ ಅದಕ್ಕೆ ತಗಲುವ ವೆಚ್ಚವನ್ನು ನಗದುರೂಪದಲ್ಲಿ ನೀಡಲಾಗುತ್ತದೆ.



downloaded from: www.kpscvaani.com

## ಈ ಯೋಜನೆಯಿಂದಾಗುವ ಕೆಲವು ಅನುಕೂಲಗಳು ಮತ್ತು ಅನಾನುಕೂಲಗಳೆಂದರೆ

- ದೇಶದ ಆರ್ಥಿಕತೆಯನ್ನು ಈ ಯೋಜನೆಗೋಸ್ಕರ ವೆಚ್ಚವಾಗುತ್ತದೆ.
- ಇತರ ಯೋಜನೆ ಕೈಗೊಳ್ಳಲು ಸಾಧ್ಯವಾಗದೆ ಇರುವಂತಹ ಸ್ಥಿತಿ ಉದ್ಭವವಾಗುವುದು.
- ಅತಿ ಹೆಚ್ಚಿನ ಸಬ್ಸಿಡಿ ಹಣ ವ್ಯಯವಾಗುತ್ತದೆ.
- ಅಕ್ಕಿ, ಗೋಧಿಯು ಅವಶ್ಯಕತೆ ಇರುವುದಿಲ್ಲ.
- ದೇಶದ ಜನರು ಸೋಮಾರಿಗಳಾಗಿ ರೂಪುಗೊಳ್ಳುವರು
- ದೇಶದ ಭವಿಷ್ಯಕ್ಕೆ ಪ್ರತಿಕೂಲವಾಗುತ್ತದೆ

ಈ ಯೋಜನೆಯನ್ನು ದೆಹಲಿ, ಹರಿಯಾಣ ಮತ್ತು ಉತ್ತರಖಂಡದಲ್ಲಿ ಜಾರಿಗೆ ತರಲಾಯಿತು. ಈ ಮಸೂದೆಯನ್ನು ಜಾರಿಗೆ ತಂದಿರುವುದರಿಂದ ಕೋಟ್ಯಂತರ ಜನರ ಊಟಕ್ಕೆ ಗತಿ ಇಲ್ಲದೆ ಬದುಕುತ್ತಿದ್ದವರು ಇನ್ನು ಮುಂದೆ ಹಸಿವಿನಿಂದ ಬಳಲಬಾರದೆಂಬ ಉದ್ದೇಶದಿಂದ ಆಹಾರಭದ್ರತೆ ಕಾಯ್ದೆ ಜಾರಿಗೆ ತರಲಾಗುತ್ತದೆ. ಆದರೂ ಈ ಮಸೂದೆಗೆ ಕೆಲವು ಅಡ್ಡಿ ಆತಂಕಗಳು ಕೂಡ ಎದುರಾಗಲಿದ್ದು ಮುಂದಿನ ದಿನಗಳಲ್ಲಿ ರಾಷ್ಟ್ರವು ಆರ್ಥಿಕವಾಗಿ ಹೆಚ್ಚು ಸದೃಢವಾಗಿ ನಿಲ್ಲಬೇಕಾದ ಅನಿವಾರ್ಯತೆ ಇದ್ದು ಈ ಯೋಜನೆಗಾಗಿ ಹೆಚ್ಚು ಸಬ್ಸಿಡಿ ಹಣವನ್ನು ವ್ಯಯಿಸಬೇಕಾಗಿರುವುದರಿಂದ ಆರ್ಥಿಕತೆಗೆ ತೊಂದರೆಯಾಗಲಿದೆ. ಒಟ್ಟಾರೆ 2/3ರಷ್ಟು ಜನರಿಗೆ ಆಹಾರ ಭದ್ರತಾ ಯೋಜನೆಯಿಂದ ಲಾಭವಾಗಲಿದೆ. ಅತ್ಯಂತ ಕಡಿಮೆ ದರದಲ್ಲಿ 80 ಕೋಟಿಗೂ ಅಧಿಕ ಜನರಿಗೆ ಆಹಾರಧಾನ್ಯ ಸಿಗಲಿದೆ ಎಂಬುದೊಂದೇ ಆಶಾದಾಯಕವಾದ ಅಂಶ ಎಂದು ಹೇಳಬಹುದು.

ಆಹಾರ ಎಂಬುದು ಬೇರೆ ರೀತಿಯ ವಸ್ತುಗಳ ಹಾಗೆ ಅಲ್ಲ. ಆಹಾರ ಸ್ವಾವಲಂಬಿ ಅಥವಾ ಸ್ವಯಂಪೂರ್ಣ ನೀತಿಗಳಿಗೆ ನಾವು ಮರಳಬೇಕು. ಜಗತ್ತಿನ ಅನೇಕ ರಾಷ್ಟ್ರಗಳು ತಮ್ಮ ಆಹಾರವನ್ನು ತಾವೇ ಉತ್ಪಾದಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಆಹಾರ ಸ್ವಾವಲಂಬಿಯನ್ನಾಗಿ ಮಾಡದೆ ಅವುಗಳ ಅಭಿವೃದ್ಧಿಯ ಬಗ್ಗೆ ಆಲೋಚಿಸುವುದು ಭ್ರಮೆ ಎಂಬುದಾಗಿ ವಿಶ್ವಸಂಸ್ಥೆಯ “ವಿಶ್ವ ಆಹಾರ ದಿನ” ಕಾರ್ಯಕ್ರಮದಲ್ಲಿ ಕೆಲವು ನಿಲುವುಗಳನ್ನು ವ್ಯಕ್ತಪಡಿಸಲಾಗಿದೆ.

ಆಹಾರ ಮತ್ತು ಕೃಷಿ ಸಂಘಟನೆಯ ಸದಸ್ಯ ರಾಷ್ಟ್ರಗಳು 1979ರ ನವೆಂಬರ್‌ನಲ್ಲಿ 20ನೇ ಸಾಮಾನ್ಯ ಸಮ್ಮೇಳನವನ್ನು ಆಯೋಜಿಸಿದ್ದವು. ಆ ಸಂದರ್ಭದಲ್ಲಿ ವಿಶ್ವ ಆಹಾರ ದಿನ



downloaded from: www.kpscvaani.com

ಕಾರ್ಯಕ್ರಮವನ್ನು ಆರಂಭಿಸುವ ಸಲಹೆಯನ್ನು ನೀಡಲಾಯಿತು. ಈ ಸಲಹೆಯನ್ನು ನೀಡಿದವರು ಹಂಗೇರಿಯ ಮಾಜಿ ಕೃಷಿ ಮತ್ತು ಆಹಾರ ಸಚಿವರಾದ ಡಾ. ಪಾಲ್ ರೋಮಾನಿಯವರು. ಅಂದಿನಿಂದ ವಿಶ್ವ ಆಹಾರ ದಿನವನ್ನು ಜಗತ್ತಿನಾದ್ಯಂತ 150ಕ್ಕಿಂತ ಹೆಚ್ಚು ರಾಷ್ಟ್ರಗಳು ಆಚರಿಸುತ್ತಿವೆ. ಬಡತನ ಮತ್ತು ಹಸಿವಿನ ಹಿಂದೆ ಇರುವ ಕಾರಣಗಳ ಕುರಿತು ಜಾಗೃತಿ ಮೂಡಿಸುವುದೇ ವಿಶ್ವ ಆಹಾರ ದಿನದ ಉದ್ದೇಶವಾಗಿದೆ. ಪ್ರಪಂಚದಾದ್ಯಂತ ತೀವ್ರವಾದ ಬಡತನದಿಂದ 85 ಕೋಟಿಗೂ ಹೆಚ್ಚು ಜನ ಬಡತನದ ಏರುಪೇರಿನಿಂದ ಆಗಿಂದಾಗ್ಗೆ ಆಹಾರ ದೊರೆಯದೆ ಆಹಾರ ಅಭದ್ರತೆಯಿಂದ ನರಳುತ್ತಿದ್ದಾರೆ ಎಂಬ ಅಂಕಿ ಅಂಶವನ್ನು 2003ರಲ್ಲಿ ಆಹಾರ ಮತ್ತು ಕೃಷಿ ಸಂಘಟನೆ ತಿಳಿಸಿದೆ. ಕಳೆದ ಕೆಲವು ವರ್ಷಗಳಿಂದ ಕೃಷಿಯಲ್ಲಿ ಹೆಚ್ಚಾಗಿ ಜೈವಿಕ ಇಂಧನ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಜಾಗತಿಕ ಕಚ್ಚಾತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ದಿನೇ ದಿನೇ ಡಾಲರ್ ಲೆಕ್ಕದಲ್ಲಿ ಏರಿಕೆಯನ್ನು ಕಾಣುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆ ಹವಾಮಾನ ಬದಲಾವಣೆ ವಸತಿ ಮತ್ತು ಕೈಗಾರಿಕೆಗಳಿಗೆ ಹೆಚ್ಚಾದ ಕೃಷಿ ಭೂಮಿಯ ಬಳಕೆ ಚೀನಾ ಮತ್ತು ಭಾರತಗಳಲ್ಲಿ ಹೆಚ್ಚಾದ ಗ್ರಾಹಕರ ಬೇಡಿಕೆಯಿಂದಾಗಿ ಆಹಾರ ಧಾನ್ಯಗಳ ಬೆಲೆಯೂ ಹೆಚ್ಚಾಗಿದೆ. ಆಹಾರ ಪದಾರ್ಥಗಳ ಕಳ್ಳತನ ಕೂಡ ಎಷ್ಟೋ ರಾಷ್ಟ್ರಗಳಲ್ಲಿ ನಡೆಯುತ್ತಿದೆ. ಪ್ರತಿ ದೇಶವು ತನ್ನ ಪ್ರಜೆಗಳಿಗೆ ಆಹಾರ ಭದ್ರತೆ ಒದಗಿಸಲು ಪ್ರಯತ್ನವನ್ನು ಮಾಡುತ್ತಿದೆ. ಆಹಾರ ಭದ್ರತೆ ಎಂದರೆ ವ್ಯಕ್ತಿಯೊಬ್ಬನಿಗೆ ಅಗತ್ಯವಾದ ಆಹಾರ ಲಭ್ಯವಾಗಬೇಕು ಮತ್ತು ಅದನ್ನು ಪಡೆಯುವ ಸಾಮರ್ಥ್ಯ ಹೊಂದಿರಬೇಕು. ಕುಟುಂಬವೊಂದು ಆಹಾರ ಭದ್ರತೆ ಹೊಂದಿದೆ ಎಂದರೆ ಆ ಕುಟುಂಬದ ಸದಸ್ಯರು ಹಸಿವಿನಿಂದ ನರಳಬಾರದೆಂಬುದಾಗಿದೆ.

ತೈಲಬೆಲೆ ಹೆಚ್ಚಳ, ನೀರು, ಧಾನ್ಯ ಮತ್ತು ಮೀನುಗಳ ಬೇಡಿಕೆಯು ಆಹಾರ ಭದ್ರತೆಗೆ ತೊಡಕನ್ನುಂಟು ಮಾಡುತ್ತಿವೆ. ಆಹಾರ ಭದ್ರತೆ ಅತ್ಯಂತ ಸಂಕೀರ್ಣ ವಿಷಯವೆಂದೇ ಹೇಳಬಹುದು. ಜನಸಂಖ್ಯೆ, ಬಡತನ, ಕೃಷಿ, ಆರ್ಥಿಕ, ರಾಜಕೀಯ, ಹವಾಮಾನ ಬದಲಾವಣೆ ಮುಂತಾದ ಅನೇಕ ಆಯಾಮಗಳನ್ನು ಹೊಂದಿದೆ. ಇವುಗಳು ಒಂದಕ್ಕೊಂದು ಪೂರಕವಾಗಿವೆ. ಎಲ್ಲಾ ಜನರಿಗೆ ಎಲ್ಲ ಕಾಲಗಳಲ್ಲಿ ಚಟುವಟಿಕೆಯುಕ್ತ ಮತ್ತು ಆರೋಗ್ಯಯುತ ಜೀವನ ನಡೆಸಲು ಬೇಕಾಗುವ ಸುರಕ್ಷಿತ ಮತ್ತು ಪೋಷಕಾಂಶಯುಕ್ತ ಆಹಾರವು ಭೌತಿಕವಾಗಿ ಮತ್ತು ಆರ್ಥಿಕವಾಗಿ ಲಭ್ಯವಾಗುವಂತೆ ಇದ್ದರೆ ಆಹಾರ ಭದ್ರತೆ ಹೊಂದಿದ್ದಾರೆ ಎಂದರ್ಥ. ಆ ಕುಟುಂಬದ ಎಲ್ಲ ಸದಸ್ಯರಿಗೆ ಚಟುವಟಿಕೆಯುಕ್ತ ಮತ್ತು ಆರೋಗ್ಯಯುತ ಜೀವನ ನಡೆಸಲು ಎಲ್ಲ ಸಮಯದಲ್ಲಿ ಸಾಕಷ್ಟು ಆಹಾರ ಲಭ್ಯತೆ ಇರಬೇಕು. ಸಾಕಷ್ಟು ಪೋಷಕಾಂಶ ಹೊಂದಿರುವ ಮತ್ತು ಸುರಕ್ಷಿತ ಆಹಾರವು ತಕ್ಷಣದಲ್ಲಿ



downloaded from: www.kpscvaani.com

ಲಭ್ಯವಾಗಬೇಕು. ಅವರು ನ್ಯಾಯಯುತವಾಗಿ ಸಮಾಜ ಒಪ್ಪಿದ ರೀತಿಯಲ್ಲಿ ಆಹಾರ ಪಡೆಯುವ ಸಾಮರ್ಥ್ಯ ಹೊಂದಿರಬೇಕು.

## ಆಹಾರ ಭದ್ರತೆಗೆ ತೊಡಕುಂಟು ಮಾಡುವ ಕೆಲವು ಅಂಶಗಳೆಂದರೆ

- ಜನಸಂಖ್ಯೆ
- ಕೃಷಿ ಭೂಮಿ
- ಬಡತನ ಸಂಬಂಧಗಳು
- ಜೈವಿಕ ಇಂಧನ
- ಆರ್ಥಿಕ ಮಟ್ಟ ಕುಸಿತ
- ನಿರುದ್ಯೋಗ ಸಮಸ್ಯೆ
- ನೀರಿನ ಕೊರತೆ
- ಹವಾಮಾನ ವೈಪರೀತ್ಯ
- ಬೆಲೆ ಏರಿಕೆ

### 1. ಜನಸಂಖ್ಯೆ :

ಭಾರತದ ಜನಸಂಖ್ಯೆ 2011ರ ಜನಗಣತಿಯ ಪ್ರಕಾರ 121 ಕೋಟಿ ದಾಟಿದೆ. ಜಾಗತಿಕ ಜನಸಂಖ್ಯೆ ಏಳು ಶತಕೋಟಿ ಅಂದರೆ ಇಲ್ಲಿ ಪ್ರಮುಖವಾಗಿ ಅರ್ಥ ಮಾಡಿಕೊಳ್ಳುವಂತಹ ವಿಚಾರವೆಂದರೆ ಆಹಾರದ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತಿದ್ದು ಕೃಷಿಯ ಉತ್ಪಾದನೆ ಕಡಿಮೆಯಾಗುತ್ತಿದೆ. ಅಂದರೆ ಇಲ್ಲಿನ ಪ್ರಮುಖ ಸಮಸ್ಯೆ ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಹಾಗಾಗಿ ಅಗತ್ಯ ಆಹಾರ ಉತ್ಪಾದನೆ ಒಂದು ಸವಾಲಾಗಿ ಪರಿಣಮಿಸಿದೆ.

### 2. ಕೃಷಿಭೂಮಿ:

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಶೇ. 70ರಷ್ಟು ಜನ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿ ಸಣ್ಣ ಹಿಡುವಳಿದಾರರು ಮತ್ತು ಭೂರಹಿತ ಕಾರ್ಮಿಕರ ಸಂಖ್ಯೆ ಹೆಚ್ಚಾಗಿದೆ. ಬಹಳ ಜನರಿಗೆ ಭೂ ಒಡೆತನ ಇಲ್ಲದಿರುವುದು ಕೂಡ ಒಂದು ಸಮಸ್ಯೆಯಾಗಿದೆ. ಕೃಷಿ ಭೂಮಿಯನ್ನು ಹೆಚ್ಚಾಗಿ ಕೃಷಿಯೇತರ ಚಟುವಟಿಕೆಗಳಿಗೆ ಅಂದರೆ ವಸತಿ, ಕೈಗಾರಿಕೆ, ಇತ್ಯಾದಿಗಳಿಗೆ ಬಳಸುತ್ತಿರುವುದರಿಂದ ಯೋಗ್ಯ ಕೃಷಿ ಭೂಮಿಯ ಪ್ರಮಾಣ ಕಡಿಮೆಯಾಗುತ್ತಿದೆ. ತೀವ್ರ ಕೃಷಿಯಿಂದ ಅಂದರೆ ಹೆಚ್ಚಿನ ನೀರು ಮತ್ತು ರಾಸಾಯನಿಕಗಳ ಬಳಕೆಯಿಂದಾಗಿ ಭೂಮಿಯ ಫಲವತ್ತತೆ ಕಡಿಮೆಯಾಗಿ ಉತ್ಪಾದನಾ ಸಾಮರ್ಥ್ಯವು ತೀವ್ರವಾಗಿ ಇಳಿಮುಖ ಕಾಣುತ್ತಿದೆ.



downloaded from: www.kpscvaani.com

### 3. ಬಡತನ :

ಹಸಿವು ಮತ್ತು ಬಡತನಗಳನ್ನು ನಿರ್ಮೂಲನ ಮಾಡಬೇಕೆಂದರೆ ಈ ಎರಡು ಸಾಮಾಜಿಕ ಅನ್ಯಾಯಗಳು ಹೇಗೆ ಪರಸ್ಪರ ತಳುರು ಹಾಕಿಕೊಂಡಿವೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಹಸಿವು ಮತ್ತು ಅದರಿಂದ ಉಂಟಾಗುವ ಅಪೌಷ್ಠಿಕತೆಯು ಬಡಜನರಿಗೆ ಬಡತನದಿಂದ ತಪ್ಪಿಸಿಕೊಳ್ಳಲು ಅವಕಾಶ ಕೊಡುವುದಿಲ್ಲ. ಅದರಿಂದಾಗಿ ಅವರ ಕಲಿಕೆ, ಕೆಲಸ ಮಾಡುವ, ಅವರನ್ನು ಅವಲಂಬಿಸಿದ ಕುಟುಂಬ ಸದಸ್ಯರ ಬಗ್ಗೆ ಕಾಳಜಿವಹಿಸುವುದು ಕಷ್ಟ ಸಾಧ್ಯವಾಗುತ್ತಿದೆ.

### 4. ಜೈವಿಕ ಇಂಧನ :

ಅಮೇರಿಕಾ ಮತ್ತು ಯುರೋಪಿಯನ್ ರಾಷ್ಟ್ರಗಳ ಕೃಷಿ ಉತ್ಪಾದನೆ ಹೆಚ್ಚಾಗಿದ್ದು ಅವರು ಧಾನ್ಯಗಳನ್ನು ಹೆಚ್ಚಾಗಿ ಬೆಳೆದು ಕಡಿಮೆ ಉತ್ಪಾದಕತೆ ಇರುವ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದರು. ಕಚ್ಚಾತೈಲದ ಬೆಲೆಯು ಹೆಚ್ಚಾದ ಕಾರಣ ಆಹಾರ ಧಾನ್ಯಗಳ ಬದಲಾಗಿ ಜೈವಿಕ ಇಂಧನ ಬೆಳೆಗಳನ್ನು ಬೆಳೆಯಲಾರಂಭಿಸಿದರು. ಇದರಿಂದ ಬಡರಾಷ್ಟ್ರಗಳು ಆಹಾರದ ಕೊರತೆಯಿಂದ ನರಳುವಂತಾಗಿದೆ.

### 5. ಆರ್ಥಿಕಮಟ್ಟ ಕುಸಿತ :

ಜಗತ್ತೇ ಇಂದು ಆರ್ಥಿಕ ಹಿಂಜರಿಕೆಯಿಂದ ನರಳುವಂತಹ ಸ್ಥಿತಿ ಬಂದಿದೆ. ಇದಕ್ಕೆ ಉದಾಹರಣೆ ಅಮೇರಿಕಾ ಮತ್ತು ಇಂಗ್ಲೆಂಡ್ ಕಳೆದೆರೆಡು ವರ್ಷಗಳಲ್ಲಿ ಈ ಎರಡೂ ರಾಷ್ಟ್ರಗಳು ಬಹಳಷ್ಟು ಆರ್ಥಿಕ ಹಿಂಜರಿಕೆಯನ್ನು ಅನುಭವಿಸುತ್ತಿವೆ. ಇದರಿಂದ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳು ತೊಂದರೆಗೆ ಒಳಗಾಗಿವೆ. ಕೃಷಿ ಕ್ಷೇತ್ರದಲ್ಲಿ ಹಣದ ಹೂಡಿಕೆ ಕಡಿಮೆಯಾಗಿರುವುದರಿಂದ ಉತ್ಪಾದಕತೆಯೂ ಕಡಿಮೆಯಾಗಿದೆ.

### 6. ನಿರುದ್ಯೋಗ :

ಕೈಗಾರಿಕೆಗಳ ಬೆಳವಣಿಗೆ ಮತ್ತು ನಗರಗಳ ಅಭಿವೃದ್ಧಿಯಿಂದಾಗಿ ಇಂದು ವ್ಯವಸಾಯ ಮಾಡುವಂತಹ ಜನ ಇಲ್ಲವಾಗಿದ್ದಾರೆ. ನಿರುದ್ಯೋಗ ಪ್ರಮಾಣ ಹೆಚ್ಚಾಗಿದ್ದು ಜನ ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಹಾಗಾಗಿ ಆಹಾರದ ಭದ್ರತೆ ಇಂತಹವರಲ್ಲಿ ತೀವ್ರವಾಗಿ ಕಾಡಲಾರಂಭಿಸಿದೆ.



downloaded from: www.kpscvaani.com

**7. ನೀರಿನ ಕೊರತೆ :**

ವ್ಯವಸಾಯಕ್ಕೆ ನೀರಿಲ್ಲದೆ ಅನೇಕ ಸಣ್ಣ ರಾಷ್ಟ್ರಗಳು ಅಧಿಕ ಪ್ರಮಾಣದ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿವೆ. ಚೀನಾ ಮತ್ತು ಭಾರತದಂತಹ ರಾಷ್ಟ್ರಗಳು ಇನ್ನು ಕೆಲವೇ ವರ್ಷಗಳಲ್ಲಿ ಈ ರೀತಿಯ ಸಮಸ್ಯೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬರುತ್ತದೆ ಎಂದರೆ ತಪ್ಪಾಗಲಾರದು. ಅತಿಯಾದ ಅಂತರ್ಜಲ ಬಳಕೆಯಿಂದಾಗಿ ಚೀನಾ, ಅಮೇರಿಕಾ ಮತ್ತು ಭಾರತದಂತಹ ರಾಷ್ಟ್ರಗಳಲ್ಲಿ ಅಂತರ್ಜಲಮಟ್ಟ ಕುಸಿದು ಬೆಳೆಗಳ ಇಳುವರಿ ಕಡಿಮೆಯಾಗುತ್ತಿದೆ.

**8. ಹವಾಮಾನ ವೈಪರಿತ್ಯ :**

ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ವರದಿಯಂತೆ ಹೆಚ್ಚಿದ ತಾಪಮಾನದಿಂದ 2035ರ ಹೊತ್ತಿಗೆ ಹಿಮಾಲಯದ ಹಿಮನದಿಗಳು ಕಣ್ಮರೆಯಾಗಬಹುದು. ಏಷ್ಯಾದ ದೊಡ್ಡ ನದಿಗಳಾದ ಗಂಗಾ, ಸಿಂಧು, ಬ್ರಹ್ಮಪುತ್ರ, ಯಾಂಗ್ ಟ್ವಿ ಮೆಕಾಂಗ್, ಸಾಲ್‌ವೀನ್ ಮತ್ತು ಯಲ್ಲೋ ನದಿಗಳ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಭಾರತದಲ್ಲಿ ಗಂಗಾನದಿ 50 ಕೋಟಿ ಜನರಿಗೆ ಕುಡಿಯಲು ನೀರು ಮತ್ತು ವ್ಯವಸಾಯಕ್ಕೆ ನೀರನ್ನು ಒದಗಿಸುತ್ತಿದೆ. ರಾಕಿ ಪರ್ವತಗಳಲ್ಲಿರುವ ಹಿಮನದಿಗಳ ಕಣ್ಮರೆಯಿಂದ ಅಮೇರಿಕಾ ಹೆಚ್ಚಿನ ಸಮಸ್ಯೆಯನ್ನು ಅನುಭವಿಸಲಿದೆ. ಇದರಿಂದ ಸಮುದ್ರದ ಮಟ್ಟದಲ್ಲಿ ಏರಿಕೆ ಉಂಟಾಗಿ ಕೃಷಿಗೆ ಲಭ್ಯವಿರುವ ಜಮೀನಿನ ಪ್ರಮಾಣ ಕಡಿಮೆಯಾಗಲಿದೆ.

**9. ಬೆಲೆ ಏರಿಕೆ :**

ಆಹಾರ ಧಾನ್ಯಗಳ ಬೆಲೆಯು ಎರಡರಿಂದ ಮೂರುಪಟ್ಟು ಹೆಚ್ಚಾಗಿದ್ದು ಇದರಿಂದ ಬಡವರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿ ಅವರು ಹಸಿವು ಮತ್ತು ಅಪೌಷ್ಠಿಕತೆಗೆ ತುತ್ತಾಗುತ್ತಿದ್ದಾರೆ. ಇದರಿಂದ ಅವರು ದುಡಿಯುವ ಸಾಮರ್ಥ್ಯವು ಕಡಿಮೆಯಾಗಿ ಆಹಾರದ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಈ ಮೇಲೆ ತಿಳಿಸಲಾಗಿರುವ ಎಲ್ಲಾ ಅಂಶಗಳು ಆಹಾರ ಭದ್ರತೆಗೆ ತೊಡಕಾಗಿರುವಂತಹ ಅಂಶಗಳಾಗಿದ್ದು ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಎಲ್ಲರಿಗೂ ಅಗತ್ಯ ಪ್ರಮಾಣದ ಸುರಕ್ಷಿತ ಆಹಾರ ಒದಗಿಸುವುದು ಇಂದಿನ ಸವಾಲಾಗಿದೆ. ಈ ಸವಾಲನ್ನು ಮೆಟ್ಟಿ ನಿಲ್ಲಬೇಕಾದರೆ ನಾವು ಕೃಷಿಗೆ ಹೆಚ್ಚು ಆದ್ಯತೆಯನ್ನು ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ನಾವು ಹೆಚ್ಚು ಕಾರ್ಯಪ್ರವೃತ್ತರಾಗಬೇಕಾದ ಅನಿವಾರ್ಯ ಪರಿಸ್ಥಿತಿ ನಮ್ಮ ಮುಂದಿದೆ ಎಂದು ಹೇಳಬಹುದು.



downloaded from: www.kpscvaani.com

## ಭಾರತದಲ್ಲಿ ಅತ್ಯಂತ ಮಹತ್ವಾಕಾಂಕ್ಷೆಯ "ಮಂಗಳಯಾನ"

ಭಾರತೀಯರ ಪ್ರಥಮ ಪ್ರಯತ್ನದಲ್ಲೇ ಯಶಸ್ವಿ ಯೋಜನೆ ಮಂಗಳಯಾನವಾಗಿದೆ. ಯಾವ ರಾಷ್ಟ್ರದ ಸಹಾಯವನ್ನು ಪಡೆಯದೆಯೇ ಅಂತರ್‌ಗ್ರಹ ಯೋಜನೆಯನ್ನು ಕೈಗೊಂಡು ಯಶಸ್ವಿಯಾದ ಹೆಮ್ಮೆಯ ದೇಶ ನಮ್ಮದು. ಇಂದು ಈ ರೀತಿಯ ಸಾಧನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಮುಂದೆ ಸಾಗುತ್ತಿರುವ ರಾಷ್ಟ್ರ ನಮ್ಮದಾಗಿದೆ. ಕೇವಲ ಅಭಿವೃದ್ಧಿಶೀಲ ರಾಷ್ಟ್ರಗಳಾದ ಅಮೇರಿಕಾ, ಚೀನಾ, ಬ್ರಿಟನ್, ಫ್ರಾನ್ಸ್ ಇನ್ನು ಮುಂತಾದ ದೇಶಗಳ ಸ್ವತ್ತಾಗಿದ್ದ ಈ ತಂತ್ರಜ್ಞಾನ ಇಂದು ಭಾರತೀಯರ ಪಾಲಾಗುತ್ತಿದೆ. ಮಂಗಳಯಾನದ ಸಾಧಕ ಬಾದಕಗಳ ಅಧ್ಯಯನದ ನಂತರ ಈ ಯೋಜನೆಯನ್ನು ಕೇಂದ್ರ ಸರ್ಕಾರದ ಮುಂದೆ ಇಡಲಾಯಿತು. ಇದಕ್ಕೆ ಕೇಂದ್ರ ಸರ್ಕಾರದ ಸಮ್ಮತಿ ಸಿಕ್ಕಿ 2012ರ ಜುಲೈನಲ್ಲಿ ಇಸ್ರೋದ ಪ್ರಸ್ತಾವನೆಯನ್ನು ಒಪ್ಪಿತು. 2012ರ ಆಗಸ್ಟ್ 3ರಂದು ಅಧಿಕೃತವಾಗಿ ಅಂಗೀಕಾರ ನೀಡಿತು. 2012ರ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಪ್ರಧಾನಿ ಮನಮೋಹನ್‌ಸಿಂಗ್‌ರವರು ಅಧಿಕೃತವಾಗಿ ಘೋಷಿಸಿದರು.

ಮಂಗಳಯಾನದ ಮಹತ್ವಯೋಜನೆಗೆ ತಗಲುವಂತಹ ಒಟ್ಟು ವೆಚ್ಚ ರೂ. 450 ಕೋಟಿ ರೂ. ಇದರಲ್ಲಿ 150 ಕೋಟಿ ಬಾಹ್ಯಾಕಾಶ ನೌಕೆ ನಿರ್ಮಾಣಕ್ಕಾಗಿ ಮತ್ತು 110 ಕೋಟಿ ರೂ. ಉಡಾವಣಾ ವಾಹನಕ್ಕೆ ಬಳಸಿಕೊಳ್ಳಲಾಗುವುದು. ಉಳಿದ 190 ಕೋಟಿ ರೂ.ಗಳನ್ನು ತಂತ್ರಜ್ಞಾನ, ಭೂಸ್ಥಿರ, ಕಕ್ಷೆ ಹಾಗೂ ನೌಕೆ ಹಾದುಹೋಗುವ ಪಥವನ್ನು ಪತ್ತೆ ಮಾಡಲು ಮುಂತಾದ ಕಾರ್ಯಗಳಿಗೆ ಬಳಸಲಾಗುವುದು. ಇಲ್ಲಿಯ ತನಕ ಮಂಗಳಯಾನ ಕೈಗೊಂಡ ರಾಷ್ಟ್ರಗಳ ಪೈಕಿ ಅತ್ಯಂತ ಕಡಿಮೆ ವೆಚ್ಚ ಮಾಡಿರುವ ದೇಶ ನಮ್ಮದು ಎಂಬ ವಿಚಾರ ಬಹಳ ಸಂತೋಷದಾಯಕವಾದ ಅಂಶವಾಗಿದೆ.

### ಮಂಗಳಯಾನ ಕೈಗೊಂಡಿರುವ ಪ್ರಮುಖ ಉದ್ದೇಶಗಳೆಂದರೆ

- ಮಿಥೇನ್ ಅನಿಲದ ಬಗ್ಗೆ ಅಧ್ಯಯನ
- ಜೀವಿಗಳಿರುವುದರ ಬಗ್ಗೆ ಅಧ್ಯಯನ ಕೈಗೊಳ್ಳುವುದು
- ಮಂಗಳನ ವಾತಾವರಣದ ಬಗ್ಗೆ ಅಧ್ಯಯನ ನಡೆಸಲು
- ಅಲ್ಲದೆ ಮಂಗಳನ ವಾತಾವರಣದಲ್ಲಿರುವ ಡ್ಯುಟೇರಿಯ ಹೈಡ್ರೋಜನ್ ಪ್ರಮಾಣದಂತಹ ಅಂಶಗಳ ಅಧ್ಯಯನವೂ ನಡೆಯಲಿದೆ.



downloaded from: www.kpscvaani.com

## ಮಂಗಳನ ವೈಶಿಷ್ಟ್ಯಗಳು

- ಈ ಯೋಜನೆಯನ್ನು ಘೋಷಿಸಿದವರು ಪ್ರಧಾನಿ ಡಾ. ಮನಮೋಹನ್‌ಸಿಂಗ್ ಅವರಿಂದ 2012ರ ಸೆಪ್ಟೆಂಬರ್‌ನಲ್ಲಿ. ಕಾರ್ಯಗತಗೊಳಿಸಲು ತೆಗೆದುಕೊಂಡ ಅವಧಿ 456 ಅಂದರೆ 15 ತಿಂಗಳು.
- ಯಾನದ ಮುಖ್ಯ ಉದ್ದೇಶ ಜೀವನಾಧಾರವಾದ ಮಿಥೇನ್ ಅನಿಲದ ಕುರುಹು ಪತ್ತೆ ಹಚ್ಚುವುದಾಗಿದೆ. ನಿಗಾ ವ್ಯವಸ್ಥೆಯನ್ನು ಪೋರ್ಟ್‌ಬ್ಲೇರ್ ಬೆಂಗಳೂರು ಸಮೀಪದ ಬ್ಯಾಲಾಳು. ಬ್ರೂನೇ, ದಕ್ಷಿಣ ಫೆಸಿಫಿಕ್ ಮಹಾಸಾಗರದಲ್ಲಿಯ ಭಾರತದ ನಳಂದಾ ಮತ್ತು ಯಮುನಾ ಹಡಗುಗಳು ನಿಗಾ ವ್ಯವಸ್ಥೆಯ ಕೇಂದ್ರಗಳಾಗಿವೆ.
- ಪ್ರತಿ 26 ತಿಂಗಳಿಗೊಮ್ಮೆ ಟುಂಗಳ ಮತ್ತು ಭೂಮಿ ತೀರ ಹತ್ತಿರದಿಂದ ಹಾದುಹೋಗುತ್ತವೆ. ಆ ಅವಧಿ ಈಗಿರುವುದರಿಂದ ರಾಕೆಟ್ ಕ್ರಮಿಸುವ ದೂರ ಕಡಿಮೆಯಾಗಲಿದೆ.
- ಭಾರತದ ಮೊದಲ ರಾಕೆಟ್ ಉಡಾವಣೆಯ ಸುವರ್ಣ ಮಹೋತ್ಸವ ವರ್ಷಾಚರಣೆಯಾಗಲಿದೆ.
- ಇದು ಧೃವಗಾಮಿ ಉಪಗ್ರಹ ಉಡಾವಣಾ ವಾಹನದ 25ನೇ ಪಿಎಸ್‌ಎಲ್‌ವಿ ಉಡಾವಣೆಯಾಗಿದೆ.
- ಭೂಮಿ ಮತ್ತು ಮಂಗಳಗ್ರಹದ ಅಂತರ ಸರಾಸರಿ 22.50 ಕೋಟಿ ಕಿ.ಮೀ. ಅಂದರೆ 225 ಮಿಲಿಯನ್ ಕಿ.ಮೀ.
- ಸೂರ್ಯನ ಸುತ್ತ ಮಂಗಳಗ್ರಹದ ಪರಿಭ್ರಮಣ ಅವಧಿ 687 ದಿನ ತನ್ನ ಕಕ್ಷೆಯಲ್ಲಿ ಸುತ್ತುವ ಕಾಲಾವಧಿ 24 ಗಂಟೆ 37 ನಿಮಿಷ ಅದರ ಸುತ್ತಳತೆ 6,800 ಕಿ.ಮೀ.
- ಸೌರಮಂಡಲದ 4ನೇ ಗ್ರಹವಾಗಿರುವ ಇದು ಸೌರವ್ಯೂಹದ ಎರಡನೇ ಅತಿ ಚಿಕ್ಕಗ್ರಹ ಕಬ್ಬಿಣದ ಧಾತು ಅಧಿಕವಾಗಿರುವುದರಿಂದ ಅದರ ಬಣ್ಣ ಕೆಂಪು
- ಅತಿ ಕಡಿಮೆ ವೆಚ್ಚದಿಂದ ಕೈಗೊಳ್ಳಲಾಗಿರುವ ಮಂಗಳಯಾನ ಇದಾಗಿದೆ.
- ಈ ಯೋಚನೆಯನ್ನು ಮಾಧ್ಯಮಗಳು ಮಂಗಳಯಾನ ಎಂದು ಹೇಳಿದರೆ ಇಸ್ರೋ **"ಮಂಗಳ ಕಕ್ಷಾ ಅಭಿಯಾನ"** ಎಂಬ ಹೆಸರನ್ನಿಟ್ಟಿದೆ.

ನವೆಂಬರ್ 5, 2013 ಪ್ರತಿಯೊಬ್ಬ ಭಾರತೀಯನು ನೆನೆಯುವಂತಹ ದಿನವಿದು. ಕಾರಣ ಈ ದಿನದಂದು ನಮ್ಮ ಇಸ್ರೋ ಸಂಸ್ಥೆಯು ಶ್ರಮವಹಿಸಿ ಕೇವಲ 15 ತಿಂಗಳಲ್ಲಿ ರೂಪಿಸಿದ



downloaded from: www.kpscvaani.com

ಮಂಗಳಯಾನ ನೌಕೆ ಯಶಸ್ವಿಯಾಗಿ ಉಡಾವಣೆಗೊಂಡ ದಿನವಾಗಿದೆ. ಮಂಗಳದಂದು ಮಂಗಳನತ್ತ ನೌಕೆಯನ್ನು ಹೊತ್ತ 4 ಹಂತದ ಪಿಎಸ್‌ಎಲ್‌ವಿ–ಸಿ25 ರಾಕೆಟ್ ಮಧ್ಯಾಹ್ನ 2.38ಕ್ಕೆ ಶ್ರೀ ಹರಿಕೋಟಾದ ಪ್ರೊ. ಸತೀಶ್‌ಧವನ್ ಉಡ್ಡಯನ ಕೇಂದ್ರದಿಂದ ಬೆಂಕಿಯುಗುಳುತ್ತಾ ಆಕಾಶದತ್ತ ತನ್ನ ಯಶಸ್ವಿ ಪ್ರಯಾಣವನ್ನು ಬೆಳೆಸಿತು. 1350 ಕೆ.ಜಿ. ತೂಕದ ಉಪಗ್ರಹವನ್ನು ಪಿಎಸ್‌ಎಲ್‌ವಿ–ಸಿ25 ರಾಕೆಟ್ ನಿಗಧಿಯಂತೆ 44 ನಿಮಿಷಗಳಲ್ಲಿ ಭೂರಕ್ಷೆಗೆ ಸೇರಿಸಿತು. ಈ ಮೂಲಕ 10 ತಿಂಗಳ ಸುದೀರ್ಘ ಮಂಗಳಯಾನದ ಮೊದಲ ಹಂತದ ಪಯಣಕ್ಕೆ ಯಶಸ್ವಿ ಮುನ್ನುಡಿ ಬರೆದಿದೆ. ದಕ್ಷಿಣ ಫೆಸಿಫಿಕ್ (ಶಾಂತಸಾಗರ)ದಲ್ಲಿ ಪಿಎಸ್‌ಎಲ್‌ವಿ–ಸಿ25 ರಾಕೆಟ್‌ನ ಹಾದಿಯನ್ನು ಟ್ರ್ಯಾಕ್ ಮಾಡಲೆಂದೇ ಬೀಡುಬಿಟ್ಟಿದ್ದ ನಳಂದ ಮತ್ತು ಯಮುನಾ ಹಡಗುಗಳಿಂದ ಬಂದ ಸಂದೇಶವು ನೌಕೆಯು ನಿರ್ದಿಷ್ಟವಾದ ಭೂಕಕ್ಷೆಗೆ ಸೇರಿದ ಸಂದೇಶವನ್ನು ಕೊಟ್ಟವು. ಆಗ ಹಗಲಿರುಳು ದುಡಿದ ವಿಜ್ಞಾನಿಗಳು ಹರ್ಷ ವ್ಯಕ್ತಪಡಿಸಿದರು. ಜಗತ್ತಿನ ಎಲ್ಲಾ ದೇಶಗಳೂ ಈ ಸಂತಸವನ್ನು ಕಂಡು ಆಶ್ಚರ್ಯಪಟ್ಟವು.

ಕೇವಲ ಮಾರ್ಸ್ ಆರ್ಬಿಟರ್ (ಮಂಗಳಯಾನ) ನೌಕೆಯನ್ನು ಯಶಸ್ವಿಯಾಗಿ ಭೂಕಕ್ಷೆಗೆ ಸೇರಿಸಿದ ಮಾತ್ರಕ್ಕೆ ಯೋಜನೆ ಮುಗಿಯಲಿಲ್ಲ. ಹಾಗೂ ಯಶಸ್ವಿಯಾಗಲಿಲ್ಲ. ಮುಂದಿನ ದಿನಗಳಲ್ಲಿ ಇನ್ನು ಅನೇಕ ಹಂತಗಳಿದ್ದು ಇದು 300 ದಿನಗಳ ಸುದೀರ್ಘವಾದ ಪ್ರಯಾಣ 2014ರ ಸೆಪ್ಟೆಂಬರ್ 24ರಂದು ಈ ನೌಕೆ ಮಂಗಳನ ಸಮೀಪ ತಲುಪುವವರೆಗೂ ಈ ಸುದೀರ್ಘ ಪ್ರಯಾಣ ಮುಂದುವರೆಯುತ್ತಿರುತ್ತದೆ. ನವೆಂಬರ್ 5ರಂದು ಮಂಗಳನೌಕೆಯನ್ನು ಹೊತ್ತ ಪಿಎಸ್‌ಎಲ್‌ವಿ–ಸಿ25 ರಾಕೆಟ್ ಸೆಕೆಂಡ್‌ಗೆ 9.8 ಕಿ.ಮೀ. ವೇಗದಲ್ಲಿ ನಭಕ್ಕೆ ಚಿಮ್ಮಿ ಕೇವಲ 45 ನಿಮಿಷಗಳಲ್ಲಿ ಭೂಕಕ್ಷೆಗೆ ಸೇರಿಸಿತು. ನಂತರದಲ್ಲಿ ಹಂತಹಂತವಾಗಿ ನೌಕೆಯು ಕಕ್ಷಾಪಥಕ್ಕೆ ಏರಿಸಲಾಯಿತು. ನವೆಂಬರ್ 8ರಂದು ಅದರ ಕಕ್ಷಾಪಥವನ್ನು ವಿಜ್ಞಾನಿಗಳು ಒಟ್ಟು 6 ಬಾರಿ ಏರಿಸಲಿದ್ದಾರೆ. ರಾಕೆಟ್‌ನಿಂದ ನಭಕ್ಕೆ ನೆಗೆದ ನೌಕೆಯು 248.4 ಕಿ.ಮೀ. ದೂರದ ಕಕ್ಷಾಪಥ ಏರಿಕೆ ಮಾಡುವ ಇಂಥ ಸರಣಿ ಕಾರ್ಯಾಚರಣೆಗಳ ಅಗತ್ಯವಿದೆ. ನವೆಂಬರ್ 16ರ ಹೊತ್ತಿಗೆ ಇಂತಹ 4 ಯತ್ನಗಳು ಯಶಸ್ವಿಯಾಗಿ ನಡೆದವು. ನವೆಂಬರ್ 16ರ ಹೊತ್ತಿಗೆ ನೌಕೆಯನ್ನು ಭೂಮಿಯ ತುತ್ತತುದಿ 1.2 ಲಕ್ಷ ಕಿ.ಮೀ. ಕಕ್ಷೆಗೆ ಏರಿಸಲಾಯಿತು. ನವೆಂಬರ್ 3ರಷ್ಟೇ ಮತ್ತೊಂದು ಪ್ರಮುಖ ದಿನವೆಂದರೆ ಡಿಸೆಂಬರ್ 1 ಈ ದಿನ ನೌಕೆಯನ್ನು ಭೂಮಿಯ ಕಕ್ಷೆಯಾದ ಬೇರ್ಪಡಿಸಿ ಮಂಗಳನ ಕಕ್ಷೆಯೆಡೆಗೆ ಪ್ರಯಾಣ ಪ್ರಾರಂಭಿಸಿತು. ಈ ಕಾರ್ಯವೂ ಸಹ ಯಶಸ್ವಿಯಾದದ್ದೂ ನಮ್ಮ ಯಶಸ್ಸನ್ನು ಹೆಚ್ಚಿಸಿದೆ ಎಂದೇ ಹೇಳಬಹುದಾಗಿದೆ. 2013 ಡಿಸೆಂಬರ್ 1 ರಿಂದ 2014ರ ಸೆಪ್ಟೆಂಬರ್ 23ರವರೆಗೆ ನೌಕೆಯು ಮಂಗಳನೆಡೆಗೆ ಪ್ರಯಾಣ



downloaded from: www.kpscvaani.com

ಮಾಡಿದೆ. ಬೆಂಗಳೂರಿನಲ್ಲಿರುವ ಸಂಕೇತ ಸ್ವೀಕಾರ ಕೇಂದ್ರ ಸಂಕೇತಗಳನ್ನು ಸ್ವೀಕರಿಸುತ್ತಲೇ ಇರುತ್ತದೆ. ಈ ಹಂತದಲ್ಲಿ ನೌಕೆಯ ಸ್ಥಿತಿಯೂ ಗೊತ್ತಾಗುತ್ತದೆ. ಕೆಲವೊಂದು ಭಾಗಗಳಿಗೆ ತೊಂದರೆಯಾದರೆ ಸರಿಪಡಿಸುವ ವ್ಯವಸ್ಥೆಯೂ ಇಲ್ಲೇ ಆಗಬೇಕು. ಅಲ್ಲದೆ ಇದನ್ನು ಸರಿಪಡಿಸಲು ಹೆಚ್ಚುವರಿ ಇಂಧನವನ್ನೂ ಉಪಯೋಗಿಸಬೇಕಾಗಿರುವುದರಿಂದ ಹುಷಾರಾಗಿಯೇ ಇರಬೇಕಾದಂತಹ ಸನ್ನಿವೇಶವಿದೆ. ಸೆಪ್ಟೆಂಬರ್ 24ರ ಹೊತ್ತಿಗೆ ನೌಕೆ ಮಂಗಳ ಕಕ್ಷೆ ಪ್ರವೇಶಿಸುವ ಸಾಧ್ಯತೆ ಇದೆ. ಇಲ್ಲಿಗೆ ಪ್ರತಿ ಸೆಕೆಂಡ್‌ಗೆ 1.11 ವೇಗದಲ್ಲಿ ಕಕ್ಷೆಯನ್ನು ಸೇರುತ್ತದೆ. ಸುಮಾರು 150 ಜನ ವಿಜ್ಞಾನಿಗಳ ತಂಡ ಹಗಲಿರುಳು ಶ್ರಮಪಟ್ಟು ರೂಪಿಸಿದ ಈ ಯೋಜನೆಯು ಸಂಪೂರ್ಣ ಯಶಸ್ವಿಯಾಗುತ್ತಾ ಸಾಗುತ್ತಿದೆ ಎಂದು ಹೇಳಬಹುದಾಗಿದೆ.

## ಮಹತ್ವಾಕಾಂಕ್ಷಿ 'ಮಂಗಳಯಾನ' ಯೋಜನೆಯನ್ನು ಸಾಧ್ಯವಾಗಿಸಿದ ಭಾರತದ ವಿಜ್ಞಾನಿಗಳು

1. **ಕೆ. ರಾಧಾಕೃಷ್ಣನ್ :**

ವಯಸ್ಸು – 64, ಇಸ್ರೋ ಅಧ್ಯಕ್ಷ ಮತ್ತು ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿ, 1972 ರಿಂದ ಇಸ್ರೋದಲ್ಲಿ ಸೇವೆ, ಹೊಣೆಗಾರಿಕೆ, ಇಸ್ರೋದ ಸಂಪೂರ್ಣ ಚಟುವಟಿಕೆಗಳು.

2. **ಎಸ್. ರಾಧಾಕೃಷ್ಣನ್ :**

ವಯಸ್ಸು – 64 ನಿರ್ದೇಶಕರು ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ ಮತ್ತು ಉಡಾವಣಾ ಅಧಿಕಾರ ಮಂಡಳಿ ಸದಸ್ಯ 1972 ರಿಂದ ಇಸ್ರೋನಲ್ಲಿ ಕಾರ್ಯ ಹೊಣೆಗಾರಿಕೆ ಉಡಾವಣಾ ವಾಹನದಿಂದ ಮಾರ್ಸ್ ಆರ್ಬಿಟರ್ ನೌಕೆ ಉಡಾವಣೆ.

3. **ಎಂ. ಅಣ್ಣಾದೊರೈ –**

ವಯಸ್ಸು – 55 ಮಾರ್ಸ್ ಆರ್ಬಿಟರ್ ಮಿಷನ್ ಕಾರ್ಯಕ್ರಮ ನಿರ್ದೇಶಕರು ಹೊಣೆಗಾರಿಕೆ, ಬಜೆಟ್ ನಿರ್ವಹಣೆ, ಸಮಯ ನಿರ್ವಹಣೆ, ಯೋಜನೆ ಸಂಪನ್ಮೂಲ ಹಂಚಿಕೆ ಬಾಹ್ಯಾಕಾಶ ನೌಕೆ ಅಭಿವೃದ್ಧಿಗೆ ನಿರ್ದೇಶನ.

4. **ಎ.ಎಸ್. ಕಿರಣ್‌ಕುಮಾರ್–**

ವಯಸ್ಸು – 61 ಉಪಗ್ರಹ ಕಾರ್ಯಕ್ರಮ ಕೇಂದ್ರದ ನಿರ್ದೇಶಕ ಹೊಣೆಗಾರಿಕೆ– ಆರ್ಬಿಟರ್ ಜೊತೆ ಅಳವಡಿಸಿದ್ದ ಕ್ಯಾಮೆರಾ ಮಿಥೇನ್ ಸಂವೇಧಕ ಮತ್ತು ಥರ್ಮಲ್



downloaded from: www.kpscvaani.com

ಇನ್‌ಫ್ರಾರೆಡ್ ಇಲೋಜಿಂಗ್ ಸೈಕ್ರೋಮೀಟರ್ ವಿನ್ಯಾಸ ಮತ್ತು ಅಭಿವೃದ್ಧಿ ಇಲೋಜಿಂಗ್ ಸೈಕ್ರೊ ಮೀಟರ್ ವಿನ್ಯಾಸ ಮತ್ತು ಅಭಿವೃದ್ಧಿ

5. ಎಂ.ವೈ.ಎಸ್. ಪ್ರಸಾದ್ –

ವಯಸ್ಸು – 60 ವರ್ಷ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಉಡಾವಣಾ ಅಧಿಕಾರ ಮಂಡಳಿಯ ಅಧ್ಯಕ್ಷ ಹೊಣೆಗಾರಿಕೆ–ಸಂರಕ್ಷಣೆ ಮತ್ತು ಸಮಯ ಗೊತ್ತುಪಡಿಸುವಿಕೆ ರಾಕೆಟ್ ಪೋರ್ಟ್‌ನ ಸಂಪೂರ್ಣ ಉಸ್ತುವಾರಿ.

6. ಎಸ್.ಕೆ. ಶಿವಕುಮಾರ್ :

ವಯಸ್ಸು – 60 ಇಸ್ರೋ. ಉಪಗ್ರಹ ಕೇಂದ್ರದ ನಿರ್ದೇಶಕ ಹೊಣೆಗಾರಿಕೆ ಉಪಗ್ರಹ ತಂತ್ರಾಂಶ ಅಭಿವೃದ್ಧಿ ಮತ್ತು ವೈಜ್ಞಾನಿಕವಾಗಿ ಉಪಗ್ರಹ ಯೋಜನೆ ಜಾರಿ.

7. ಪಿ. ಕುನಿ ಕೃಷ್ಣನ್ :

ವಯಸ್ಸು – 52 ಪಿಎಸ್‌ಎಲ್‌ವಿ ಉಪಗ್ರಹ ಕೇಂದ್ರದ ನಿರ್ದೇಶನ ಹೊಣೆಗಾರಿಕೆ ಉಪಗ್ರಹ ತಂತ್ರಾಂಶ ಅಭಿವೃದ್ಧಿ ಮತ್ತು ವೈಜ್ಞಾನಿಕವಾಗಿ ಉಪಗ್ರಹ ಯೋಜನೆ ಜಾರಿ.

8. ಎಸ್. ಅರುಣನ್:

ವಯಸ್ಸು – 50 ಮಾರ್ಸ್, ಆರ್ಬಿಟರ್ ಮಿಷನ್ ಯೋಜನಾ ನಿರ್ದೇಶಕ ಹೊಣೆಗಾರಿಕೆ–ನೌಕೆ ಅಭಿವೃದ್ಧಿ ತಂತ್ರ' ಮುನ್ನಡೆಸುವಿಕೆ.

9. ಬಿ. ಜಯಕುಮಾರ್ :

ವಯಸ್ಸು – 54 ಪಿಎಸ್‌ಎಲ್‌ವಿ ಯೋಜನೆಯ ಸಹ ಯೋಜನಾ ನಿರ್ದೇಶಕರ ಹೊಣೆಗಾರಿಕೆ–ನೌಕೆ ಅಭಿವೃದ್ಧಿ ತಂಡ ಮುನ್ನಡೆಸುವಿಕೆ.

10. ಎಂ.ಎಸ್. ಪನ್ನೀರ್ ಸೆಲ್ವಂ :

ವಯಸ್ಸು – 59, ಶ್ರೀಹರಿಕೋಟಾದ ಕಾರ್ಯಾಚರಣೆ ವಲಯದ ಪ್ರಧಾನ ವ್ಯವಸ್ಥಾಪಕ. ಹೊಣೆಗಾರಿಕೆ–ನಿಗದಿತ ಸಮಯಕ್ಕೆ ನೌಕೆ ಉಡಾವಣೆ.



downloaded from: www.kpscvaani.com

11. **ಸುಮಾ ಡಿ.ಆರ್. :**

ಸ್ಯಾಟಲೈಟ್ ಟೆಸ್ಟಿಂಗ್ ಫೆಸಿಲಿಟಿ ಮುಖ್ಯಸ್ಥೆ.

12. **ಕನ್ನಡಿಗರು**: **ಡಾ. ಎಸ್.ಕೆ.ಶಿವಕುಮಾರ್, ಎ.ಎಸ್.ಕಿರಣ್‌ಕುಮಾರ್, ಬಿ.ಎಸ್.ಚಂದ್ರಶೇಖರ್**

## ಮಂಗಳನ ವೈಶಿಷ್ಟ್ಯಗಳು

- ಯೋಜನೆ ಘೋಷಣೆ ಪ್ರಧಾನಿ ಮನಮೋಹನಸಿಂಗ್ ಅವರಿಂದ 2012ರ ಸೆಪ್ಟೆಂಬರ್‌ನಲ್ಲಿ ಕಾರ್ಯಗತಗೊಳಿಸಲು ತೆಗೆದುಕೊಂಡ ಅವಧಿ 456 (15 ತಿಂಗಳು)
- ಯಾನದ ಉದ್ದೇಶ– ಜೀವನಾಧಾರವಾದ ಮಿಥೇನ್ ಅನಿಲದ ಕುರುಡು ಪತ್ತೆ.
- ಎಲ್ಲೆಲ್ಲಿ ನಿಗಾ ವ್ಯವಸ್ಥೆ, ಪೋರ್ಟ್‌ಬ್ಲೇರ್, ಬೆಂಗಳೂರು ಸಮೀಪದ ಬ್ಯಾಲಾಳು ಬ್ರೂನೇ, ದಕ್ಷಿಣ ಫೆಸಿಫಿಕ್ ಮಹಾಸಾಗರದಲ್ಲಿಯ ಭಾರತದ ನಳಂದಾ ಮತ್ತು ಯಮುನಾ ಹಡಗು.
- ನವೆಂಬರ್ 5ರ ದಿನದಂದು ಆಯ್ಕೆ. ಪ್ರತಿ 26 ತಿಂಗಳಿಗೊಮ್ಮೆ ಮಂಗಳ ಮತ್ತು ಭೂಮಿ ತೀರ ಹತ್ತಿರದಿಂದ ಹಾದು ಹೋಗುತ್ತವೆ. ಆ ಅವಧಿ ಈಗಿರುವುದರಿಂದ ಭಾರತದ ಮೊದಲ ರಾಕೆಟ್ ಉಡಾವಣೆಯ ಸುವರ್ಣ ಮಹೋತ್ಸವ ವರ್ಷಾಚರಣೆ (50 ವರ್ಷ).
- ಇದು ಧ್ರುವಗಾಮಿ ಉಪಗ್ರಹ ಉಡಾವಣಾ ವಾಹನದ 25ನೇ ಉಡಾವಣೆ ಸಹಿ.
- ಭೂಮಿ ಮತ್ತು ಮಂಗಳನ ನಡುವಿನ ಅಂತರ: ಸರಾಸರಿ 22.50 ಕೋಟಿ ಕಿ.ಮೀ. (225 ಮಿಲಿಯನ್ ಕಿ.ಮೀ.)
- ಸೂರ್ಯನ ಸುತ್ತ ಮಂಗಳಗ್ರಹದ ಪರಿಭ್ರಮಣಾ ಅವಧಿ : 687 ದಿನ ತನ್ನ ಕಕ್ಷೆಯಲ್ಲಿ ಸುತ್ತುವ ಕಾಲಾವಧಿ 24 ಗಂಟೆ 37 ನಿಮಿಷ. ಅದರ ಸುತ್ತಳತೆ 6,800 ಕಿ.ಮೀ.
- ಕೆಂಪುಗ್ರಹದ ವೈಶಿಷ್ಟ್ಯಗಳು: ಸೌರಮಂಡಲದ ನಾಲ್ಕನೇ ಗ್ರಹವಾಗಿರುವ ಇದು ಸೌರವ್ಯೂಹದ ಎರಡನೇ ಅತಿ ಚಿಕ್ಕ ಗ್ರಹ ಕಬ್ಬಿಣದ ಧಾತು ಅಧಿಕವಾಗಿರುವುದರಿಂದ ಅದರ ಬಣ್ಣ ಕೆಂಪು.
- ಅತ್ಯಂತ ಕಡಿಮೆ ಬಜೆಟ್‌ನ ಮಂಗಳಯಾನ



downloaded from: www.kpscvaani.com

- ಅತ್ಯಂತ ಕಡಿಮೆ ಬೆಲೆಯ ಕಾರನ್ನು ತಯಾರಿಸಿರುವ ಭಾರತ ಈಗ ಅತ್ಯಂತ ಕಡಿಮೆ ಖರ್ಚಿನಲ್ಲಿ ಮಂಗಳಕ್ಕೆ ಉಪಗ್ರಹ ಕಳುಹಿಸುತ್ತಿದೆ.
- ಅಮೇರಿಕಾದ ನಾಸಾ ಇದೇ ಸಮಯದಲ್ಲಿ ಯೋಚಿಸಿರುವ ಮಾವೆನ್ ಮಂಗಳಯಾತ್ರೆಯು ವೆಚ್ಚ 679 ಮಿಲಿಯನ್ ಡಾಲರ್. ಆದರೆ ನಮ್ಮದು ಬರೀ 73 ಮಿಲಿಯನ್ ಡಾಲರ್ (450 ಕೋಟಿ ರೂ.)
- ಅಷ್ಟೇ ಅಲ್ಲಿ ನಾಸಾ ತನ್ನ ಯೋಜನೆಗೆ 5 ವರ್ಷಗಳ ಪೂರ್ವ ಸಿದ್ಧತೆ ಮಾಡಿಕೊಂಡಿದ್ದರೆ ಭಾರತದ್ದು ಬರೀ 15 ತಿಂಗಳ ಸಾಹಸ.
- ಮಂಗಳಯಾನದ ಕುತೂಹಲಕಾರಿ ವಿಷಯ ಈ ಯೋಜನೆಯನ್ನು ಮಾಧ್ಯಮಗಳು ಮಂಗಳಯಾನ ಎಂದು ಬಣ್ಣಿಸಿವೆಯೇ ಹೊರತು, ಇಸ್ರೋ ಮಾತ್ರ "ಮಂಗಳ ಕಕ್ಷಾ ಅಭಿಯಾನ" ಎಂಬ ಹೆಸರು ಕೊಟ್ಟಿದೆ.
- ಕಳೆದ 20 ವರ್ಷಗಳಲ್ಲಿ ಭಾರತ ಪಿಎಸ್ಎಲ್‌ವಿ 24 ಉಡ್ಡಾಯನ ಮಾಡಿದೆ. ಇದು 25ನೆಯದು ಹಾಗಾಗಿ ಈ ನೌಕೆಗೆ ಅ–25 ಎಂದು ಹೆಸರಿಡಲಾಗಿದೆ.
- ಈ ನೌಕೆ ಮಂಗಳನಲ್ಲಿ ಸೇರಿದರೆ ಅಂಥ ಸಾಹಸ ಮಾಡಿದ ಏಷ್ಯಾದ ಮೊದಲ ರಾಷ್ಟ್ರ ನಮ್ಮದಾಗಲಿದೆ. ಈವರೆಗೆ 40 ಯೋಜನೆಗಳಲ್ಲಿ 23 ವಿಫಲವಾಗಿವೆ. 1999ರಲ್ಲಿ ಜಪಾನ್ 2011ರಲ್ಲಿ ಚೀನಾ ವೈಫಲ್ಯ ಕಂಡಿದೆ.
- ಈ ನೌಕೆಯಲ್ಲಿ 5 ವೈಜ್ಞಾನಿಕ ಉಪಕರಣಗಳಿದ್ದೂ ಮಂಗಳನ ಅಧ್ಯಯನಕ್ಕೆ ನೆರವಾಗುತ್ತದೆ. ಮುಖ್ಯವಾಗಿ ಅಲ್ಲಿ ಮಿಥೇನ್ ಇದೆಯೋ ಎಂದು ಹುಡುಕುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

## ಮಂಗಳಯಾನ ಯೋಜನೆಯಲ್ಲಿ ಕನ್ನಡ ನೆಲ, ಕನ್ನಡಿಗರ ಪಾರುಪತ್ಯ

ಮಂಗಳಗ್ರಹ ಕಕ್ಷಾ ಅಭಿಯಾನದಲ್ಲಿ ಅಂತರಿಕ್ಷ ಜಾಲ (ಹೊಂದಿರುವ ಇಸ್ರೋದ ಸ್ಪೇಸ್ ನೆಟ್‌ವರ್ಕ್) ಹೊಂದಿರುವ ಇಸ್ರೋದ ಬ್ಯಾಲಾಳು ಕೇಂದ್ರ 3 ಪ್ರಮುಖ ಪಾತ್ರಗಳನ್ನು ನಿರ್ವಹಿಸಲಿದೆ.

- ಮಂಗಳ ಅಂತರಿಕ್ಷ ನೌಕೆ ರವಾನಿಸುವ ರೇಡಿಯೋ ತರಂಗಗಳ ಸ್ವೀಕಾರ ಕಾರ್ಯನಿರ್ವಹಣೆ ಜೊತೆಗೆ, ಸ್ವೀಕರಿಸಿದ ಮಾಹಿತಿಗಳ ಸಂಸ್ಕರಣೆ ಹಾಗೂ ಶೇಖರಣೆ ಮಾಡಲಿದೆ. ಅಲ್ಲದೆ, ಅತ್ಯಾಧುನಿಕ ಉಪಗ್ರಹ ನಿಯಂತ್ರಣ ಕೇಂದ್ರದ ಮೂಲಕ



downloaded from: www.kpscvaani.com

ಕೋಟ್ಯಂತರ ಕಿ.ಮೀ. ದೂರದಲ್ಲಿರುವ ಮಂಗಳ ವ್ಯೂಮನೌಕೆಯನ್ನು ರೇಡಿಯೋ ತರಂಗಗಳ ಮೂಲಕ ನಿಯಂತ್ರಿಸುತ್ತದೆ.

- ದೈತ್ಯ ಅಂಟೆನಾ ಕೆಲಸವೇನು? ಮಂಗಳಗ್ರಹದ ಅನ್ವೇಷಣೆ ನೌಕೆ. ಕೆಂಪುಗ್ರಹವನ್ನು ಸುತ್ತುತ್ತಲೇ ತನ್ನಲ್ಲಿರುವ 5 ವೈಜ್ಞಾನಿಕ ಉಪಕರಣಗಳಿಂದ ಮಾಹಿತಿ ಸಂಗ್ರಹಿಸುತ್ತದೆ. ಈ ಮಾಹಿತಿಯನ್ನು ರೇಡಿಯೋ ತರಂಗಾಂತರ ರೂಪದಲ್ಲಿ ಭೂಮಿಗೆ ಪ್ರಸಾರ ಮಾಡುತ್ತದೆ. ಕೋಟ್ಯಾಂತರ ಕಿ.ಮೀ. ದೂರದಿಂದ ಬರುವ ಈ ಸಿಗ್ನಲ್‌ನ್ನು ಬ್ಯಾಲಾಳುವಿನಲ್ಲಿರುವ ಡೀಪ್ ಸ್ಪೇಸ್ ನೆಟ್‌ವರ್ಕ್‌ನಲ್ಲಿರುವ 32 ಮೀಟರ್ ವ್ಯಾಸದ ಬಾಣಲೆ ರೀತಿಯ ದೈತ್ಯಾಕಾರದ ಅಂಟೆನಾ ಸ್ವೀಕರಿಸುತ್ತದೆ.
- 350 ಟನ್ ತೂಕವಿರುವ ಈ ಸೂಕ್ಷ್ಮ ಆಂಟೆನಾ ಸುಮಾರು 10 ಮಹಡಿ ಮನೆಯಷ್ಟು ಎತ್ತರವಿದೆ. ಇದೇ ರೀತಿಯ ಕಾರ್ಯವನ್ನು 18 ಮೀ. ವ್ಯಾಸದ ಮತ್ತೊಂದು ಅಂಟೆನಾ ಕೂಡ ಮಾಡುತ್ತದೆ. ಚಂದ್ರಯಾನ–1 ಯೋಜನೆಯಲ್ಲಿ ಡೀಪ್ ಸ್ಪೇಸ್ ನೆಟ್‌ವರ್ಕ್ ಕಾರ್ಯಾರಂಭ ಮಾಡಿತ್ತು. ಈ ಸಂದರ್ಭದಲ್ಲಿ ಚಂದ್ರನ ಮೇಲ್ಮೈನಲ್ಲಿ ನೀರಿನ ಅಸ್ಥಿತ್ವವಿರುವ ಮಾಹಿತಿಯನ್ನು ಸ್ವೀಕರಿಸಿದ್ದು ಇದೇ ದೈತ್ಯ ಆಂಟೆನಾ.
- ಸ್ಪೇಸ್ ಸೈನ್ಸ್ ಡಾಟಾ ಸೆಂಟರ್ : ಬ್ಯಾಲಾಳುವಿನಲ್ಲಿರುವ ದೈತ್ಯ ಸಂಪರ್ಕ ಆಂಟೆನಾಗಳಿಂದ ಪಡೆದ ಅಮೂಲ್ಯ ವೈಜ್ಞಾನಿಕ ಮಾಹಿತಿಯನ್ನು ಬ್ಯಾಲಾಳುವಿನಲ್ಲಿರುವ ಭಾರತೀಯ ಆಂತರಿಕ್ಷ ವಿಜ್ಞಾನ ದತ್ತಾಂಶ ಕೇಂದ್ರಕ್ಕೆ (ಐಎನ್‌ಎಸ್‌ಡಿಸಿ) ರವಾನಿಸಲಾಗುತ್ತದೆ. ಹೀಗೆ ರವಾನಿಸಿದ ಮಾಹಿತಿಯನ್ನು ಈ ಕೇಂದ್ರದಲ್ಲಿ ವಿಂಗಡಿಸಿ ಸಂಸ್ಕರಿಸಲಾಗುತ್ತದೆ. ನಂತರ ಈ ದತ್ತಾಂಶವನ್ನು ವ್ಯವಸ್ಥಿತವಾಗಿ ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿಡಲಾಗುತ್ತದೆ. ಅವಶ್ಯಕತೆಯಿದ್ದಾಗ ಇಲ್ಲಿಂದ ಮಾಹಿತಿಯನ್ನು ಇಸ್ರೋ ಪಡೆಯಲಿದೆ.
- ನೌಕೆಯನ್ನು ರೇಡಿಯೋತರಂಗಗಳ ಮುಖಾಂತರ ನಿಯಂತ್ರಿಸುವ ಕೇಂದ್ರ ಬೆಂಗಳೂರು ಉತ್ತರದಲ್ಲಿರುವ ಪೀಣ್ಯಾದಲ್ಲಿದೆ. ಈ ಕೇಂದ್ರದ ಜೊತೆಗೆ ಬ್ಯಾಲಾಳುವಿನಲ್ಲಿರುವ ಅತ್ಯಾಧುನಿಕ ಉಪಗ್ರಹ ನಿಯಂತ್ರಣ ಕೇಂದ್ರ ಕೂಡ ಮಂಗಳಗ್ರಹ ಅನ್ವೇಷಣಾ ನೌಕೆಯನ್ನು ನಿಯಂತ್ರಿಸಲಿದೆ.
- ಸಾಸರ್ ತಟ್ಟೆ ರೀತಿಯ ಮೇಲ್ಮೈ : ಇಸ್ರೋ ಸಂಸ್ಥೆ ಬ್ಯಾಲಾಳುವಿನಲ್ಲಿರುವ ಪ್ರದೇಶವನ್ನು ತನ್ನ ಖಗೋಳ ಕಾರ್ಯಗಳಿಗೆ ಬಳಸಲು ಪ್ರಮುಖ ಕಾರಣವಿದೆ. ಬ್ಯಾಲಾಳು ಭೂಮೇಲ್ಮೈ ಮಟ್ಟ ಟೀ ಕುಡಿಯುವ ಸಾಸರ್ ರೀತಿ ತಟ್ಟೆಯಾಕಾರದಲ್ಲಿದೆ.



downloaded from: www.kpscvaani.com

ಇದರಿಂದಾಗಿ ಭೂಮಿಯ ಹೊರಗಿನಿಂದ ಬರುವ ರೇಡಿಯೋ ತರಂಗಗಳನ್ನು ಹಾನಿಯಾಗದಂತೆ ಸ್ವೀಕರಿಸಬಹುದಾಗಿದೆ.

- ಮಂಗಳ ಕಕ್ಷಾ ಅಭಿಯಾನದಲ್ಲಿ ಮೂವರು ಕನ್ನಡಿಗರು
- ಚಂದ್ರಯಾನ–1 ಯೋಜನೆಯಲ್ಲಿ ಮಹತ್ವದ ಜವಾಬ್ದಾರಿ ಹೊತ್ತಿದ್ದ ಕನ್ನಡಿಗರು ಈಗಲೂ ತಮ್ಮ ಪಾರುಪತ್ಯ ಮೆರೆದಿದ್ದಾರೆ.
- ದೇಶದ ಮೊಟ್ಟಮೊದಲ ಅಂತರ್‌ಗ್ರಹ ಯೋಜನೆಯಾದ ಮಂಗಳ ಗ್ರಹ ಕಕ್ಷಾ ಅಭಿಯಾನದಲ್ಲಿ ಮೂವರು ಕನ್ನಡಿಗರು ಪ್ರಮುಖ ಪಾತ್ರ ವಹಿಸಿದ್ದಾರೆ.
- ಇಸ್ರೊ ಉಪಗ್ರಹ ಕೇಂದ್ರದ ನಿರ್ದೇಶಕರಾದ ಎಸ್.ಕೆ. ಶಿವಕುಮಾರ್ ನೇತೃತ್ವದ ತಂಡ ಮಾರ್ಸ್ ಮಿಷನ್ ಯೋಜನೆಯಲ್ಲಿ ಆಂತರಿಕ್ಷ ನೌಕೆ ನಿರ್ಮಾಣ ಹಾಗೂ ಉಡಾವಣೆ ಕಾರ್ಯದಲ್ಲಿ ಕೆಲಸ ಮಾಡುತ್ತಿದೆ.
- ಇನ್ನು ಅಹಮದಾಬಾದ್‌ನಲ್ಲಿ ಸ್ಪೇಸ್ ಅಪ್ಲಿಕೇಶನ್ ಸೆಂಟರ್ ಮುಖ್ಯಸ್ಥರಾಗಿರುವ ಮೈಸೂರು ಮೂಲದ ಕಿರಣ್‌ಕುಮಾರ್ ಸಾರಥ್ಯದಲ್ಲಿ ನೌಕೆಗೆ ಅಗತ್ಯವಾದ 5 ಉಪಕರಣಗಳ ಪೈಕಿ 3 ಉಪಕರಣಗಳನ್ನು ನಿರ್ಮಿಸಿಕೊಟ್ಟಿದ್ದಾರೆ.
- ಬ್ಯಾಲಾಳುವಿನಲ್ಲಿರುವ ಡೀಪ್ ಸ್ಪೇಸ್ ನೆಟ್‌ವರ್ಕ್ ಕೇಂದ್ರದ ನಿರ್ದೇಶಕ ಚಂದ್ರಶೇಖರ್ ಕೂಡ ಕನ್ನಡಿಗರೇ.

## ಲೋಕಪಾಲ್ ಮಸೂದೆ – 2013

ಸ್ವತಂತ್ರ ಭಾರತದಲ್ಲಿ ನಡೆದ ಹಲವಾರು ಪ್ರಮುಖ ಚಳುವಳಿಗಳಲ್ಲಿ ಲೋಕಪಾಲ್ ಚಳುವಳಿಯು ಅತ್ಯಂತ ಪ್ರಮುಖವಾದುದು. ದೇಶದಲ್ಲಿ ತಾಂಡವ ಆಡುತ್ತಿರುವ ಭ್ರಷ್ಟಾಚಾರವನ್ನು ನಿಯಂತ್ರಿಸಲು ಯಾವುದೇ ಕಾಯ್ದೆ ಜಾರಿಗೆ ಬಂದಿರಲಿಲ್ಲ. ಸುಲಿಗೆ ಸುಳಿಯಿಂದ ಸಮಾಜವನ್ನು ತಪ್ಪಿಸಿ ಭ್ರಷ್ಟಾಚಾರ ರಹಿತ ಸಮಾಜವನ್ನು ಸ್ಥಾಪಿಸಲು ಅಣ್ಣಾ ಹಜಾರೆಯಂತಹ ಹಲವಾರು ಜನ ಹೋರಾಟಗಾರರು ಪ್ರಯತ್ನಿಸಿದ್ದು ಇದಕ್ಕೆ ಕಳಸವಿಟ್ಟಂತೆ ಸಂಸತ್ತಿನ ಎರಡೂ ಸದನಗಳಲ್ಲಿ ಅಂಗೀಕಾರಗೊಂಡ ಲೋಕಪಾಲ್ ಮಸೂದೆ–2013 ಭ್ರಷ್ಟಾಚಾರದ ವಿರುದ್ಧದ ಪ್ರಮುಖ ಬ್ರಹ್ಮಾಸ್ತ್ರವಾಗಿದೆ.



downloaded from: www.kpscvaani.com

ಕಲ್ಯಾಣ ರಾಜ್ಯ ನಿರ್ಮಾಣದಲ್ಲಿ ಆಡಳಿತದ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು ಪ್ರತಿನಿತ್ಯವೂ ಆಡಳಿತ ಕಾರ್ಯಕ್ಷೇತ್ರ ವಿಸ್ತಾರಗೊಳ್ಳುತ್ತಿದೆ. ಇಂದು ಆಡಳಿತವೆಂಬುದು ಬೃಹದಾಕಾರವಾಗಿ ಬೆಳೆದು ಅದರ ವಿಧಿ–ವಿಧಾನಗಳು ಹೆಚ್ಚು ಕ್ಲಿಷ್ಟ ಮತ್ತು ಸಂಕೀರ್ಣ ಸ್ವರೂಪವನ್ನು ಪಡೆಯುತ್ತಿದೆ.

ಈ ಆಡಳಿತದಲ್ಲಿ ಅಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರ ಮತ್ತು ವಿವೇಚನಾಧಿಕಾರವನ್ನು ನೀಡಲಾಗಿದೆ. ಆದರೆ ಅಧಿಕಾರಿಗಳ ಭ್ರಷ್ಟಾಚಾರ, ಲಂಚಗುಳಿತನ ಮತ್ತು ಅಧಿಕಾರ ದುರ್ಬಳಕೆ ಪ್ರಜೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದುಂಟು. ಸರ್ಕಾರಿ ಅಧಿಕಾರಿಗಳ ಅನ್ಯಾಯ, ಅಕ್ರಮ ಮುಂತಾದ ಅಕ್ರಮಗಳನ್ನು ನಿವಾರಿಸುವಲ್ಲಿ ನ್ಯಾಯಾಂಗ, ಮಾಧ್ಯಮಗಳು ಮತ್ತು ವಿರೋಧ ಪಕ್ಷಗಳು ಪ್ರಮುಖ ಪಾತ್ರ ವಹಿಸುತ್ತವೆ. ಆದರೆ ಇವುಗಳು ಪರಿಣಾಮಕಾರಿ ಸಾಧನಗಳಾಗಿ ಉಳಿಯದ ಕಾರಣ ಆಡಳಿತಾಧಿಕಾರಿಗಳ ಅಧಿಕಾರ ದುರುಪಯೋಗದಂತಹ ಕೃತ್ಯಗಳನ್ನು ತಡೆಯಲು ಪರಿಣಾಮಕಾರಿ ಸಾಧನದ ಅವಶ್ಯಕತೆ ಇದ್ದು ಅಂತಹ ಒಂದು ಸಾಧನವೇ ಓಂಬುಡ್ಸ್‌ಮನ್. ಓಂಬುಡ್ಸ್‌ಮನ್ ಎಂಬುದು ಸ್ವೀಡಿಷ್ ಸಂಸ್ಥೆಯಾಗಿದ್ದು ಇದನ್ನು ಭಾರತದಲ್ಲಿ 'ಲೋಕಪಾಲ್' ಎಂದು ಕರೆಯುತ್ತಾರೆ. 'ಓಂಬುಡ್ಸ್‌ಮನ್' ಎಂಬುದು ಭ್ರಷ್ಟಾಚಾರ, ಅನ್ಯಾಯ ಅಕ್ರಮಗಳ ವಿರುದ್ಧ ಸಾರ್ವಜನಿಕರು ಸಲ್ಲಿಸುವ ದೂರುಗಳನ್ನು ಪರಿಶೀಲಿಸಲು ಶಾಸಕಾಂಗದಿಂದ ನೇಮಕವಾದ ಸ್ವತಂತ್ರ ಮತ್ತು ಪಕ್ಷಾತೀತವಾಗಿ ಕಾರ್ಯನಿರ್ವಹಿಸುವ 'ಅಧಿಕಾರಿ' ಎಂಬ ಅರ್ಥವನ್ನು ಸೂಚಿಸುತ್ತದೆ. ಸ್ವೀಡನ್ ಈ ಪ್ರವೃತ್ತಿಯನ್ನು ಅಳವಡಿಸಿಕೊಂಡ ವಿಶ್ವದ ಪ್ರಥಮ ರಾಷ್ಟ್ರವಾಗಿದ್ದು 1809ರಲ್ಲಿ ಸ್ವೀಡನ್ ಸಂವಿಧಾನವು ಓಂಬುಡ್ಸ್‌ಮನ್ ರಚನೆಗೆ ಅವಕಾಶ ಕಲ್ಪಿಸಿದೆ. ಓಂಬುಡ್ಸ್‌ಮನ್ ಸ್ವತಂತ್ರ ಸಂಸ್ಥೆಯಾಗಿದ್ದು ಇದರ ದೈನಂದಿನ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವನ್ನು ಸಂವಿಧಾನದ ಯಾವುದೇ ಅಂಗಗಳು ಹೊಂದಿರುವುದಿಲ್ಲ.

ಓಂಬುಡ್ಸ್‌ಮನ್ ತನ್ನದೇ ಆದ ವಿಶೇಷ ಅಧಿಕಾರಗಳನ್ನು ಹೊಂದಿದ್ದು ಎಲ್ಲಾ ಸಾರ್ವಜನಿಕ ಅಧಿಕಾರಿಗಳನ್ನು ಮೇಲ್ವಿಚಾರಣೆ ಮಾಡುವ ದಾಖಲೆಗಳನ್ನು ಪರಿಶೀಲಿಸುವ ಪ್ರಜೆಗಳಿಗೆ ಸರಿಯಾದ ಮತ್ತು ನಿಷ್ಪಕ್ಷಪಾತ ನ್ಯಾಯ ದೊರೆಯುವಂತೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಆಡಳಿತವು ಕಾನೂನುಬದ್ಧವಾಗಿ ಮತ್ತು ನಿಯಮಾನುಸಾರ ನಡೆಯುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಆಡಳಿತಾಧಿಕಾರಿಗಳು ತಮ್ಮ



downloaded from: www.kpscvaani.com

ಅಧಿಕಾರವನ್ನು ದುರುಪಯೋಗಪಡಿಸಿದಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಸಂಸ್ಥೆಗೆ ಸೇರಿರುತ್ತದೆ.

1963ರಲ್ಲಿ ಎಲ್.ಎಂ. ಸಿಂಗ್ವಿಯವರು ಲೋಕಪಾಲ್ ಪದವನ್ನು ಪರಿಚಯಿಸಿದವರು. ನಂತರ 1966ರಲ್ಲಿ ಮೊರಾರ್ಜಿ ದೇಸಾಯಿಯವರ ನೇತೃತ್ವದಲ್ಲಿ ನೇಮಕವಾದ ಮೊದಲ ಆಡಳಿತ ಸುಧಾರಣಾ ಆಯೋಗವು ನಾಗರಿಕರ ಕುಂದುಕೊರತೆಗಳ ನಿವಾರಣೆಗಾಗಿ ಲೋಕಪಾಲ್ ಮತ್ತು ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು. ನಂತರ 1968ರಲ್ಲಿ ವಕೀಲ ಶಾಂತಿಭೂಷಣ್‌ರವರು ಮೊದಲ ಬಾರಿಗೆ ಲೋಕಪಾಲ್ ಕರಡು ಮಸೂದೆಯನ್ನು ರಚಿಸಿ ಲೋಕಸಭೆಯಲ್ಲಿ ಮಂಡಿಸಿದರು. ಲೋಕಸಭೆಯಲ್ಲಿ ಅಂಗೀಕಾರವಾದ ಈ ಮಸೂದೆ ರಾಜ್ಯಸೇವೆಯಲ್ಲಿ ಅಂಗೀಕಾರ ಪಡೆಯುವಲ್ಲಿ ವಿಫಲವಾಯಿತು. ಇದಾದ ನಂತರ 1971, 1977, 1985, 1989, 1996, 1998, 2001, 2005, 2008ರಲ್ಲಿ ಸಂಸತ್ತಿನಲ್ಲಿ ಮಂಡನೆಯಾದ ಲೋಕಪಾಲ್ ಮಸೂದೆ ಅಂಗೀಕಾರ ಪಡೆಯುವಲ್ಲಿ ವಿಫಲವಾಯಿತು. 2011ರಲ್ಲಿ ಮತ್ತು ಲೋಕಸಭೆಯಲ್ಲಿ ಮಂಡನೆಯಾಗಿ ಅಂಗೀಕಾರವಾದ ಮಸೂದೆ ಕೊನೆ ಘಳಿಗೆಯಲ್ಲಿ ರಾಜ್ಯಸಭೆಯಲ್ಲಿ ಅಂಗೀಕಾರ ಪಡೆಯುವಲ್ಲಿ ವಿಫಲವಾಯಿತು. ಇದನ್ನು ಗಮನಿಸಿದ ದೇಶದ ನಾಗರಿಕರಲ್ಲಿ ಲೋಕಪಾಲ್ ಮಸೂದೆ ಅಂಗೀಕಾರ ಆಗುವುದು ಯಾವಾಗ? ಜಾರಿಗೆ ಬರುವುದು ಯಾವಾಗ ಎಂಬ ಪ್ರಶ್ನೆ ಕಾಡಲಾರಂಭಿಸಿತ್ತು. ಆದರೆ ಇತ್ತೀಚೆಗೆ ಸಂಸತ್ತಿನಲ್ಲಿ ಮಂಡನೆಯಾಗಿ ಅಂಗೀಕಾರಗೊಂಡ ಲೋಕಪಾಲ್ ಮಸೂದೆ–2013 ಈ ಎಲ್ಲ ಆತಂಕಗಳನ್ನು ದೂರ ಮಾಡಿದೆ.

ಭಾರತದಲ್ಲಿ ಲೋಕಪಾಲ್‌ನ್ನು ಸ್ಥಾಪಿಸುವ ಉದ್ದೇಶದಿಂದ ಲೋಕಪಾಲ್ ಮಸೂದೆಯನ್ನು ಡಿಸೆಂಬರ್ 27, 2011ರಂದು ಸಂಸತ್ತಿನಲ್ಲಿ ಮಂಡಿಸಲಾಯಿತು. ಆದರೆ ಈ ಕಾಯ್ದೆಯ ಬಗ್ಗೆ ಹಲವಾರು ಅಪಸ್ವರಗಳು ಕೇಳಿಬಂದ ಕಾರಣ ಈ ಕಾಯ್ದೆಯನ್ನು ಮತ್ತಷ್ಟು ಬಲಗೊಳಿಸಲು 2011ರ ಲೋಕಪಾಲ್ ಮಸೂದೆಗೆ ಸಾಕಷ್ಟು ತಿದ್ದುಪಡಿ ತಂದು ಲೋಕಪಾಲ್ ಮತ್ತು ಲೋಕಾಯುಕ್ತ ಮಸೂದೆ 2013 ಎಂಬುದಾಗಿ ಡಿಸೆಂಬರ್ 17, 2013ರಂದು ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ರಾಜ್ಯಸಭೆಯಲ್ಲಿ ಅಂಗೀಕಾರವಾದ ಮಸೂದೆ ಡಿಸೆಂಬರ್ 18, 2013ರಂದು ಲೋಕಸಭೆಯಲ್ಲಿಯೂ ಅಂಗೀಕಾರವಾಯಿತು. ಜನವರಿ 1, 2014ರಂದು ಭಾರತದ ರಾಷ್ಟ್ರಪತಿಗಳ ಅಂಕಿತ ಪಡೆದ ಈ ಮಸೂದೆ ಮೂಲಕ ಲೋಕಪಾಲ್ ಮತ್ತು ಲೋಕಾಯುಕ್ತ ಸಂಸ್ಥೆಗಳು ಕಾರ್ಯನಿರ್ವಹಿಸಲಿವೆ.



downloaded from: www.kpscvaani.com

ಲೋಕಪಾಲ್ ಸದಸ್ಯರು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಾಗಿರಬಾರದು. ಲೋಕಪಾಲ್ ಸದಸ್ಯರನ್ನು ನೇಮಿಸುವ ಮತ್ತು ಸುಪ್ರೀಂಕೋರ್ಟ್ ಆದೇಶದಂತೆ ವಜಾ ಮಾಡುವ ಅಧಿಕಾರ ರಾಷ್ಟ್ರಪತಿಗಳಿಗೆ ಸೇರಿರುತ್ತದೆ. 'ಎ' ದರ್ಜೆಯಿಂದ 'ಡಿ' ದರ್ಜೆಯವರೆಗಿನ ಎಲ್ಲಾ ಅಧಿಕಾರಿಗಳು, ಎಲ್ಲಾ ವರ್ಗದ ರಾಜಕಾರಣಿಗಳು ಮತ್ತು ಪ್ರಧಾನಮಂತ್ರಿಗಳು ಲೋಕಪಾಲ್ ವ್ಯಾಪ್ತಿಗೆ ಒಳಪಡಲಿದ್ದಾರೆ. ಲೋಕಪಾಲ್‌ನಲ್ಲಿ ಒಬ್ಬ ಅಧ್ಯಕ್ಷ ಮತ್ತು ಎಂಟು ಜನ ಸದಸ್ಯರಿದ್ದು ಅವರಲ್ಲಿ ಅರ್ಧದಷ್ಟು ಜನ ಸದಸ್ಯರು ನ್ಯಾಯಾಂಗದ ಸದಸ್ಯರಾಗಿರಬೇಕು. ಸಂಸತ್ತಿನ 100 ಜನ ಸದಸ್ಯರ ಸಹಿವುಳ್ಳ ದೂರನ್ನು ಆಧರಿಸಿ ರಾಷ್ಟ್ರಪತಿಗಳು ಶಿಫಾರಸ್ಸು ಮಾಡಿದರೆ ಲೋಕಪಾಲ್ ಸದಸ್ಯರ ಕುರಿತು ಸುಪ್ರೀಂಕೋರ್ಟ್ ತನಿಖೆ ನಡೆಸಬಹುದು. ಪ್ರಾಥಮಿಕ ತನಿಖೆಯ ವೇಳೆ ಆರೋಪಿತ ಅಧಿಕಾರಿ ಅಥವಾ ಸಂಸ್ಥೆಯಿಂದ ವಿವರಣೆ ಪಡೆಯಬೇಕಿಲ್ಲ. ಸರ್ಕಾರದ ಅನುದಾನ ಪಡೆಯುವ ಎಲ್ಲಾ ಸೊಸೈಟಿಗಳು ಮತ್ತು ಟ್ರಸ್ಟ್‌ಗಳು ಲೋಕಪಾಲ್ ವ್ಯಾಪ್ತಿಗೆ ಒಳಪಡುತ್ತವೆ.

ಲೋಕಪಾಲನು ಕಾನೂನಿನ ಪ್ರಕಾರ ಸಾರ್ವಜನಿಕ ವ್ಯಕ್ತಿಯ ವಿರುದ್ಧ ಕೇಳಿಬರುವ ದೂರುಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುತ್ತದೆ. ಇದು ವರ್ಷದ ಹಿಂದಿನ ಅವಧಿಯೊಳಗಿನ ದುರ್ನಡತೆಯ ದೂರುಗಳನ್ನು ಮಾತ್ರ ಅಂಗೀಕರಿಸುತ್ತದೆ. ಲೋಕಪಾಲರ ವ್ಯಾಪ್ತಿಯಲ್ಲಿ ಪ್ರಧಾನಿ, ಮಂತ್ರಿಗಳು, ಸಂಸತ್ ಸದಸ್ಯರು, ರಾಜ್ಯ ವಿಧಾನಸಭೆಗಳ ಸದಸ್ಯರು, ರಾಜ್ಯ ಸರ್ಕಾರಗಳ ಮಂತ್ರಿಗಳು, ಮುಖ್ಯಮಂತ್ರಿಗಳು ಬರುತ್ತಾರೆ. ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಮಂತ್ರಿಯ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಪರಿಶೀಲಿಸುವುದು. ಯಾವುದೇ ಒಬ್ಬ ನಾಗರಿಕ ಅನ್ಯಾಯಕ್ಕೆ ಒಳಗಾಗಿದ್ದಾನೆಂದು ದೂರು ಸಲ್ಲಿಸಿದಾಗ ಲೋಕಪಾಲನು ತನಿಖೆ ನಡೆಸಬಹುದಾಗಿದೆ. ಅಲ್ಲದೇ ತನ್ನ ವಿವೇಚನಾಧಿಕಾರದಲ್ಲಿ ದುರಾಡಳಿತದಿಂದ ಉಂಟಾಗುವ ಅನ್ಯಾಯದ ಕ್ರಮದ ವಿರುದ್ಧವಷ್ಟೇ ಅಲ್ಲದೆ ಪಕ್ಷಪಾತದ ವಿರುದ್ಧದ ದೂರನ್ನು ಕೂಡ ತನಿಖೆ ಮಾಡಬಹುದು. ತನ್ನ ಗಮನಕ್ಕೆ ಬಂದ ನಂತರ ಕಂಡುಬರುವ ಅನ್ಯಾಯ, ಅಕ್ರಮಗಳ ಬಗ್ಗೆಯೂ ತನಿಖೆ ನಡೆಸಬಹುದಾಗಿದೆ. ತನ್ನ ಬಳಿಗೆ ಬರುವ ದೂರುಗಳಲ್ಲಿ ಸತ್ಯಾಂಶವಿದೆ ಎಂದು ಕಂಡುಬಂದರೆ ಲೋಕಪಾಲನು ಕ್ರಮಕೈಗೊಳ್ಳಬೇಕಾದ ಅಧಿಕಾರಿಗೆ ತನ್ನ ಅಭಿಪ್ರಾಯವನ್ನು ತಿಳಿಸುತ್ತಾನೆ. ಇದಕ್ಕನುಗುಣವಾಗಿ ಕೈಗೊಂಡ ಕ್ರಮವನ್ನು ಅಧಿಕಾರಿಯು ಲೋಕಪಾಲನಿಗೆ ತಿಳಿಸಬೇಕು. ಲೋಕಪಾಲನು ತನ್ನ ವಾರ್ಷಿಕ ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸುತ್ತಾರೆ. ಈ ವರದಿಯನ್ನು ರಾಷ್ಟ್ರಪತಿಗಳು ಸಂಸತ್ತಿನಲ್ಲಿ ಮಂಡಿಸುತ್ತಾರೆ.



downloaded from: www.kpscvaani.com

ಒಟ್ಟಾರೆಯಾಗಿ ಹೇಳುವುದಾದರೆ ಸಾರ್ವಜನಿಕ ವ್ಯಕ್ತಿಯ ವಿರುದ್ಧ ಕೇಳಿಬರುವ ದುರ್ನಡತೆಯನ್ನು ತನಿಖೆ ಮಾಡುವ ಒಂದು ಸ್ಥಾಯೀ ವ್ಯವಸ್ಥೆಯಾಗಿದ್ದು ಇದೊಂದು ಸಂವಿಧಾನೇತರ ಸಂಸ್ಥೆಯಾಗಿದೆ. ಆದರೆ ಲೋಕಪಾಲ್ ಮಸೂದೆ–2013 ರಾಷ್ಟ್ರಪತಿಗಳ ಅಂಕಿತ ಪಡೆದು ಹಲವು ತಿಂಗಳುಗಳೇ ಕಳೆದರೂ ಲೋಕಪಾಲನ ನೇಮಕಾತಿ ಇನ್ನೂ ಆಗಿಲ್ಲ. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರ ಗಮನಹರಿಸಬೇಕಾದ ತುರ್ತು ಅವಶ್ಯಕತೆ ಇದೆ. ಹಾಗಾದಲ್ಲಿ ಮಾತ್ರ ದೇಶದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿರುವ ಭ್ರಷ್ಟಾಚಾರ, ದುರ್ನಡತೆ, ಅನ್ಯಾಯ, ಅಕ್ರಮ, ಸ್ವಜನಪಕ್ಷಪಾತ ಮುಂತಾದ ಸಮಸ್ಯೆಗಳನ್ನು ಹತ್ತಿಕ್ಕಲು ಸಾಧ್ಯ.

## ಜಮ್ಮು ಮತ್ತು ಕಾಶ್ಮೀರ ವಿವಾದ

ಭಾರತ ಮತ್ತು ಪಾಕಿಸ್ತಾನ ಸಂಬಂಧ ಹದಗೆಡಲು ಪ್ರಮುಖವಾದ ಕಾರಣವೆಂದರೆ ಜಮ್ಮು–ಕಾಶ್ಮೀರ ವಿವಾದ. ಭಾರತ ವಿಭಜನೆಯಾದಾಗ ಇದ್ದ ದೇಶೀಯ ಸಂಸ್ಥಾನಗಳು 680. ಈ ಸಂಸ್ಥಾನಗಳು ಯಾವುದೇ ಎರಡು ದೇಶಗಳನ್ನು ಸೇರಲು ಸ್ವಾತಂತ್ರ್ಯ ನೀಡಲಾಯಿತು. ದೇಶೀಯ ಸಂಸ್ಥಾನಗಳ ಒಟ್ಟುಗೂಡುವಿಕೆಗಾಗಿ ಭಾರತದ ಉಕ್ಕಿನ ಮನುಷ್ಯ 'ಸರ್ದಾರ್‌ವಲ್ಲಭಭಾಯಿ ಪಟೇಲರು' ಕಾರ್ಯ ಯೋಜನೆಯನ್ನು ತಯಾರಿಸಿದರು. ಜುನಾಗಡ ಸಂಸ್ಥಾನದಲ್ಲಿಯ ಅರಸ ಪಾಕಿಸ್ತಾನವನ್ನು ಸೇರಲು ಇಚ್ಛಿಸಿದನು. ಆದರೆ ಅಲ್ಲಿನ ಬಹುಸಂಖ್ಯಾತ ಹಿಂದೂಗಳು ಭಾರತ ಸೇರಲು ಇಚ್ಛಿಸಿದಾಗ ಈ ಸಂಸ್ಥಾನ ಭಾರತಕ್ಕೆ ಸೇರಿತು.

ಜಮ್ಮು ಮತ್ತು ಕಾಶ್ಮೀರದ ಅರಸು ರಾಜಾ ಹರಿಸಿಂಗನು ಪಟೇಲರನ್ನು ಭೇಟಿಯಾಗಿ ಭಾರತಕ್ಕೆ ಸೇರುವ ಇಂಗಿತ ವ್ಯಕ್ತಪಡಿಸಿದನು. ಇದೇ ಸಂದರ್ಭದಲ್ಲಿ ಪಾಕಿಸ್ತಾನದ ಸೈನ್ಯಾಧಿಕಾರಿ ಅಕ್ಬರ್‌ಖಾನನು ಗುಡ್ಡಗಾಡು ಸೈನಿಕರ ಬೆಂಬಲದೊಂದಿಗೆ 1947 ಅಕ್ಟೋಬರ್ 23ರಂದು ಅನಿರೀಕ್ಷಿತವಾಗಿ ದಾಳಿಯನ್ನಿಟ್ಟರು. ಆಗ ಭಾರತೀಯ ಸೈನ್ಯ ರಾಜ ಹರಿಸಿಂಗನ ರಕ್ಷಣೆಗೆ ಧಾವಿಸಿ 1947 ಅಕ್ಟೋಬರ್ 27ರಂದು ಪಾಕ್ ಸೈನ್ಯವನ್ನು ಸೋಲಿಸಿದರು. ಈಗಾಗಲೇ ಭಾರತ ಮತ್ತು ಪಾಕ್ ಮಧ್ಯೆ ರ್‍ಯಾಡ್ ಕ್ಲಿಫ್ ರೇಖೆ ಎಳೆಯಲಾಗಿತ್ತು. ಪಾಕಿಸ್ತಾನ ವಿಶ್ವಸಂಸ್ಥೆಯ ಮೊರೆ ಹೋಯಿತು. ಯುಎನ್‌ಓ ನಿಖರವಾದ ಯಾವುದೇ ನಿರ್ಧಾರ ತೆಗೆದುಕೊಳ್ಳಲಿಲ್ಲ. ನೆಹರು ಅವರು ಭಾರತೀಯ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡರು. ಇದರಿಂದ ತಾತ್ಕಾಲಿಕವಾಗಿ ಯುದ್ಧ ನಿಲುಗಡೆಯಾಯಿತು. ಆದರೆ ಕಾಶ್ಮೀರ ಮಾತ್ರ 65% ಭಾರತದಲ್ಲಿಯೂ 35% ಪಾಕಿಸ್ತಾನದಲ್ಲಿಯೂ ಉಳಿದುಕೊಂಡಿತು. 1965ರಲ್ಲಿ ಪಾಕಿಸ್ತಾನ



downloaded from: www.kpscvaani.com

ಮತ್ತೆ ಕಾಶ್ಮೀರ ಆಕ್ರಮಣಕ್ಕೆ ಮತ್ತೊಮ್ಮೆ ಪ್ರಯತ್ನಿಸಿ ವಿಫಲತೆಯನ್ನು ಹೊಂದಿತ್ತು. 1966ರಲ್ಲಿ ಮಾತುಕತೆಯ ಮುಖಾಂತರ ಸಮಸ್ಯೆ ಪರಿಹಾರಕ್ಕಾಗಿ ಭಾರತದ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ಪಾಕಿಸ್ತಾನದ ಅಯೂಬ್‌ಖಾನ್‌ರು 'ತಾಷ್ಕೆಂಟ್' ಒಪ್ಪಂದಕ್ಕೆ ಸಹಿ ಮಾಡಿದರು. ಮುಂದೆ ಪಾಕಿಸ್ತಾನದ ಬೆಂಬಲಿತ ಭಯೋತ್ಪಾದಕರು ಕಾಶ್ಮೀರ ಕಣಿವೆಯಲ್ಲಿ 1999ರಲ್ಲಿ ಕಾರ್ಗಿಲ್ ಯುದ್ಧ ಸಾರಿದರು. ಈ ಯುದ್ಧದಲ್ಲಿ ಪಾಕಿಸ್ತಾನದ ಸೈನ್ಯ ಸಂಪೂರ್ಣವಾಗಿ ಸೋಲನ್ನು ಅನುಭವಿಸಿತ್ತು. ಇಂದು ಪಾಕಿಸ್ತಾನ ಅಕ್ರಮಿತ 35% ಭೂ ಭಾಗಕ್ಕೆ P.O.K. (Pakistan Occupied Kashmir) ಎಂದು ಕರೆಯುವರು.

## ಬಾಂಗ್ಲಾ ಸ್ವಾತಂತ್ರ್ಯ

1947ರಲ್ಲಿ ಬ್ರಿಟಿಷರು ಎರಡು ಭಾಗಗಳನ್ನು ಮಾಡಿದಾಗ ಪಾಕಿಸ್ತಾನಕ್ಕೆ ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನ ಎಂದು ಕರೆದರು. ಪೂರ್ವ ಪಾಕಿಸ್ತಾನ ಪೂರ್ವ ಬಂಗಾಳ ಮತ್ತು ಅಸ್ಸಾಂನ ಜಿಲ್ಲೆಗಳನ್ನೊಳಗೊಂಡಿತ್ತು. ಇದು 1971ರಲ್ಲಿ ಜಿಯಾ-ಉರ್-ರೆಹಮಾನ್‌ರ ನೇತೃತ್ವದಲ್ಲಿ ಸ್ವಾತಂತ್ರ್ಯ ಪಡೆದುಕೊಂಡು 'ಬಾಂಗ್ಲಾದೇಶ'ವೆನಿಸಿಕೊಂಡಿತು.

## ಭಾರತ-ಪಾಕ್ ಜಲವಿವಾದ

1960ರಲ್ಲಿ ಭಾರತ ಮತ್ತು ಪಾಕಿಸ್ತಾನ ಮಧ್ಯದ ಜಲವಿವಾದ ಒಂದು ಯಶಸ್ವಿ ನಿರ್ಣಯವಾಗಿದೆ. 1947ರಲ್ಲಿ ದೇಶ ವಿಭಜನೆಯಾದಾಗ ನೀರಿನ ಪಾತ್ರ ಭಾರತದಲ್ಲಿಯೂ ಮತ್ತು ನದಿ ಪಾತ್ರದ ಮೇಲ್ಭಾಗ ಮಾತ್ರ ಪಾಕಿಸ್ತಾನದಲ್ಲಿ ಉಳಿದುಕೊಂಡಿತು. ಇದು 1960 ಸೆಪ್ಟೆಂಬರ್ 19 ರಂದು ವಿಶ್ವಸಂಸ್ಥೆ ಸಹಕಾರದೊಂದಿಗೆ ಪರಿಹಾರ ಕಂಡಿತ್ತು. ಭಾರತ ಸರ್ಕಾರ 'ಟೂಲ್ ಬುಲ್ ನೆವಿಗೇಷನ್ ಪ್ರಾಜೆಕ್ಟ್' ಆಣೆಕಟ್ಟು ನಿರ್ಮಿಸಲು ಟೆಂಡರ್ ಕರೆಯಿತು. ಪಾಕ್ ವಿರೋಧಿಸಿತು. ಅಲ್ಲದೆ 'ಉಲ್ಲಾರ್ ಬ್ಯಾರೇಜ್' ನಿರ್ಮಾಣಕ್ಕೂ ಪಾಕ್ ಅಡ್ಡಿಯಾಯಿತು.

## ಸಿಮ್ಲಾ ಒಪ್ಪಂದ

1971ರಲ್ಲಿ ಬಾಂಗ್ಲಾ ವಿಭಜನೆಯಾದ ನಂತರ, ಭಾರತ-ಪಾಕಿಸ್ತಾನ ಸಂಬಂಧ ನಿಧಾನಗತಿಯ ಬೆಳವಣಿಗೆಯನ್ನು ಹೊಂದಿದವು. 1972ರಲ್ಲಿ ಭಾರತದ ಪ್ರಧಾನಿ ಇಂದಿರಾಗಾಂಧಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಜುಲ್ಫಿಕರ್ ಬುಟ್ಟೊ ಬೆಟ್ಟಗಳ ಕೇಂದ್ರ 'ಸಿಮ್ಲಾ'ದಲ್ಲಿ ಒಪ್ಪಂದವನ್ನು ಮಾಡಿಕೊಂಡರು. ಭಾರತದಲ್ಲಿಯ ಪಾಕಿಸ್ತಾನಿಯವರನ್ನು



downloaded from: www.kpscvaani.com

(90,000) ಬಿಡುಗಡೆಗೊಳಿಸಲಾಯಿತು. ಎರಡೂ ರಾಷ್ಟ್ರಗಳು ಶಾಂತಿಯುತ ಮಾರ್ಗಗಳಲ್ಲಿ ಬಹುಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳುವುದರ ಮೂಲಕ ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದವು ಮತ್ತು 3ನೇ ದೇಶಕ್ಕೆ ಮಧ್ಯ ಆಸ್ಪದವಲ್ಲ ಎಂಬುದನ್ನು ಸ್ಪಷ್ಟಪಡಿಸಿದವು. ನಂತರ 1976ರಲ್ಲಿ ರಾಜತಾಂತ್ರಿಕ ಮತ್ತು ವ್ಯಾಪಾರ ಸಂಬಂಧಗಳನ್ನು ಮರುಜೋಡಿಸಲಾಯಿತು.

## ಭಾರತ–ಪಾಕಿಸ್ತಾನ ಮಾತುಕತೆ

1985ರಲ್ಲಿ ಬೆನಿಜಿರ್ ಬುಟ್ಟೊ ಮತ್ತು ಭಾರತದ ಪ್ರಧಾನಿ ರಾಜೀವ್‌ಗಾಂಧಿ ಪರಸ್ಪರ ಆಕ್ರಮಣ ತಡೆ ಮತ್ತು ಸಾಂಸ್ಕೃತಿಕ ಹಾಗೂ ವೈಚಾರಿಕ ವಿಷಯಗಳ ವರ್ಗಾವಣೆ ಮತ್ತು ಆರಂಭದ ಕುರಿತು ಚರ್ಚೆ, 1997ರಲ್ಲಿ ಭಾರತ ಪಾಕಿಸ್ತಾನ ವಿದೇಶಾಂಗ ಕಾರ್ಯದರ್ಶಿಗಳ ಸಭೆ ಸೇರಿ ಕಾಶ್ಮೀರಕ್ಕೆ ಸಂಬಂಧಿಸಿದಂತೆ ಅಲ್ಲದೆ ವಿವಿಧ ವಿಷಯಗಳ ಚರ್ಚೆಯನ್ನು ಮಾಡಲಾಯಿತು.

## ಗುಜರಾತ್ ಭೂಕಂಪ 2001

2001ರಲ್ಲಿ ಗುಜರಾತಿನಲ್ಲಿ ಭೂಕಂಪ ಸಂಭವಿಸಿದಾಗ ಪರ್ವೇಜ್ ಮುಷರಫ್‌ರವರು ಇಸ್ಲಾಮಾಬಾದ್‌ನಿಂದ ಅಹಮದಾಬಾದಿಗೆ 200 ಟನ್ ಆಹಾರ ಧಾನ್ಯ ಮತ್ತು 2000 ಬ್ಲಾಂಕೆಟ್‌ಗಳನ್ನು ಕಳುಹಿಸಿದರು.

## ಪಾಕಿಸ್ತಾನದಲ್ಲಿ ಭೂಕಂಪ – 2005

ಪಾಕಿಸ್ತಾನವು 2005ರಲ್ಲಿ ಭೂಕಂಪಕ್ಕೆ ತುತ್ತಾದಾಗ ಭಾರತವು 25 ಟನ್‌ಗಳಿಗಿಂತ ಹೆಚ್ಚು ಆಹಾರ ಧಾನ್ಯಗಳು, ಔಷಧಿಗಳು ಮತ್ತು ಬ್ಲಾಂಕೆಟ್‌ಗಳನ್ನು ನೀಡಿತ್ತು.

- 7 ಟ್ರಕ್‌ಗಳಲ್ಲಿ ಔಷಧವನ್ನು ನೀಡಲಾಯಿತು.
- ರೈಲ್ವೆ ಸಹಾಯದಿಂದ 'ವಾಘಾ' ಗಡಿ ಮೂಲಕ 5000 ಬ್ಲಾಂಕೆಟ್ಸ್, 370 ಟೆಂಟ್ಸ್ 5 ಟನ್ ಪ್ಲಾಸ್ಟಿಕ್ ಶೀಟ್ ಮತ್ತು 12 ಟನ್ ಔಷಧಿಗಳ ಸಹಾಯ ನೀಡಿತ್ತು.



downloaded from: www.kpscvaani.com

## ಭಾರತ–ಪಾಕಿಸ್ತಾನ ಮಧ್ಯ ರೈಲ್ವೆ ಮತ್ತು ಬಸ್ ವ್ಯವಸ್ಥೆ

ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಬಸ್ ಮತ್ತು ರೈಲ್ವೆ ವ್ಯವಸ್ಥೆ ಏರ್ಪಡಿಸಲಾಯಿತು. ಭಾರತದ ವಶದಲ್ಲಿರುವ ಶ್ರೀನಗರದಿಂದ, ಪಾಕ್ ವಶದಲ್ಲಿರುವ ಮುಜಾಫರ್‌ಬಾದ್‌ಗೆ 'ಬಸ್' ಸಂಪರ್ಕ ಕಲ್ಪಿಸಲಾಯಿತು. ಹಾಗೂ ಭಾರತದ ನವದೆಹಲಿಯಿಂದ, ಪಾಕಿಸ್ತಾನದ ಲಾಹೋರಿಗೆ 'ಸಂಝೋತಾ' ಎಕ್ಸ್‌ಪ್ರೆಸ್ ರೈಲು ಸಂಪರ್ಕವೇರ್ಪಡಿಸಲಾಯಿತು. ಇದು ಭಾರತ ಮತ್ತು ಪಾಕಿಸ್ತಾನದ ಮಧ್ಯದ ಸಂಬಂಧ ತಿಳಿಯಾಗಲು ನೆರವಾಯಿತು.

## ಮುಂಬೈ ದಾಳಿ – 2008

ಪಾಕಿಸ್ತಾನದ ಬೆಂಬಲಿತ ಭಯೋತ್ಪಾದಕ ಸಂಘಟನೆಯಾದ ಲಷ್ಕರ್–ಎ–ತೊಯ್ಬಾದ 10 ಜನ ಭಯೋತ್ಪಾದಕರು 26 ನವೆಂಬರ್ 2008ರಂದು ಮುಂಬೈ ಮೇಲೆ ದಾಳಿಮಾಡಿದರು. ಈ ದಾಳಿಯಲ್ಲಿ 173 ಜನ ಸಾವಿಗೀಡಾದರು ಹಾಗೂ ಸುಮಾರು 308ಕ್ಕೂ ಹೆಚ್ಚು ಜನರು ಗಾಯಗೊಂಡರು. ಈ ದಾಳಿಯಲ್ಲಿ ಜೀವಂತವಾಗಿ ಸಿಕ್ಕಿ ಬಿದ್ದ 'ಅಜ್ಮಲ್ ಕಸಬ್' ಪಾಕಿಸ್ತಾನ ಪ್ರಜೆ ಎಂಬುದು ಸ್ಪಷ್ಟವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪುರಾವೆಗಳು ದೊರೆತಿವೆ. ಈ ದಾಳಿಗಳಿಗೆ ಪಾಕಿಸ್ತಾನದ ಕುಮ್ಮಕ್ಕಿರುವುದು ಸಾಬೀತಾಗಿದೆ. ಆದರೆ ಪಾಕಿಸ್ತಾನ ಮಾತ್ರ ಈ ಎಲ್ಲಾ ವಾದಗಳನ್ನು ತಳ್ಳಿಹಾಕುತ್ತಿದೆ.

## ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳು

1. ಅಕ್ಟೋಬರ್ 2001ರಲ್ಲಿ ಕಾರಿನಲ್ಲಿ ಬಾಂಬ್ ಇರಿಸಿ ಜಮ್ಮು ಮತ್ತು ಕಾಶ್ಮೀರದ ಅಸೆಂಬ್ಲಿಯ ಮೇಲೆ ದಾಳಿ.
2. 21 ಮಾರ್ಚ್ 1997ರಲ್ಲಿ ಸಂಗ್ರಾಂಪುರ ಕಗ್ಗೊಲೆ
3. 13ನೇ ಜುಲೈ 2003ರಲ್ಲಿ ಲಷ್ಕರ್–ಎ–ತೊಯ್ಬಾದಿಂದ ಕಾಸಿಂ ನಗರದ ಮಾರುಕಟ್ಟೆ ಮೇಲೆ ದಾಳಿ. 27 ಮಂದಿ ಸಾವು.
4. ಹುರಿಯತ್ ಕಾನ್ಫರೆನ್ಸ್ ಮುಖಂಡರಾಗಿದ್ದ ಅಬ್ದುಲ್ ಘಾನಿಲೋನ್‌ರವರ ಕಗ್ಗೊಲೆ.
5. 20 ಜುಲೈ 2005ರಲ್ಲಿ ಶ್ರೀನಗರದಲ್ಲಿಯ ಭಾರತದ ಸೈನಿಕರ ವಾಹನದ ಮೇಲೆ ದಾಳಿ. 4 ಜನ ಸೈನಿಕರ ಮರಣ.
6. 29 ಜುಲೈ 2005ರಲ್ಲಿ ಬಹದ್‌ಷಾ ಚೌಕಿನಲ್ಲಿ ಭಯೋತ್ಪಾದಕರ ಆಕ್ರಮಣ. 17 ಜನರ ಮರಣ.
7. ಅಕ್ಟೋಬರ್ 2005ರಲ್ಲಿ ಗುಲಾಮ್ ನಬಿಲೋಣೆಯವರ ಕಗ್ಗೊಲೆ.



downloaded from: www.kpscvaani.com

2001ರಲ್ಲಿ ಭಾರತದ ಸಂಸತ್ತಿನ ಮೇಲೆ ದಾಳಿ ನಡೆಸಿದರು. ಈ ಎಲ್ಲ ಭಯೋತ್ಪಾದಕ ಚಟುವಟಿಕೆಗಳು ಪಾಕಿಸ್ತಾನದ ಬೆಂಬಲದೊಂದಿಗೆ ನಡೆದಿವೆ ಮತ್ತು ನಡೆಯುತ್ತಲಿವೆ.
ಉದಾ: ಆಲ್‌ಖೈದಾ ಮುಖಂಡನಾಗಿದ್ದ ಒಸಾಮ್-ಬಿನ್-ಲಾಡೆನ್‌ನ್ನು 02–05–2011ರಂದು ಪಾಕಿಸ್ತಾನದ ನೆಲದಲ್ಲಿಯೇ ಅಮೆರಿಕ ಸೇನೆ ಕಾರ್ಯಾಚರಣೆ ಕೈಗೊಂಡು ಆತನನ್ನು ಹತ್ಯೆ ಮಾಡಿರುವುದನ್ನು ಗಮನಿಸಬಹುದು.

## ಭಾರತ–ಪಾಕಿಸ್ತಾನ ಸಂಬಂಧ ವೃದ್ಧಿಗೆ ಸಲಹೆಗಳು

1. ಎರಡು ದೇಶಗಳ ಸಂಬಂಧ ಹಳಸಿರಲು "ಕಾಶ್ಮೀರ" ಪ್ರಮುಖ ಕಾರಣವಾದುದರಿಂದ ಇದನ್ನು ಬಗೆಹರಿಸಲು ಪ್ರಥಮ ಆದ್ಯತೆ ನೀಡಬೇಕು. ಕಾಶ್ಮೀರವನ್ನು ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಳ್ಳಬಾರದು. ತಮ್ಮ ತಮ್ಮ ಸೈನ್ಯವನ್ನು ವಾಪಸ್ಸು ಕರೆಯಿಸಿಕೊಳ್ಳಬೇಕು. ಕಾಶ್ಮೀರ ಕುರಿತ ಏನೇ ವಿವಾದ ನಡೆದರೂ ಅದರ ನಾಯಕರು ಪಾಲ್ಗೊಳ್ಳಬೇಕು. ಮೇಲಾಗಿ ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೆ 75,000ಕ್ಕೂ ಹೆಚ್ಚು ಜನ ಮಡಿದಿದ್ದಾರೆ.
2. ಪಾಕಿಸ್ತಾನವು ತನ್ನ ನೆಲದಲ್ಲಿ ಉಗ್ರಗಾಮಿಗಳ ಚಟುವಟಿಕೆಗಳು ತರಬೇತಿ ಕ್ಯಾಂಪುಗಳು ಇರುವುದನ್ನು ಒಪ್ಪಿಕೊಂಡು ಅವುಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಇದು ಭಾರತದಕ್ಕೆ ಅಷ್ಟೇ ಅಪಾಯವಲ್ಲ. ಬದಲಾಗಿ ಪಾಕಿಸ್ತಾನಕ್ಕೆ ಅಪಾಯಕಾರಿಯಾಗಿದೆ. ಇದಕ್ಕೆ ದಿನನಿತ್ಯ ನಡೆವ ಬಾಂಬ್ ದಾಳಿಗಳೇ ಸಾಕ್ಷಿ.
3. ಭಾರತ–ಪಾಕ್ ಎರಡೂ ರಾಷ್ಟ್ರಗಳು ಭಯೋತ್ಪಾದನೆಯನ್ನು ಮಟ್ಟಹಾಕಲು ಕಂಕಣಬದ್ಧವಾಗಿ ನಿಲ್ಲಬೇಕು.
4. ಎರಡೂ ದೇಶಗಳ ಮಧ್ಯೆ ಎಷ್ಟು ಸಮಸ್ಯೆಗಳು ಇದ್ದರೂ ಸಹ ಮಾತುಕತೆಗಳ ಮೂಲಕ ಪರಿಹರಿಸಿಕೊಳ್ಳಬೇಕು. ಕಾರ್ಯಾಚರಣೆ, ಯುದ್ಧಗಳಿಗೆ ಮೊರೆ ಹೋಗಬಾರದು. ಇದರಿಂದ ಜನಸಾಮಾನ್ಯರ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.



downloaded from: www.kpscvaani.com

## ಭಾರತದಲ್ಲಿ ನಕ್ಸಲೈಟ್–ಮಾವೋವಾದಿ ಕ್ರಾಂತಿಕಾರಿಗಳು

ಭಾರತವು ಇಡೀ ಜಗತ್ತಿಗೆ ಶಾಂತಿಮಂತ್ರದ ಜಪವನ್ನ ಕೊಟ್ಟಂತಹ ದೇಶ. ಗಾಂಧೀ, ಬುದ್ಧ, ಮಹಾವೀರ, ಮಧ್ವಾಚಾರ್ಯ ಹಾಗೂ ಬಸವಣ್ಣ, ಅಕ್ಕಮಹಾದೇವಿಯಂತಹವರು ಇನ್ನೂ ಅನೇಕ ಸಾಧುಸಂತರಿಗೆ ಜನ ನೀಡಿದ ಹಾಗೂ ಸೌಹಾರ್ದತೆಯ ದೇಶ. ಇಂತಹ ರಾಷ್ಟ್ರದಲ್ಲೂ ಕೆಲವೊಂದು ಉಗ್ರ ಕ್ರಾಂತಿಕಾರಿ ಸಂಘಟನೆಗಳು ಹುಟ್ಟಿ ಅವುಗಳು ಇಂದು ದೇಶದ ಸಮಸ್ಯೆಯಾಗಿ ಕಾಡುತ್ತಿವೆ ಎಂದರೆ ಇದಕ್ಕಿಂತ ದೌರ್ಭಾಗ್ಯ ಮತ್ತೊಂದಿಲ್ಲವೆಂದು ಹೇಳಬಹುದಾಗಿದೆ.

ಪಶ್ಚಿಮಬಂಗಾಳದ ನಕ್ಸಲ್ ಬಾರಿ ಎಂಬ ಪುಟ್ಟಗ್ರಾಮದಲ್ಲಿ ನಡೆದ ಘಟನೆಯಿಂದ ನಕ್ಸಲೈಟ್ ಎಂಬ ಪದ ಬೆಳಕಿಗೆ ಬಂದಿತು. 1967 ಮೇ 25ರಂದು ನಡೆದ ಈ ಘಟನೆ ಒಂದು ಭೂವಿವಾದಕ್ಕೆ ಸಂಬಂಧಿಸಿದ್ದಾಗಿದ್ದು ಈ ಭೂ ವಿವಾದದಲ್ಲಿ ಒಬ್ಬ ರೈತನ ಹತ್ಯೆ ಮಾಡಲಾಯಿತು. ಇದೇ ಗ್ರಾಮದಲ್ಲಿ ಪೊಲೀಸರ ಮೇಲೆ ದಾಳಿ ಮಾಡಿದ ಚಾರು ಮಜುಂಗಾರ್, ಕಾನು ಸನ್ಯಾಲ್ ನೇತೃತ್ವದ ಸಿಪಿಐ (JA) ತಂಡ ಮಾವೋವಾದಿ ತತ್ವಗಳಿಂದ ಪ್ರಭಾವಿತಗೊಂಡಿತ್ತು. ಅದೇ ವರ್ಷ ನಕ್ಸಲೈಟ್‌ಗಳಿಂದ ಕಮ್ಯುನಿಸ್ಟ್ ಕ್ರಾಂತಿಕಾರಿಗಳಿಂದ ಅಖಿಲ ಭಾರತ ಸಮನ್ವಯ ಸಮಿತಿಯನ್ನು ರಚಿಸಿ ಆ ನಂತರ ಸಿಪಿಐ (JA)ನಿಂದ ಹೊರನಡೆದು 1980 ಏಪ್ರಿಲ್ 22ರಂದು ಆಂಧ್ರಪ್ರದೇಶದ ಕೊಂಡಪಳ್ಳಿ ಸೀತಾರಾಮಯ್ಯರವರಿಂದ ಪೀಪಲ್ಸ್‌ವಾರ್ ಗ್ರೂಪ್‌ನ್ನು ಸ್ಥಾಪಿಸಲಾಯಿತು. ನಕ್ಸಲೈಟ್ಸ್‌ಗಳು ಮಾವೋವಾದಿಗಳಾಗಿ ಪರಿವರ್ತನೆಗೊಳ್ಳಲಿಲ್ಲ. ನಕ್ಸಲೈಟ್‌ಗಳೇ ಮಾವೋವಾದಿಗಳು, ಮಾವೋವಾದಿಗಳೇ ನಕ್ಸಲೈಟ್‌ಗಳು. ಈಗ ನಕ್ಸಲೈಟ್ ಎಂದು ಕರೆಯಲ್ಪಡುವವರೆಲ್ಲಾ ಮಾವೋವಾದಿಗಳೇ ಆಗಿರುವುದು ವಿಶೇಷ. ಇಂದು ಮಾವೋವಾದಿಗಳೆಲ್ಲಾ ಎಲ್ಲೋ ಒಂದು ಕಡೆ ನಕ್ಸಲೈಟ್ಸ್‌ಗಳಾಗಿದ್ದಾರೆ. ಈ ಇಬ್ಬರ ನಡುವೆ ಒಂದು ಸಣ್ಣ ವ್ಯತ್ಯಾಸವಿದ್ದರೂ ಇರಬಹುದು.

ಮಾವೋವಾದವೆಂಬುದು ಚೀನಾದಿಂದ ಬಂದಂತಹುದಾಗಿದೆ. ಮಾವೋತ್ಸೆತುಂಗ್ ಚೀನಾದ ಕ್ರಾಂತಿಕಾರಿ ಕಮ್ಯುನಿಸ್ಟ್ ಮುಖಂಡ ಅವನು ಚೀನಾ ಗಣರಾಜ್ಯವನ್ನು 1949ರಿಂದ 1976ರವರೆಗೆ ಮುನ್ನಡೆಸಿದನು. ಮಾರ್ಕ್ಸ್‌ವಾದ ಲೆನಿನ್ ವಾದಕ್ಕೆ ಮಿಲಿಟರಿ ಕಾರ್ಯತಂತ್ರಗಳಿಗೆ ಅವನ ಕೊಡುಗೆ ಮತ್ತು ಅವನ ತತ್ವಗಳೇ ಮಾವೋವಾದ. ಮಾವೋ ತನ್ನ ಕಾಲದಲ್ಲಿ ಎಷ್ಟು ಜನಪ್ರಿಯವಾಗಿದ್ದರೋ ಅಷ್ಟೇ ವಿವಾದಗಳ ಕೇಂದ್ರಬಿಂದುವಾಗಿದ್ದನು. ಆತನನ್ನು ಕ್ರಾಂತಿಕಾರಿ, ದೇಶದ ರಕ್ಷಕ, ರಾಜಕೀಯ ನಿಪುಣ, ಎಂದೆಲ್ಲಾ ಗೌರವಗಳು



downloaded from: www.kpscvaani.com

ಈಗಲೂ ಇದೆ. ಅವನ ತತ್ವಗಳಿಂದಾಗಿಯೇ ಚೀನಾ ಆರ್ಥಿಕವಾಗಿ ಮುಂದುವರಿಯಲು ಸಾಧ್ಯವಾಯಿತು. ಅವನ ತತ್ವಗಳ ಪ್ರಭಾವಕ್ಕೆ ಒಳಗಾದ ಜನ 1949ರಿಂದ 1976ರವರೆಗೆ ಸುಮಾರು 5000 ದಿಂದ 70 ಮಿಲಿಯನ್ ಜನರು ಸಾವಿಗೀಡಾದರು.

ಮಾವೋವಾದವೆಂಬುದು, ಇಂದು ನಿನ್ನೆಯದಲ್ಲ. ಇದು ಮೊದಲಿಗೆ ದೇಶದಲ್ಲಿ 11 ಪ್ರದೇಶಗಳು ಒಳಗೊಂಡಂತೆ ದೇಶದ 40 ಜಿಲ್ಲೆಯಲ್ಲಿ ಹುಟ್ಟುಕೊಂಡಿತ್ತು. ಆದರೆ ಇದು ಒಂದು 223 ಜಿಲ್ಲೆಗಳಿಗೆ ವಿಸ್ತರಿಸಿ ಇಷ್ಟು ಜಿಲ್ಲೆಗಳಲ್ಲೂ ತನ್ನ ಹಿಂಸಾಚಾರವನ್ನು ಮುಂದುವರೆಸಿಕೊಂಡು ಬರುತ್ತಿದೆ. ಇದರಲ್ಲಿ 70 ಜಿಲ್ಲೆಗಳ ಸ್ಥಿತಿಯಂತೂ ಹೇಳಲಾಗದಂತಹ ಸ್ಥಿತಿಯನ್ನು ಮುಟ್ಟಿದೆ. ಇನ್ನು 40 ಜಿಲ್ಲೆಗಳನ್ನು ಅತಿ ಸೂಕ್ಷ್ಮ ಜಿಲ್ಲೆಗಳೆಂದು ಗುರುತಿಸಲಾಗಿದೆ. ಛತ್ತೀಸ್‌ಘಡ, ಬಿಹಾರ, ಒರಿಸ್ಸಾ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಹಿಂಸಾಚಾರ ವ್ಯಾಪಕವಾಗಿದ್ದು ಆಂಧ್ರಪ್ರದೇಶದ ಹಿಂಸಾಚಾರ ನಡೆಸುವವರನ್ನು ನಕ್ಸಲೈಟ್‌ಗಳೆಂದು ಛತ್ತೀಸ್‌ಘಡ ಬಿಹಾರ ಸೇರಿ ಈಶಾನ್ಯ ರಾಜ್ಯಗಳಲ್ಲಿ ಗುಂಡು ಹಾರಿಸುವವರನ್ನು ಮಾವೋವಾದಿಗಳು ಎಂದು ಕರೆಯುವರು. ಇನ್ನೂ ಛತ್ತೀಸ್‌ಘಡದ ರಾಜ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡರೆ ಮಾವೋವಾದಿಗಳ ಉಪಟಳ ಕಡಿಮೆಯಾಗಬಹುದು ಎಂದು ಹೇಳಲಾಗುತ್ತದೆ.

## ನಕ್ಸಲೈಟ್– ಮಾವೋವಾದ ಬೆಳೆದು ಬಂದ ಬಗೆ

- ನಕ್ಸಲೈಟ್ ಎಂಬುದು 1967 ಮೇ 25 ರಂದು ಪಶ್ಚಿಮಬಂಗಾಳದ ನಕ್ಸಲ್ ಬಾರಿ ಪುಟ್ಟ ಹಳ್ಳಿಯಲ್ಲಿ ಹುಟ್ಟಿಕೊಂಡ ಸಂಘಟನೆ.
- 1980ರಲ್ಲಿ PWG ಸ್ಥಾಪನೆ (Peoples War Group) .
- 1992 ಫೆಬ್ರವರಿ 12ರಂದು ಬಿಹಾರದ ಬಾರಾಗ್ರಾಮದಲ್ಲಿ 36 ಬ್ರಾಹ್ಮಣ ಸಮುದಾಯ ಜನರ ಹತ್ಯೆ.
- 1999 ಮಾರ್ಚ್ 18ರಲ್ಲಿ ಬಿಹಾರದ ಜಿಹಾನಾಬಾದ್ ಜಿಲ್ಲೆಯು 34 ಬ್ರಾಹ್ಮಣ ಸಮುದಾಯ ಜನರ ಹತ್ಯೆ.
- 2004ರಲ್ಲಿ ಛತ್ತೀಸ್‌ಘಡ್ ದಾಂತೇವಾಡ ಜಿಲ್ಲೆಯು 300 ಜನ 50 ಜನ ಪೊಲೀಸರ ಹತ್ಯೆ
- 2005–ರಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ವೆಂಕಟಮ್ಮನಹಳ್ಳಿಯಲ್ಲಿ 7 ಜನ ಪೊಲೀಸರ ಹತ್ಯೆ



downloaded from: www.kpscvaani.com

- 2005 ನವೆಂಬರ್‌ನಲ್ಲಿ ಬಿಹಾರ್‌ನಲ್ಲಿ ಅಧಿಕಾರಿಗಳ ಹತ್ಯೆ.
- 2006ರಲ್ಲಿ ಮಾವೋವಾದಿ ಉಗ್ರರಿಂದ ಸ್ಫೋಟ.
- 2006 ಮಾರ್ಚ್ 24ರಲ್ಲಿ ಛತ್ತೀಸ್‌ಘಡದಲ್ಲಿ 26 ಜನರ ಸಾವು ಮತ್ತು ಅನೇಕ ಊರಿನ ಗ್ರಾಮಸ್ಥರ ಅಪಹರಣ.
- 2006 ಡಿಸೆಂಬರ್‌ನಲ್ಲಿ ಜಾರ್ಖಂಡ್‌ನಲ್ಲಿ ಸ್ಫೋಟ 14 ಜನ ಪೊಲೀಸರ ಸಾವು.
- 2007 ಮಾರ್ಚ್– ಜಾರ್ಖಂಡ್ ಸಂಸದನ ಹತ್ಯೆ
- 2007 ಮಾರ್ಚ್ 5 ರಂದು ಆಂಧ್ರಪ್ರದೇಶದ ಕಾಂಗ್ರೆಸ್ ಮುಖಂಡನ ಹತ್ಯೆ.

ಇನ್ನು 2008 ರಿಂದ 2010ರ ಏಪ್ರಿಲ್ 4ರ ತನಕ ಬಿಹಾರ, ಪಶ್ಚಿಮಬಂಗಾಳ, ಮಹಾರಾಷ್ಟ್ರ, ಜಾರ್ಖಂಡ್, ಒರಿಸ್ಸಾ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಅನೇಕ ಪೊಲೀಸರ ಹತ್ಯೆ ಮತ್ತು ಪ್ಯಾರಾ ಮಿಲಿಟರಿ ಸಶಸ್ತ್ರಧಾರಿಗಳು ಹತ್ಯೆ ಮಾಡಿ ಅನೇಕ ಸ್ಥಳಗಳಲ್ಲಿ ಸ್ಫೋಟಗೊಳಿಸಿ ಒಬ್ಬ ಡಾಕ್ಟರ್ ಹತ್ಯೆಗೈದು ಅನೇಕ ಮನೆಗಳನ್ನು ನೆಲಸಮಗೊಳಿಸುವಲ್ಲಿ ಯಶಸ್ವಿಯಾಗಿದ್ದರು.

2010 ಏಪ್ರಿಲ್ 6ರಂದು ಛತ್ತೀಸ್‌ಘಡ ದಾಂತೇವಾಡ ಜಿಲ್ಲೆಯ ಚಿಂತಲ್ನಾಡ್‌ನಲ್ಲಿ ಸಾಮೂಹಿಕ ಹತ್ಯೆಗೈದರು. ಅಲ್ಲದೇ, ಈ ಘಟನೆಯಲ್ಲಿ ಕೇಂದ್ರ ಮೀಸಲುಪಡೆಯ 78 ಸಶಸ್ತ್ರದಾರಿಗಳು ಮಾವೋ ಉಗ್ರರ ದಾಳಿಗೆ ಬಲಿಯಾದರು. ಇದನ್ನು ಅತ್ಯಂತ ಭೀಕರ ಘಟನೆ ಎಂದೇ ಹೇಳಬಹುದು.

## ಆಪರೇಷನ್ ಗ್ರೀನ್ ಹಂಟ್

ಇದು ನಕ್ಸಲೈಟ್‌ಗಳ ವಿರುದ್ಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರಂಭಿಸಲಾಗಿರುವ ಪ್ರಮುಖ ಆಂದೋಲನವಾಗಿದೆ. ಈ ಆಂದೋಲನವು ಛತ್ತೀಸ್‌ಘಡದಲ್ಲಿ 'ಸರ್ಚ್ ಮತ್ತು ಕಾಂಟ್' ಕಾರ್ಯಾಚರಣೆಗಾಗಿ 2009ರ ಜುಲೈನಲ್ಲಿ ಆರಂಭವಾಯಿತು. ನಂತರ ದಾಂತೇವಾಡದಲ್ಲಿ ನಡೆದ ಘಟನೆಯಿಂದಾಗಿ ಪತ್ರಿಕೆಗಳು ಇದನ್ನು 'ಆಪರೇಷನ್ ಗ್ರೀನ್ ಹಂಟ್' ಎಂದು ಬರೆದವು. ಇದು ಕೇವಲ ಪತ್ರಿಕೆಗಳಿಂದಾಗಿ ಇಟ್ಟ ಹೆಸರೇ ವಿನಃ ಯಾವುದೇ ಇಲಾಖೆ ಈ ಕಾರ್ಯಾಚರಣೆ ಮಧ್ಯಭಾರತದಲ್ಲಿ ಈಗಲೂ ಜಾರಿಯಲ್ಲಿದೆ. ಛತ್ತೀಸ್‌ಘಡ್, ಜಾರ್ಖಂಡ್, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಗಡಿಗಳಲ್ಲಿ ಅರೆಸೇನಾಪಡೆಗಳು ನಕ್ಸಲೈಟ್ ವಿರುದ್ಧ ಕಾರ್ಯಾಚರಣೆ ನಡೆಸುತ್ತಿವೆ. ಈ ಕಾರ್ಯಾಚರಣೆಯನ್ನು ಛತ್ತೀಸ್‌ಘಡ ಮತ್ತು ಮಹಾರಾಷ್ಟ್ರಗಳಲ್ಲಿ 'ಪೊಲೀಸ್ ವೀಕ್' ಎಂದು



downloaded from: www.kpscvaani.com

ಕರೆಯುವರು. ಆದರೂ ಈ 'ಆಪರೇಷನ್ ಗ್ರೀನ್ ಹಂಟ್' ಕಾರ್ಯಾಚರಣೆಯನ್ನು ಕೂಡ ಇತ್ತೀಚಿನ ದಿನಗಳಲ್ಲಿ ತನ್ನ ಬಲಿಷ್ಠತೆಯನ್ನು ಕಳೆದುಕೊಳ್ಳುತ್ತಿದೆ ಎಂದು ಹೇಳಬಹುದಾಗಿದೆ. ಅಲ್ಲದೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಪೊಲೀಸ್ ಕಾರ್ಯಾಚರಣೆಗಳು ನಕ್ಸಲರ ಮುಂದೆ ಏನೂ ಮಾಡಲಾಗದಂತಹ ಸ್ಥಿತಿಯಲ್ಲಿವೆ. 40 ಜನರ ನಕ್ಸಲ್ ಕಾರ್ಯಾಚರಣೆ ತಂಡಕ್ಕೆ ಬದಲಾಗಿ ನಕ್ಸಲರು 200 ಮಂದಿಯ ತಂಡವನ್ನು ಕಟ್ಟಿಕೊಂಡು ಪೊಲೀಸರ ವಿರುದ್ಧ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವರು. ಇದು ಉದ್ಭವಿಸುತ್ತಿದೆ. ಹಾಗಾಗಿ ಅರೆಬರೆ ಅಸಮರ್ಪಕ ಭದ್ರತಾ ವ್ಯವಸ್ಥೆಯಿಂದಾಗಿ ಪೊಲೀಸ್ ಪಡೆಗಳು ಅಸಹಾಯಕವಾಗುತ್ತವೆ.

ಮಾವೋವಾದಿ ಉಗ್ರರು ಹಿಂದಿನಂತೆ ಬಂದೂಕು ಧಾರಿಗಳಾಗಿ ಅಡವಿಗಳಲ್ಲಿ ಜೀವಿಸುತ್ತಿಲ್ಲ. ಬದಲಾಗಿ ಅವರೀಗ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುವವರಾಗಿದ್ದಾರೆ. ಎಲ್ಲಾ ವಿಚಾರ ವಿನಿಮಯಗಳಲ್ಲೂ ಅವರು ಪಾಲ್ಗೊಂಡು ತಮ್ಮ ಪ್ರಭಾವವನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದಾರೆ. ಜಾರ್ಖಂಡ್‌ನಲ್ಲಿ ಮಾವೋವಾದಿಗಳಿಗಾಗಿ ತೆರಿಗೆ ವಸೂಲಾತಿ ಮಾಡಲಾಗುತ್ತದೆ. ರೈತರಿಂದ, ವ್ಯಾಪಾರಿಗಳಿಂದ, ಅಧಿಕಾರಿಗಳಿಂದ ಇವರಿಗೆ ತೆರಿಗೆ ರೂಪದಲ್ಲಿ ಕೋಟಿ ಕೋಟಿ ಹಣ ಇಂದು ಮಾವೋವಾದಿಗಳ ಕೈ ಸೇರುತ್ತಿದೆ. ಕೆಲವೊಂದು ರಹಸ್ಯ ಮಾಹಿತಿಗಳ ಪ್ರಕಾರ ಮಾವೋವಾದಿಗಳ ಶೇ. 40ರಷ್ಟು ಆದಾಯ ಆಂಧ್ರಪ್ರದೇಶ, ಜಾರ್ಖಂಡ್, ಬಿಹಾರ್ ಮತ್ತು ಛತ್ತೀಸ್‌ಘಡ ರಾಜ್ಯಗಳಿಂದ ಬರುತ್ತದೆ ಎಂಬುದಾಗಿ ತಿಳಿಯಲಾಗಿದೆ. ಇನ್ನು ಕರ್ನಾಟಕ ಮತ್ತು ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳಿಂದ ನಕ್ಸಲರಿಗೆ ಹಣ ಸಂಗ್ರಹವಾಗುತ್ತದೆ. ಈ ಸಂಗ್ರಹ ಹಣ ಬರೋಬ್ಬರಿ ಒಂದು ವರ್ಷಕ್ಕೆ 1500 ಕೋಟಿ ರೂ.ಗಳು. ಇಂತಹ ಹಣವನ್ನು ಕಾರ್ಯಾಚರಣೆಯ ಖರ್ಚುವೆಚ್ಚಗಳಾಗಿ ಬಳಸಿಕೊಂಡು ನಕ್ಸಲ್ ಸಂಘಟನೆಯ ಸೈನಿಕರು ಒಂದು ವೇಳೆ ಕಾರ್ಯಾಚರಣೆಯಲ್ಲಿ ಮಡಿದರೆ ಅಂತಹ ಕುಟುಂಬಗಳಿಗೆ ಈ ಹಣವನ್ನು ವಿನಿಯೋಗಿಸಲಾಗುತ್ತದೆ ಎಂಬ ಹೇಳಿಕೆಗಳನ್ನು ನೀಡುತ್ತದೆ. ಅಲ್ಲದೆ ಇನ್ನು ಮುಂದೆ ಚಿಂತಲ್ನಾಡದಂತ ಹತ್ಯಾಕಾಂಡಗಳು ಇನ್ನು ಸಂಭವಿಸುತ್ತವೆ ಎಂಬ ಎಚ್ಚರಿಕೆಯನ್ನು ನಕ್ಸಲರು ನೀಡಿರುತ್ತಾರೆ.

ನಕ್ಸಲೈಟ್–ಮಾವೋವಾದಿ ಸಮಸ್ಯೆಗೆ ಮುಖ್ಯ ಕಾರಣಗಳನ್ನು ಸರ್ಕಾರವು ಗಮನಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸಿದ್ದೇ ಆದಲ್ಲಿ ಇದು ಒಂದು ಸಮಸ್ಯೆಯಾಗಿ ದೇಶದ ಪ್ರಗತಿಯಲ್ಲಿ ಮಾರಕವಾಗುವುದಿಲ್ಲ. ಅಲ್ಲದೆ ಇವರ ಮುಖ್ಯ ಸಮಸ್ಯೆಗಳಿಂದ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ, ಆದಿವಾಸಿಗಳಿಗೆ ಸಾಮಾಜಿಕ ಆರ್ಥಿಕ ಸ್ಥಾನಮಾನ, ಭೂಹಕ್ಕು ನಿರ್ಲಕ್ಷಿತರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವಕಾಶ ನೀಡುವುದು ಈ ಎಲ್ಲಾ



downloaded from: www.kpscvaani.com

ಸಮಸ್ಯೆಗಳಿಗೆಲ್ಲಾ ಸ್ಪಂದಿಸಿದಲ್ಲಿ ಈ ಉಗ್ರವಾದ ಸಂಘಟನೆಯನ್ನು ಉತ್ತಮ ಮಾರ್ಗದತ್ತ ಕೊಂಡೊಯ್ಯಬಹುದು. ಅಲ್ಲದೆ ನಕ್ಸಲೈಟ್–ಮಾವೋವಾದಿಗಳೆಂಬ ಉಗ್ರ ಸಂಘಟನೆಯನ್ನು ಮುಖ್ಯವಾಹಿನಿಗೆ ತಂದು ಅವರಿಗೂ ಒಂದು ಬದುಕು ಕಟ್ಟಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದ್ದೇ ಆದಲ್ಲಿ ನಕ್ಸಲ್ ಸಮಸ್ಯೆ, ಸಮಸ್ಯೆಯಾಗಿ ಉಳಿಯುವುದಿಲ್ಲ ಎಂಬ ಅಂಶವನ್ನು ನಾವು ಮನಕಾಣಬೇಕಾಗಿದೆ.

## ಕರ್ನಾಟಕದಲ್ಲಿ ಜಾತಿ ಜನಗಣತಿ–2015

ಕರ್ನಾಟಕ ರಾಜ್ಯ ಸರ್ಕಾರವು ಏಪ್ರಿಲ್ 11 ರಿಂದ ಪ್ರಾರಂಭಿಸಲಾಗಿರುವ ಕರ್ನಾಟಕದ ಜಾತಿ ರಾಜ್ಯದ ಜನಗಣತಿಯನ್ನು ಕೆಲವು ವಿರೋಧಗಳಿವೆ. 1973ರ ಹಾವನೂರು ಆಯೋಗ, 1985ರ ವೆಂಕಟಸ್ವಾಮಿ ಆಯೋಗಗಳಿಗೂ ಕೆಲವು ಸಮುದಾಯಗಳಿಂದ ಇದೇ ರೀತಿಯ ವಿರೋಧ ವ್ಯಕ್ತವಾಗಿತ್ತು.

1871ರಲ್ಲಿ ಜನಗಣತಿಯ ಪ್ರಾರಂಭದಿಂದಲೂ ಕೆಲವು ಸಮುದಾಯಗಳಿಗೆ ಅನ್ಯಾಯವಾದದ್ದು ಕಂಡುಬರುತ್ತದೆ. 1871 ರಿಂದ 1891ರವರೆಗೆ ನಡೆದ 'ಅಂದಿನ ಮೈಸೂರು ರಾಜ್ಯದ ಮೂರು ಬಾರಿ ಜನಗಣತಿಯನ್ನು ಕೈಗೊಳ್ಳಲಾಯಿತು. 1901 ರವರೆಗೆ ಮೈಸೂರು ಮತ್ತು ಮುಂಬೈ ಪ್ರಾಂತ್ಯಗಳಲ್ಲೂ ಎಲ್ಲ ಜನಗಣತಿಯನ್ನು ಕೈಗೊಳ್ಳಲಾಯಿತು.

ದೇಶದ ವಿಚಿತ್ರ ಸಾಮಾಜಿಕ ರಚನೆಯಿಂದಾಗಿ ಪರಿಶಿಷ್ಟ ಜಾತಿ / ಪಂಗಡಗಳಿಗೆ ಮೀಸಲಾತಿ ಅಗತ್ಯವನ್ನು ಯಾರೂ ವಿರೋಧಿಸಿಲ್ಲ. ಆದರೆ ಮಂಡಲ ಆಯೋಗದ ಶಿಫಾರಸ್ಸುಗಳಿಗೆ ರಾಷ್ಟ್ರ ವ್ಯಾಪ್ತಿ ವಿರೋಧ ಕಂಡುಬಂತು. ಅದು ಸುಪ್ರೀಂಕೋರ್ಟನ್ನೂ ತಲುಪಿದಾಗ ಮೀಸಲಾತಿಗೆ ಇತಿಮಿತಿಗಳನ್ನು ನ್ಯಾಯಾಲಯವೇ ವಿಧಿಸಿದ್ದನ್ನು ಈ ದೇಶ ಮರೆತಿಲ್ಲ. ಆದಾಗ್ಯೂ ಮೀಸಲಾತಿ ತಂತ್ರದ ವಿಸ್ತರಣೆ ಅವ್ಯಾಹತವಾಗಿ ನಡೆಯುತ್ತಿದೆ. ನೇರ ಮೀಸಲಾತಿಗೆ ಅವಕಾಶವಿಲ್ಲದಾಗ ಕೆಲವು ಉಪ ಜಾತಿಗಳಿಗೆ ಒಳಮೀಸಲಾತಿಯ ಅಸ್ತ್ರವನ್ನು ಬಳಸಿ ಮುಖ್ಯ ಜಾತಿಗಳಿಂದ ಉಪಜಾತಿಗಳನ್ನು ಬೇರ್ಪಡಿಸಿ, ಅವುಗಳನ್ನು ನಿಯಂತ್ರಿಸುವ ಹುನ್ನಾರಗಳು ನಮ್ಮ ಮುಂದಿವೆ.

ಶೈಕ್ಷಣಿಕ ಮತ್ತು ಆರ್ಥಿಕ ವಿಕಾಸಕ್ಕೆ ಅನುಕೂಲವಾಗುವಂತೆ ಯೋಜನೆಗಳನ್ನು ರೂಪಿಸಲು ಜಾತಿವಾರು ಜನಗಣತಿ ಅವಶ್ಯ ಎಂದು ಹಿಂದುಳಿದ ಆಯೋಗದ ಅಧ್ಯಕ್ಷರು ಹೇಳಿಕೆ ನೀಡುತ್ತಿದ್ದಾರೆ. ಆದರೆ ಈಗ ನಡೆಯುತ್ತಿರುವ ಜಾತಿ ಜನಗಣತಿ ನಾಲ್ಕು ದಶಕಗಳಲ್ಲಿ



downloaded from: www.kpscvaani.com

ನಾಲ್ಕನೆಯದ್ದು. ಈವರೆಗೆ ರಾಜ್ಯದಲ್ಲಿ ಮೂರು ಆಯೋಗಗಳು 1973, 1986 ಮತ್ತು 1990ರಲ್ಲಿ ನಡೆಸಿದ ಸೀಮಿತ ಜಾತಿ ಜನಗಣತಿಗಳ ಮಾಹಿತಿ ಎಲ್ಲಿ ಹೋಯಿತು? ಕೇವಲ ಎರಡು ದಶಕಗಳಲ್ಲಿ ರಾಜ್ಯದ ಸಾಮಾಜಿಕ ರಚನೆಯಲ್ಲಿ ಗುರುತಿಸಲಾರದಷ್ಟು ಪರಿವರ್ತನೆಯಾಗಿದೆಯೇ? ಹಿಂದುಳಿದ ಜಾತಿಗಳು ಕೇವಲ ರಾಜ್ಯದಲ್ಲಿ ಮಾತ್ರ ಇಲ್ಲ. ಅವು ರಾಷ್ಟ್ರ ವ್ಯಾಪ್ತಿ ಅಸ್ತಿತ್ವ ಪಡೆದಿವೆ. ಆದರೆ ಇತರ ಯಾವ ರಾಜ್ಯವೂ ಇಷ್ಟೊಂದು ಬಾರಿ ಇದೇ ಉದ್ದೇಶಕ್ಕಾಗಿ ಜಾತಿ ಜನಗಣತಿಗಳನ್ನು ನಡೆಸಿದ ಉದಾಹರಣೆ ಇಲ್ಲ. ರಾಷ್ಟ್ರ ಮಟ್ಟದ ಮಂಡಲ ಆಯೋಗವೂ 50 ವರ್ಷ ಹಳೆಯದಾದ 1931ರ ಜಾತಿವಾರು ಜನಗಣತಿಯ ಅಂಕಿಸಂಖ್ಯೆಗಳನ್ನೇ ಉಪಯೋಗಿಸಿತು.

ಜಾತಿಗಳನ್ನು ಶಾಶ್ವತವಾಗಿ ಜೀವಂತವಿಡಲು ಚುನಾಯಿತ ಸರ್ಕಾರಗಳು ಪ್ರಯತ್ನಿಸುತ್ತಿವೆ. ಹಾಗಿದ್ದರೆ ಜಾತಿಗಳೇ ಇಲ್ಲದ ಇತರ ಧರ್ಮಗಳ ಜನ ಈ ದೇಶದ ಪ್ರಜೆಗಳಲ್ಲವೆ? ಅವರ ವಿಕಾಸವೂ ದೇಶದ ಸಮಗ್ರ ವಿಕಾಸದ ಭಾಗವಲ್ಲವೆ? ಜಾತಿಗಳ ಜನಗಣತಿಗೆ ಸರ್ಕಾರ ನೀಡುತ್ತಿರುವ ಕಾರಣಗಳು ತೋರಿಕೆಗೆ 'ವೈಜ್ಞಾನಿಕ'ವಾಗಿ ಕಂಡರೂ ರಾಜ್ಯದ ನಾಲ್ಕು ದಶಕಗಳ ಇತಿಹಾಸ ಗಮನಿಸಿದಾಗ ಅದರಲ್ಲಿ 'ರಾಜಕೀಯ' ವಾಸನೆ, ಉದ್ದೇಶ ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಜಾತಿ ಜನಗಣತಿಯೇ ಪ್ರಥಮ ಎಂಬಂತೆ ಸಮರ್ಥಿಸಿಕೊಳ್ಳುವುದರಿಂದ ದಿವಂಗತ ಎಲ್.ಜಿ.ಹಾವನೂರ ಅಂಥವರಿಗೆ ಅವಮಾನ ಮಾಡಿದಂತಾಗುತ್ತದೆ.

ಜಾತಿ ಜನಗಣತಿಯ ವಿಶ್ಲೇಷಣೆ ಬಗ್ಗೆಯೂ ಅನೇಕ ಪ್ರಶ್ನೆಗಳಿವೆ. 1935 ರಿಂದ 1977 ರವರೆಗೆ ನಿರಂತರವಾಗಿ ಅಧಿಕಾರದಲ್ಲಿದ್ದ ಕಾಂಗ್ರೆಸ್ 1871 ರಿಂದ 1931 ರವರೆಗೆ ನಡೆದುಬಂದ ಜಾತಿವಾರು ಜನಗಣತಿಯನ್ನು ನಿಲ್ಲಿಸಿದ್ದಕ್ಕೆ ಕಾರಣವನ್ನು ನೆನಪಿಸಿಕೊಳ್ಳಬೇಕಾಗಿದೆ.

ಜಾತಿ ಎಂಬ ಕಾಯಿಲೆ ದೇಶಕ್ಕೆ ತಗುಲಿದ ಅತಿ ದೊಡ್ಡ ಪಿಡುಗೆಂದು ಗಾಂಧೀಜಿ, ನೆಹರೂ, ಸರ್ದಾರ್ ವಲ್ಲಭಾಯ್ ಪಟೇಲ್‌ರಂಥ ನಾಯಕರು ನಂಬಿದ್ದರು. ಜಾತಿವಾರು ಜನಗಣತಿಗಳು ಜಾತಿಗಳನ್ನು ಮತಬ್ಯಾಂಕುಗಳಾಗಿ ಪರಿವರ್ತಿಸಬಹುದೆಂಬ ಅಂಜಿಕೆ ಅವರಿಗಿತ್ತು. ಸಂಖ್ಯಾಬಲದಿಂದ ಚುನಾವಣೆಗಳಲ್ಲಿ ಜಾತಿಗಳು ಪ್ರತ್ಯೇಕ ಸವಲತ್ತುಗಳಿಗಾಗಿ ಹೋರಾಡುತ್ತಾ ಪರಸ್ಪರ ಸಂಘರ್ಷಕ್ಕಿಳಿದರೆ ದೇಶದ ಏಕತೆಗೆ, ಶಾಂತಿ, ಸೌಹಾರ್ದಕ್ಕೆ ಭಂಗ ಬರಬಹುದೆಂಬ ನಂಬಿಕೆಯಿಂದಾಗಿ ಜಾತಿ ಜನಗಣತಿಯನ್ನು ನಿಲ್ಲಿಸಲಾಗಿತ್ತು.



downloaded from: www.kpscvaani.com

ಆದರೆ ಇಂದಿನ ಮತಪೆಟ್ಟಿಗೆಯ ರಾಜಕಾರಣದಲ್ಲಿ ಎಲ್ಲ ಪಕ್ಷಗಳೂ 2011ರ ಜನಗಣತಿಯಲ್ಲಿ ಜಾತಿಗಳ ಮಾಹಿತಿಗಾಗಿ ಒತ್ತಾಯಿಸಿದ್ದು ದುರಂತವೇ ಸರಿ. ಸುದೈವದಿಂದ ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಅದನ್ನು ಒಪ್ಪದೇ ಇದ್ದುದಕ್ಕೆ ಮೇಲೆ ವಿವರಿಸಿದ ಅಂಜಿಕೆಗಳೇ ಕಾರಣವಾಗಿದ್ದವು. ಆದರೆ ಆ ಅಂಜಿಕೆಗಳು ಈಗ ಸತ್ಯವಾಗಿವೆ. ಜಾತಿಗಳು ಬಲಶಾಲಿಗಳಾಗಿ ಬೆಳೆದಿವೆ. ಸರ್ಕಾರಗಳು ಮೀಸಲಾತಿಯಂಥ ಕ್ರಮಗಳಿಂದ ಜಾತಿಗಳನ್ನು ಜೀವಂತವಾಗಿಡಲು ಸತತವಾಗಿ ಪ್ರಯತ್ನಿಸುತ್ತಿವೆ. ಅದರ ಮುಂದುವರಿದ ಭಾಗವೇ ಈಗ ನಡೆಯಲಿರುವ ಜಾತಿ ಜನಗಣತಿ.

ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತ ವರ್ಗಗಳು ಇತ್ತೀಚಿನವರೆಗೆ ಕಾಂಗ್ರೆಸ್ ಪಕ್ಷದ ಮತಬ್ಯಾಂಕ್‌ಗಳಾಗಿದ್ದವು. ಅವುಗಳನ್ನು ಓಲೈಸುವುದಕ್ಕಾಗಿಯೇ ದಿವಂಗತ ದೇವರಾಜ ಅರಸು ಅವರ ಹಿಂದುಳಿದ ವರ್ಗಗಳ ಪ್ರಥಮ ಆಯೋಗವನ್ನು ರಚಿಸಿದ್ದರು. 1990ರ ಮೂರನೇ ಆಯೋಗವೂ ಅದೇ ವಾಸನೆಯಿಂದ ಕೂಡಿತ್ತು. ಬಲಾಢ್ಯ ಜಾತಿಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರವೂ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆದುಕೊಳ್ಳಲು ಎರಡನೇ ಆಯೋಗವನ್ನು ರಚಿಸಿತ್ತು ಎಂಬುದು ಕೆಲವರ ಅಭಿಪ್ರಾಯವಾಗಿತ್ತು. ಇಂದಿನ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷದ ಒಳಗೊಳಗೇ ನಡೆಯುತ್ತಿರುವ 'ಅಹಿಂದ'ದ ಮುಸುಕಿನ ಗುದ್ದಾಟದಲ್ಲಿ ಜಾತಿ ಜನಗಣತಿಯ ರಾಜಕೀಯ ಲೆಕ್ಕಾಚಾರದಿಂದ ಕೂಡಿಲ್ಲವೆಂದು ಭಾವಿಸಲು ಆಧಾರಗಳಿಲ್ಲವಾಗಿದೆ.

ದೇಶವನ್ನು 'ಜಾತ್ಯಾತೀತ' 'ಸಮಾಜವಾದಿ' ನೆಲೆಯಿಂದ ಮುಕ್ತಗೊಳಿಸಿ, ಹಿಂದೂ ರಾಷ್ಟ್ರವೆಂದು ಆರ್ ಎಸ್ ಎಸ್, ವಿಎಚ್‌ಪಿ, ಬಜರಂಗ ದಳದಂಥ ಸಂಘಟನೆಗಳು ಘೋಷಿಸುವ ಪ್ರಯತ್ನಕ್ಕೆ ಈ ಗಣತಿ ನೆರವಾಗಬಹುದು. ಆದ್ದರಿಂದಲೇ ಬಿಜೆಪಿ ಅದಕ್ಕೆ ವಿರೋಧಿಸುತ್ತಿಲ್ಲ. ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜವಾದಿ ಪಕ್ಷದ ಕೆಲವು ನಾಯಕರು ಒಳಮೀಸಲಾತಿ ಕಲ್ಪಿಸುವ ಮತ್ತು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಉದ್ದೇಶ ಹೊಂದಿರುವುದರಿಂದ ಜಾತಿ ಜನಗಣತಿಯನ್ನು ಅವು ವಿರೋಧಿಸಿಲ್ಲ.

ವಾಸ್ತವದಲ್ಲಿ, ಜಾತಿ ಜನಗಣತಿಯ ಹಿಂದಿರುವ ರಾಜಕೀಯ ಲೆಕ್ಕಾಚಾರಗಳಾಗಲಿ, ಲಿಂಗಾಯತರಿಗೆ ಉಂಟಾದ ಭಯವಾಗಲಿ, ಪಂಚಪೀಠಗಳ ಹೇಳಿಕೆಗಳಾಗಲಿ ಕಳೆದ 40 ವರ್ಷಗಳಲ್ಲಿ ಸಾರಾಸಗಟಾಗಿ ಬುಡಮೇಲಾಗಿವೆ. 1975ರಲ್ಲಿ ಜಾರಿಗೆ ಬಂದ ಹಾವನೂರು ಆಯೋಗದ ಪ್ರಭಾವದಿಂದ ತಾನು ಶಾಶ್ವತವಾಗಿ ಅಧಿಕಾರದಲ್ಲಿ ಉಳಿಯಬಹುದೆಂಬ



downloaded from: www.kpscvaani.com

ಕಾಂಗ್ರೆಸ್ ನಿರೀಕ್ಷೆ ಹುಸಿಯಾಯಿತು. 1983ರಲ್ಲಿ ಆ ಪಕ್ಷವನ್ನು ಜನ ತಿರಸ್ಕರಿಸಿದರು. ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸಂಕೀರ್ಣದ ಜನತಾ ಪಕ್ಷ ಆರು ವರ್ಷ ಕಾಂಗ್ರೆಸ್‌ನ್ನು ಮೂಲೆಗುಂಪು ಮಾಡಿತು. ಪುನಃ ಲಿಂಗಾಯತ ನಾಯಕನ (ವೀರೇಂದ್ರ ಪಾಟೀಲ) ನೇತೃತ್ವದಲ್ಲಿಯೇ ನಡೆದ 1989ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಆ ನಾಯಕನಿಗೆ ಮಾಡಿದ ಮೋಸದಿಂದ ಮತ್ತೊಮ್ಮೆ ಅದು 1994ರಲ್ಲಿ ಅಧಿಕಾರ ಕಳೆದುಕೊಂಡಿತು. ಎರಡು ಮತ್ತು ಮೂರನೆಯ ಹಿಂದುಳಿದ ವರ್ಗಗಳ ಆಯೋಗಗಳಿಂದಲೂ ಕಾಂಗ್ರೆಸ್‌ಗೆ ಪ್ರಯೋಜನವಾಗಲಿಲ್ಲ. 1994ರಲ್ಲಿ ಮತ್ತೆ ಒಕ್ಕಲಿಗ, ಲಿಂಗಾಯತ ಬಲದ ಮೇಲೆ ಜನತಾಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಿತು. ತದನಂತರ ಕಾಂಗ್ರೆಸ್ ಮತ್ತೊಮ್ಮೆ 1999ರ ಚುನಾವಣೆಯಲ್ಲಿ ಜಯಸಾಧಿಸಿತು.

ನಾಲ್ಕನೇ ಬಾರಿಗೆ 2004ರ ಚುನಾವಣೆಯಲ್ಲಿ ಪರಾಭವಗೊಂಡ ಕಾಂಗ್ರೆಸ್ ಪಕ್ಷ ಒಕ್ಕಲಿಗ ಲಿಂಗಾಯತ ಸಮುದಾಯಗಳ ಪ್ರಾಬಲ್ಯಕ್ಕೆ ಮತ್ತೊಮ್ಮೆ ಅವಕಾಶ ಒದಗಿಸಿತು. ಅಭಿವೃದ್ಧಿ ಆಧಾರಿತ ರಾಜಕಾರಣದಲ್ಲಿ ಜಾತಿಯಾಧಾರಿತ ರಾಜಕೀಯ ಲೆಕ್ಕಾಚಾರಗಳು ಹೆಚ್ಚು ಮಹತ್ವ ಪಡೆಯುವುದಿಲ್ಲವೆಂದು ದೇಶದ ಜನ ಪದೇ ಪದೇ ತೋರಿಸಿಕೊಟ್ಟಿದ್ದರೂ ನಮ್ಮ ರಾಜಕಾರಣಿಗಳು ಅದರಿಂದ ಪಾಠ ಕಲಿತದ್ದು ಕಡಿಮೆ.

## ಜಾತಿಗಣತಿಯ ಪರ–ವಿರೋಧಗಳು

ಕರ್ನಾಟಕ ಸರಕಾರ ನಡೆಸಲಿಚ್ಛಿಸಿರುವ ಜಾತಿ ಸಮೀಕ್ಷೆ ಪರ–ವಿರೋಧಗಳನ್ನು ಸೃಷ್ಟಿಸಿದೆ. ಜಾತಿ ಕುರಿತ ಕೆಲವು ಅಪಕಲ್ಪನೆಗಳು ಸಮೀಕ್ಷೆಯ ಪರ–ವಿರೋಧಗಳನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಜಾತಿಯನ್ನು ನಕಾರಾತ್ಮಕವಾಗಿ ನೋಡುವುದು ಇಂತಹ ಅಪಕಲ್ಪನೆಗಳ ಸಾಲಲ್ಲಿ ಬರುವ ಮೊದಲ ಅಂಶ. ಅಂದರೆ ಜಾತಿಯ ಇರುವಿಕೆಯನ್ನು ಒಪ್ಪಿಕೊಳ್ಳುವುದು, ಜಾತಿಯ ಮೂಲಕ ಗುರುತಿಸಿಕೊಳ್ಳುವುದು, ಜಾತಿಯ ಬಗ್ಗೆ ಚರ್ಚಿಸುವುದು ಇವೆಲ್ಲವೂ ಆರೋಗ್ಯವಂತ ಸಮಾಜದ ಲಕ್ಷಣಗಳಲ್ಲವೆಂದು ನಂಬುವುದು. ಇದು ಸರಿಯಾದ ನಿಲುವಲ್ಲ, ಏಕೆಂದರೆ ಜಾತಿ ಅದರಷ್ಟಕ್ಕೇ ಅದು ಕೆಟ್ಟದ್ದೂ ಅಲ್ಲ, ಒಳ್ಳೆಯದೂ ಅಲ್ಲ, ಜಾತಿಯನ್ನು ನಾವು ಕಟ್ಟಿಕೊಳ್ಳುವ ಪರಿ ಹಾಗೂ ಬಳಸುವ ವಿಧಾನ ಜಾತಿ ಕೆಟ್ಟ ಅಥವಾ ಒಳ್ಳೆಯ ಚಿತ್ರಣ ನೀಡುತ್ತವೆ.

ಎಲ್ಲ ಸಮಾಜಗಳಲ್ಲೂ ಜನರನ್ನು ಗುಂಪುಗಳಾಗಿ ವಿಂಗಡಿಸುವ ಮತ್ತು ವಿಂಗಡಿತ ಗುಂಪುಗಳನ್ನು ವಿವಿಧ ಹೆಸರುಗಳಿಂದ ಗುರುತಿಸುವ ಕ್ರಮವಿದೆ. ಇದೇ ರೀತಿ ನಮ್ಮ



downloaded from: www.kpscvaani.com

ಸಮಾಜದಲ್ಲಿ ವಿಂಗಡಿತ ಜನರ ಗುಂಪುಗಳನ್ನು ಗುರುತಿಸಲು 'ಜಾತಿ' ಎನ್ನುವ ಪದ (ಪರಿಭಾಷೆ) ಬಳಕೆಯಾಗುತ್ತಿದೆ. ಜನರು ಪರಸ್ಪರ ಅರ್ಥ ಮಾಡಿಕೊಳ್ಳಲು ಕೆಲವೊಂದು ಗುಣಲಕ್ಷಣಗಳನ್ನು (ಮಾನದಂಡಗಳನ್ನು) ಬಳಸಿಕೊಂಡು ಜನರನ್ನು ಗುಂಪುಗಳಾಗಿ ವಿಂಗಡಿಸುವ ಕ್ರಮ ಬೆಳೆದಿದೆ.

ಹೆಚ್ಚು ಕಡಿಮೆ ನಮ್ಮಲ್ಲೂ ಜನರನ್ನು ಗುಂಪುಗಳಾಗಿ (ಜಾತಿಗಳಾಗಿ) ವಿಂಗಡಿಸಲು ಕೆಲವು ಮಾನದಂಡಗಳನ್ನು (ಉಡುಗೆ–ತೊಡುಗೆ, ದೇವರು–ದಿಂಡರು, ಕಸುಬು, ಭಾಷೆ ಇತ್ಯಾದಿಗಳನ್ನು) ಬಳಸಿದ್ದಾರೆ. ವಿಂಗಡಿತ ಗುಂಪುಗಳನ್ನು ಸಮಾನಾಂತರವಾಗಿ ಜೋಡಿಸಿಲ್ಲ; ಪಿರಮಿಡ್ ರೂಪದಲ್ಲಿ ಜೋಡಿಸಿದ್ದಾರೆ. ಯಾವ ಗುಂಪಿನ (ಜಾತಿಯ) ದೇವರು, ಊಟ–ಉಪಚಾರ, ಕಸುಬು, ಉಡುಗೆ–ತೊಡುಗೆ ಶುದ್ಧವಾಗಿದೆಯೋ ಆ ಜಾತಿ ಏಣಿಯ ಮೇಲಿದ್ದರೆ ಶುದ್ಧತೆ ಕಡಿಮೆಯಾದಂತೆ ಜಾತಿ ಏಣಿಯ ಕೆಳಕೆಳಗೆ ಬರುತ್ತದೆ ಮತ್ತು ಅತ್ಯಂತ ಅಶುದ್ಧ ಜಾತಿ ಏಣಿಯ ಬುಡದಲ್ಲಿರುತ್ತದೆ ಎಂದು ತೀರ್ಮಾನಿಸಲಾಯಿತು. ಹೀಗೆ ಜಾತಿಯನ್ನು ಗುರುತಿಸಲು ಮತ್ತು ಶ್ರೇಣೀಕರಿಸಲು ಬಳಸಿದ ಮಾನದಂಡಗಳು ಸಮಸ್ಯೆಯ ಮೂಲವಾಗಿವೆ.

ಚಾರಿತ್ರಿಕವಾಗಿ ರೂಪುಗೊಂಡ ಗುಂಪುಗಳನ್ನು (ಜಾತಿಯನ್ನು) ಗುರುತಿಸಲು ದೇವರು, ಭಾಷೆ, ಉಡುಗೆ–ತೊಡುಗೆ, ಊಟ, ಕಸುಬುಗಳನ್ನು ಬಳಸಿರುವುದು ಮೊದಲ ಸಮಸ್ಯೆ, ಜಾತಿ ಚರ್ಚೆಯಲ್ಲಿ ಯಾರು ಯಾರಿಂದ ಆಹಾರ ಸ್ವೀಕರಿಸಬಹುದು? ಸಸ್ಯಹಾರಿಗಳೇ? ಮಾಂಸಹಾರಿಗಳೇ? ಇವೇ ದೊಡ್ಡ ಚರ್ಚೆಯ ವಿಷಯಗಳಾಗಿವೆ. ಆದರೆ ಇದೇ ಆಹಾರವನ್ನು ಯಾರು ಬೆಳೆದಿದ್ದಾರೆ? ಹೇಗೆ ಬೆಳೆದಿದ್ದಾರೆ? ಬೆಳೆದವರ ಸಂಪನ್ಮೂಲಗಳ ಒಡೆತನ ಏನು? ಅವರ ಶಿಕ್ಷಣ, ಆರೋಗ್ಯಗಳ ಸ್ಥಿತಿ ಏನು? ಈ ಎಲ್ಲ ಪ್ರಶ್ನೆಗಳು ಜಾತಿ ಚರ್ಚೆಯೊಳಗೆ ಬರಲೇ ಇಲ್ಲ. ಇದೊಂದು ರೀತಿಯಲ್ಲಿ ನಮ್ಮ ಸಿನಿಮಾಗಳ ನಾಯಕ–ನಾಯಕಿಯರ ಬದುಕಿನಂತೆ. ಅವರು ದಿನವಿಡೀ ಪಾರ್ಕ್‌ಗಳಲ್ಲಿ ಸುತ್ತಾಡುತ್ತಾರೆ, ಪ್ರೇಮಗೀತೆ ಹಾಡುತ್ತಾರೆ, ಕಾರಲ್ಲಿ ಓಡಾಡುತ್ತಾರೆ, ಐಷರಾಮಿ ಹೋಟೆಲುಗಳಲ್ಲಿ ತಿನ್ನುತ್ತಾರೆ ಇವೆಲ್ಲವನ್ನೂ ಕೆಲವರು ಅನುಭವಿಸಬೇಕಾದರೆ ಮತ್ತೆ ಕೆಲವರು ಈ ಸಂಪನ್ಮೂಲಗಳನ್ನು ಉತ್ಪಾದಿಸಲು ದುಡಿದಿರಲೇಬೇಕು. ದುಡಿತದ ಬದುಕು ಸಿನಿಮಾದಲ್ಲೂ ಅವಕಾಶ ಪಡೆಯಲಿಲ್ಲ. ನಮ್ಮ ಜಾತಿ ವ್ಯಾಖ್ಯಾನದಲ್ಲೂ ಅವಕಾಶ ಪಡೆಯಲಿಲ್ಲ.

ಜಾತಿಯನ್ನು ಗುರುತಿಸಲು ಬಳಸಿದ ಗುಣಲಕ್ಷಣಗಳಲ್ಲಿ ಆರ್ಥಿಕ, ರಾಜಕೀಯ ಅಂಶಗಳು ಸೇರದಿರುವುದು ಮಾತ್ರ ಸಮಸ್ಯೆಯಲ್ಲ; ಜಾತಿ ಶ್ರೇಣೀಕರಣಕ್ಕೆ ಬಳಸಿದ



downloaded from: www.kpscvaani.com

ಮಾನದಂಡಗಳು ಸಮಸ್ಯೆಯನ್ನು ಸೃಷ್ಟಿಸಿವೆ. ಇದು ಕೆಲವರಿಗೆ ಅನುಕೂಲವಾಗಿ ಪರಿಣಮಿಸಿದರೆ ಹಲವರಿಗೆ ನಷ್ಟ ಮಾಡಿದೆ. ಶ್ರೇಣೀಕರಣದ ಬುಡದಲ್ಲಿರುವವರ ಕಸುಬು, ಊಟ, ದೇವರು, ಉಡುಗೆ–ತೊಡುಗೆ ಎಲ್ಲವೂ ಅಶುದ್ಧ. ಆದ್ದರಿಂದ ಇವು ಉಳಿದವರು ಸ್ವೀಕರಿಸಲು ಯೋಗ್ಯವಲ್ಲ. ಇದರಿಂದ ತಳಜಾತಿಗಳು ಸಾಕಷ್ಟು ಅನ್ಯಾಯ ಅನುಭವಿಸಿವೆ. ನಮ್ಮ ಚರಿತ್ರೆ, ಸಂಸ್ಕೃತಿ ಕಥನಗಳಲ್ಲಿ ಗುಡಿ–ಗೋಪುರಗಳು, ಮಠ–ಮಂದಿರಗಳು, ರಾಜ–ಮಹಾರಾಜರು, ಅವರ ಸೋಲು–ಗೆಲುವುಗಳು ತುಂಬಿ ತುಳುಕುತ್ತಿವೆ. ಇದೇ ಗುಡಿ–ಗೋಪುರಗಳನ್ನು ಅರಮನೆಗಳನ್ನು ಕಟ್ಟಿದವರು, ಅವರ ಬದುಕು–ಬವಣೆಗಳು ನಮ್ಮ ಸಂಸ್ಕೃತಿ ಕಥನಗಳಲ್ಲಿ ಅವಕಾಶ ಪಡೆಯಲೇ ಇಲ್ಲ. ಇತರರ ಸಮೀಪ ವಾಸ ಮಾಡುವುದು, ಭೂಮಿ ಹೊಂದುವುದು, ಶುಭ್ರ ಬಟ್ಟೆ ಧರಿಸುವುದು, ಚಪ್ಪಲಿ ಹಾಕುವುದು, ತಮ್ಮ ಮಕ್ಕಳಿಗೆ ಸುಂದರವಾದ ಹೆಸರಿಡುವುದು, ಇತರರಿಂದ ಗೌರವ ನಿರೀಕ್ಷಿಸುವುದು ಇವೆಲ್ಲವೂ ಇವರಿಗೆ ಗಗನ ಕುಸುಮಗಳಾಗಿದ್ದವು. ಸ್ವಾತಂತ್ರ್ಯದ ನಂತರವೂ ಈ ಸ್ಥಿತಿ ಹೆಚ್ಚು ಬದಲಾಗಿಲ್ಲ. ಇವರು ಹೋಟೆಲು, ಅಂಗಡಿ ತೆರೆದರೆ ಯಾರೂ ಬರುವುದಿಲ್ಲ; ಮನೆ ಬಾಡಿಗೆಗೆ ಕೊಡಲಿಚ್ಛಿಸಿದರೆ ಜನ ಬರುವುದಿಲ್ಲ; ಇವರ ದೇವರಿಗೆ ಊರವರೆಲ್ಲ ನಡೆದುಕೊಳ್ಳುವುದಿಲ್ಲ; ಇವರ ನಾಯಕರು ಊರ ನಾಯಕರಾಗುವುದಿಲ್ಲ; ಇವರ ಹೆಸರುಗಳು ಬೀದಿ, ಪಾರ್ಕ್, ವಿಶ್ವವಿದ್ಯಾಲಯಗಳ ಹೆಸರುಗಳಾಗುವುದಿಲ್ಲ.

ಈ ಎಲ್ಲ ಕಾರಣಗಳಿಂದ ಚಾರಿತ್ರಿಕವಾಗಿ ರೂಪುಗೊಂಡ ಏಣಿ ಶ್ರೇಣಿಗಳು ಇಂದು ಕೂಡ ಮುಂದುವರಿಯುತ್ತಿವೆ. ನಮ್ಮಲ್ಲಿ ಸುಮಾರು 24 ಕೋಟಿ ಕಡುಬಡವರಿದ್ದಾರೆ. ಇವರು ಎಷ್ಟೊಂದು ಬಡವರೆಂದರೆ ಮೂರು ಹೊತ್ತಿನ ಊಟ, ವಸತಿ, ಶಿಕ್ಷಣ, ಆರೋಗ್ಯಗಳಿಗೆ ಪರದಾಡುವವರು. ಅತ್ಯಂತ ಬಡವರಲ್ಲಿ ಅರ್ಧದಷ್ಟು (ಶೇ. 41) ದಲಿತ ಬುಡಕಟ್ಟು ಜನರಿದ್ದಾರೆ ಮೂರನೇ ಒಂದು ಭಾಗದಷ್ಟು ಹಿಂದುಳಿದ ಜಾತಿಯ ಜನರಿದ್ದಾರೆ. ಶೇ. 16ರಷ್ಟು ಮುಸ್ಲಿಮರು ಕೂಡ ಅತ್ಯಂತ ಬಡವರು. ಮೇಲ್ಜಾತಿಗಳಲ್ಲಿ ಅತ್ಯಲ್ಪ ಸಂಖ್ಯೆಯ (ಶೇ. 9ರಷ್ಟು) ಜನರು ಅತ್ಯಂತ ಬಡವರಿದ್ದಾರೆ. ಇದೇ ಸಂದರ್ಭದಲ್ಲಿ ನಮ್ಮಲ್ಲಿ ಸುಮಾರು 4 ಕೋಟಿ ಶ್ರೀಮಂತರಿದ್ದಾರೆ. ಇವರು ಬಡತನ ರೇಖೆಗಿಂತ ಹಲವು ಪಟ್ಟು ಹೆಚ್ಚು ಆದಾಯ ಹೊಂದಿರುವವರು. ಅತ್ಯಂತ ಬಡವರಲ್ಲಿ ದಲಿತ ಬುಡಕಟ್ಟುಗಳು ಹೇಗೆ ಹೆಚ್ಚಿದ್ದಾರೋ ಅದೇ ರೀತಿಯಲ್ಲಿ 4 ಕೋಟಿ ಶ್ರೀಮಂತರಲ್ಲಿ ಅರ್ಧಕ್ಕಿಂತಲೂ ಹೆಚ್ಚು (ಶೇ. 65) ಮೇಲ್ಜಾತಿಯ ಜನರಿದ್ದಾರೆ. ದಲಿತ ಬುಡಕಟ್ಟು ಮತ್ತು ಮುಸ್ಲಿಮರಲ್ಲಿ ಅತ್ಯಲ್ಪ ಜನರು (ಶೇ. 7) ಶ್ರೀಮಂತರಿದ್ದಾರೆ. ಇವರಿಗೆ ಹೋಲಿಸಿದರೆ ಹಿಂದುಳಿದ ಜಾತಿಗಳು ವಾಸಿ. ನಾಲ್ಕು ಕೋಟಿ ಶ್ರೀಮಂತರಲ್ಲಿ ಹಿಂದುಳಿದ ಜಾತಿಗಳ ಶೇ. 21 ಜನರಿದ್ದಾರೆ. ಹೀಗೆ ಆರು ದಶಕಗಳ



downloaded from: www.kpscvaani.com

ಅಭಿವೃದ್ಧಿಯ ನಂತರವೂ ಚಾರಿತ್ರಿಕ ಏಣಿ ಶ್ರೇಣಿಗಳು ಮುಂದುವರಿಯುತ್ತಿವೆ. ಈ ಬಗೆಯ ಮುಂದುವರಿಕೆಗೆ ಒಂದು ಕಾರಣ ಜಾತಿಯನ್ನು ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಮೂಲಕ ಗುರುತಿಸುವುದು. ಈ ಲೋಪವನ್ನು ಕರ್ನಾಟಕ ಸರಕಾರ ನಡೆಸುತ್ತಿರುವ ಜಾತಿ ಸಮೀಕ್ಷೆ ಸರಿಪಡಿಸಬಹುದು. ಈ ಸಮೀಕ್ಷೆಯಲ್ಲಿ ಜಾತಿಯನ್ನು ಗುರುತಿಸಲು ತಿನ್ನುವ ಆಹಾರಕ್ಕಿಂತ ಹೆಚ್ಚು ಶಿಕ್ಷಣ, ಆರೋಗ್ಯ, ಭೂಮಿ, ಸಂಪನ್ಮೂಲಗಳ ಒಡೆತನಗಳು ಮುಖ್ಯವೆಂದು ಪರಿಗಣಿಸಲ್ಪಡುತ್ತಿವೆ. ಎಲ್ಲ ಜಾತಿಗಳಲ್ಲಿರುವ ಭೂಮಿ ಇಲ್ಲದ, ಉನ್ನತ ಶಿಕ್ಷಣ ಪಡೆಯದ, ನಿಶ್ಚಿತ ಆದಾಯ ಇಲ್ಲದ, ಕೂಲಿನಾಲಿ ಮಾಡಿ ಬದುಕುವ ಕುಟುಂಬಗಳನ್ನು ಈ ಸಮೀಕ್ಷೆಯಿಂದ ಗುರುತಿಸಬಹುದು.

ಈ ಜಾತಿಗಣತಿಯ ಘೋಷವಾಕ್ಯ 'ಮಾಹಿತಿ ನೀಡೋಣ ಪ್ರಗತಿ ಸಾಧಿಸೋಣ' ಎಂಬುದಾಗಿದೆ, ಒಟ್ಟಾರೆಯಾಗಿ ಜಾತಿಗಣತಿಯ ಕೆಲವು ವಿಚಾರಗಳು, ಆಶಾದಾಯಕ ಅಂಶಗಳಾಗಿದ್ದು ಇನ್ನಾದರೂ ಎಲ್ಲಾ ಸಮುದಾಯ, ಪಂಗಡಗಳ ಜನತೆಯ ಬದುಕು ಸುಧಾರಿಸಲಿ, ಆರ್ಥಿಕವಾಗಿ ಸದೃಢರಾಗಲಿ ಬಡತನ ದೂರವಾಗಿ ವಿದ್ಯಾವಂತರಾಗಿ, ಪ್ರತಿಯೊಬ್ಬರೂ ಪ್ರಗತಿಯನ್ನು ಸಾಧಿಸಲಿ ಎಂಬುದೇ ಜಾತಿ ಜನಗಣತಿಯ ಮುಖ್ಯಧ್ಯೇಯವೆಂದು ಭಾವಿಸಬಹುದು.

ವಿವಿಧ ಜಾತಿಗಳ ಆರ್ಥಿಕ ರಾಜಕೀಯ ಸ್ಥಿತಿಗತಿ ಬಗ್ಗೆ ಅಂಕಿ ಅಂಶಗಳು ದೊರೆತ ಕೂಡಲೇ ವಿವಿಧ ಸಮುದಾಯಗಳ ನಡುವಿನ ಅಭಿವೃದ್ಧಿ ಅಂತರ ಕಡಿಮೆಯಾಗಬಹುದೆಂದು ನಂಬುವುದು ಕಷ್ಟ. ಏಕೆಂದರೆ ಈ ಅಂಕಿ–ಅಂಶಗಳು ವಿವಿಧ ಸಮುದಾಯಗಳ ಅಭಿವೃದ್ಧಿ ಮೇಲೆ ಮಾಡುವ ಪರಿಣಾಮ ರಾಜಕೀಯ ಪಕ್ಷಗಳು ಮತ್ತು ಸರಕಾರಗಳು ಈ ಅಂಕಿ ಅಂಶಗಳನ್ನು ಬಳಸಿಕೊಳ್ಳುವ ವಿಧಾನದ ಮೇಲೆ ನಿಂತಿದೆ. ಈ ಅಂಕಿ–ಅಂಶಗಳನ್ನು ಪ್ರಗತಿಪರ ರಾಜಕೀಯಕ್ಕೆ ಬಳಸಲು ಸಾಧ್ಯವಾದಂತೆ ಉಪಜಾತಿ ರಾಜಕೀಯಕ್ಕೂ ಬಳಸಬಹುದು. ಪ್ರಗತಿಪರ ರಾಜಕೀಯಕ್ಕೆ ಬಳಸಿದರೆ ವಿವಿಧ ಜಾತಿಗಳ ನಡುವಿನ ಅಭಿವೃದ್ಧಿಯ ಅಂತರ ಕಡಿಮೆಯಾಗಬಹುದು. ಒಂದು ವೇಳೆ ಇವೇ ಅಂಕಿಅಂಶಗಳು ಉಪಜಾತಿಗಳ ಗುರುತಿನ ರಾಜಕೀಯಕ್ಕೆ ಬಳಕೆಯಾದರೆ ಇನ್ನೊಂದಿಷ್ಟು ಉಪಜಾತಿಗಳ ಬಲಾಢ್ಯರು ಸೃಷ್ಟಿಯಾಗಬಹುದು. ಇದೇ ರೀತಿಯಲ್ಲಿ ಬಡತನ ನಿವಾರಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಈ ಅಂಕಿಅಂಶಗಳು ಅನಿವಾರ್ಯವೆನ್ನುವ ಸರಕಾರದ ವಾದವನ್ನು ಮುಖಬೆಲೆಯಲ್ಲಿ ತೆಗೆದುಕೊಳ್ಳುವುದು ಕಷ್ಟ ಏಕೆಂದರೆ ತೊಂಬತ್ತರ ನಂತರ ಸರಕಾರಗಳು ಅನುಸರಿಸುತ್ತಿರುವ ಅಭಿವೃದ್ಧಿ ನೀತಿಗಳು ಬಡತನದ ಸೃಷ್ಟಿಯಲ್ಲಿ ಒಟ್ಟು



downloaded from: www.kpscvaani.com

ಪರಿಸರದ ಪಾತ್ರ ದೊಡ್ಡದಿದೆ ಎನ್ನುವ ನಿಲುವನ್ನು ಪ್ರತಿಪಾದಿಸುತ್ತಿವೆ. ಆದರೆ ವಾಸ್ತವದಲ್ಲಿ ಬಡತನ ಸೃಷ್ಟಿಯಲ್ಲಿ ಒಟ್ಟು ಪರಿಸರದ ಪಾತ್ರ ದೊಡ್ಡದಿದೆ. ಲಿಂಗ, ಜಾತಿ, ಧರ್ಮ ತಾರತಮ್ಯಗಳ ಜೊತೆಗೆ ಕಾರ್ಮಿಕ ಕಾಯಿದೆಗಳು, ಅನಧೀಕೃತ ಉದ್ಯೋಗಗಳು, ಅಸಂಘಟಿತ ವಲಯ ಇವೆಲ್ಲವೂ ಬಡತನವನ್ನು ಸೃಷ್ಟಿಸುತ್ತಿವೆ. ಇವನ್ನು ಸುಧಾರಿಸದಿದ್ದರೆ ಬಡತನ ನಿವಾರಣೆ ಸಾಧ್ಯವಿಲ್ಲ. ಈ ಎಲ್ಲದರ ಹಿನ್ನೆಲೆಯಲ್ಲಿ ಜಾತಿ ಸಮೀಕ್ಷೆಯ ಪರ–ವಿರೋಧ ಚರ್ಚೆಗಳನ್ನು ಪರಿಶೀಲಿಸಿದರೆ ಎರಡರಲ್ಲೂ ವಿಶೇಷ ಶಕ್ತಿ ಇಲ್ಲ ಎನ್ನಬಹುದಾಗಿದೆ.

## ಸುಕನ್ಯಾ ಸಮೃದ್ಧಿ ಯೋಜನೆ

ದೇಶದ ಬಂಡವಾಳ ಮಾರುಕಟ್ಟೆಯಲ್ಲಿ ಹೂಡಿಕೆ ಮತ್ತು ಉಳಿತಾಯಕ್ಕೆ ಹಲವು ಯೋಜನೆಗಳಿದ್ದರೂ ಹೆಣ್ಣು ಮಕ್ಕಳ ಉನ್ನತ ಶಿಕ್ಷಣ ಮತ್ತು ವಿವಾಹಕ್ಕೆ ನಿರ್ದಿಷ್ಟ ಯೋಜನೆಗಳಿಲ್ಲ. ಇದನ್ನು ಮನಗಂಡ ಕೇಂದ್ರ ಸರ್ಕಾರ ಜನವರಿ 22, 2015 ರಂದು ಸುಕನ್ಯಾ ಸಮೃದ್ಧಿ ಯೋಜನೆ ಎಂಬ ನೂತನ ಯೋಜನೆಯೊಂದನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಇದು ಭವಿಷ್ಯದ ಚಿಂತನೆಗಳಿಗೆ ಉತ್ತಮ ಪರ್ಯಾಯ ಹೂಡಿಕೆ ಸಾಧನವಾಗಿದ್ದು ಪ್ರಧಾನ ಮಂತ್ರಿ 'ಬೇಟಿ ಬಚಾವೊ ಬೇಟಿ ಪಡಾವೊ' ಕಾರ್ಯಕ್ರಮದ ಉಪಕ್ರಮವಾಗಿ ಪ್ರಧಾನಿ ನರೇಂದ್ರ ಮೋದಿಯವರು ಈ ಯೋಜನೆಯನ್ನು ಅನಾವರಣಗೊಳಿಸಿದ್ದಾರೆ. ಈ ಯೋಜನೆಯು ಆಮದು ತೆರಿಗೆ ಕಾಯ್ದೆಯ ಸೆಕ್ಷನ್ 80ಸಿ ಅಡಿ ತೆರಿಗೆ ವಿನಾಯ್ತಿಗೆ ಒಳಪಡುತ್ತದೆ. ಈ ಯೋಜನೆಗೆ ತೊಡಗಿಸುವ ಹಣವು ತೆರಿಗೆ ಮುಕ್ತ ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

## ಸುಕನ್ಯಾ ಯೋಜನೆಯ ವಿಶೇಷ

'ಸುಕನ್ಯಾ ಸಮೃದ್ಧಿ ಯೋಜನೆ' ಪಿಪಿಎಫ್‌ಗಿಂತ ಹೆಚ್ಚು ಆಕರ್ಷಕ. ಏಕೆಂದರೆ ಇದಕ್ಕೆ ಸಿಗುವ ಬಡ್ಡಿ ಆದಾಯ ಅಧಿಕ. ಈ ಬಡ್ಡಿ ಆದಾಯವನ್ನು ಸರಕಾರಿ ಬಾಂಡ್‌ಗಳು ನೀಡುವ ಆದಾಯಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ಹಾಗಾಗಿ, ಅವು ಸದಾ ಉತ್ತಮ ವರಮಾನವನ್ನೇ ನೀಡುತ್ತವೆ. ಆದರೆ, ಪಿಪಿಎಫ್‌ಗೆ ಸಿಗುವ ಬಡ್ಡಿ ಆದಾಯವು 10 ವರ್ಷಗಳ ಸರಾಸರಿ ಬಾಂಡ್‌ಗಳಿಗಿಂತ 25 ಮೂಲಾಂಕ ಮಾತ್ರ ಹೆಚ್ಚಿದ್ದರೆ, 'ಸುಕನ್ಯಾ ಸಮೃದ್ಧಿ ಯೋಜನೆ'ಯ ಹೂಡಿಕೆಗೆ 75 ಮೂಲಾಂಕಗಳ ಹೆಚ್ಚಿನ ಬಡ್ಡಿ ಸಿಗುತ್ತದೆ. ಪ್ರಸಕ್ತ ಸಾಲಿನಲ್ಲಿ (2014 ಏಪ್ರಿಲ್ 1 ರಿಂದ 2015 ಮಾರ್ಚ್ 31ರ ವರೆಗೆ) ಪಿಪಿಎಫ್‌ಗೆ ಶೇ. 8.7 ಬಡ್ಡಿ ಆದಾಯ ಸಿಕ್ಕರೆ, ಎಸ್‌ಎಸ್‌ವೈಗೆ ಶೇ. 9.1 ಬಡ್ಡಿ ವರಮಾನ ಸಿಗಲಿದೆ.



downloaded from: www.kpscvaani.com

## ಸುಕನ್ಯಾ ಖಾತೆ ತೆರೆಯಲು ನೀಡಲಾದ ಕಾಲಾವಕಾಶ

ಸುರಕ್ಷಿತ ಮತ್ತು ಆಕರ್ಷಕ ವರಮಾನ ತಂದು ಕೊಡುವ 'ಸುಕನ್ಯಾ ಸಮೃದ್ಧಿ ಯೋಜನೆ' ಎಲ್ಲಾ ಹೆಣ್ಣು ಮಕ್ಕಳಿಗೂ ಲಭ್ಯವಿಲ್ಲ. 10 ವರ್ಷದವರೆಗಿನ ಹೆಣ್ಣು ಮಕ್ಕಳ ಹೆಸರಿನಲ್ಲಿ ಮಾತ್ರ ಪೋಷಕರು ಅಥವಾ ಪಾಲಕರು ಎಸ್‌ಎಸ್‌ವೈ ಖಾತೆ ತೆರೆಯಲು ಅವಕಾಶವಿದೆ. ಆದರೆ ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ಸರ್ಕಾರ ವಯೋಮಿತಿಯಲ್ಲಿ 1 ವರ್ಷ ಸಡಿಲಿಕೆ ನೀಡಿದೆ. 2015 ಡಿಸೆಂಬರ್ 1ರವರೆಗೆ ಅನ್ವಯವಾಗುವಂತೆ 11 ವರ್ಷದವರೆಗಿನ ಹೆಣ್ಣು ಮಗುವಿನ ಹೆಸರಿನಲ್ಲಿ ಎಸ್‌ಎಸ್‌ವೈ ಖಾತೆ ತೆರೆಯಲು ಮುಕ್ತ ಅವಕಾಶ ನೀಡಲಾಗಿದೆ. 2003 ಡಿಸೆಂಬರ್ 2 ಅಥವಾ ಅದರ' ನಂತರ ಮುನ್ನ ಜನಿಸಿದ ಹೆಣ್ಣು ಮಗು ಈ ಯೋಜನೆಗೆ ಈ ವರ್ಷ ಅರ್ಹತೆ ಪಡೆಯುತ್ತದೆ. ಹಾಗಾಗಿ, ಸಾರ್ವಜನಿಕರು ಸರ್ಕಾರ ನೀಡಿರುವ ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಮುಂದಾಗುವುದು ಜಾಣತನ. ಪ್ರಸಕ್ತ ಆರ್ಥಿಕ ವರ್ಷ ಮಾರ್ಚ್ 31ರ ವರೆಗೆ ಇರುತ್ತದೆ. ಈ ಅವಧಿಯೊಳಗೆ ಪೋಷಕರು ಮತ್ತು ಪಾಲಕರು ತಮ್ಮ ಹೆಣ್ಣು ಮಗುವಿನ ಹೆಸರಿನಲ್ಲಿ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆ ತೆರೆಯಲು ಮುಂದಾಗುವುದು ಸೂಕ್ತ. ಇದರಿಂದ 1 ವರ್ಷದ ಸಂಪೂರ್ಣ ಪ್ರಯೋಜನಗಳು ಮಗುವಿಗೆ ಸಿಗುತ್ತವೆ.

## ಎಸ್ ಎಸ್ ವೈ ಖಾತೆ ತೆರೆಯುವುದು ಹೇಗೆ?

ಯಾವುದೇ ಅಂಚೆ ಕಚೇರಿ ಅಥವಾ ಸಾರ್ವಜನಿಕ ರಂಗದ ಬ್ಯಾಂಕ್‌ಗಳ ನಿಯೋಜಿತ ಶಾಖೆಗಳಲ್ಲಿ ಪೋಷಕರು ತಮ್ಮ ಹೆಣ್ಣು ಮಕ್ಕಳ ಹೆಸರಿನಲ್ಲಿ ಖಾತೆ ತೆರೆಯಬಹುದು. ಆರ್ಥಿಕ ವರ್ಷದಲ್ಲಿ ಕನಿಷ್ಠ ಹೂಡಿಕೆ 1 ಸಾವಿರ ರೂ. ಹಾಗೂ ಗರಿಷ್ಠ 1.5ಲಕ್ಷ ರೂ. ಹಣ ತೊಡಗಿಸಬಹುದು. ಈ ಯೋಜನೆಗೆ ಪೋಷಕರು ಅಥವಾ ಪಾಲಕರು ಮಗಳ ಹೆಸರಿನಲ್ಲಿ ಖಾತೆ ಆರಂಭಿಸಿದ ದಿನಾಂಕದಿಂದ 14 ವರ್ಷಗಳ ಕಾಲ ಹೂಡಿಕೆ ಮಾಡಬೇಕು. ಆದರೆ ಯೋಜನೆ 21 ವರ್ಷ ಪೂರ್ಣಗೊಂಡ ನಂತರ ಪಕ್ವಾಗುತ್ತದೆ. ಅಂದರೆ ಯೋಜನೆಯ ತೀರುವಳಿ ಅವಧಿ ಮಗುವಿಗೆ 21 ವರ್ಷ ತುಂಬುವವರೆಗೆ ಇರುತ್ತದೆ ಅಥವಾ ಹೆಣ್ಣು ಮಗು ಈ 21 ವರ್ಷಗಳನ್ನು ಪೂರ್ಣಗೊಳಿಸುವ ಮುನ್ನ ವಿವಾಹವಾಗುವ ದಿನಾಂಕದವರೆಗೆ ಖಾತೆಯ ಅವಧಿ ಕಾಪಾಡಲಾಗುತ್ತದೆ. ಇವೆರಡು ಅವಧಿಯಲ್ಲಿ ಯಾವುದು ಮೊದಲು ಸಂಭವಿಸುತ್ತದೋ ಅದನ್ನು ಪರಿಗಣಿಸಲಾಗುತ್ತದೆ. ಹಾಗಾಗಿ, ಸುಕನ್ಯಾ ಸಮೃದ್ಧಿ ಖಾತೆಯ ಪಕ್ವತೆಯ ಅವಧಿ ಹೆಣ್ಣು ಮಗುವಿನ 21 ವರ್ಷಗಳ ವಯಸ್ಸಿನವರೆಗೆ ಇರುತ್ತದೆ. ತೀರುವಳಿ ಅವಧಿ ಪೂರ್ಣಗೊಂಡ ನಂತರ ಖಾತೆಯನ್ನು ಮುಂದುವರಿಸಲು ಅವಕಾಶವಿದೆ ಎಂಬುದು



downloaded from: www.kpscvaani.com

ಗಮನಾರ್ಹ. ಖಾತೆ ಮುಂದುವರಿಸಲು ಹೆಣ್ಣು ಮಗು ಬಯಸಿದರೆ ಮೆಚ್ಯೂರಿಟಿ ಹಣಕ್ಕೆ ಬಡ್ಡಿ ಆದಾಯ ಬೆಳೆಯುತ್ತಾ ಹೋಗುತ್ತದೆ.

## ವಾರ್ಷಿಕ ಆಧಾರದಲ್ಲಿ ಬಡ್ಡಿ ಸಂದಾಯ

ವಾರ್ಷಿಕ ಆಧಾರದಲ್ಲಿ ಬಡ್ಡಿ ವರಮಾನ ಲೆಕ್ಕ ಹಾಕಲಾಗುತ್ತದೆ. ಬಾಲಕಿ 14ನೇ ವರ್ಷ ಮುಟ್ಟಿದರೆ, ಬಡ್ಡಿ ಆದಾಯವನ್ನು ಆಕೆಯ ಖಾತೆಗೆ ಸಂದಾಯ ಮಾಡಲಾಗುತ್ತದೆ. ಕೇಂದ್ರ ಸರಕಾರ ದೇಶಾದ್ಯಂತ ಪರಿಚಯಿಸಿರುವ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಖಾತೆ ತೆರೆಯುವಂತೆ ಬಾಲಕಿ 18 ವರ್ಷ ತುಂಬಿದ ಬಳಿಕ ವಿವಾಹವಾಗಿ, ಖಾತೆಯ ಮುಂದುವರಿಕೆ ಸಾಧ್ಯವಾಗದಿದ್ದ ಪಕ್ಷದಲ್ಲಿ, ಖಾತೆಯನ್ನು ಮುಕ್ತಾಯಗೊಳಿಸಲು ಯೋಜನೆಯಲ್ಲಿ ಅವಕಾಶವಿದೆ. ಆದರೆ, ಯುವತಿ 18 ವರ್ಷ ತುಂಬಿರುವುದಕ್ಕೆ ಮತ್ತು ವಿವಾಹವಾಗಿರುವುದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರ ಒದಗಿಸುವುದು ಕಡ್ಡಾಯ. ಯಾವುದೇ ಆರ್ಥಿಕ ವರ್ಷದಲ್ಲಿ ಖಾತೆಗೆ ಕನಿಷ್ಠ ಬಾಕಿ ಕಾಪಾಡದಿದ್ದರೆ ಆ ವರ್ಷಕ್ಕೆ 50 ರೂ. ದಂಡ ವಿಧಿಸಲಾಗುತ್ತದೆ. ಯಾವುದೇ ಪೋಷಕ ಅಥವಾ ಪಾಲಕ ತನ್ನ ಎರಡು ಹೆಣ್ಣು ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಯೋಜನೆಯ ಖಾತೆ ತೆರೆಯಲು ಅವಕಾಶವಿದೆ. ಆದರೆ ಎರಡೂ ಖಾತೆಗಳ ಸಂಯೋಜಿತ ಹೂಡಿಕೆಯ ಮೊತ್ತ ವರ್ಷದಲ್ಲಿ 1.5 ಲಕ್ಷ ರೂ. ದಾಟಬಾರದು. ಹೆಣ್ಣು ಮಗುವಿಗೆ 21 ವರ್ಷ ತುಂಬಿದಾಗ ಎಸ್ ಎಸ್ ವೈ ಖಾತೆಯ ಅವಧಿ ಪಕ್ವ (ಪೂರ್ಣ) ವಾಗುತ್ತದೆ. ಆಕೆಗೆ 18 ವರ್ಷ ತುಂಬಿದಾಗ ಖಾತೆಯಲ್ಲಿ ತೊಡಗಿಸಿರುವ ಹಣದ ಶೇ. 50 ಭಾಗವನ್ನು ಹಿಂಪಡೆಯಲು ಅವಕಾಶವಿದೆ.

## ಎಸ್ ಎಸ್ ವೈ ಏಕೆ ಅರ್ಥಪೂರ್ಣ?

ಹೆಣ್ಣು ಮಗುವಿನ ಹೆಸರಿನಲ್ಲಿ ಪೋಷಕರು ಹೂಡಿಕೆ ಮಾಡುತ್ತಾರೆ ಎಂದರೆ ಅದರಲ್ಲಿ ಒಂದು ನಿರ್ದಿಷ್ಟ ಉದ್ದೇಶ ಅಡಕವಾಗಿರುತ್ತದೆ. ಆ ಉದ್ದೇಶ ಸಾಧನೆಗೆ ಎಸ್ಎಸ್ವೈ ಪಕ್ಕಾ ಯೋಜನೆಯಾಗಿ ಕಾಣುತ್ತಿದೆ. ಆದರೆ 15 ವರ್ಷಗಳ ಪಿಪಿಎಫ್ ಯೋಜನೆಯಲ್ಲಿ ನೀವು ಹೂಡಿಕೆ ಮಾಡುತ್ತಾ ಹೋದರೆ, ದೀರ್ಘಾವಧಿವರೆಗೆ ಕಾಯಕಬೇಕು. 15 ವರ್ಷಗಳ ತರುವಾಯ ಪಿಪಿಎಫ್ ಹಣ ಸಿಕ್ಕಾಗ ಕೆಲವರು ನಿವೇಶನ ಅಥವಾ ಮನೆ ಖರೀದಿಸಬಹುದು. ಮತ್ತೆ ಕೆಲವರು ಮಗಳ ವಿವಾಹ ನೆರವೇರಿಸಬಹುದು. ಆದರೆ ಈ ಯೋಜನೆ ನಿರ್ದಿಷ್ಟ ಗುರಿ ಸಾಧನೆಗೆ ನೆರವಾಗುವುದಿಲ್ಲ. ಅದೇ ಎಸ್ಎಸ್ವೈನಲ್ಲಿ ಹಣ ತೊಡಗಿಸಿದರೆ, ಮಗಳ ಉನ್ನತ ಶಿಕ್ಷಣ, ವಿವಾಹ ಮುಂತಾದ ಅರ್ಥಪೂರ್ಣ ಕಾರ್ಯಗಳಿಗೆ



downloaded from: www.kpscvaani.com

ನೇರವಾಗಿ ಬರುತ್ತದೆ. ಆದರೆ ಕೇಂದ್ರ ಸರ್ಕಾರ, ಈ ಯೋಜನೆಗೆ ಬರುವ ಹಣವನ್ನು ಸಮರ್ಪಕವಾಗಿ ನಿರ್ವಹಿಸಬೇಕಷ್ಟೆ ಎನ್ನುತ್ತಾರೆ ಹಣಕಾಸು ಯೋಜಕರು ಮತ್ತು ವಿಶ್ಲೇಷಕರು.

## ಹಣಕಾಸು ತಜ್ಞರ ಸಲಹೆಗಳೆಂದರೆ

ಹೆಣ್ಣು ಮಗುವಿನ ವಯಸ್ಸು 10 ಆದಾಗ ದಂಪತಿ ಎಸ್ಎಸ್‌ವೈ ಯೋಜನೆಯ ಖಾತೆಗೆ ಪ್ರತಿ ವರ್ಷ 1.5 ಲಕ್ಷ ರೂ. ತೊಡಗಿಸುತ್ತಾ ಬಂದರೆ 11 ವರ್ಷಗಳಲ್ಲಿ ಹೂಡಿಕೆ ಮೊತ್ತ 28.89ಲಕ್ಷ ರೂ.ಗೆ ಬೆಳೆಯುತ್ತದೆ. ಆಗ ಮಗುವಿಗೆ 21 ವರ್ಷ ತುಂಬಿರುತ್ತದೆ. ಒಂದು ವೇಳೆ ಮಗುವಿನ ವಯಸ್ಸು 5 ವರ್ಷವಿದ್ದಾಗಲೇ ಈ ಯೋಜನೆಯಲ್ಲಿ ವಾರ್ಷಿಕ 1.5ಲಕ್ಷ ರೂ. ಹಣ ತೊಡಗಿಸುತ್ತಾ ಬಂದರೆ ಆಕೆಗೆ 19 ವರ್ಷ ತುಂಬಿರುವ ವೇಳೆಗೆ ಹೂಡಿಕೆಯ ಮೊತ್ತ 42.88 ಲಕ್ಷ ರೂ. ಗೆ ಏರಿಕೆ ಆಗಿರುತ್ತದೆ. ಇದು ಪೋಷಕರ ಪಾಲಿಗೆ ಆಕರ್ಷಕ ಎನಿಸಬಹುದು. ಆದರೆ 14 ವರ್ಷಗಳ ಬಳಿಕ ಉದಾಹರಣೆಗೆ 2031ರ ಹೊತ್ತಿಗೆ ಹೆಣ್ಣು ಮಗುವಿನ ಶಾಲಾ ಶಿಕ್ಷಣ ವೆಚ್ಚ ದುಬಾರಿಯಾಗಿರುತ್ತದೆ. ಹಾಗಾಗಿ, ಹೂಡಿಕೆ ಮಾಡುವಾಗ ಇರುವ ಬಡ್ಡಿದರ ಮೌಲ್ಯ 14 ವರ್ಷಗಳ ಬಳಿಕ ಕುಸಿದಿರುತ್ತದೆ. ಎಸ್ಎಸ್‌ವೈ ಅನ್ನು ಇತರೆ ಹೂಡಿಕೆ ಸಾಧನಗಳೊಂದಿಗೆ ಸಂಯೋಜಿಸಿ, ಬಳಸುವುದು ಜಾಣತನ. ಅಂದರೆ ಮಗಳ ಭವಿಷ್ಯದ ಗುರಿಗಳಿಗೆ ಎಸ್ಎಸ್‌ವೈ ಜತೆ ಈಕ್ವಿಟಿ ನಿಧಿಯಂತರ ಸಾಧನಗಳಲ್ಲೂ ಹೂಡಿಕೆ ಮಾಡಿ, ಎರಡರಿಂದ ಬರುವ ಆದಾಯವನ್ನು ನಿಶ್ಚಿತ ಗುರಿಗೆ ಬಳಸುವ ಗುರಿ ಇಟ್ಟುಕೊಳ್ಳಬೇಕು ಎಂದು ಸಲಹೆ ನೀಡುತ್ತಾರೆ ಹಣಕಾಸು ತಜ್ಞರು. ವಿದೇಶಗಳಲ್ಲಿ ಉನ್ನತ ಶಿಕ್ಷಣ ಈಗಲೇ ಜನಸಾಮಾನ್ಯರ ಪಾಲಿಗೆ ದುಬಾರಿ. ಹಾಗಾಗಿ, ಶ್ರೀಸಾಮಾನ್ಯ ಪೋಷಕರು ಮಗುವಿನ ಭವಿಷ್ಯದ ಶಿಕ್ಷಣ ಗುರಿಗೆ ಒಂದೇ ಹೂಡಿಕೆ ಯೋಜನೆಯನ್ನು ಅವಲಂಬಿಸಿದೆ ಅಧಿಕ ವರಮಾನ ಸಿಗುವ ಪರ್ಯಾಯ ಯೋಜನೆಗಳಲ್ಲಿ ಹೂಡಿಕೆ ಮಾಡುವುದು ಸೂಕ್ತ ಎಂಬುದು ಅವರ ಸಲಹೆ.

## ಖಾತೆ ತೆರೆಯಲು ಬೇಕಾದ ಪ್ರಮಾಣ ಪತ್ರಗಳು

- ಮಗುವಿನ ಜನನ ಪ್ರಮಾಣ ಪತ್ರ
- ಪೋಷಕರ / ಲೀಗಲ್ ಗಾರ್ಡಿಯನ್ ಐಡೆಂಟಿಟಿ ಪ್ರೂಫ್
- ಖಚಿತ ವಿಳಾಸ ಪತ್ರ (ಅಡ್ರೆಸ್ ಪ್ರೂಫ್)



downloaded from: www.kpscvaani.com

ಈ ಯೋಜನೆ ಮಗು 10 ವರ್ಷದ ಕೆಳಗಿರಬೇಕು ಎನ್ನುತ್ತದೆ. ಆದರೆ ಇಂಡಿಯನ್ ರೆಸಿಡೆಂಟ್ ಆಗಿರಬೇಕು ಎಂದು ಹೇಳಿಲ್ಲ. ಆದರೆ ಇದು ಕೇಂದ್ರ ಸರಕಾರದ ಪೋಸ್ಟ್ ಆಫೀಸ್ ಸೇವಿಂಗ್ ಅಕೌಂಟ್ ಕಾಯಿದೆ ಅಡಿಯಲ್ಲಿ ಬರುತ್ತದೆ. ಈ ಕಾಯಿದೆ ಪ್ರಕಾರ ಸುಕನ್ಯ ಸಮೃದ್ಧಿ ಯೋಜನೆಯನ್ನು ಸ್ಮಾಲ್ ಸೇವಿಂಗ್ ಸ್ಕೀಮ್ ಎಂದು ಪರಿಗಣಿಸಲಾಗಿದೆ. ಹೀಗಾಗಿ ಅನಿವಾಸಿ ಭಾರತೀಯರು ಇಲ್ಲಿ ಹೂಡಿಕೆ ಮಾಡಲು ಆಗುವುದಿಲ್ಲ. ಅಮೇರಿಕಾದಲ್ಲೋ, ಯುರೋಪಿನಲ್ಲೋ ದುಡಿಯುತ್ತಿರುವವರ ರೀತಿ ಬೇರೆ. ಕೊಲ್ಲಿ ದೇಶಗಳಲ್ಲಿ ದುಡಿಯುವ ಅನಿವಾಸಿ ಭಾರತೀಯರಿಗೆ ಇದು ನಿಜಕ್ಕೂ ಅನ್ಯಾಯ! ಮೋದಿ ಸರಕಾರ ಈ ಬಗ್ಗೆ ಮರುಪರಿಶೀಲನೆ ಮಾಡಿದರೆ ಉತ್ತಮ ಎಂಬುದು ಜನರ ಅಭಿಪ್ರಾಯವಾಗಿದೆ. ಸುಕನ್ಯಾ ಸಮೃದ್ಧಿ ಯೋಜನೆಯು ಒಂದು ಉತ್ತಮ ಯೋಜನೆಯಾಗಿ ಸಾರ್ವಜನಿಕರಿಗೆ ಉಪಯೋಗವಾಗಲೀ ಎಂಬುದೇ ಎಲ್ಲರ ಆಶಯ.



downloaded from: www.kpscvaani.com